ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

16 ಮಾರ್ಚ್ 2016 ಪುಟ 20 ರೂ. 15/-



ಜೇಟ್ಲಿಯ ಮೋಸದ ಬಜೆಟ್



ರೊಕ್ಕ ಕದ್ದ ಕಳ್ಳ ಸ್ವಾಮಿಗಳು

ಹೊನ್ನಾವರ

...ಾಂಕಾಳು ...ೈದ್ಯನೇ ...ಾಫಿಯಾ ...ಾನ್

ಮಂಡ್ಯ

ಹನಕೆರೆ ನಾಗಣ್ಣನ ಹಂತಕರಿಗೆ ಕೊನೆಗೂ ಶಿಕ್ಷೆ

ಮೈಸೂರು

ಹುಣಸೂರು ಜೋಡಿಕೊಲೆ ಅವ್ವಾ ಮಾದೇಶ ಅಂದರ್

ಹೊಸಕೋಟೆ

ಬಚ್ಚೇಗೌಡನ ರಾಜಕೀಯ ಸಮಾಧಿಗೆ ಎಂ.ಟಿ.ಬಿ. ಗುಣಿ




ಚಾಮುಂಡಿ–ಮಹಿಷಾಸುರ

ಇಬ್ಬರೂ



ಅಂಚಿನಿಂದ...



ಡಾ.ವಾಸು ಎಚ್.ವಿ.

ಮೋದಿ-ಜೇಟ್ಲಿ ಬಜೆಟ್

ಈ ರೀತಿ ಮೋಸ ಮಾಡಬಹುದೇ? ಈ ರೀತಿ ಮೋಸ ಹೋಗಬಹುದೇ?


ಬಜೆಟ್ ಎನ್ನುವುದೇ ಒಂದು ದೊಡ್ಡ ಮೋಸ ಎಂದು ಚಿಂತಕರಾದ ಶಿವಸುಂದರ್ ಇದೇ ಪುಟದಲ್ಲಿ ಬಹಳ ಹಿಂದೆಯೇ ಬರೆದಿದ್ದಾರೆ. ಮುಂದಿನ ಮೂರ್‍ನಾಲ್ಕು ವರ್ಷಗಳ ಬಜೆಟ್‌ನಲ್ಲಿ ಯಾವ್ಯಾವುದಕ್ಕೆ ಎಷ್ಟೆಷ್ಟು ಹಣ ಮೀಸಲಿಡಬೇಕು; ಯಾವ್ಯಾವುದರಿಂದ ಎಷ್ಟೆಷ್ಟು ಕಡಿತ ಮಾಡಬೇಕು ಎಂಬುದನ್ನು ಹೇಳುವ ನೀತಿ (ಬಜೆಟ್ ನಿರ್ವಹಣೆ ಮತ್ತು ವಿತ್ತೀಯ ಶಿಸ್ತು)ಯು ಈಗ ಕೇವಲ ನೀತಿಯಾಗಿ ಉಳಿದಿಲ್ಲ, ಬದಲಿಗೆ ಕಾಯ್ದೆಯಾಗಿ ಬದಲಾಗಿದೆ ಎಂಬ ಕಾರಣದಿಂದ ಅವರು ಹಾಗೆ ಹೇಳುತ್ತಾರೆ. ಜೊತೆಗೆ, ಬಜೆಟ್ ಎನ್ನುವುದು ಸರ್ಕಾರದ ಆರ್ಥಿಕ ನೀತಿ ಪ್ರಕಟಿಸುವ ಏಕೈಕ ಸಂದರ್ಭವಾಗಿಲ್ಲ; ಬಜೆಟ್ ಪ್ರಕಟಿಸಿದ ದಿನ ಸಂಜೆಯೇ, ಅದರಿಂದ ಹೊರತಾಗಿ ಪೆಟ್ರೋಲ್ ಬೆಲೆ ಇಳಿಯಿತು; ಡೀಸೆಲ್ ಬೆಲೆ ಏರಿತು. ವರ್ಷವಿಡೀ ತನ್ನ ಆರ್ಥಿಕ ನೀತಿಯನ್ನು ಜನರ ವಿರುದ್ಧವಾಗಿ ಮರುರೂಪಿಸುವ ನೂರೆಂಟು ಮಾರ್ಗಗಳನ್ನು ಕಳೆದ 30 ವರ್ಷಗಳಲ್ಲಿ ಆಳಿದ ಎಲ್ಲಾ ಸರ್ಕಾರಗಳೂ ಮಾಡಿಕೊಂಡು ಬರುತ್ತಲೇ ಇವೆ. ಅದೇನೇ ಇದ್ದರೂ, ಇದೂ ಸಹ ಸರ್ಕಾರವೊಂದರ ನೀತಿಯ ಸೂಚಕವಾಗಿ ಮುಂದಿಡಲ್ಪಡುವ ವಾರ್ಷಿಕ ಆಚರಣೆಯಾಗಿರುವುದರಿಂದ, ಅದರ ವಿಶ್ಲೇಷಣೆ ಮಾಡುವ ಅಗತ್ಯವಿದೆ.

ಇಂತಹ ವಿಶ್ಲೇಷಣೆಯು ಟಿವಿ ಚಾನೆಲ್‌ಗಳಲ್ಲಿ ಬಜೆಟ್ ಮಂಡಿಸುವ ಕ್ಷಣದಿಂದಲೇ ಆರಂಭವಾಗುತ್ತದೆ. ಈ ಸಾರಿ ಎಲ್ಲಾ ದಿನಪತ್ರಿಕೆಗಳು ಕನಿಷ್ಠ 2ರಿಂದ 3 ಪುಟಗಳಷ್ಟನ್ನು (ಕೆಲವು ಪತ್ರಿಕೆಗಳು 6 ಪುಟಗಳನ್ನು!!) ಬಜೆಟ್‌ನ ವಿವರ ಮುಂದಿಡಲು ಮತ್ತು ವಿಶ್ಲೇಷಿಸಲು ಮೀಸಲಿಟ್ಟಿದ್ದವು. ಎನ್‌ಡಿಟಿವಿ ವೆಬ್‌ಸೈಟ್ ಮತ್ತು ಹಿಂದೂ ಪತ್ರಿಕೆಯೂ ಸೇರಿದಂತೆ ಹಲವು ಸುದ್ದಿತಾಣಗಳಲ್ಲಿ ಅತ್ಯುತ್ತಮ ವಿಮರ್ಶಾತ್ಮಕ ಲೇಖನಗಳು ಪ್ರಕಟವಾದವು. ಆದರೂ, ಬಹುತೇಕ ಸುದ್ದಿ ಮಾಧ್ಯಮಗಳು ಇದು ಯುಪಿಎ 3 ಬಜೆಟ್, ಕಾಂಗ್ರೆಸ್ ಬಜೆಟ್, ಬಡವರ ಬಜೆಟ್, ರೈತರ ಬಜೆಟ್ ಎಂದೆಲ್ಲಾ ಹೇಳಿದವು. ಈ ಬಜೆಟ್‌ನ ಸಮಸ್ಯೆಯೆಂದರೆ, 6 ಕೋಟಿ ವೇತನದಾರರ ಉಳಿತಾಯದ ಪಿಎಫ್ ಹಣಕ್ಕೆ ತೆರಿಗೆ ಹಾಕುವ ಕ್ರಮ ಮಾತ್ರ ಬಿಜೆಪಿ ಸರ್ಕಾರದ ಪ್ರಮುಖ ಮತದಾರರಾದ ಮಧ್ಯಮವರ್ಗಕ್ಕೆ ತೊಂದರೆ ಕೊಡುತ್ತದೆ ಎಂದು ಹೇಳಲಾಯಿತು. ಅದಕ್ಕೆ ಪ್ರತಿಕ್ರಿಯೆಯಾಗಿ, ಪಿಎಫ್ ಹಣದ ಮೇಲೆ ತೆರಿಗೆ ಹಾಕುವ ಕ್ರಮ ಕೈಬಿಡಿ ಎಂದು ಆಗ್ರಹಿಸುವ ಆನ್‌ಲೈನ್ ಮನವಿ (change.org)ಗೆ ಅಭೂತಪೂರ್ವ ಬೆಂಬಲ ಹರಿದುಬಂದಿತು. ಈ ಲೇಖನ ಬರೆಯುವ ಹೊತ್ತಿಗೆ ಅದಕ್ಕೆ ಸಹಿ ಹಾಕಿದವರ ಸಂಖ್ಯೆ 50,000ದ ಹತ್ತಿರಕ್ಕೆ ಬಂದಿದೆ.

ಹಾಗಾದರೆ, ಮೋದಿ ಸರ್ಕಾರದ ಬಜೆಟ್ ಸ್ವಲ್ಪವಾದರೂ ಬಡವರ ಮತ್ತು ರೈತರ ಪರವಾಗಿದೆಯೇ? ಅವರ ನೀತಿಯಲ್ಲೇನಾದರೂ ಬದಲಾವಣೆ ಬಂದಿದೆಯೇ ಎಂಬುದನ್ನು ಪರಿಶೀಲಿಸಿದರೆ, ಭಾರೀ ನಿರಾಸೆಯೇ ಕಾದಿದೆ. ಅದರ ವಿವರಗಳನ್ನು ನೋಡುವುದಕ್ಕೆ ಮುಂಚೆ, ಕಳೆದ ಎರಡು ವರ್ಷಗಳ ಭಾರತದ ಹಳ್ಳಿಗಳ ಸ್ಥಿತಿಗತಿ ಏನಾಗಿತ್ತು ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಕಳೆದೆರಡು ವರ್ಷಗಳಲ್ಲಿ ಭಾರತದ ಹಳ್ಳಿಗಳು ಭಾರೀ ಸಂಕಟವನ್ನು ಎದುರಿಸಿದವು. ಇದಕ್ಕೆ ಮಾನ್‌ಸೂನ್‌ನ ವೈಫಲ್ಯವೂ ಒಂದು ಕಾರಣವಾಗಿತ್ತು, ಶೇ.12ರಷ್ಟು ಪ್ರಮಾಣದ ಮಾನ್ಸೂನ್ ವೈಫಲ್ಯ ಮಾತ್ರ ಇದಕ್ಕೆ ಕಾರಣ ಎಂದುಬಿಟ್ಟರೆ, ನೈಸರ್ಗಿಕ ವಿಕೋಪದಿಂದಲೇ ಎಲ್ಲಾ ಸಮಸ್ಯೆ ಎಂದಾಗುತ್ತದೆ. ಅದೂ ವಾಸ್ತವವಲ್ಲ, ಮಾರುಕಟ್ಟೆಯಾಧಾರಿತ ಕೃಷಿ ವ್ಯವಸ್ಥೆಯಲ್ಲಿ ರೈತರನ್ನು ಹಿಂಡುತ್ತಿರುವ 'ಒಳಸುರಿ ವೆಚ್ಚ ಹೆಚ್ಚಳ' ಮತ್ತು ಬೆಲೆ ಅಭದ್ರತೆಯೇ ಪ್ರಧಾನ ಕಾರಣವಾಗಿದೆ. ಕೃಷಿ ಆಧಾರಿತ ಗ್ರಾಮೀಣ ಆರ್ಥಿಕತೆ ಕುಸಿದಿದ್ದರಿಂದ, ಕೃಷಿ ಆಧಾರಿತ ಉದ್ದಿಮೆಗಳಿಗೆ ಮತ್ತು ಒಟ್ಟಾರೆ ಆರ್ಥಿಕತೆಯಲ್ಲಿ ಬೇಡಿಕೆಯು ಕುಸಿಯಿತು. ಕೆಲವು ಪ್ರಮುಖ ಕ್ಷೇತ್ರಗಳಲ್ಲಿ ಬೆಳವಣಿಗೆ ಕಾಣದೇ ಇರಲು ಇದೂ ಸಹ ಒಂದು ಕಾರಣವಾಗಿದೆ.

ಇದರ ಜೊತೆಗೆ ಸಾಮಾಜಿಕ ಕ್ಷೇತ್ರದಲ್ಲಿ ಉಂಟಾಗುತ್ತಿರುವ ಕ್ಷೋಭೆಯನ್ನೂ ಗಮನಿಸಬೇಕು. ಗುಜರಾತ್‌ನಲ್ಲಿ ಪಟೇಲರು, ಹರಿಯಾಣದಲ್ಲಿ ಜಾಟರು ಮೀಸಲಾತಿಯ ವಿಚಾರವನ್ನು ಮುಂದಿಟ್ಟುಕೊಂಡು ಮಿಲಿಟೆಂಟ್ ಹೋರಾಟಕ್ಕಿಳಿದಿದ್ದಾರೆ. ಪಂಜಾಬ್‌ನಲ್ಲಿ ಸಿಖ್ಖರೂ ಬೀದಿಗಿಳಿದಿದ್ದಾರೆ. ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಕೇಂದ್ರ ಸರ್ಕಾರವನ್ನೂ ಗುರಿಯಾಗಿಟ್ಟುಕೊಂಡಿದ್ದಾರೆ. ಈ ಹೋರಾಟಗಳ ಹಿನ್ನೆಲೆ ಮತ್ತು ಉದ್ದೇಶಗಳಿಗೆ ಬೇರೆ ಬೇರೆ ಆಯಾಮಗಳಿವೆ. ಅವುಗಳಲ್ಲಿ ನಮ್ಮ ಗ್ರಾಮೀಣ ಭಾಗವನ್ನು ಕಾಡುತ್ತಿರುವ ಕೃಷಿ ಬಿಕ್ಕಟ್ಟೂ ಸಹ ಒಂದಾಗಿದೆ. ಇವೆಲ್ಲಾ ಕಾರಣಗಳಿಂದ ಈ ಸಾರಿ ಗ್ರಾಮೀಣ ಭಾಗದ ಕುರಿತು ಹೆಚ್ಚು ಮಾತನಾಡುವುದು ಕೇಂದ್ರ ಸರ್ಕಾರಕ್ಕೆ ಅನಿವಾರ್ಯವಾಗಿತ್ತು. ಬಜೆಟ್‌ಗೆ ಮುಂಚೆ ಹಣಕಾಸು ಮಂತ್ರಿಗಳು ಸಂಸತ್ತಿನಲ್ಲೇ ಮಂಡಿಸಿದ ಆರ್ಥಿಕ ಸಮೀಕ್ಷೆಯಲ್ಲೂ, ಗ್ರಾಮೀಣ ಭಾಗವು ದಿಕ್ಕೆಟ್ಟು ಹೋಗಿರುವುದನ್ನು ಖಚಿತಪಡಿಸಿದರು.

ಹಾಗಾಗಿ ಅವರು ಹೆಚ್ಚು 'ಮಾತನಾಡಿದರು'. ಒಟ್ಟು ಬಜೆಟ್ ಭಾಷಣದಲ್ಲಿ ಈ ಹಿಂದೆ ಮಾಡುತ್ತಿದ್ದಂತೆ, ವಾಣಿಜ್ಯ ವ್ಯವಹಾರಗಳನ್ನು ಸುಲಲಿತಗೊಳಿಸುವುದು ಹೇಗೆ ಎಂಬುದನ್ನು ವಿವರಿಸಲು ನೀಡಿದ್ದಕ್ಕಿಂತ, ರೈತರು ಮತ್ತು ಸಾಮಾಜಿಕ ಕ್ಷೇತ್ರಗಳಿಗೆ ಏನೇನು ನೀಡುತ್ತಿದ್ದೇವೆ ಎಂಬುದನ್ನು ವಿವರಿಸಲು ಹೆಚ್ಚು ಸಮಯವನ್ನು (playtime) ತೆಗೆದುಕೊಂಡರು. ಇದೂ ಸಹ ಒಂದು ತಂತ್ರ.





2014-15ರ ಮೊದಲ ಬಜೆಟ್‌ನಲ್ಲಿ 'ಅಭಿವೃದ್ಧಿ' ಮತ್ತು 'ಹೂಡಿಕೆ'ಯನ್ನು ಒಟ್ಟು 65 ಸಾರಿ ಪ್ರಸ್ತಾಪಿಸಿದ್ದರು. ಈ ಸಾರಿ ಅದನ್ನು ಮೂರನೇ ಒಂದು ಭಾಗದಷ್ಟು ಕಡಿಮೆ ಪ್ರಸ್ತಾಪಿಸಲಾಯಿತು; ಬದಲಿಗೆ ಒಂದಷ್ಟು ಕಾವ್ಯಾತ್ಮಕ ಸಾಲುಗಳನ್ನು ಮತ್ತು 'ಭಾರತವನ್ನು ಪರಿವರ್ತಿಸುವ' ಯೋಜನೆಯ ಬಗ್ಗೆ ಮಾತುಗಳನ್ನು ಹೆಚ್ಚಾಗಿ ಸೇರಿಸಲಾಗಿತ್ತು ಎಂದು 'ಹಿಂದೂ' ಪತ್ರಿಕೆ ಹೇಳುತ್ತದೆ. ಹೆಚ್ಚು ಮಾತನ್ನು ಮೀಸಲಿಡುವುದು ಒಂದು ತಂತ್ರವಾದರೆ, ಹಿಂದಿನ ವರ್ಷಕ್ಕಿಂತ ಹೆಚ್ಚು ಹಣ ನೀಡಿದ್ದೇವೆ ಎಂದು ಅಂಕಿ-ಸಂಖ್ಯೆಗಳ ಮಾಯಾಜಾಲ ಮುಂದಿಡುವುದು ಎರಡನೆಯ ತಂತ್ರ. ಅದನ್ನೂ ಜೈಟ್ಲಿ ಮಾಡಿದರು. ಇಷ್ಟಕ್ಕೇ ನಮ್ಮ ಹೆಚ್ಚಿನ ಮಾಧ್ಯಮಗಳು ತಮ್ಮ ಸುದ್ದಿಗಳ ಶೀರ್ಷಿಕೆಯನ್ನು ತೀರ್ಮಾನಿಸಿಬಿಟ್ಟರು. ಜೈಟ್ಲಿ ಮೋಸ ಮಾಡಲೆಂದೇ ಹೂಡಿದ ಆಟಕ್ಕೆ ತಾವೂ ಬಲಿಯಾಗಿದ್ದಲ್ಲದೇ, ಜನಸಾಮಾನ್ಯರನ್ನೂ ದಿಕ್ಕು ತಪ್ಪಿಸಿದರು.

ಯುಪಿಎ ಸರ್ಕಾರ ತಂದಿದ್ದ ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ಮೋದಿಯಿಂದ ಆರಂಭಿಸಿ, ಬಿಜೆಪಿಯ ಎಲ್ಲರೂ ತೆಗಳುತ್ತಲಿದ್ದರು; ಅದನ್ನು ವ್ಯಂಗ್ಯದ ಮಾತುಗಳಿಂದ ಲೇವಡಿ ಮಾಡುತ್ತಿದ್ದರು. 'ಈ ಯೋಜನೆಯನ್ನು ತಾನು ರದ್ದು ಮಾಡುವುದಿಲ್ಲ; ಏಕೆಂದರೆ, ಯುಪಿಎ ಸರ್ಕಾರದ ಗ್ರಾಮೀಣಾಭಿವೃದ್ಧಿ ಉಪಕ್ರಮದ ವೈಫಲ್ಯದ ಸ್ಮಾರಕವಾಗಿ ಅದನ್ನು ಉಳಿಸಿಕೊಳ್ಳುತ್ತೇನೆ' ಎಂಬ ಮೋದಿಯ ಮಾತು ಆ ವ್ಯಂಗ್ಯಕ್ಕೆ ಒಂದು ಉದಾಹರಣೆಯಷ್ಟೇ. ಆದರೆ, ಈಗ ಅದೇ ನರೇಗಾ ಯೋಜನೆಯನ್ನು ಎನ್‌ಡಿಎ ಶ್ಲಾಘಿಸುತ್ತಿದೆ. ಇದುವರೆಗೆ ನೀಡಲಾದ ಅತ್ಯಂತ ಹೆಚ್ಚು ವಾರ್ಷಿಕ ಅನುದಾನವನ್ನು ತಾವೇ ಈ ಸಾರಿ (38,500 ಕೋಟಿ ರೂ.ಗಳು) ನೀಡಿದ್ದೇವೆಂದು ಜೇಟ್ಲಿ ಹೇಳಿದರು. ಸಂಸತ್ತಿಗೆ ಸುಳ್ಳು ಹೇಳುವುದರಲ್ಲಿ ಸ್ಮೃತಿ ಇರಾನಿಯನ್ನು ಮೀರಿಸಬೇಕೆಂಬ ಹಟ ಅವರಿಗೇಕೋ? ಏಕೆಂದರೆ, 2010ರಲ್ಲಿ 40,100 ಕೋಟಿ ರೂ.ಗಳನ್ನು ಘೋಷಿಸಲಾಗಿತ್ತು, ಇದೇ ಬಾಬ್ತಿಗೆ ಕಳೆದೆರಡು ವರ್ಷಗಳಲ್ಲಿ ನೀಡಿದ ಹಣದ ಗಣನೀಯ ಭಾಗವನ್ನು ಖರ್ಚು ಮಾಡಿಲ್ಲದ ಇತಿಹಾಸವನ್ನೂ ಈ ಸರ್ಕಾರ ಹೊಂದಿದೆ. ಅಂದಮೇಲೆ ಈ ವರ್ಷದ ಕಥೆ ಏನಾಗಬಹುದೆಂದು ಊಹಿಸುವುದು ಕಷ್ಟವೇನಲ್ಲ, ವರ್ಷಕ್ಕೆ 4.8% ಅಷ್ಟು ಹಣದುಬ್ಬರದ ಲೆಕ್ಕವನ್ನೂ ಹಿಡಿಯುವುದಾದಲ್ಲಿ 2010ರಿಂದ ಇಲ್ಲಿಯವರೆಗೆ ಪ್ರತೀ ವರ್ಷದ ಏರಿಕೆಯನ್ನು ಸೇರಿಸಿ ಸುಮಾರು 65,000 ಕೋಟಿ ರೂ.ಗಳನ್ನು ನೀಡಬೇಕಿತ್ತು.

ರಸಗೊಬ್ಬರ ಸಬ್ಸಿಡಿಯು ಒಟ್ಟಾರೆ ಲೆಕ್ಕದಲ್ಲಿ ದೊಡ್ಡದಾಗಿಯೇ ಕಾಣುತ್ತದೆ. ಆದರೆ, ಅದನ್ನು 2015-16ರ ಪರಿಷ್ಕೃತ ಅಂದಾಜಾದ 73,437 ಕೋಟಿ ರೂ.ಗಳಿಗಿಂತ 2,000 ಕೋಟಿ ರೂ. ಕಡಿಮೆಗೆ (70,000 ಕೋಟಿ ರೂ) ನಿಗದಿ ಪಡಿಸಲಾಗಿದೆ. ಇನ್ನು ಗ್ರಾಮೀಣ ಮೂಲಸೌಕರ್ಯಗಳಿಗೆ ಬಹಳ ಒತ್ತು ಎಂದು ಬಿಂಬಿಸಲಾಗಿದೆ. ಆದರೆ, ಇನ್ನು ಮುಂದೆ ಪಿಎಂಜಿಎಸ್‌ವೈ (ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ)ಗೆ ಕೇಂದ್ರವು ಶೇ.100ರ ಬದಲಿಗೆ ಶೇ.60ರಷ್ಟನ್ನು ಮ
ಉಳಿದದ್ದನ್ನು ರಾಜ್ಯಗಳು ನೀಡಲಿ ಎಂದು ಜೇಟ್ಲಿ
ಇದರರ್ಥವೇನು? ಭಾರೀ ಪ್ರಮಾಣದಲ್ಲಿ
ನೀಡಿದ್ದೇವೆ ಎಂದು ಹೇಳಿರುವ ಅವರು ಹಣ
ಕಡಿಮೆ (ಶೇ.4) ಹೆಚ್ಚಳ (18,297 ಕೋಟಿ
19,000 ಕೋಟಿ ರೂ.ಗಳು) ಮಾತ್ರ ಮಾ


ಶೇ.100ರಷ್ಟು ವಿದೇಶೀ ನೇರ ಬಂ
ಬಜೆಟ್‌ನಲ್ಲಿ ಘೋಷಿಸಿರುವ ಏಕೈಕ ಕ್ಷೇ
ಪದಾರ್ಥಗಳ ಮಾರ್ಕೆಟಿಂಗ್‌ದು. ಭಾರತದಲ್ಲಿ ಉ
ಆಹಾರ ಪದಾರ್ಥಗಳಿಗೆ ಮಾತ್ರ ಇದು ಅ
ಎಂದು ಹೇಳಲಾಗಿದೆ. ಅಂದರೆ, ಯಾವುದ
ವಿರೋಧ ಪಕ್ಷದಲ್ಲಿದ್ದಾಗ ವಿರೋಧಿಸುತ್ತೇನೆ ಎಂ
ತೋರಿಸಿಕೊಂಡಿತ್ತೋ, ಅದನ್ನು ಹಿಂಬಾಗಿಲಿನಿ
ಪ್ರಯತ್ನ ಇದಿರಬಹುದೆಂಬ ಸಂಶಯ
ಮಾಡಿಕೊಟ್ಟಿದೆ.


ಬಜೆಟ್‌ಗೆ ಮುಂಚೆಯೇ ಮೋದಿಯ ಎರ
ರೈತ ರ್‍ಯಾಲಿಗಳು ನಡೆದವು. 'ಪ್ರಧಾನಮಂತ್ರಿ ಫ
ಯೋಜನೆ (ಬೆಳೆ ವಿಮೆ)'ಯನ್ನೂ ಅಬ್ಬರ
ಆರಂಭಿಸಲಾಯಿತು. ಕರ್ನಾಟಕದ ಬೆಳಗಾವಿಯ
ರ್‍ಯಾಲಿ ನಡೆದರೆ, ಉತ್ತರ ಪ್ರದೇಶದ ಬರೇಲಿಯಲ್ಲಿ
ರ್‍ಯಾಲಿ ನಡೆಯಿತು. ಅಲ್ಲಿ, ದೇಶದ ರೈತರ ಆದ
2022ರ ಒಳಗೆ ದ್ವಿಗುಣವಾಗಿಸುವ ಯೋಜನ
ಮೋದಿ ಘೋಷಿಸಿದರು. ಆದರ ಕುರಿತ
ಯೋಜನೆ, ಕಾರ್ಯಕ್ರಮಗಳೇನೂ ಬಜೆಟ್‌ನಲ್ಲಿ
ಆದರೆ, ಕೃಷಿ ಕ್ಷೇತ್ರಕ್ಕೆ ನೀಡುವ ಹಣವನ್ನು
ದ್ವಿಗುಣಗೊಳಿಸಿ, 36,000 ಕೋಟಿ ರ
ಏರಿಸಲಾಗುತ್ತಿದೆ ಎಂದು ಜೇಟ್ಲಿ ಘೋಷಿಸಿದರು.
ಸಾಮಾನ್ಯವಾಗಿ ಆರ್ಥಿಕ ಸೇವೆಗಳ ಇಲಾ
ನೀಡಲಾಗುತ್ತಿದ್ದ 15,000 ಕೋಟಿ ರೂ.ಗಳ
ಇಲಾಖೆಗೆ ರವಾನಿಸಿ, ದ್ವಿಗುಣಗೊಳಿಸಿದ ಲೆಕ್ಕವ
ಜೇಟ್ಲಿ ಮುಂದಿಟ್ಟಿದ್ದಾರೆಂದು ಎನ್‌ಡಿಟಿವಿ ಜಾ
ಮಣಿಶಂಕರ್ ಅಯ್ಯರ್ ಬರೆದ ಲೇಖನದಲ್ಲಿ ಹ
ಅದರರ್ಥ, ಹಿಂದೆ ಎಷ್ಟು ಹಣ ನೀಡಲಾಗುತ್ತಿತ್ತೋ
ಹಣವನ್ನು ಈಗಲೂ ನೀಡಿದ್ದಾರೆಯೇ ಹೊರತು
ಮಾಡಿಲ್ಲ.

ಇದರ ಜೊತೆಗೆ ಸುಮಾರು 2.17 ಲಕ್ಷ ಕೋ
ಹಣವನ್ನು ಗ್ರಾಮೀಣಾಭಿವೃದ್ಧಿಗಾಗಿ ಪಂಚಾ
ನೀಡಲು ಉದ್ದೇಶಿಸಿದ್ದೇವೆಂದು ಹೇಳಿ ಜೇಟ್ಲಿ ತಮ
ತಟ್ಟಿಕೊಂಡಿದ್ದಾರೆ. 14ನೇ ಆರ್ಥಿಕ ಆಯೋಗವು
ಸ್ಪಷ್ಟವಾಗಿ ಶಿಫಾರಸ್ಸು ಮಾಡಿತ್ತು ಮತ್ತು ಜೇಟ್ಲಿ
ಮಾಡಲೇಬೇಕಿತ್ತು, ಆದರೆ, ಈ ಹಣವನ್ನು ಹೇಗೆ
ಮಾಡಬೇಕೆಂಬ ಕುರಿತ ತೀರ್ಮಾನವನ್ನು
ಅಗತ್ಯಗಳಿಗನುಗುಣವಾಗಿ ಪಂಚಾಯ್ತಿ ತೀರ್ಮಾನಿ
ಶಿಫಾರಸ್ಸನ್ನು ಈ ಸರ್ಕಾರವು ತಿರುಚುವ ಸಂ
ಈ ಹಣವನ್ನು ಹೇಗೆ ಖರ್ಚು ಮಾಡಬೇಕೆಂ
ತಾನು 'ಮಾರ್ಗದರ್ಶಿ ಸೂತ್ರ'ವನ್ನು ನೀಡು
ಬಜೆಟ್‌ನಲ್ಲಿ ಹೇಳಲಾಗಿದೆ. ಸಾಮಾನ್ಯವಾಗಿ
ಮಾರ್ಗದರ್ಶಿ ಸೂತ್ರಗಳ ಸಮಸ್ಯೆ ಏನೆಂದರೆ,
ಸರ್ಕಾರವು ಪ್ರಕಟಿಸುವ ಯೋಜನೆಗೇ ಇಂತಿ
ಖರ್ಚು ಮಾಡಬೇಕು ಎಂದು ಹೇಳಿಬಿಡಲಾಗು
ಮೂಲಕ ಆ ಯೋಜನೆಗೂ ತಾನು ಇಷ್ಟು
ನೀಡಿದ್ದೇನೆಂಬ ಲೆಕ್ಕ ತೋರಿಸಿ, ಒಟ್ಟಾರೆ ಗ್ರಾಮೀಣ
ತುಂಬಾ ಮಾಡಿದ್ದೇವೆ ಎಂದು ಬಿಂಬಿಸಲಾಗುತ್ತದೆ.
ಅದೇ ಹಣವನ್ನು ಎರಡು ಮೂರು ಕಡೆ ಲೆಕ್ಕ
ಮೋಸ ಮಾಡುವ ತಂತ್ರ ಇದು. ಈ ಬಜೆ
ಎಲ್ಲವನ್ನೂ ಕೂಡಿದರೆ, ಲೆಕ್ಕ ಹೊಂದಾಣಿಕೆ
ಎಂದು ಹಲವು ತಜ್ಞರು ದೂರಿದ್ದಾರೆ.

ಬಡವರು, ಕೃಷಿ ಕ್ಷೇತ್ರ, ಗ್ರಾಮೀಣಾಭಿವೃದ್ಧಿಗೆ
ಮಾಡಲಾಗಿದೆ ಎಂಬಂತೆ ಬಿಂಬಿಸಿದರೂ,
ಈ ಬಜೆಟ್ ಕಾರ್ಪೊರೇಟ್‌ಗಳ ಪರವಿದೆ ಎ
ತಿಳಿಯಲು ಹೆಚ್ಚೇನೂ ಕಷ್ಟಪಡಬೇಕಿಲ್ಲ, ಕೇವಲ
ಮೋಡಿಗೆ ನಾವು ಮರುಳಾಗಬಾರದೆಂಬ
ಹೊಂದಿರಬೇಕು ಅಷ್ಟೇ. 'ಬಡವರ ಸುತ್ತ
ರಾಜಕೀಯ ನಡೆದಿದೆ. ಈಗ ಅವರನ್ನು ವ
ಪ್ರಯತ್ನಗಳನ್ನು ಕೇಂದ್ರೀಕರಿಸುವ ಸಮಯ'
ಮೋದಿಯ ಟಿಪಿಕಲ್ ಶೈಲಿ. ಇದರರ್ಥ
ಬಡವರಿಗಾಗಿ ಬಹಳಷ್ಟನ್ನೇನೋ ಮಾಡಲಿದ್ದಾರೆ
ಹಿಂದಿನ ಸರ್ಕಾರಗಳೂ ಸಹ ಬಡವರಿಗೆ
ಒಳ್ಳೆಯದನ್ನೇನೂ ಮಾಡಿರುವುದಿಲ್ಲ, ಆ ದೌ
ಹಿಡಿದು ಅವರನ್ನು ಬಯ್ಯುವುದು- ಆ ಮೂಲ
ಹೌದೌದು ಎನ್ನಿಸುವ ಇಂತಹ ನುಡಿಮು
ಉದುರಿಸಿ, ಅದಕ್ಕಿಂತ ಕೆಟ್ಟ ಸ್ಥಿತಿಗೆ ಕೊಂ
ಮುಂಚೆ ಜನರ ದಿಕ್ಕುತಪ್ಪಿಸುವ ಕೆಟ್ಟ ರಾಜಕಾರ
ಕರಗತವಾಗಿದೆ.

...ಸುಳ್ಳುಗಳನ್ನು ಬೊಗಳಿದ ಸ್ಮೃತಿ ಇರಾನಿ ಎಂಬ ಕೆಟ್ಟ ಹೆಂಗಸು






• ಗೌರಿ ಲಂಕೇಶ್
editorlankesh@gmail.com

ಮೊನ್ನೆ ಸಂಸತ್ತಿನಲ್ಲಿ ಮಾನವ ಸಂಪನ್ಮೂಲ
...ಚಿವೆ ಸ್ಮೃತಿ ಇರಾನಿ ಭಾವೋದ್ವೇಗದಿಂದ ಚೀರಾಡಿದ್ದು
...ಡ್ಡಿಗಳನ್ನು ಮತ್ತು ಪದಗಳ ಹಿಂದಿನ ಅರ್ಥಗಳಿಗಿಂತ
...ಾತಿನ ಶೈಲಿಗೆ (ಅಂದರೆ ಸಿನಿಮಾ
...ಲಾಗ್‌ಗಳಿಗೆ) ಮಾರುಹೋಗುವಂತಹ
...ನರನ್ನು ಬಹಳವಾಗಿ ಮೆಚ್ಚಿಸಿತು. ಆದರೆ ಆಕೆ
...ಡುತ್ತಿದ್ದ ಹಸಿ ಸುಳ್ಳುಗಳು ಮತ್ತು ಚೀರುವ
...ಮೂಲಕ ವಿರೋಧ ಪಕ್ಷಗಳ ನಾಯಕರ
...ಾಯಿಮುಚ್ಚಿಸಲು ಯತ್ನಿಸುತ್ತಿದ್ದದ್ದು ನನ್ನನ್ನು
...ಗಿಸಿತು. ಈ ಹಿಂದೆ ಆಕೆ ಅದ್ಯಾವುದೋ
...ಭೆಯನ್ನು ಉದ್ದೇಶಿಸಿ ನಿರರ್ಗಳವಾಗಿ
...ಂಗ್ಲಿಷ್‌ನಲ್ಲಿ ಮಾತನಾಡಿದ್ದನ್ನೇ ಮೆಚ್ಚಿ ಈಕೆ
...ಾಲೇಜು ಮೆಟ್ಟಲನ್ನು ಹತ್ತಿಲ್ಲದಿದ್ದರೇನು, ಎಷ್ಟು
...ನ್ನಾಗಿ 'ಮಾತನಾಡುತ್ತಾಳೆ ನೋಡಿ' ಎಂದು
...ಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು.
...ಗಲೂ ನಾನು 'ಮಾತನಾಡುವ ಶೈಲಿಗಿಂತ
...ಕೆಯ ಮಾತಿನ ಅರ್ಥ ಮತ್ತು ಉದ್ದೇಶ
...ುಖ್ಯವಾಗಬೇಕೇ ಹೊರತು ಟಸ್‌ಪುಸ್ ಅಂತ
...ಂಗ್ಲಿಷ್‌ನಲ್ಲಿ ಮಾತನಾಡುವುದೇ ಪ್ರಬುದ್ಧತೆ
...ಲ್ಲ' ಎಂದು ಆಕೆಯನ್ನು ಟೀಕಿಸಿದ್ದೆ.

ಈಗ ಚಡ್ಡಿಗಳ ಹಿಂದೂತ್ವದ
...ಜೆಂಡಾಗಳನ್ನೆಲ್ಲ ದೇಶದ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಜಾರಿಗೆ ತರಲು ಹಲವಾರು ಕಸರತ್ತುಗಳನ್ನು ಮಾಡುತ್ತಿರುವ ಈ ಮಹಿಳಾ ಮನುವಾದಿ ಸಂಸತ್ತಿನಲ್ಲಿ ಸುಳ್ಳುಗಳನ್ನೇ ಹತ್ತಾರು ಬಾರಿ ಹೇಳಿದರೆ ಅದು ನಿಜವಾಗುತ್ತದೆ ಎಂಬ ಚಡ್ಡಿಗಳ ನಿಲುವನ್ನು ಮುಂದುವರೆಸಿದ್ದಳು. ಆಕೆ ಅಂದು ಒಂದು ಸುಳ್ಳಿನ ಮೇಲೆ ಇನ್ನೊಂದು ಸುಳ್ಳನ್ನು ಹೇಳುತ್ತಾ ಸಾಗಿದಳೇ ಹೊರತು ತಾನು ಎಸಗಿರುವ ಘೋರ ಪಾಪದ ಬಗ್ಗೆ ಅವಳಲ್ಲಿ ಕಿಂಚಿತ್ತೂ ಅಳುಕು ಇರಲಿಲ್ಲ. ನಾಗರಿಕ ಮನುಷ್ಯರಲ್ಲದವರಿಗೆ ಮಾತ್ರ ಇಂತಹ ಭಂಡತನ ಇರಲು ಸಾಧ್ಯ.



ಸ್ಮೃತಿ ಇರಾನಿ ತನ್ನ ಎಲ್ಲಾ ನಟನಾ ಪ್ರತಿಭೆಯನ್ನು ಕ್ರೋಢೀಕರಿಸಿಕೊಂಡು "ನಾನು ಅತ್ಯಲ್ಪ ಜನಸಂಖ್ಯೆಯನ್ನು ಹೊಂದಿರುವ ಸಮುದಾಯದವರನ್ನು ಮದುವೆಯಾಗಿದ್ದೇನೆ. ನನ್ನ ಜಾತಿ ಯಾವುದು ಎಂದು ನೀವು ಹೇಳಬಲ್ಲಿರಾ? ನೀವು ಇಲ್ಲಿ ರಾಜಕೀಯ ಮಾಡಬೇಡಿ. ನಾನು ತಪ್ಪು ಮಾಡಿದ್ದರೆ, ಸುಳ್ಳು ಹೇಳಿದ್ದರೆ ನಾನು ರಾಜಕೀಯದಿಂದ ನಿವೃತ್ತಿ ಹೊಂದುತ್ತೇನಲ್ಲದೆ ನನ್ನ ಶಿರವನ್ನೇ ಕತ್ತರಿಸಿ ನಿಮ್ಮ ಕಾಲಬುಡದಲ್ಲಿ ಇಡುತ್ತೇನೆ" ಎಂದೆಲ್ಲಾ ಬೊಬ್ಬೆ ಹಾಕಿದಳು. ಅದಾದ ಮೇಲೆ ಸುಳ್ಳುಗಳ ಸುರಿಮಳೆಯನ್ನೇ ಶುರುಹಚ್ಚಿಕೊಂಡಳು.

ತಾನು ಮಹಾನ್ ಮಾತೃಹೃದಯದವಳು ಎಂಬಂತೆ ರೋಹಿತ್ ವೇಮುಲನನ್ನು 'ಕೂಸು' ಎಂದು ಹಲವಾರು ಬಾರಿ ಕರೆದಳು. ಅಲ್ಲಾ ಹೆಂಗಸೇ ಇದೇ 'ಕೂಸು' ಹೈದರಾಬಾದಿನ ಮುಕ್ತ ವಿವಿಯಲ್ಲಿ 'ಜಾತಿವಾದ ಮತ್ತು ಭಯೋತ್ಪಾದಕ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾನೆ' ಎಂದು ಚಡ್ಡಿ ಚತುರ ಬಂಡಾರು ದತ್ತಾತ್ರೇಯ ಸುಳ್ಳಿನ ದೂರು ಕೊಟ್ಟಾಗ ನೀನ್ಯಾಕೆ "ಕೂಸುಗಳು ಜಾತಿವಾದಿಗಳಾಗಿರಲ್ಲ, ಭಯೋತ್ಪಾದನೆ ಬಗ್ಗೆ ಅವುಗಳಿಗೆ ಗೊತ್ತಿರಲ್ಲ, ಹೋಗಯ್ಯ, ಸುಮ್‌ಸುಮ್ಮನೆ ನನ್ನ ತಲೆ ತಿನ್ನಬೇಡ" ಅಂತ ನೀನು ಯಾಕೆ ಹೇಳಲಿಲ್ಲ? ಯಾಕೆ ವಿವಿಯು ರೋಹಿತ್ ಮತ್ತು ಆತನ ಸ್ನೇಹಿತ 'ಕೂಸುಗಳು' ಹಾಸ್ಟೆಲ್‌ನಿಂದ ಉಚ್ಚಾಟಿತರಾಗುವಂತೆ ಮಾಡಿದೆ ನೀನು? ರೋಹಿತನನ್ನು 'ಕೂಸು' ಎಂದು ಕರೆಯುತ್ತಾ ಗದ್ಗದಿತ ದನಿಯಲ್ಲಿ ನಾಟಕವಾಡಿದ ನೀನು ಎಲ್ಲಾ ತಾಯಂದಿರಿಗೂ ಅವಮಾನ ಮಾಡಿದ್ದೀಯ.

ರೋಹಿತ್ ಯಾವ ನಿಟ್ಟಿನಿಂದಲೂ 'ಕೂಸು' ಆಗಿರಲಿಲ್ಲ, ಬದಲಾಗಿ ಆತ ನಿನಗಿಂತಲೂ ಹೆಚ್ಚು ಓದಿಕೊಂಡಿದ್ದ, ದೇಶವನ್ನು ಅರ್ಥಮಾಡಿಕೊಂಡಿದ್ದ, ಪ್ರತಿಭೆಯನ್ನು ಹೊಂದಿದ್ದ. ಇಂತಹ ಯುವಕನನ್ನು ಸಾವಿಗೆ ದೂಡಿದ್ದು ನೀನು ಮತ್ತು ನಿನ್ನ ಚಡ್ಡಿ ನಾಯಕರು. ಬರಿ ಸಗಣಿ ತುಂಬಿರುವ ನಿನ್ನ ಬುರುಡೆ ಕಟ್ಟಿಕೊಂಡು ಯಾರಿಗೂ ಏನೂ ಆಗಬೇಕಿಲ್ಲ, ಅದನ್ನು ನಿನ್ನೊಂದಿಗೆ ಜೋಪಾನವಾಗಿಟ್ಟುಕೊ.

ಸ್ಮೃತಿ ಹೇಳಿದ ಇನ್ನೊಂದು ಸುಳ್ಳು, ರೋಹಿತ್ ವೇಮುಲನ ವಿರುದ್ಧದ ನಿಲುವನ್ನು ತೆಗೆದುಕೊಂಡ ಹೈದರಾಬಾದಿನ ವಿವಿಯ ಉಪಕುಲಪತಿಯನ್ನು ನೇಮಿಸಿದ್ದು ಎನ್‌ಡಿಎ ಸರ್ಕಾರವಲ್ಲ, ಬದಲಾಗಿ ಯುಪಿಎ ಸರ್ಕಾರ ಎಂಬುದು. ವಾಸ್ತವವಾಗಿ ಯುಪಿಎ ನೇಮಿಸಿದ್ದ ಹಿಂದಿನ ಕುಲಪತಿ ಆಂತರಿಕ ಸಮಿತಿಯೊಂದು ಕೊಟ್ಟ ವರದಿಯನ್ನು ಆಧರಿಸಿ ಮೊದಲು ವೇಮುಲ ಮತ್ತು ಇತರರ ವಿರುದ್ಧದ ನಿಲುವು ತೆಗೆದುಕೊಂಡಿದ್ದರೂ, ವಿದ್ಯಾರ್ಥಿಗಳು ಸಮಿತಿಯು ತಮ್ಮನ್ನು ಮಾತನಾಡಿಸದೆ ವರದಿ ಕೊಟ್ಟಿದೆಯೆಂದು ಪ್ರತಿಭಟಿಸಿದ್ದರು. ಆಗ ಹಿಂದಿನ ಕುಲಪತಿ ಕೆಲವೇ ದಿನಗಳಲ್ಲಿ ವಿದ್ಯಾರ್ಥಿಗಳನ್ನು ವಾಪಸ್ ತೆಗೆದುಕೊಂಡು ಹೊಸ ಸಮಿತಿಯನ್ನು ರಚಿಸುವುದಾಗಿ ಭರವಸೆ ಕೊಟ್ಟಿದ್ದರು. ಆದರೆ ಯಾವಾಗ ಮೋದಿ ನೇಮಿಸಿದ ಅಪ್ಪಾಜಿ ರಾವ್ ಎಂಬ ದಲಿತ ದ್ವೇಷಿ ವಿವಿಯ ಉಪಕುಲಪತಿಯಾಗಿ ಅವತರಿಸಿದನೋ ಆತ ರೋಹಿತ್ ಮತ್ತು ಮಿತ್ರರನ್ನು ಹಾಸ್ಟೆಲ್‌ನಿಂದ ಹೊರನೂಕಿದ್ದ. ವಿವಿಯ ಆಡಳಿತ ಕಚೇರಿಗೆ ಮತ್ತು ಲೈಬ್ರರಿಗೆ ಅವರ್‍ಯಾರೂ ಕಾಲಿಡಕೂಡದೆಂದು ಆದೇಶಿಸಿದ್ದ. ರೋಹಿತ್ ಮತ್ತು ಮಿತ್ರರು ಸಣ್ಣ ಟೆಂಟ್ ಕಟ್ಟಿಕೊಂಡು ಹೈದರಾಬಾದಿನ ಕೊರೆಯುವ ಚಳಿಯಲ್ಲಿ ಎರಡು ವಾರ ಕಳೆದರೂ ಅವರತ್ತ ಅಪ್ಪಾಜಿ ರಾವ್ ತಿರುಗಿನೋಡಲಿಲ್ಲ, ಯಾವ ಸಾಮಾಜಿಕ ಬಹಿಷ್ಕಾರವನ್ನು ಹಿಂದೆ ಬಿಟ್ಟು ಬರಬೇಕೆಂದು ರೋಹಿತ್ ಆಶಿಸಿದ್ದನೋ ಅಂತಹ ಬಹಿಷ್ಕಾರಕ್ಕೆ ನೂಕಿದ್ದು ಇದೇ ಸ್ಮೃತಿ ಇರಾನಿ ಎಂಬ ಅಮಾನವೀಯ ಹೆಂಗಸು. ಆದರೂ ಆಕೆ ತನ್ನ ತಪ್ಪನ್ನು ಒಪ್ಪಿಕೊಳ್ಳದೆ ಸುಳ್ಳುಗಳನ್ನು ಹೇಳುತ್ತಲೇ ಇದ್ದಾಳೆ.

ಹಾಗೆಯೇ ವಿಚಾರಣೆ ನಡೆಸಿದ ಸಮಿತಿಯಲ್ಲಿ ದಲಿತ ಅಧ್ಯಾಪಕರೂ ಇದ್ದರೆಂದು ಇನ್ನೊಂದು ಸುಳ್ಳನ್ನೂ ಈಕೆ ಹೇಳಿದಳು. ಆದರೆ ಆ ಅಧ್ಯಾಪಕರನ್ನು ನಾಮಕಾವಸ್ಥೆಗೆ ಸಮಿತಿಯಲ್ಲಿ ಸೇರಿಸಿಕೊಂಡಿದ್ದು ಈಗಾಗಲೆ ಎಲ್ಲರಿಗೂ ಗೊತ್ತಾಗಿದೆ. ಮಾತ್ರವಲ್ಲ ಅವರು ಸಮಿತಿ ಎಂದೂ ತನ್ನ ಅಭಿಪ್ರಾಯವನ್ನು ಕೇಳಲೇ ಇಲ್ಲ ಎಂದೂ ಹೇಳಿದ್ದಾರೆ. ಇದನ್ನೂ ಮರೆಮಾಚಿದ್ದಾಳೆ ಸ್ಮೃತಿ ಇರಾನಿ.

ರೋಹಿತನ ಹೆಸರನ್ನೂ ಹೇಳದೆ "ಆ ಕೂಸಿಗೆ ವೈದ್ಯಕೀಯ ನೆರವನ್ನು ನೀಡಲಿಲ್ಲ, ಹಾಗೊಮ್ಮೆ ವೈದ್ಯರನ್ನು ಕರೆದಿದ್ದರೆ ಅವರು ಅವನ ಪ್ರಾಣವನ್ನು ಉಳಿಸುತ್ತಿದ್ದರು. ಮಾರನೆ ದಿನದ ಮುಂಜಾನೆ ತನಕ ಪೊಲೀಸರನ್ನೂ ಆ ಕೂಸಿನ ಹತ್ತಿರ ಸುಳಿಯಲು ಬಿಡಲಿಲ್ಲ. ಇಷ್ಟೆಲ್ಲ ಆಗಿದ್ದರೂ ಇವತ್ತು ನೀವೆಲ್ಲ ಆತನ ಶವ ಇಟ್ಟುಕೊಂಡು ನನ್ನ ಮುಂದೆ ರಾಜಕೀಯ ಮಾಡಬೇಡಿ" ಎಂದು ಈಯಮ್ಮ ಗುಡುಗಿದಳು. ಅದೂ ಅಪ್ಪಟ ಸುಳ್ಳು. ಯಾಕೆಂದರೆ ರೋಹಿತ್ ಆತ್ಮಹತ್ಯೆ ಮಾಡಿಕೊಂಡಿದ್ದು ಗೊತ್ತಾಗುತ್ತಿದ್ದಂತೆ ಆತನ ಮಿತ್ರರು ವಿಶ್ವವಿದ್ಯಾಲಯದಲ್ಲಿ ಇರುವ ವೈದ್ಯೆ ರಾಜಶ್ರೀ ಅವರನ್ನು ಕರೆದಿದ್ದರು. ಅಲ್ಲಿಗೆ ದೌಡಾಯಿಸಿದ ರಾಜಶ್ರೀ ತಪಾಸಣೆ ಮಾಡಿ ಪ್ರಾಣ ಹೋಗಿರುವುದನ್ನು ದಾಖಲಿಸಿದ್ದರು. ಮಾತ್ರವಲ್ಲ, ರೋಹಿತನ ಪಾರ್ಥಿವ ಶರೀರ ಇದ್ದ ಕೊಠಡಿಗೆ ತೆಲಂಗಾಣ ಪೊಲೀಸರು ಬಂದಿದ್ದಕ್ಕೆ ಫೋಟೋಗಳೇ ಸಾಕ್ಷಿಯಾಗಿವೆ. ಇಷ್ಟೆಲ್ಲ ಸಾಮಾಜಿಕ ಜಾಲತಾಣಗಳಿಂದಾಗಿ ಎಲ್ಲರಿಗೂ ಗೊತ್ತಾಗಿದೆ ಮಾತ್ರವಲ್ಲ, ದೂರದ ಬೆಂಗಳೂರಿನಲ್ಲಿ ಕೂತಿರುವ ನನ್ನಂತವರಿಗೂ ಸ್ಪಷ್ಟವಾಗಿರುವಾಗ ಸ್ಮೃತಿ ಸುಳ್ಳನ್ನು ಬೊಗಳುವ ದರ್ಪ ತೋರಿದ್ದಾಳೆ.

ಕೊನೆಗೆ ಇದ್ಯಾವುದೂ ಸಾಲದೆಂಬಂತೆ ರೋಹಿತ್ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಬರೆದಿಟ್ಟ ಪತ್ರದಲ್ಲಿ 'ನನ್ನ ಸಾವಿಗೆ ಯಾರೂ ಕಾರಣರಲ್ಲ' ಎಂದಿದ್ದನ್ನೇ ಇಟ್ಟುಕೊಂಡು "ಅವನ ಸಾವಿಗೆ ನನ್ನನ್ನು ಹೊಣೆ ಮಾಡುವುದು ಸರಿಯಲ್ಲ" ಎಂದು ವಾದಿಸಿದ್ದಾಳೆ ಈ ಭಂಡ ಹೆಂಗಸು. ಈ ಹೆದ್ದ ಮಹಿಳೆಯ ಕೆಟ್ಟ ನಾಯಕತ್ವಕ್ಕೆ ಇನ್ನೆಷ್ಟು ಯುವಜನತೆಯ ಪ್ರಾಣಗಳು ಬಲಿಯಾಗಬೇಕೋ ಎಂಬುದು ಪ್ರಾಯಶಃ ಆ ಚಾಮುಂಡಿಗೂ ಗೊತ್ತಿರಲಿಕ್ಕಿಲ್ಲ. •

...ಲಂಕೇಶ್ 81



...ಲಂಕೇಶ್ ನೆನಪು ಮತ್ತು ...ರಾಷ್ಟ್ರೀಯವಾದ ಕುರಿತು ಚರ್ಚೆ

...'ಮೈಥಿಲಿ' ನಾಟಕ

...ದಿನಾಂಕ: ಮಾರ್ಚ್ 12, ಶನಿವಾರ, 2016
...ಸಮಯ: ಸಂಜೆ 4 ರಿಂದ
...ಸ್ಥಳ: **ಕನ್ನಡ ಸಾಹಿತ್ಯ ಪರಿಷತ್**, ಬೆಂಗಳೂರು

...ಅಂದು ಬಿಡುಗಡೆ ಆಗುತ್ತಿರುವ ಪುಸ್ತಕಗಳು


...ಬಿಟ್ಟು ಹೋದ ಪುಟಗಳು - ಪಿ. ಲಂಕೇಶ್
...ಅರ್ಧನಾರೀಶ್ವರ - ಪೆರುಮಾಳ್ ಮುರುಗನ್ (ಕನ್ನಡಕ್ಕೆ: ನಲ್ಲತಂಬಿ)
...ತಮಿಳಿನ ಹತ್ತು ಕತೆಗಳು - ವಿವಿಧ ಲೇಖಕರು (ಕನ್ನಡಕ್ಕೆ: ನಲ್ಲತಂಬಿ)
...ಾಡುವ ಕತೆಗಳು - ಗಿರೀಶ್ ತಾಳಿಕಟ್ಟೆ
...ನ್ನ ಅನುಭವದ ಸೂಫಿ ಮತ್ತು ಇತರ ಲೇಖನಗಳು- ನೂರ್ ಶ್ರೀಧರ್
...ಗ್ಗತ್ತಲ ಜಗತ್ತಿನಲ್ಲಿ ತೊಂಬತ್ತು ದಿನ - ನಗರಿ ಬಾಬಯ್ಯ
...ಹುಲಿಯ ಜಾಡು ಹಿಡಿದು - ಟಿಪ್ಪು ಸುಲ್ತಾನ್ ಕುರಿತ ಲೇಖನಗಳ ಸಂಗ್ರಹ (ಸಂ: ಕುಮಾರ್ ಬುರಡಿಕಟ್ಟಿ)
...ದೇಶ ಅಂದರೆ... ಮನುಷ್ಯರು - ರೋಹಿತ್ ವೇಮುಲ ಮತ್ತು ಜೆಎನ್‌ಯು ಹೋರಾಟ ಕುರಿತ ...ಲೇಖನಗಳ ಸಂಗ್ರಹ (ಸಂ: ಹರ್ಷಕುಮಾರ್ ಕುಗ್ವೆ)

ಎಲ್ಲರಿಗೂ ಸ್ವಾಗತ

(ಕಾರ್ಯಕ್ರಮದ ಹೆಚ್ಚಿನ ವಿವರಗಳು ಮುಂದಿನ ವಾರ)

ಹೊನ್ನಾವರ

ಶಾಸಕ ಮಂಕಾಳು ವೈದ್ಯನೇ ಮರಳು ಮಾಫಿಯಾಕ್ಕೆ ಡಾನ್!


ಮಂಕಾಳು ವೈದ್ಯ

ಹೊನ್ನಾವರದ ಹೊಳೆ ಸಾಲಿಗೆ 'ಶರಾವತಿ' ಜೀವ-ಜೀವನದ ನದಿ. ಶರಾವತಿ ನೀರು ಇಕ್ಕೆಲದ ದಂಡೆಯ ಲಕ್ಷಾಂತರ ಜನರಿಗೆ ಜೀವಜಲ. ಸುಮಾರು ಹತ್ತು ಸಾವಿರ ಹೆಕ್ಟೇರು ಕೃಷಿಭೂಮಿ, ಸಾವಿರಾರು ಮೀನುಗಾರ ಸಂಸಾರ ಮತ್ತು ಸಾಂಪ್ರದಾಯಿಕ ರೇತಿ ತೆಗೆಯುವಿಕೆ ಮುಂತಾದ ನದಿ ಅವಲಂಬಿತ ಉಪ-ಕಸುಬಿನ ಕುಟುಂಬಕ್ಕೆಲ್ಲ ಶರಾವತಿ ಆಸರೆ. ಈ ನದಿಯ ಪಾತ್ರದಲ್ಲಿ ಒಂಚೂರು ವ್ಯತ್ಯಾಸವಾದರೂ ಸಾಕು, ಹೊಳೆ ಸಾಲಿನ ಅಷ್ಟೂ ಹಳ್ಳಿಗಳ ಬದುಕು ಬರಡಾದಂತೆಯೇ!

ಗೇರುಸೊಪ್ಪದಿಂದ ಹೊನ್ನಾವರ ಪಟ್ಟಣದ ಅಂಚಿನಲ್ಲಿರುವ ಬಿಕ್ಕಾಸನ ತಾರಿ ತನಕದ ಹೆಚ್ಚುಕಮ್ಮಿ 40 ಕಿ.ಮೀ. ವ್ಯಾಪ್ತಿಯ ಜೀವ ಜಗತ್ತಿನ ಬದುಕಿಗೆ ಆಧಾರವಾದ ಶರಾವತಿ ನದಿಗೆ ಮರಳು ಮಾಫಿಯಾ ಗಂಟು ಬಿದ್ದು ವರ್ಷ ಎರಡ್ಮೂರು ಕಳೆಯುತ್ತಾ ಬಂದಿದೆ. ಸ್ಥಳೀಯ ಶಾಸಕ ಸೈಲ್- ಒಂದಿಬ್ಬರು ಗಂಡಾಗುಂಡಿ ಜಿಪಂ ಸದಸ್ಯರು ಮತ್ತು ಪರಿಸರ-ಗಣಿ-ಭೂವಿಜ್ಞಾನ-ಸಾರಿಗೆ-ಪೊಲೀಸ್ ಇಲಾಖೆಯ ಬಕಾಸುರರ ಈ ದರೋಡೆ ಗ್ಯಾಂಗ್ ಟೆಂಗಾವಲಿಗೆ ಇಡೀ ಜಿಲ್ಲಾಡಳಿತವೇ ನಿಂತಿರುವುದು ಶರಾವತಿ ಮಕ್ಕಳನ್ನು ಕಂಗಾಲಾಯಿಸಿಬಿಟ್ಟಿದೆ! ನಿರಾತಂಕವಾಗಿ ಹಗಲಿರುಳೂ ಶರಾವತಿ ಒಡಲನ್ನು ಬಗೆದು ಕೋಟ್ಯಾಂತರ ರೂ. ಮರಳು ಮುಕ್ಕುತ್ತಿರುವ ಮಾಫಿಯಾದ ಮಸಲತ್ತಿಗೆ ಮುಗ್ಧ ಹಳ್ಳಿಗರ ಬದುಕು ರೌರವ ನರಕದಂತಾಗಿ ಹೋಗಿದೆ!

ಮ'ರು'ಳು ನೀತಿ!

ಶರಾವತಿಯಲ್ಲಿ ಲಾಗಾಯ್ತಿನಿಂದಲೂ ಸಾಂಪ್ರದಾಯಿಕ ಮರಳುಗಾರಿಕೆ ನಡೆಯುತ್ತಿದೆ. ನದಿ ದಡದಿಂದ 50 ಮೀಟರ್ ದೂರದ ಹೊಳೆ ನಡುವೆ ಪುಟ್ಟ-ಪುಟ್ಟ ದೋಣಿಗಳನ್ನು ಒಯ್ದು ಒಂದೆರಡು ಟನ್ ಮರಳು ಸಂಗ್ರಹಿಸಿ ಮಾರುವ ಬಡ ಕುಟುಂಬಗಳಿಗೆ ಇದೇ ಜೀವನಾಧಾರ ಕಸುಬು. ಇಡೀ ದಿನ ಅದೆಷ್ಟೇ ಬೆವರು ಸುರಿಸಿದರೂ ದೋಣಿ ತುಂಬಿಸುವುದು ಕಷ್ಟ. ಈ ದಂಧೆಯಿಂದ ಶರಾವತಿಗೆ ಯಾವ ಧಕ್ಕೆಯೂ ಆಗುತ್ತಿರಲಿಲ್ಲ. ಆದರೆ ಯಾವಾಗ ಯಡ್ಡಿಯ ಚೆಡ್ಡಿ ಸರ್ಕಾರ 'ಮರುಳು' ನೀತಿ ಘೋಷಿಸಿ ದೊಡ್ಡ ಪ್ರಮಾಣದಲ್ಲಿ ಮರಳುಗಾರಿಕೆಗೆ ಅವಕಾಶ ಕೊಟ್ಟಿತೋ ಆಗ ಶುರುವಾಯ್ತು ಶರಾವತಿ ಮಕ್ಕಳಿಗೆ ಗಂಡಾಂತರ!!

2011ರ ಮರಳು ನೀತಿಯಂತೆ ಸಾಂಪ್ರದಾಯಿಕ ಮರಳುಗಾರಿಕೆಗಷ್ಟೇ ಲೈಸೆನ್ಸ್ ಕೊಡಲಾಗುತ್ತದೆ. ಒಂದು ವರ್ಷದ ತಾತ್ಕಾಲಿಕ ಪರವಾನಗಿ ಪಡೆದವರು ಯಾಂತ್ರೀಕೃತ ಮರಳುಗಾರಿಕೆ ನಡೆಸುವಂತಿಲ್ಲ; ಜೆಸಿಬಿ ಅಥವಾ ಡ್ರೆಜ್ಜರ್, ಯಂತ್ರ ಚಾಲಿತ ಬೋಟು ಬಳಸುವಂತೆಯೇ ಇಲ್ಲ. ಈ ಷರತ್ತಿನ ಮೇಲೆ ಶರಾವತಿ ನದಿಯಲ್ಲಿ ಮರಳುಗಾರಿಕೆ ನಡೆಸಲು ಮರಳು ಪಟ್ಟಿ ಗುರುತಿಸಿ ಲೀಸ್ ನೀಡಲಾಗಿದೆ.

ಎಮ್ಮೆಲ್ಲೆ ಮಂಕಾಳು ಎಂಟ್ರಿ

2014 ತನಕ ಬೆರಳೆಣಿಕೆಯ ಸ್ಥಳೀಯರು ಲೈಸೆನ್ಸ್ ಪಡೆದು ಮರಳುಗಾರಿಕೆ ಮಾಡುತ್ತಿದ್ದರು. ಆಗೇನೂ ಶರಾವತಿ ಜೀವಜಾಲಕ್ಕೆ ತೊಂದರೆ ಆಗಿರಲಿಲ್ಲ. ಆದರೆ ಎರಡು ವರ್ಷದ ಹಿಂದೆ ಮರಳು ಮಾಫಿಯಾ ಶರಾವತಿಯಲ್ಲಿ ಎಬ್ಬಿಸಿದ ಕೃತಕ ಸುನಾಮಿ ಇವತ್ತಿಗೂ ಹಾಳು ಮಾಡುತ್ತಿದೆ. ಭಟ್ಕಳದ ಗೋಲ್‌ಮಾಲ್ ಶೂರ ಶಾಸಕ ಮಂಕಾಳು ವೈದ್ಯ ಶರಾವತಿ ಮರಳುಗಾರಿಕೆಗೆ ಪರೋಕ್ಷವಾಗಿ ಎಂಟ್ರಿ ಹೊಡೆದಿದ್ದೇ ತಡ, ಭೀಭತ್ಸ ಮಾಫಿಯಾ ಹೊಳೆ ಸಾಲಿನಲ್ಲಿ ತಲೆಯೆತ್ತಿತ್ತು.

ಮಂಕಾಳು ವೈದ್ಯನ ಕೃಪಾಶೀರ್ವಾದದಿಂದ ರಾತ್ರಿಗಳು ಬೆಳಗಾಗುತ್ತಿದ್ದಂತೆಯೇ ಲೈಸನ್ಸ್‌ದಾರರ ಸಂಖ್ಯೆ ದ್ವಿಗುಣವಾಗುತ್ತಾ ಹೋಯ್ತು. ಪರಿಸರ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗು ಜಿಲ್ಲಾಡಳಿತದಲ್ಲಿ ಮೇಲಿಬಾಜಿ ಬಿರುಸುಗೊಂಡಿತು. ಸಾಂಪ್ರದಾಯಿಕ ಮರಳು ಕಸುಬುದಾರರಲ್ಲದ ಖದೀಮರಿಗೆಲ್ಲ ಲೈಸೆನ್ಸ್ ಬಿಕರಿಯಾದವು. ಬೆರಳೆಣಿಕೆಯಷ್ಟಿದ್ದ ಶರಾವತಿ ನದಿ ಮರಳುಗಾರಿಕೆ ಪರವಾನಗಿದಾರರ ಸಂಖ್ಯೆ ನೋಡು-ನೋಡುತ್ತಿದ್ದಂತೆಯೇ ಬರೋಬ್ಬರಿ 41ಕ್ಕೆ ಬಂದು ನಿಂತಿತು. ಶಾಸಕ ಮಂಕಾಳುನ ಪರಮ ಪ್ರೀತಿಯ ಜಿಪಂ ಸದಸ್ಯೆ ಪುಷ್ಪಾ ನಾಯ್ಕ್ ಬೇನಾಮಿಯಾಗಿ ಮರಳು ಪಟ್ಟಿ ಲೈಸೆನ್ಸ್ ಪಡೆದರೆ ಮತ್ತೊಬ್ಬ ಶಾಸಕನ ಚೇಲ-ಜಿಪಂ ಸದಸ್ಯ ಕೃಷ್ಣೇಗೌಡನೂ ಅಧಿಕೃತವಾಗೇ ಮರಳುಗಾರಿಕೆಗೆ ಧುಮುಕಿ ಬಿಟ್ಟ!!!

ಶಾಸಕ ಮಂಕಾಳುನೂ ಬೇನಾಮಿಯಾಗಿ ಮರಳುದಂಧೆಗೆ ಕೈಹಾಕಿದ್ದಾನೆ. ಆತನ ಲಾರಿಗಳು ಯಾರ್ಯಾರದೋ ಹೆಸರಲ್ಲಿ ಮರಳು ಸಾಗಾಟ ಮಾಡುತ್ತಿವೆ. ಈ ಅನಧಿಕೃತ ಮರಳು ಲಾರಿ ಯಾವುದಾದರೂ ಚೆಕ್‌ಪೋಸ್ಟ್‌ನಲ್ಲಿ ತಡೆಹಿಡಿದರೆ ಸಾಕ್ಷಾತ್ ಶಾಸಕ ಸಾಹೇಬರೇ ದಾಳಿ ಮಾಡಿ ಅಧಿಕಾರಿಗಳನ್ನು ಬೆದರಿಸಿ ಲಾರಿ ಬಿಡಿಸುತ್ತಾರೆ. ಶರಾವತಿ ದಂಡೆಯ ಮರಳು ಮಾಫಿಯಾಕ್ಕೆ ಶಾಸಕ ಮಂಕಾಳುನೇ ಡಾನ್. ಅಕ್ರಮ ದಂಧೆ ನಿಭಾಯಿಸುವುದು ಮಾಜಿ ಜಿಪಂ ಸದಸ್ಯ ಕೃಷ್ಣೇಗೌಡ (ಈಗಾತನ ಮಡದಿಯೇ ಜಿಪಂ ಸದಸ್ಯೆ) ಮತ್ತು ನಗರಬಸ್ತಿಕೇರಿಯ ಜಿಪಂನ 'ಸುರಿತ ಸದಸ್ಯೆ' ಪುಷ್ಪಾ ನಾಯ್ಕ್‌ರ ತಮ್ಮ ದಿನೇಶ. ಈ ಕೋಳಿ ಅಂಕ- ಓಸಿ ಪಟ್ಟಿ ಕಿಂಗ್ ಕೃಷ್ಣಗೌಡ, ದಿನೇಶ್ ನಾಯ್ಕ ಬಳಗಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಸಾರಿಗೆ, ಪೊಲೀಸ್ ಇಲಾಖೆಯ ಕಚೇರಿಯಲ್ಲಿ ಸದಾ ರಾಜ ಸತ್ಕಾರ ಸಿಗುತ್ತದೆ. ಅಕ್ರಮ ಮರಳುಗಾರಿಕೆಯ ಹಫ್ತಾ ವಸೂಲಿ ಮಾಡಿ ರಿಸ್ಕ್ ಟ್ರಾನ್ಸ್‌ಪೋರ್ಟೇಷನ್, ರಿಸ್ಕ್ ಮರಳೆತ್ತುವಿಕೆ ಹೆಸರಲ್ಲಿ ಸಂಬಂಧಿಸಿದವರಿಗೆ ಹಂಚೋದು ಜಿಪಂ ಸದಸ್ಯರ ಪಟಾಲಮ್! ಕೃಷ್ಣಗೌಡ, ಪುಷ್ಪಾ ನಾಯ್ಕರ ತಮ್ಮ ಅಕ್ರಮ ಮರಳುಗಾರಿಕೆ ವ್ಯವಹಾರದ ಕಿಂಗ್‌ಪಿನ್‌ಗಳು. ಈ ಗ್ಯಾಂಗಿನ ವಿಷ್ಣು ನಾಯ್ಕ್ ಎಂಬ 'ಹುಳಿಬೆಲ್ಲದ ವ್ಯಾಪಾರಿ' ಮರಳುಪಟ್ಟಿಯ ರೌಡಿ ಗ್ಯಾಂಗ್‌ಲೀಡರ್. ಮರಳು ಅವ್ಯವಹಾರ ಪ್ರಶ್ನಿಸುವವರನ್ನು ಸಾಮ-ಭೇದ-ದಂಡ ಬಳಸಿ ತಹಬಂದಿಗೆ ತರುವ ಜವಾಬ್ದಾರಿ ವಿಷ್ಣು ನಾಯ್ಕನದು. ತನ್ನ ರೇತಿ ಸೈಟಿಗೆ ಲಾರಿ ಹೋಗಿಬರಲು ಅನುಕೂಲವಾಗುವಂತೆ ಬೆಟ್ಟದಲ್ಲಿ ಜಿಪಂ ಹಣದಲ್ಲಿ ರಸ್ತೆ ಮಾಡಿಸಿದ ಸಾಧನೆ ಕೃಷ್ಣಗೌಡನದು.

ಷರತ್ತು ಉಲ್ಲಂಘನೆ

ಶರಾವತಿ ನದಿದಂಡೆಯ ಮರಳುಗಾರಿಕೆಗೆ ಮಾಫಿಯಾ ಕಳೆ ಕೊಟ್ಟಿರುವ ಶಾಸಕ ಮಂಕಾಳು, ಜಿಪಂ ಸದಸ್ಯ... ನಾಯ್ಕ್, ದೋನಂಬರ್ ದಂಧೆ ದೊರೆ ಕೃ... ಜಲವಳ್ಳಿಯ ಜಗಳಗಂಟ ವಿಷ್ಣು ನಾಯ್ಕ್, ಪ... ಪುಂಡಾಟದಿಂದ ಹೊಳೆ ಸಾಲು ಅಕ್ಷರಶಃ ತತ್ತರಿಸಿ... ನದಿ ಬರಡಾಗಿ ಜನಜೀವನ ಹಿಂಸಾತ್ಮಕವಾಗು... ಯಾರೂ ಸೊಲ್ಲೆತ್ತುವಂತೆಯೇ ಇಲ್ಲ; ಮರಳು ಮಾ... ರೌಡಿಗಳು ಎತ್ತಿಂದ ಯಾವಾಗ ದಾಳಿ ಮಾಡುತ್ತಾ... ಹೇಳಲಾಗದು. 41 ಲೀಸ್-ಲೈಸನ್ಸ್‌ದಾರರಲ್ಲಿ ಯಾರೂ... ನಿಯಮ-ಷರತ್ತು ಬದ್ಧವಾಗಿ ಮರಳುಗಾರಿಕೆ ನಡೆ... ಜಿಲ್ಲಾಮಂತ್ರಿ ದೇಶಪಾಂಡೆಯ ಶಿಷ್ಯೋತ್ತಮ... ಮಂಕಾಳು ವೈದ್ಯನೇ ಮರಳು ಮಾಫಿಯಾದ ಬೆನ್ನ... ದರಿಂದ ಶರಾವತಿ ದಡದಲ್ಲಿ ಯಾರ ಕೇರ್ ಇಲ್ಲದೆ ಅ... ಅನ್ಯಾಯ-ಅವಾಂತರ-ಅವ್ಯವಹಾರ ಜೋರಾಗಿ ನಡೆಯ...

ಪಕ್ಕಾ ಪರಿಸರ ವಿರೋಧಿ, ಅವೈಜ್ಞಾನಿಕ... ಕಾನೂನುಬಾಹಿರ ಮರಳುಗಾರಿಕೆ ಶರಾವತಿ ತೀ... ನಡೆಯುತ್ತಿದೆ. ಎರಡು ವರ್ಷದಿಂದ ಹೊಳೆ ಸಾಲಿನ... ನಿರ್ಗತಿಕರಾಗುವಂತಾಗಿದೆ. ಮಿತಿಮೀರಿದ ಮರಳು... ಯಿಂದ ನದಿ ಪಾತ್ರವೇ ಬದಲಾಗುತ್ತಿದೆ. ಜೀವಜ... ಸಮತೋಲನ ತಪ್ಪಿಹೋಗಿದೆ. ಶರಾವತಿ ನದಿಯಲ್ಲಿ... ನಡುಗಡ್ಡೆಗಳು ಭೂಕುಸಿತದ ಭೀತಿಗೆ ಬಿದ್ದಿವೆ. ನದಿ...


ಅಕ್ರಮ ಮರಳು...


ಮನೆಗಳು ಭೂ ಸವಕಳಿಯಿಂದ ನೆಲ ಕಚ್ಚುವಂತಾ... ಕೃಷಿ ಭೂಮಿಗೆ ಉಪ್ಪು ನೀರು ನುಗ್ಗಿ ಸಾವಿರಾರು... ಕೃಷಿ ಭೂಮಿ ಬಂಜರಾಗಿದೆ. ನದಿಯೂ ಹೆಚ್ಚಾಗಿ... ದರಿಂದ ಜಲಚರಗಳು ನಶಿಸಿ ಮೀನುಗಾರ ಕುಟುಂಬ... ಬೀದಿ ಪಾಲಾಗುತ್ತಿವೆ. ಕುಡಿವ ನೀರಿನ ಬಾವಿಗೂ ಉ... ನೀರು ಸೇರಿ ಜನ ಹಾಹಾಕಾರ ಹಾಕುತ್ತಿದ್ದಾರೆ. ಪರಿ... ಧಕ್ಕೆಯಾಗಿ ಗಾಳಿ-ನೀರು-ಶಬ್ದಮಾಲಿನ್ಯ ಆಗುತ್ತಿದೆ.

ಯಾಂತ್ರೀಕೃತ ಮರಳುಗಾರಿಕೆ


ಕರಾವಳಿಯ ಮೂರು ಜಿಲ್ಲೆಗಳಲ್ಲಿ ಯಾಂತ್ರೀ... ಮರಳುಗಾರಿಕೆ ಮಾಡಬಾರದೆಂಬುದು ಕಟ್ಟುನಿಟ್ಟಿನ ನಿಯ... ಯಂತ್ರಚಾಲಿತ ಬೋಟುಗಳನ್ನು ಮರಳು ಎತ್ತು... ಬಳಸುವುದು ನಿಷಿದ್ಧ. ಬೆಳಗ್ಗೆ 6 ರಿಂದ ಸಂಜೆ... ತನಕವಷ್ಟೆ ಮರಳು ತೆಗೆಯಲು ಅವಕಾಶ. ರಾತ್ರಿ ಪ... ಮರಳುಗಾರಿಕೆಗೆ ಇಳಿಯುವುದು ಕಾನೂನುಬಾಹಿರ. ಆ... ಶರಾವತಿ ನದಿ ಮರುಳುಗಾರಿಕೆ ಲೈಸೆನ್ಸ್ ಪಡೆದಿ... ಎಲ್ಲಾ 41 ಮಂದಿಯೂ ಮರಳು ಬಗೆಯಲು ಬೆಳ... ಜಾವ 3.30ಕ್ಕೆ ಶುರು ಮಾಡುತ್ತಾರೆ. ನದಿಯ... ಕಡಿಮೆಯೆಂದರೂ 100 ಯಂತ್ರ ಅಳವಡಿಸಿ ದೋಣಿ... ಮರಳು ತುಂಬಿಕೊಂಡು ದಂಡೆಗೆ ಬರುತ್ತಿವೆ. ಬಂದ... ಇಲಾಖೆಯ ಪರವಾನಗಿ ಇಲ್ಲದ ಕಳ್ಳ ದೋಣಿಗಳಿವೆ...

ನಧಿ ನೀರಿನ ಮಟ್ಟದಿಂದ 10 ಅಡಿ ಆಳದವರೆ... ಮರಳಷ್ಟೇ ತೆಗೆಯಲು ಅವಕಾಶವಿದೆ. ಸುಪ್ರೀಂಕೋರ್ಟ... ದೀಪಕ್ ಕುಮಾರ್ V/s ಹರಿಯಾಣ ರಾಜ್ಯ ಕೇಸ್‌... 3 ಮೀಟರ್ ಆಳಕ್ಕಿಂತ ಕೆಳಗಿನ ಮರಳು ತೆಗೆಯದ... ಸ್ಪಷ್ಟ ತೀರ್ಪು ನೀಡಿದೆ. (2012/ 4 SCC 62... ಶರಾವತಿ ಕೊಳ್ಳದಲ್ಲಿ 25 ಅಡಿಗಿಂತಲೂ ಕೆಳಗಿಂದ ಮರ... ತೆಗೆಯಲಾಗುತ್ತಿದೆ. ಮರಳುಗಾರಿಕೆ ಕಳ್ಳರು ಬಳಸುವ ದೋ... ಜಿಲ್ಲೇ ಬರೋಬ್ಬರಿ 30 ಅಡಿ ಉದ್ದವಿದೆ! ಅವೈಜ್ಞಾನಿ... ಅಕ್ರಮ ಮರಳುಗಾರಿಕೆಯಿಂದ ನದಿಯ ಆಳ ವಿಪರಿ... ಹೆಚ್ಚಾಗಿದೆ. ಇದರಿಂದಾಗಿ ಜೀವಜಗತ್ತಿನ ಸಮತೋಲ... ತಪ್ಪಿಹೋಗಿದೆ. ಅರಬ್ಬೀ ಸಮುದ್ರದ ಉಪ್ಪು ನೀರು 3... 40 ಕಿ.ಮೀ ದೂರದವರೆಗೆ ವ್ಯಾಪಿಸಿದೆ. ಸಿಹಿ ನೀರ... ಗದ್ದೆಗಳು ಉಪ್ಪು ಮೀರಿಂದಾಗಿ ಬರಡು ಬದ್ದಿದೆ. ಜನ... ಜೀವನಾಧಾರ ಕೃಷಿ ಕಳೆದುಕೊಂಡು ನಿರುದ್ಯೋಗಿಗಳಾ... ಬಿಕಾರಿಗಳಂತಾಗುತ್ತಿದ್ದಾರೆ.

ನದಿ ಆಳ ಹೆಚ್ಚಾಗಿರುವುದರಿಂದ ಮೀನಿನ ಸಂತ... ನಾಶವಾಗಿದೆ. ಮೊಟ್ಟೆಯಿಡಲು ಸಾಧ್ಯವಾಗದೇ ಮೀನುಗ... ದಿಕ್ಕಾಪಾಲಾಗಿ ಹೋಗಿವೆ. ಹೀಗಾಗಿ ಮೀನುಗಾರಿಕೆಯಿಂ... ಬದುಕು ಸಾಗಿಸುತ್ತಿದ್ದವರ ಕುಲಕಸುಬಿಗೆ ಸಂಚಕಾರ ಬಂದಿ... ಭೂಸವಕಳಿ-ಭೂಕುಸಿತದಿಂದ ನದಿ ದಡದ ಮನೆಗ... ಅಳಿವಿನಂಚಿಗೆ ಬಂದಿವೆ. ಕೋಳಿ ಕೂಗುವ ಮೊದ... ಶುರುವಾಗುವ ಯಾಂತ್ರಿಕ ದೋಣಿಗಳ ಕರ್ಕಶ ಸ...


ಮಹಾಂತೇಶ್



ಪುಷ್ಪಾ ನಾಯ್ಕ್


ಕೃಷ್ಣ ಗೌಡ

ಡಿಸಿ ಉಜ್ವಲ್ ಉದಾಸೀನ!!

ಪ್ರಾಮಾಣಿಕ-ಪಾರದರ್ಶಕ-ಕಾನೂನು ನಿಷ್ಠ ಜಿಲ್ಲಾಧಿಕಾರಿ ತಾನೆಂದು ತೋರಿಸಿಕೊಳ್ಳುವ ತೆವಲಿನ ಡಿಸಿ ಉಜ್ವಲ್‌ಕುಮಾರ್ ಘೋಷ್ ಶರಾವತಿ ನದಿ ತೀರದ ಮರಳು ಮಾಫಿಯಾದ ಪಾತಕ ಕಂಡೂಕಾಣದಂತಿರುವುದು ಅನೇಕಾನೇಕ ಅನುಮಾನ ಮೂಡಿಸಿದೆ.


ಬಡ-ಅಸಹಾಯಕರ ಗೂಡಂಗಡಿ, ಬೇಲಿ ತೆಗೆಸುವುದಕ್ಕಷ್ಟೇ ಡಿಸಿ ಸಾಹೇಬರ ಪೌರುಷ ಸೀಮಿತವಾಗಿರುವುದು ಎಂದು ಜಿಲ್ಲೆಯಲ್ಲಿ ನಾನಾ ನಮೂನೆಯ ಜಿಜ್ಞಾಸೆ ಹುಟ್ಟುಹಾಕಿದೆ.



ಉಜ್ವಲ್ ಕುಮಾರ್

ಮೂರು ಬಾರಿ ಡಿಸಿ ಉಜ್ವಲ್ ಶರಾವತಿ ತೀರದ ಮರಳು ಪಟ್ಟಿಗೆ ಭೇಟಿ ನೀಡಿದ್ದಾರೆ. ಆತ ಬರುತ್ತಾರೆಂದಾಗೆಲ್ಲ ಹಠಾತ್ ಮರಳುಗಾರಿಕೆ ಬಂದ್ ಆಗಿರುತ್ತದೆ. ಸಾಹೇಬರ ವ್ಯಾಟ್ಸ್‌ಆ್ಯಪ್ ನಂಬರಿಗೆ ದೂರು ಕಳಿಸಿದರೆ ದೂರುದಾರರ ನಂಬರ್ ಮರಳು ಮಾಫಿಯಾಕ್ಕೆ ಮರುಕ್ಷಣವೇ ಗೊತ್ತಾಗಿರುತ್ತದೆ. ಸಾಹೇಬರು ಬರ್ತಾರೆಂದರೂ ಮಾಫಿಯಾ ಡಾನ್ ಡಾಕೂಗಳಿಗೆ ಇಂಟಿಮೇಷನ್ ಬಂದಿರುತ್ತದೆ. ಡಿಸಿ ಘೋಷ್ ಶರಾವತಿ ತೀರದ ಅಕ್ರಮ ಮರಳುಗಾರಿಕೆ ಕಣ್ಣಾರೆ ಕಂಡಿದ್ದಾರೆ. ಹೊರ ರಾಜ್ಯದ ನೂರಾರು ಕಾರ್ಮಿಕರು ನೂರಾರು ಯಾಂತ್ರೀಕೃತ ದೋಣಿಯಲ್ಲಿ ಪರಿಸರ ಪರವಾನಗಿ ಇಲ್ಲದ ಸ್ಥಳದಲ್ಲಿ ಮರಳೆತ್ತುತ್ತಿರುವುದು ಕಂಡಿದ್ದಾರೆ.

ನದಿ ಆಳ ಮೀತಿಮೀರಿರುವುದು, ಇದರಿಂದ ಉಪ್ಪು ನೀರು ಗದ್ದೆ ತೋಟಕ್ಕೆ ನುಗ್ಗಿ ಭೂಮಿ ಬರಡಾಗಿರುವುದು, ಬೆಸ್ತರು ಮೀನುಗಳಿಲ್ಲದೆ ಕಸುಬು ವಂಚಿತರಾಗಿರೋದು, ಕುಡಿವ ನೀರಿನ ಬಾವಿಗೂ ಉಪ್ಪು ನೀರು ನುಗ್ಗಿರೋದು, ಪರಿಸರ ನಾಶವಾಗಿರೋದೆಲ್ಲ ಡಿಸಿ ಸಾಹೇಬರಿಗೆ ವಿವರಿಸಲಾಗಿದೆ. ಆದರೂ ಈ ವೀರಾಧಿವೀರ ಜಿಲ್ಲಾಧಿಕಾರಿ ಕೈಕಟ್ಟಿ ಹಾಕಿದಂತೆ ಚಡಪಡಿಸುತ್ತಿದ್ದಾರೆ. "ನನ್ನಿಂದ ಆದಷ್ಟು ಮಾಡ್ತೇನೆ... ಉಳಿದದ್ದು ಗಣಿ ಪರಿಸರ ಇಲಾಖೆಯಿಂದ ಮಾಡ್ಸಿ" ಎಂದು ಕೈ ತಿರುಗಿಸುತ್ತಿದ್ದಾರೆ. ಈಗಂತೂ ಮೂರು ನಕಲಿ ನದಿಗಳ ಹೆಸರಲ್ಲಿ ದೋಖಾ ದಂಧೆ ನಡೆದಿರೋದು ಸಾಕ್ಷ್ಯಾಧಾರ ಸಮೇತ ಸಾಬೀತಾಗಿದೆ. ಆದರೂ ಡಿಸಿ ಸಾಹೇಬರು ಅದ್ಯಾಕೋ "ದಂಡ" ಬಳಸುತ್ತಿಲ್ಲ.

ಮಂತ್ರಿ ದೇಶಪಾಂಡೆ, ಶಾಸಕ ಮಂಕಾಳು ವೈದ್ಯ, ಜಿಪಂ ಸದಸ್ಯರ ದಂಡದ ಎದುರು ಡಿಸಿ ಸಾಹೇಬರು ನಿಶ್ಯಸ್ತ್ರರಾಗಿದ್ದಾರೆ, ಪಾಪ! ವಾಣಿಜ್ಯ ವ್ಯವಹಾರಕ್ಕೆ ಬಳಸುವ ಜಾಗ ಬಿನ್ ಶೇಟ್ಕಿ ಆಗಿರಬೇಕೆಂದು ಕಡ್ಡಾಯ ನಿಯಮ ರೂಪಿಸಿರುವ ಡಿಸಿಗೆ ಶರಾವತಿ ದಂಡೆಯಲ್ಲಿ ಮಾಫಿಯಾ ಮರಳು ಸಂಗ್ರಹಿಸುವ ಜಾಗ ಯಾವುದೆಂದರೆ ಗೊತ್ತಿಲ್ಲ. ಕೃಷಿ ಭೂಮಿಯಲ್ಲಿ ಮಾಫಿಯಾ ಕಮರ್ಷಿಯಲ್ ಕರಾಮತ್ತು ಮಾಡುತ್ತಿದೆ. ಇನ್ನಾದರೂ ಡಿಸಿ ಸಾಹೇಬರಿಗೆ ದೇಶಪಾಂಡೆಯ ನೀತಿಬಾಹಿರ-ನಿಯಮ ಬಾಹೀರ ಆದೇಶ ಧಿಕ್ಕರಿಸುವ ತಾಕತ್ತು ಬಂದೀತಾ? ಶರಾವತಿ ಕೊಳ್ಳದ ಜನರಿಗೆ ನ್ಯಾಯ ಕೊಡಿಸಿಯಾರಾ? ಗಣಿ ಇಲಾಖೆ ಡಿಡಿ ಚೋರ ಮಹಾಂತೇಶ್‌ಗೆ ಅಂಕುಶ ಇಟ್ಟಾರಾ?





ಯಂತ್ರಚಾಲಿತ ಬೋಟ್‌ನಿಂದ ಮರಳುಗಾರಿಕೆ

ವಿದೆ. ದೈಹಿಕ-ಮಾನಸಿಕ ಆರೋಗ್ಯದ ಸಮಸ್ಯೆ ತೀರು ಗಳು ಈಡಾಗಿದ್ದಾರೆ. ಕುಡಿವ ನೀರಿನ ಬಾವಿಗೆ ಉಪ್ಪು ು ಸೇರಿರುವುದು ನದಿ ಆಳದ ಅಡ್ಡ ಪರಿಣಾಮ. ದ್ಧ ಧಾರ್ಮಿಕ ಕ್ಷೇತ್ರ ಇಡಗುಂಜಿ ದೇವಸ್ಥಾನ ಬಾವಿಗೂ ಪ್ಪು ನೀರು ಬೆರೆತಿರುವುದರಿಂದ ಯಾತ್ರಿಗಳ ಭೋಜನವೂ ಪ್ಪಾಗುತ್ತಿದೆ!! ಬೋಟುಗಳು ಉಗುಳುವ ಅಪಾಯಕಾರಿ ಗೆಯಿಂದ ಇಡೀ ಶರಾವತಿ ಕೊಳ್ಳದ ಗಾಳಿ ವಿಷವಾಗಿದೆ.

ಬಿಹಾರ ಒಡಿಶಾದ ಕೂಲಿಗಳು!

ಸಾಂಪ್ರದಾಯಿಕ ಮರಳುಗಾರಿಕೆಯಲ್ಲಿ ಹೊರ ರಾಜ್ಯದ ರ್ಮಿಕರನ್ನು ತೊಡಗಿಸಿಕೊಳ್ಳುವುದಕ್ಕೆ ಖಡಕ್ ನಿಷೇಧವಿದೆ. ಯ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ದ್ದೇಶ ಈ ಷರತ್ತಿನಲ್ಲಡಗಿದೆ. ಆದರೆ ಶರಾವತಿ ಮರಳು ಫಿಯಾದ 41 ಲೈಸೆನ್ಸ್‌ದಾರರು ಒಂದು ಗ್ಯಾಂಗ್ ಡಿಕೊಂಡಿದ್ದಾರೆ. ಇದಕ್ಕೆ ಮಾವಿನ ಹೊಳೆಯ ವಿನೋದ ಯ್ಕ್ ಎಂಬ ಮಾಜಿ ಚೆಡ್ಡಿ ಅಧ್ಯಕ್ಷ. ಮರಳುಗಾರಿಕೆ ಸೆನ್ಸ್ ಕೊಡಿಸುವ ಆಸೆ ತೋರಿಸಿ ಈತನನ್ನು ಜೆಪಿಯಿಂದ ಕಾಂಗ್ರೆಸ್‌ಗೆ ತಂದದ್ದು ಮಂತ್ರಿ ದೇಶಪಾಂಡೆ ತ್ತು ಶಾಸಕ ಮಂಕಾಳು ಮಾಮ. ಈ ವಿನೋದನ ಮ ಮರಳುಗಾರಿಕೆ ಲೈಸೆನ್ಸ್‌ದಾರರ ಪಡೆ ಹೊರ ಜ್ಯದ ಕಾರ್ಮಿಕರನ್ನು ತಂದುಕೊಂಡಿದ್ದಾರೆ. ಸ್ಥಳೀಯ ವರ ಹೊಟ್ಟೆ ಮೇಲೆ ಹೊಡೆದು ಒಡಿಸಾ, ಬಿಹಾರ, ಳುನಾಡು, ಉತ್ತರ ಪ್ರದೇಶದ ಅಸಹಾಯಕ ರ್ಮಿಕರನ್ನು ಹಗಲಿರುಳೂ ದುಡಿಸಿಕೊಳ್ಳುತ್ತಿದ್ದಾರೆ.

ಸುಮಾರು 2000 ಹೊರ ರಾಜ್ಯದ ಕೂಲಿಗಳು ವತಿ ದಡದಲ್ಲಿ ಟೆಂಟ್ ಹಾಕಿಕೊಂಡಿದ್ದಾರೆ. ಗುರುತು- ಚಯ ಇಲ್ಲದ ಈ ಕೂಲಿಗಳು ಅಕ್ಷರಶಃ ಮರಳು ಫಿಯಾದ ಜೀತದಾಳುಗಳು. ಬೆಳಗಿನ ಜಾವ 3 ಗಂಟೆಗೇ ರಳು ತೆಗೆಯಲು ಬೋಟೇರಿದರೆ ನಡುರಾತ್ರಿಯತನಕ ಾಮಗಿರಿ ಮಾಡಬೇಕು. ಬೋಟಿನ ಮೇಲೆಯೇ ಊಟ- ತಿ ಸಿಗುತ್ತದೆ. ಒಂದು ಟೀಮು ದಣಿದಾಗ ತ್ತೊಂದು ರೆಡಿಯಾಗಿರುತ್ತದೆ.

ಈ ಆಗಂತುಕ ಕಾರ್ಮಿಕರನ್ನು ಮರಳು ಫಿಯಾ ಸ್ಥಳೀಯರ ಮೇಲೆ ಆಗಾಗ ಛೂಬಿಡುವ ರ್ಮದ ಕಾರ್ಯಾಚರಣೆ ನಡೆಸುತ್ತಿದೆ. ಯಾರ್‍ಯಾರು ್ಮ ಪಾಪದ ದಂಧೆ ವಿರುದ್ಧ ಮಾತಾಡುತ್ತಾರೆ, ಧಿಸಿದ ಅಧಿಕಾರಿಗಳಿಗೆ ದೂರು ಕೊಡುತ್ತಾರೆಂದು ಹಚ್ಚಿ ಅಂಥವರ ಮೇಲೆ ಈ ಕಾರ್ಮಿಕರನ್ನು ಳಿಗೆ ಕಳಿಸಲಾಗುತ್ತದೆ. ಈ ಷಡ್ಯಂತ್ರದ ಕ್ಯಾಪ್ಟನ್ ಂವಳ್ಳಿಯ ಧೋ ದಂಧೆಯ ದೊರೆ ವಿಷ್ಣು ಯ್ಕ್. ಈ ವಿಷ್ಣು ನಾಯ್ಕ ಅಕ್ರಮ ರಳುಗಾರಿಕೆಗೆ ಗ್ರಾಮ ಪಂಚಾಯ್ತಿ ಅನಾಕ್ಷೇಪಣಾ ಸಿಗದಂತೆ ಠರಾವು ಮಾಡಿಸಿದ್ದನೆಂಬ ಸಿಟ್ಟಿನಿಂದ ಚಾಯ್ತಿ ಸದಸ್ಯ ಲಂಬೋಧರ ನಾಯ್ಕ, ಮೋಹನ ಯ್ಕ, ಫ್ರಾನ್ಸಿಸ್ ಎಂಬವರನ್ನು ಹೊರ ರಾಜ್ಯ ಲಿಗಳಿಂದ ಕಿಡ್‌ನ್ಯಾಪ್ ಮಾಡಿಸಿ ಹೊಡೆಸಿದ್ದ!

ಮರಳು ಮಾಫಿಯಾದ ದೊರೆಗಳ ಸಲುಗೆ- ಲತ್ತಿನಿಂದಾಗಿ ಈ ಹೊರ ರಾಜ್ಯದ ರೌಡಿಗಳು ಬ್ಬಿಹೋಗಿದ್ದಾರೆ. ಸ್ಥಳೀಯ ಹೆಂಗಸರನ್ನು ಮಾನಿಸುವುದು, ಸುಖಾಸುಮ್ಮನೆ ಸ್ಥಳೀಯರ ಲೇರಿ ಹೋಗಿ ಗಲಾಟೆ ಮಾಡೋದು ಇವರ ರ್ಮದಂತಾಗಿದೆ. ಗುರುತು ಪರಿಚಯ ಇಲ್ಲದ ಈ ತದ ಗೂಂಡಾಗಳ ಮೇಲೆ ಪೊಲೀಸು ಕಂಪ್ಲೇಂಟೂ ಡಲಾಗದ ಸಂದಿಗ್ಧತೆ ಶರಾವತಿ ದಂಡೆಯ ಜನರದಾಗಿದೆ. ಂತವೆಂದರೆ ಹೊನ್ನಾವರ-ಮಂಕಿ ಪೊಲೀಸರಿಗೆ ಈ ಂಡುಹಕಾರಿ ಹೊರ ರಾಜ್ಯದ ಪುಂಡರ ನಿಯಂತ್ರಿಸಲಾಗಿಲ್ಲ ರಳು ಮಾಫಿಯಾದ ಹಿತಚಿಂತಕರಾದ ಪೊಲೀಸರು ಯ ಮೂಲ ನಿವಾಸಿಗಳಿಗೇ ಕಂಟಕಕಾರಿಯಾಗಿರುವುದು ತ್ರವಾದರೂ ಸತ್ಯ!

ನಕಲಿ ನದಿ ಹೆಸರಲ್ಲಿ ಪರ್ಮಿಟ್!!

ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗು ಲ್ಲಾಡಳಿತದ ಸಹಾಯ, ಸಹಕಾರದಿಂದ ಶರಾವತಿ ಂಡುದಂಧೆ ರೌಡಿಗಳ ದಾದಾಗಿರಿ-ದರೋಡೆ ಅತಿಯಾಗಿದೆ. ಲೈಸೆನ್ಸ್‌ದಾರರೂ ಮನಸೋಇಚ್ಛೆ ರೀತಿ ತೆಗೆದು ಕಳ್ಳ ಚೇರರಾಗುತ್ತಿದ್ದಾರೆ. ದಿನ ಒಂದಕ್ಕೆ, ಒಬ್ಬ

ಪರವಾನಗಿದಾರನಿಗೆ 10 ಟನ್ ಮರಳು ತೆಗೆಯಲು ಮತ್ತು ಸಾಗಾಟ ಮಾಡಲು ಗಣಿ ಅಧಿಕಾರಿಗಳು ಪರ್ಮಿಟ್-ಪಾಸ್ ಕೊಡುತ್ತಾರೆ. ಆದರೆ ಈ ಲೈಸೆನ್ಸ್‌ದಾರರು 20 ಟನ್‌ಗಿಂತ ಜಾಸ್ತಿಯೇ ಮರಳು ಗೆಬರುತ್ತಾರೆ. ನಕಲಿ ಪರ್ಮಿಟ್‌ಗಳ ಮೇಲೆ ಗೋವಾ-ಹುಬ್ಬಳ್ಳಿ ಮುಂತಾದೆಡೆಗೆ ರವಾನಿಸುತ್ತಾರೆ. ಒಂದು ಲೋಡ್‌ಗೆ 6 ಸಾವಿರಕ್ಕಿಂತ ಹೆಚ್ಚು ಹಣ ಲೈಸೆನ್ಸ್‌ದಾರರು ಪಡೆಯುವಂತಿಲ್ಲ, ಆದರೆ 25-30 ಸಾವಿರ ರೂ.ಗೆ ಮರಳು ಲೋಡ್ ಬಿಕರಿಯಾಗುತ್ತಿದೆ.

ಮೂರು ಕಡೆ ಚೆಕ್‌ಪೋಸ್ಟ್ ಇದೆ. ಆದರೆ ಒಂದೇ ಒಂದು ಕಡೆಯೂ ನಕಲಿ ಪಾಸ್ ಅಧಿಕಾರಿಗಳು ಹಿಡಿದು ಗಾಡಿ ಸೀಜ್ ಮಾಡುವ 'ಪಾಪ' ಈವರೆಗೆ ಮಾಡಿಲ್ಲ. ಗಣಿ ಇಲಾಖೆಯ ನಿರ್ದೇಶಕರಿಂದ ಹಿಡಿದು ಉತ್ತರ ಕನ್ನಡದ ಉಪ ನಿರ್ದೇಶಕನ ವರೆಗಿನ ಅಧಿಕಾರಿಗಳು ಮರಳು ಮಾಫಿಯಾ ಜತೆ ಶಾಮೀಲಾಗಿ ಬೊಕ್ಕಸಕ್ಕೆ ಕನ್ನ ಕೊರೆಯುತ್ತಿದ್ದಾರೆ. 2012ರಿಂದ ಇವತ್ತಿನವರೆಗೆ ಮೂವರು ಉತ್ತರ ಕನ್ನಡದ ಗಣಿ ಇಲಾಖೆಗೆ ಉಪನಿರ್ದೇಶಕರಾಗಿ- ಅಕ್ರಮಕ್ಕೆ ನೆರವಾಗಿದ್ದಾರೆ. ಇವರಿಗೆ ಜಿಲ್ಲಾ ಮಂತ್ರಿ ದೇಶಪಾಂಡೆಯಿಂದ ಶಾಸಕರೆಲ್ಲರೂ ಅಭಯ ನೀಡಿದ್ದಾರೆ. ದಾವೂದ್ ಮತ್ತು ರಾಜೇಶ್ ಎಂಬ ಜಿಯಾಲಿಜಿಸ್ಟ್‌ಗಳು ಸದ್ರಿಯಂತೆ ಪ್ರಭಾರ ಡಿಡಿಗಳಾಗಿದ್ದರು. ಈಗಿರುವಾತ ಟಿ. ಮಾಹಾಂತೇಶ್. ಇವರೆಲ್ಲರೂ 'ದಗಾಕೋರ ಜಾದೂ' ಒಂದನ್ನು ಮಾಡಿ ಮರಳು ಲೂಟಿಗೆ ಅವಕಾಶ ಕೊಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಇಲ್ಲದ ಶಾಂಭವಿ, ಸ್ವರ್ಣ ಮತ್ತು ಸುವರ್ಣ ಎಂಬ ಮೂರು ನದಿಗಳ ಹೆಸರಲ್ಲಿ ಹಲವರಿಗೆ ಮರಳು ತೆಗೆಯುವ ಮತ್ತು ಸಾಗಿಸುವ ಪಾಸ್-ಪರ್ಮಿಟ್ ನೀಡಲಾಗಿದೆ. ಈ ನಕಲಿ ಪರವಾನಗಿ ಇಟ್ಟುಕೊಂಡು ಮರಳು ಮಾಫಿಯಾ ದಿನವೂ ಸಾವಿರಾರು ಟನ್ ಮರಳು ಶರಾವತಿ ಒಡಲಿಂದ ಗೆಬರಿದೆ! ಈ ಕಳ್ಳಾಟ ನೋಡುತ್ತಿದ್ದ ಸ್ಥಳೀಯ ಕೆಚ್ಚೆದೆಯ ಪ್ರಜ್ಞಾವಂತ ಯುವಕರು ನಕಲಿ ಪಾಸ್-ಪರ್ಮಿಟ್ ಸಂಗ್ರಹಿಸಿದ್ದಾರೆ. ಇಲ್ಲದ ನದಿಗಳ ಹೆಸರಲ್ಲಿ ಮರಳು ದರೋಡೆ ನಡೆದಿರುವುದು ಗುಲ್ಲಾಗುತ್ತಿದ್ದಂತೆಯೇ ಗಣಿ ಇಲಾಖೆ ಜಿಲ್ಲಾಡಳಿತದ ಪ್ರಭೃತಿಗಳು ಚೆಡ್ಡಿ ಮೇಲೇರಿಸಿಕೊಳ್ಳುತ್ತ ಗಡಿಬಿಡಿಗೆ ಬಿದ್ದಿದ್ದಾರೆ. ಕಳೆದ ಎರಡು ವರ್ಷದಿಂದ ಈ ನಕಲಿ ದಂಧೆ ನಡೆದಿದೆ. ಸ್ಥಳೀಯ ಗ್ರಾಮ ಪಂಚಾಯ್ತಿ ಅಕ್ರಮ ಮರಳುಗಾರಿಕೆಗೆ ನಿರಾಕ್ಷೇಪಣಾ ಪತ್ರ ಕೊಡಲು ನಿರಾಕರಿಸಿದರೂ ದಾವೂದ್, ರಾಜೇಶ್, ಮಾಂತೇಶ್‌ಗಳೆಂಬ ಗಣಿ ಇಲಾಖೆಯ ಭ್ರಷ್ಟ ಡಿಡಿಗಳು ಪಾಸ್-ಪರ್ಮಿಟ್ ನೀಡಿದ್ದಾರೆ. ನಕಲಿ ನದಿಗಳ ಹೆಸರಲ್ಲಿ ಕ್ರಿಮಿನಲ್ ಕಾರ್ಯಾಚರಣೆಗೆ ಅವಕಾಶ ಕೊಟ್ಟಿದ್ದಾರೆ.

ಸಿಕ್ಕಿಬಿದ್ದಾಗ ಸಬೂಬು

ಈ ಪಾಸ್‌ಪರ್ಮಿಟ್ ಕೊಡುವ ಸಮಿತಿಗೆ ಜಿಲ್ಲಾಧಿಕಾರಿಗಳೆ ಮುಖ್ಯಸ್ಥರು. ಎಸ್ಪಿ, ಜಿಪಂ ಸಿಎಸ್, ಗಣಿ, ಪರಿಸರ, ಸಾರಿಗೆ ಇಲಾಖೆ ಪಂಡಿತರು ಸದಸ್ಯರು, ಈ ಐಎಎಸ್, ಐಪಿಎಸ್, ಕೆಎಎಸ್, ವಿಜ್ಞಾನ ಪ್ರಭೃತಿಗಳು ಖೋಟಾ ಪಾಸ್ ಕಣ್ತಪ್ಪಿನಿಂದ ಕೊಟ್ಟಿದ್ದಾರೆಂದರೆ ನಂಬಲು ಸಾಧ್ಯವಾ? ಇದು ಬುದ್ಧಿಪೂರ್ವಕ ಮಾಡಿದ ಪಾತಕ. ಮೂರು ಸುಳ್ಳು ನದಿಗಳ ಹೆಸರಲ್ಲಿ ಪರ್ಮಿಟ್ ಕೊಟ್ಟ ಕರ್ಮಕಾಂಡ ಬಯಲಾಗುತ್ತಲೇ ಗಣಿ ಇಲಾಖೆ ಮತ್ತು ಜಿಲ್ಲಾಡಳಿತದ ದೊಡ್ಡ ದೊಡ್ಡ ಅಧಿಕಾರಿಗಳು ಸುಳ್ಳು ಸಬೂಬು ಹೆಣೆದಿದ್ದಾರೆ. ಪರ್ಮಿಟ್ ಸಿದ್ಧಪಡಿಸುವಾಗ ಆದ 'ಟೈಪಿಕಲ್ ಮಿಸ್ಟೇಕ್' ಎಂದು ತಿಪ್ಪೆ ಸಾರಿಸಿದ್ದಾರೆ.

ಈ ಪ್ರಜ್ಞಾಪೂರ್ವಕ ಪ್ರಮಾದದ ಹಿಂದೆ ದೊಡ್ಡ ಸಂಚೇ ಇದೆ. ಶರಾವತಿ ಒಡಲಿಂದ ಹಗಲೂ-ಇರುಳೂ ಸಾವಿರಾರು ಟನ್ ಮರಳು ಅಕ್ರಮವಾಗಿ ತೆಗೆಯುತ್ತಿರುವುದನ್ನು ಮರೆಮಾಚುವ ಮಸಲತ್ತಿದು. ಲೆಕ್ಕಾಚಾರದಲ್ಲಿ ಶರಾವತಿ ನದಿಯಿಂದ ಎತ್ತಿದ ಮರಳು ಅತೀ ಕಡಿಮೆ ಎಂದು ತೋರಿಸಲು ಈ 'ಆಟ' ಆಡಲಾಗಿದೆ. ಸಿಕ್ಕಿ ಬಿದ್ದರೆ ಅದು ಸ್ವರ್ಣ, ಸುವರ್ಣ, ಶಾಂಭವಿ ನದಿ ಮರಳೆಂದು ತಲೆ ತಪ್ಪಿಸಿಕೊಳ್ಳಲು ಗಣಿ ಇಲಾಖೆಚೋರರು ಮಾಡಿದ ಟ್ರಿಕ್ ಇದಷ್ಟೇ. ಮರಳು ಮಾಫಿಯಾಕ್ಕೆ ಸುಳ್ಳು ಪರ್ಮಿಟ್ ತಯಾರಿಸಿಕೊಟ್ಟಿರುವ ಗಣಿ ಇಲಾಖೆ ವಂಚಕರು ಈಗ ಒಂದಿಬ್ಬರು ಲೈಸೆನ್ಸ್‌ದಾರರ ಮೇಲೆ ಕೇಸು ಜಡಿದು ಬಚಾವಾಗಲು ಹವಣಿಸುತ್ತಿದ್ದಾರೆ. ನಾಚಿಕೆಗೇಡಿನ ಸಂಗತಿಯೆಂದರೆ, ದಕ್ಷ-ಪ್ರಾಮಾಣಿಕನೆಂದು ಪೋಸು ಕೊಡುವ, ವಂದಿಮಾಗಧರ ಭೋಪರಾಕ್‌ಗೆ ಪುಳಕಗೊಳ್ಳುವ ಜಿಲ್ಲಾಧಿಕಾರಿ ಉಜ್ವಲಕುಮಾರ್ ಘೋಷ್ ಸಾಹೇಬರೇಕೋ ಕಣ್ಣು-ಬಾಯಿ ಮುಚ್ಚಿಕೊಂಡಿದ್ದಾರೆ. ಸಾಕ್ಷ್ಯಾಧಾರ ಸಮೇತ ದೂರು ಕೊಟ್ಟರೂ ಕ್ರಮಕೈಗೊಳ್ಳದೆ ಕೈಕಟ್ಟಿ ಹಾಕಿದಂತೆ ಪಿಳಿಪಿಳಿ ಕಣ್ಣು ಬಿಡುತ್ತಿದ್ದಾರೆ.

ಈ ನಕಲಿ ಪಾಸ್, ನಕಲಿ ನದಿ, ಕೋಟಾ ಸಬೂಬಿಗೆಲ್ಲ ಮರಳು ಮಾಫಿಯಾದ ಕುರುಡು ಕಾಂಚಾಣದ ಕುಣಿತವೇ ಕಾರಣ! ತಾಂತ್ರಿಕ ದೋಷ, ಕ್ಲರಿಕಲ್ ಮಿಸ್ಟೇಕ್ ಎಂದು ಹೇಳುವ ಅಧಿಕಾರಿಗಳಿಗೆ ಎರಡು ವರ್ಷದಿಂದ ಈ ದೋಷ ಕಣ್ಣಿಗೆ ಹೇಗೆ ಬೀಳಲಿಲ್ಲ, ಮರಳು ಮಾಫಿಯಾದ ದುರಾಚಾರದ ವಿರುದ್ಧ ಸಿಡಿದೆದ್ದಿರುವ ಯುವಕರು ಪರ್ಮಿಟ್ ಪಾತಕ ಕಂಡುಹಿಡಿಯುವ ತನಕ ಅಧಿಕಾರಿಗಳೇಕೆ ಸುಮ್ಮನಿದ್ದರು? ಮೂರ್‍ಮೂರು ಕಡೆ ಇರುವ ತಪಾಸಣಾ ನಾಕಾದಲ್ಲೂ ಈ "ತಪ್ಪು" ಕಾಣಿಸಲಿಲ್ಲವಾ? ಪಾಸ್ ನವೀಕರಣದ ಹೊತ್ತಲ್ಲೂ ಗೋಚರಿಸಲಿಲ್ಲವಾ? ಇದಕ್ಕಿಂತ ಬಲವಾದ ಸಾಕ್ಷ್ಯ ಮತ್ತೇನು ಬೇಕು-ಅಧಿಕಾರಿಗಳು ಮರಳು ಮಾಫಿಯಾದ ಮೆಂಬರ್‌ಗಳೆಂದು ತರ್ಕಿಸಲು?!

ಹೋರಾಟಕ್ಕಿಳಿದ ಶರಾವತಿ ಮಕ್ಕಳು!


ಮರಳು ಮಾಫಿಯಾದ ದುರಾಚಾರ, ಅಧಿಕಾರಿಗಳ ಅವ್ಯವಹಾರದಿಂದ ಶರಾವತಿ ಕೊಳ್ಳದ ಜನರ ಬದುಕು ಬವಣೆಯಾಗಿ ಹೋಗಿದೆ. ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಆಳುವ ಅಧಿಕ ಪ್ರಸಂಗಿಗಳು ತಂದೊಡ್ಡಿದ್ದಾರೆ. ಶರಾವತಿ ನದಿಯ ಸಮತೋಲನ ತಪ್ಪಿ ಬದುಕಿಗಾಧಾರವಾದ ಕೃಷಿಭೂಮಿ, ಮೀನುಗಾರಿಕೆ, ಇತರ ನದಿ ಆಧಾರಿತ ಉಪ-ಕಸುಬು ಕಳೆದುಕೊಂಡಿರುವ ಜನರೀಗ ಹೋರಾಟಕ್ಕೆ ಅಣಿಯಾಗಿದ್ದಾರೆ. ಪ್ರತಿಭಟನೆ, ಹೋರಾಟ, ನ್ಯಾಯಾಂಗ ಸಮರ ನಡೆಸಿದ್ದಾರೆ. ಹೈಕೋರ್ಟ್ ಅಕ್ರಮ ಮರಳುಗಾರಿಕೆ ಬಗ್ಗೆ ಸಮಗ್ರ ತನಿಖೆಗೆ ಆದೇಶಿಸಿದೆ.

ಪರಿಸರ ಮಂಡಳಿ ಶರಾವತಿ ನದಿಯ SB-SH-15, 16, 17, 18, 19, 20 ಮರಳು ಪಟ್ಟಿಯಲ್ಲಷ್ಟೇ ಗಣಿಗಾರಿಕೆಗೆ ಅವಕಾಶ ನೀಡಿದೆ. ಆದರೆ ಈಗ 41 ಮಂದಿ ಲೈಸೆನ್ಸ್‌ದಾರರು SB-SH 21 ರ ಮರಳು ಪಟ್ಟಿಯಿಂದ ಮರಳೆತ್ತುತ್ತಿದ್ದಾರೆ. SB-SH 21 ರಲ್ಲಿ ಮರಳು ಎತ್ತುವುದಕ್ಕೆ ಪರಿಸರ ಮಂಡಳಿ ಪರವಾನಗಿ ನೀಡಿಲ್ಲ. ಆದರೂ ಅಲ್ಲೇ ಗಣಿಗಾರಿಕೆ ನಡೆಯುತ್ತಿರುವುದರ ರಹಸ್ಯವೇನು? ಪರಿಸರ ಮಂಡಳಿಗೆಷ್ಟು ಪ್ರಸಾದ ಸಿಕ್ಕಿದೆ? ಪರಿಸರ ಮಾಲಿನ್ಯ ಕುಸಿತ, ಜೀವ ಜಗತ್ತಿನ ಅಸಮತೋಲನ ಉಂಟುಮಾಡಿರುವ ಮರಳು ಮಾಫಿಯಾ ರೈತರ ಭೂಮಿಗೆ ವಿಷವಿಕ್ಕಿದೆ. ಬೆಸ್ತರ ಬೀದಿಗೆಸೆದಿದೆ; ಶರಾವತಿ ಕೊಳ್ಳದ ಶಾಂತಿಗೆ ಹೊರ ರಾಜ್ಯದ ಕಾರ್ಮಿಕರಿಂದ ಕೊಳ್ಳಿ ಇರಿಸಿದೆ. ಮರಳು ಲಾರಿಗಳಿಂದ ರಸ್ತೆಗಳನ್ನೆಲ್ಲ ಚಿಂದಿ ಮಾಡಿದೆ.


ಈ ಹಿಂಸೆ ಸಹಿಸಿಕೊಳ್ಳಲಾಗದ ಅಸಹನೀಯ ಸ್ಥಿತಿಗೆ ಶರಾವತಿ ಮಕ್ಕಳು ತಲುಪಿದ್ದಾರೆ. ಬೆವರು ಸುರಿಸಿ ಕಟ್ಟಿಕೊಂಡ ಬದುಕು ಬಚಾಯಿಸಿಕೊಳ್ಳಲು ಬೀದಿಗಿಳಿವ ಸಿದ್ಧತೆಯಲ್ಲಿದ್ದಾರೆ. ಇನ್ನಾದರೂ ಜಿಲ್ಲಾಡಳಿತದ 'ದಕ್ಷ ರಾಜ' ಉಜ್ವಲ್ ಕುಮಾರ್ ಸಾಹೇಬರು ನಿದ್ದೆಯಿಂದ ಎದ್ದಾರಾ? ಗಣಿ-ಪರಿಸರ ಇಲಾಖೆಯ ಭ್ರಷ್ಟರು ಮರಳು ಮಾಫಿಯಾ ಮಟ್ಟ ಹಾಕಿಯಾರಾ? ಪೊಲೀಸರು ಮರಳು ಮಾಫಿಯಾದ ಸಹವಾಸ ಬಿಟ್ಟು, ನೊಂದವರಿಗೆ ಸ್ಪಂದಿಸಿಯಾರಾ? ಗಣಿ ಮಂತ್ರಿ ವಿನಯ್ ಕುಲಕರ್ಣಿಗೆ ಈ ಸ್ಕ್ಯಾಂಡ್ ಲಫಡಾ ಗೊತ್ತಾ?

ದೌರ್ಜನ್ಯದಿಂದ ದಿಕ್ಕೆಟ್ಟಿರುವ ಶರಾವತಿ ಕೊಳ್ಳದ ರೈತರು-ಮೀನುಗಾರರು ಸಿಡಿದೆದ್ದರೆ ಜಿಲ್ಲಾಡಳಿತ-ಮರಳು ಮಾಫಿಯಾ ಬಚಾವಂತೂ ಆಗದು!!

■ ನರುಪ



ಸುವರ್ಣ ನದಿ ಹೆಸರಿನಲ್ಲಿ ನಕಲಿ ಪಾಸ್



Government of Karnataka
Department of Mines and Geology - Uttara Kannada
MINERAL DISPATCH PERMIT - 18/01/2016 06:06:03 PM

MDRO No : UTKSRP1070017 Lease No : UTKSRP107
MDP No : UTKSRP30700001051 Sr.No : 000011
Barcode : 07302053
MDP Type : MT Type of Land : Shambavi River Sand Bar
Validity : 18/01/2016 08:45 AM To 19/01/2016 08:45 AM
Lessee Name : Shridar Sabha Naik
Taluk/District : Honnavar/Uttara Kannada
Mineral/Grade : Ordinary Sand/OSAN
Royalty(Rs.) : 600.00 Quantity : 10 Metric Ton(MT)
Loading Place : Jalavalikarki
Buyer : S.SIRSI
Route : SIDDAPUR SIRSI
Destination : SIRSI LOCAL
Purpose : MS- InState - Procurement & Sell
DSC No. :
Tin No. :

Block	Length(cm)	Breadth(cm)	Height(cm)	Volume (cu.m)
	Total Volume	10Metric Ton(MT)		
	Total Block(s)	0		

Note: The MDP is Valid, only if the Mineral is Transported in a Vehicle Which has required Carrying Capacity as per M V. Act 1988

Vehicle No KA30.7074

Copy

ಶಂಭಾವಿ ನದಿ ಹೆಸರಿನಲ್ಲಿ ನಕಲಿ ಪರ್ಮಿಟ್

ಸಂಶಯದ ಸುಳಿಯಲ್ಲಿ ಕೆಆರ್‌ಸಿಎಲ್

ಶರಾವತಿ ನದಿ ದಂಡೆಯ ಮರಳು ಮಾಫಿಯಾದ ಕಬಂಧ ಬಾಹುಗಳು ಗಣಿ-ಪರಿಸರ-ಜಿಲ್ಲಾಡಳಿತ, ಪೊಲೀಸ್, ಸಾರಿಗೆ ಇಲಾಖೆ ದಾಟಿ ಕೇಂದ್ರ ಸರ್ಕಾರದ ಕೊಂಕಣ ರೈಲು ನಿಗಮಕ್ಕೆ ಬಂದು ನಿಂತಿದೆ! ಕೊಂಕಣ ರೈಲ್ವೆ ಅಧಿಕಾರಿಗಳು ಈ ಮರಳು ಮಾಫಿಯಾದ ಜತೆ ಕೈ ಜೋಡಿಸಿ ಪ್ರಸಾದ ಸ್ವೀಕರಿಸಿದ್ದಾರೆಂಬ ಗುಲ್ಲು ಈಗ ಎಲ್ಲೆಡೆ ವ್ಯಾಪಿಸಿದೆ.

ಶರಾವತಿ ನದಿಯಲ್ಲಿ ಎರಡು ದೊಡ್ಡ- ಮಹತ್ವದ ಸೇತುವೆಗಳಿವೆ. ಒಂದು ಭೂ ಸಾರಿಗೆ ಇಲಾಖೆಗೆ ಸೇರಿದ ಎನ್‌ಎಚ್-68 ಮೇಲೆ ಹಾದುಹೋಗಿರುವ ಒಂದು ಕಿ.ಮೀ ಉದ್ದದ ಶರಾವತಿ ಸೇತುವೆ. ಇನ್ನೊಂದು ಹೆಚ್ಚು ಕಮ್ಮಿ ಇಷ್ಟೇ ಉದ್ದದ ಕೊಂಕಣ ರೈಲು ಬ್ರಿಡ್ಜ್. ಈ ರೈಲು ಸೇತುವೆಗೆ ಮರಳುಗಾರಿಕೆಯಿಂದ ಗಂಡಾಂತರ ಖಂಡಿತ. 30-40 ಅಡಿ ಆಳದಲ್ಲಿ ಮರಳು ತೆಗೆಯುತ್ತಿರುವ ಆಳುವ ಖೂಳರ ಸಖ್ಯದ ಮಾಫಿಯಾ ಕೊಂಕಣ ರೈಲು ಸೇತುವೆಗೆ ಜಖಂ ಮಾಡುತ್ತಿದೆ. ಇದು ಗೊತ್ತಾಗಿ ಕೊಂಕಣ ರೈಲ್ವೆ ಅಧಿಕಾರಿಗಳು ಸಣ್ಣ ಸೊಲ್ಲು ಎತ್ತಿದ್ದರು. ಆದರೆ ಆ ನಂತರ ತೆರೆದ ಬಾಯಿಗೆ ಮಾಫಿಯಾ ಪ್ರಸಾದ್ ತುರುಕಿದೆಯಂತೆ.

ತಿವುದಾದಂತೆ ವರ್ತಿಸುತ್ತಿದ್ದಾರೆ.

ಈಗ ಕೊಂಕಣ ರೈಲ್ವೆ ನಿಗಮದ ಅಧಿಕಾರಿಗಳು ಬಾಯಿ-ಹೊಲಿದು ಕೊಂಡಂತೆ, ಮರಳು ಮಾಫಿಯಾದ ಮಹಿಮೆಯಿದು.

ಕೊಂಕಣ ರೈಲ್ವೆ ನಿಗಮವನ್ನೂ ದಮನ ಮಾಡಿರುವ ಶರಾವತಿ

ನಾನು ರೋಹಿತ್ ವೇಮುಲನನ್ನು ಕೊಂದದ್ದು ಹೇಗೆ?

ಎಸ್.ಆನಂದ್, ನವಯಾನದ ಪ್ರಕಾಶಕರು. ಅಂಬೇಡ್ಕರ್ ನಿಲುವಿನಿಂದ ಪ್ರೇರಿತರಾಗಿ ಡಿ.ರವಿಕುಮಾರ್ ಜೊತೆ ಸೇರಿ ಈ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಅರುಂಧತಿ ರಾಯ್ ಅವರು ಸಂಪಾದಿಸಿದ ಅನ್ನಿಹಿಲೇಷನ್ ಆಫ್ ಕ್ಯಾಸ್ಟ್ ಸೇರಿದಂತೆ ಹಲವು ಪುಸ್ತಕಗಳನ್ನು ಹೊರತಂದಿದ್ದಾರೆ. ಔಟ್‌ಲುಕ್ ಪತ್ರಿಕೆಯಲ್ಲಿ ಪ್ರಕಟವಾದ ಈ ಲೇಖನವನ್ನು ವೇಣುಗೋಪಾಲ್ ಅನುವಾದಿಸಿದ್ದಾರೆ.

ಆತ್ಮೀಯ ರೋಹಿತ್,

ನನಗೆ ಸ್ವಲ್ಪವೂ ನಾಚಿಕೆಯಿಲ್ಲ, ನಾನೊಂದು ರಣಹದ್ದು. ನೀನು ಸತ್ತಾಗ ನನಗೆ ಕೋಪಬರಲಿಲ್ಲ (ನಾನು ಸಾಮಾನ್ಯವಾಗಿ ಒಡನಾಡುವ ಕೆಲವು ವಲಯಗಳಲ್ಲಿ ಕುಪಿತನಾದಂತೆ ನಟಿಸಿದ್ದು ಹೌದು. ಆದರೆ ನೀನು ಸತ್ತ ಸುದ್ದಿ ಕೇಳಿದ ಮೇಲೆ ಒಂದೊತ್ತು ಊಟವನ್ನು ಬಿಡಬೇಕೆಂಬುದೂ ನನಗೆ ನೆನಪಿರಲಿಲ್ಲ). ನಾನು ಸಾವನ್ನೇ ಹೊಟ್ಟೆಪಾಡು ಮಾಡಿಕೊಂಡವನು. ನಾನೊಬ್ಬ ಬ್ರಾಹ್ಮಣ.


ನೀನು ಸತ್ತ ಮೇಲೆ ಈ ವ್ಯಾಖ್ಯಾನ ಬರೆಯುವಂತೆ ನನ್ನನ್ನು ಕೇಳಿದರು. ಇದೆಲ್ಲಾ ಆದದ್ದು ಹೇಗೆ ಎನ್ನುವುದನ್ನು ಹೇಳುತ್ತೇನೆ ಕೇಳು. ಎಷ್ಟೋ ತಿಂಗಳ ನಂತರ 'ಔಟ್‌ಲುಕ್'ನ ಸಂಪಾದಕರಾದ ಕೃಷ್ಣಪ್ರಸಾದ್ ನನಗೆ ಕರೆಮಾಡಿದರು. ನಿನ್ನ ಸಾವು ಅವರಿಗೆ ಈ ಅವಕಾಶವನ್ನು ಕಲ್ಪಿಸಿತು. ನನ್ನನ್ನು ಕಾಡಿದ ನಿರಾಶೆಯ ಭಾವನೆಯ ಬಗ್ಗೆ, ದಿಕ್ಕುತೋರದೆ ಅಲೆದಾಡಿದ ಬಗ್ಗೆ ನಾನು ಏನೇನೊ ಗೊಣಗಿಕೊಂಡೆ. ನನಗೆ ಒಂದುಕ್ಷಣ ಎಲ್ಲಾ ವಿಶ್ಲೇಷಣೆಗಳು, ಕವನಗಳು, ಸಂಗೀತ, ಅಸ್ತಿತ್ವ, ಬರವಣಿಗೆ ಇವೆಲ್ಲವೂ ಅರ್ಥಹೀನವೆನಿಸಿತ್ತು, ಎಲ್ಲವೂ ಬರೀ ಸುಳ್ಳು ಅನ್ನಿಸತೊಡಗಿತು. ನಾನು ನಿನ್ನಂತಹ ಜನರನ್ನು, ಜಾತಿಯನ್ನು ಬಳಸಿಕೊಂಡು ಜೀವನೋಪಾಯ ಮಾಡುತ್ತಿದ್ದೇನೆ ಅನ್ನಿಸತೊಡಗಿತು. ನಾನು ಒಬ್ಬ ಅಸ್ಪೃಶ್ಯನ ಹೆಣವನ್ನು ದೂರದಿಂದಲೇ ಮೂಸಿ, ಅವನು ಹೇಗೆ ಹಾಗೂ ಏಕೆ ಸತ್ತ ಅನ್ನೋ ಕಥೆ ಹೆಣೆಯುವ ಕಸುಬನ್ನು ರೂಢಿಸಿಕೊಂಡಿದ್ದೇನೆ. ಅಪರಾಧ ನಡೆದ ಸ್ಥಳಕ್ಕೇ ಹೋಗದೆ, ಪತ್ರಿಕೆಯಲ್ಲಿ ಪ್ರಕಟವಾದ ಚಿತ್ರ ನೋಡಿ ಕಥೆ ಹೆಣೆಯುವ ಪತ್ತೆದಾರಿಗಳ ಥರಹ.

ನನಗೆ ಅತೀಂದ್ರಿಯ ಪ್ರಜ್ಞೆಯೂ ಇದೆ. ನಿನ್ನ ಸಾವಿನಿಂದ ನಮಗೆಲ್ಲಾ ಏನನ್ನಿಸುತ್ತದೆ ಎಂದು ಹೇಳುವಂತೆ ನನ್ನನ್ನು ಕೇಳಿದ್ದಾರೆ. ಇಂತಹ ಸಾವಿನ ಸಂದರ್ಭದಲ್ಲಿ, ಬದುಕಿರುವ ನಾವೆಲ್ಲಾ ಅಪರಾಧಿಗಳೆ. ಪ್ರಜೆಗಳಾದ ನಾವು (ಸಂವಿಧಾನದ ಸಾಕ್ಷಿಯಾಗಿ ಪ್ರಮಾಣ ಮಾಡುವುದಕ್ಕಿಂತ ಹೆಚ್ಚಾಗಿ ಅದರ ಪ್ರಕಾರ ನಡೆಯದಿರುವುದೇ ಹೆಚ್ಚು) ನಿನ್ನನ್ನು ಕಾನೂನುಸಮ್ಮತ ಕ್ರಮದಲ್ಲಿ ವಿಚಾರಣೆ ಮಾಡದೆಯೇ ಕೊಂದಿದ್ದೇವೆ. ಈ ಬಗ್ಗೆ ತನಿಖೆ ನಡೆಸಬಲ್ಲ ಒಬ್ಬನೇ ಪೊಲೀಸೂ ಇಲ್ಲ, ಯಾವುದೇ ನ್ಯಾಯಾಧೀಶನಿಂದಲೂ ನಿನಗೆ ನ್ಯಾಯ ಸಿಗುವುದಿಲ್ಲ, ಪ್ರತಿಯೊಬ್ಬರೂ ಕೊಲೆಗಡುಕರೇ.

ಅತ್ಯಂತ ನಗೆಪಾಟಲಿನ ಸಂಗತಿಯೆಂದರೆ, ದಲಿತರ ನೋವಿನ ಅನುಭವವೇ ಇಲ್ಲದ, ಸವಲತ್ತು ಎಂಬ ಪಿರಮಿಡ್ಡಿನ ಇನ್ನೊಂದು ಬದಿಯಲ್ಲಿರುವ ನನ್ನಂಥವನನ್ನು ನೀನು ಸತ್ತು ಹೋದಾಗ ಬರೆಯುವಂತೆ ಕೇಳುತ್ತಾರೆ. ಮೊದಲು ಮೆತ್ತಗೆ ವಿರೋಧಿಸುವ ನಾನು, ನಂತರ ಪ್ರತಿಸಲದಂತೆ ಸೋತು ಸುಮ್ಮನಾಗಿಬಿಡುತ್ತೇನೆ. ಮತ್ತೆ ಯಥಾಸ್ಥಿತಿಗೆ ಮರಳಿ ಒಂದಿಷ್ಟು ಬದಲಾವಣೆಗಳೊಂದಿಗೆ ಹೊಸ ವಿಷಯವನ್ನು ಬರೆಯುತ್ತೇನೆ.

ನೀನು ಸಾಯದೇ ಹೋಗಿದ್ದಲ್ಲಿ, ಹೈದರಾಬಾದ್ ವಿಶ್ವವಿದ್ಯಾನಿಲಯದಲ್ಲಿ ಸಸ್ಪೆಂಡ್ ಆದ ಐವರು ದಲಿತ ವಿದ್ಯಾರ್ಥಿಗಳ ಬಗ್ಗೆ 'ಔಟ್‌ಲುಕ್' ವರದಿ ಮಾಡುತ್ತಿತ್ತೇ ಎಂದು ನಾನು ಕೃಷ್ಣಪ್ರಸಾದ್ ಅವರನ್ನು ಕೇಳಿದೆ. ನೀನು ಸತ್ತ ಮೇಲೆ ನಿನ್ನ ಗದ್ಯದ ಸೊಗಸನ್ನು ಕೊಂಡಾಡಿದ 'ಹಿಂದುಸ್ತಾನ್ ಟೈಮ್ಸ್' ನೀನೇನಾದರೂ ಬರೆದು ಕಳಿಸಿದ್ದರೆ ಸಂಪಾದಕೀಯದ ಪಕ್ಕದ ಸ್ಥಳದಲ್ಲಿ ನಿನ್ನ ಲೇಖನವನ್ನು ಪ್ರಕಟಿಸುತ್ತಿದ್ದರಾ? ದೊಡ್ಡ ಪತ್ರಿಕೆಗಳಲ್ಲಿ ಲೇಖನವನ್ನು ಪ್ರಕಟಿಸಬಲ್ಲಂತೆ ಮಾಡಬಲ್ಲ ಅಥವಾ ಕೊನೇಪಕ್ಷ ನಿನ್ನ ಇ-ಮೇಲಿಗೆ ಪ್ರತಿಕ್ರಿಯಿಸಬಲ್ಲ ಜನರ ಪರಿಚಯವಾದರೂ ನಿನಗಿದೆಯಾ? 'ಔಟ್‌ಲುಕ್' (ಅಥವಾ ಇನ್ಯಾವುದಾದರೂ ಪತ್ರಿಕೆ) ಹೈದರಾಬಾದ್ ವಿಶ್ವವಿದ್ಯಾನಿಲಯದಲ್ಲಿ 2002ರಲ್ಲಿ ಹತ್ತು ಜನ ದಲಿತ ವಿದ್ಯಾರ್ಥಿಗಳನ್ನು ಹೊರಹಾಕಿದ ಘಟನೆ ಬಗ್ಗೆ ವರದಿ ಮಾಡಿದವೇ? ಅಥವಾ 2008ರಲ್ಲಿ ಮತ್ತೊಬ್ಬ ದಲಿತ ಸಂಶೋಧನಾ ವಿದ್ಯಾರ್ಥಿ ಸೆಂಥಿಲ್ ಕುಮಾರ್ ಆತ್ಮಹತ್ಯೆ ಮಾಡಿಕೊಂಡಾಗ ಯಾವುದಾದರೂ ಪತ್ರಿಕೆಗಳು ಆ ಬಗ್ಗೆ ವರದಿ ಮಾಡಿದವೇ? ನಿನ್ನ ಕೊಲೆ ಮಾತ್ರ ಅದ್ಹೇಗೆ ಅಷ್ಟು ವಿಶೇಷವೆನಿಸಿಕೊಂಡಿತು? ನೀನು ಒಕ್ಕಣೆ ಬರೆದಾಗ, ನಿನ್ನಷ್ಟಕ್ಕೇ ನೀನೇನಾದರು ಹೇಳಿಕೊಂಡೆಯಾ: ನನ್ನ ಸಾವು ಇನ್ನೊಂದು ಚರ್ಚೆಯನ್ನು, ನಿಜವಾದ ಚರ್ಚೆಯನ್ನು ಹುಟ್ಟುಹಾಕಿದರೆ ಅದೂ ಒಳ್ಳೆಯದೇ ಎಂದು? ಬಹುಶಃ ನಾನು ನಿನ್ನ ಎರಡು ಪತ್ರಗಳಿಗೆ ಟಿಪ್ಪಣಿಯನ್ನು ಬರೆದು ಪ್ರಕಟಿಸಿದರೆ, ಆಗ ಜನರಿಗೆ ನಿನ್ನ ಆ ಪತ್ರಗಳನ್ನು ಹೇಗೆ ಓದಬೇಕು ಎಂದು ಅರ್ಥಮಾಡಿಕೊಳ್ಳಬೇಕು ಎಂದು ತಿಳಿಸಬಹುದು. ಸರಳವಾಗಿ ತೋರುವ ಆದರೆ ಸರಳವಲ್ಲದ ಸಾಹಿತ್ಯಕ ಕೃತಿಗಳಿಗೆ ಸ್ಪಾರ್ಕ್‌ನೋಟ್ಸ್ ಬರೆಯುತ್ತಾರಲ್ಲ ಹಾಗೆ.

ನಾನು ಓದಿದ್ದ ಹೈದರಾಬಾದ್ ವಿಶ್ವವಿದ್ಯಾನಿಲಯದ ಕ್ಯಾಂಪಸ್ಸಿಗೆ ಜನವರಿ 20ರಂದು ಹೋಗಿದ್ದೆ. ಅಲ್ಲಿ ಇಂಗ್ಲಿಷ್



ಹಾಗು ವಿದೇಶ ಭಾಷೆಯ ವಿಭಾಗದಲ್ಲಿ ಪಿಎಚ್‌ಡಿ ವಿದ್ಯಾರ್ಥಿಯಾಗಿದ್ದ ಮೋಹನ್ ದಾವತ್‌ನ ಭೇಟಿಯಾಯಿತು. ಅವನು ಆದಿವಾಸಿ ಜನಾಂಗಕ್ಕೆ ಸೇರಿದವನು. ವಿಶ್ವವಿದ್ಯಾನಿಲಯದ ದಿನವಿಡೀ ತೆರೆದಿರುತ್ತಿದ್ದ ವಾಚನಾಲಯದ ಕೊಠಡಿಯನ್ನು ಮೇ 2014ರಲ್ಲಿ ಮುಚ್ಚಿದರು. ಇನ್ನಿಬ್ಬರು ವಿದ್ಯಾರ್ಥಿಗಳೊಂದಿಗೆ ಅವನು ವಿಶ್ವವಿದ್ಯಾನಿಲಯದ ಈ ಕ್ರಮವನ್ನು ವಿರೋಧಿಸಿದ್ದ. ಅದಕ್ಕಾಗಿ ಅವನನ್ನು ಕ್ಯಾಂಪಸ್‌ನಿಂದ ಹೊರಹಾಕಿದರು. ಅದಕ್ಕೆ ಸಂಬಂಧಿಸಿದಂತೆ ಒಂದು ಮನವಿಯನ್ನು ಸಲ್ಲಿಸಲು ಸಾವಿರ ಸಹಿಗಳನ್ನು ಸಂಗ್ರಹಿಸುವ ಪ್ರಯತ್ನ ನಡೆಯಿತು. 301 ಸಹಿಗಳ ಕೊರತೆಬಿತ್ತು. ಆದರೆ ಇವೆಲ್ಲ ರಾಷ್ಟ್ರೀಯ ಮಟ್ಟದ ಸುದ್ದಿಗಳಾಗಲಿಲ್ಲ. ಇನ್ನು ನಿನ್ನ ಬೆಂಬಲಕ್ಕೆ ನಿಂತ ಅಂತರರಾಷ್ಟ್ರೀಯ ವಿದ್ವಾಂಸರ ಬೆಂಬಲವನ್ನಂತೂ ಅವರು ಕಾಣಲೇ ಇಲ್ಲ. ಈ ಸಂದರ್ಭದಲ್ಲಾದಂತೆ ಹತ್ತಾರು ಸ್ನ್ಯಾಪ್ ಸೈಜ್ ಮುಖಗಳು ಟಿವಿ ಪರದೆಯಲ್ಲಿ ಮೂಡಿ ಎಲ್ಲರ ಮೇಲೆ ಕೂಗಾಡಲೂ ಇಲ್ಲ.

ನಾವೆಲ್ಲ ರಕ್ತ ಕಂಡ ತಕ್ಷಣ ಪ್ರತಿಕ್ರಿಯಿಸುತ್ತೇವೆ ಅಂತ ಅಲ್ಲ. 20 ವರ್ಷದ ವಾದಿತ್ಯ ನೆಹರು ಕಾನ್ಪುರ ಐಐಟಿಯ ಎರಡನೇ ವರ್ಷದ ಬಿಟೆಕ್ ವಿದ್ಯಾರ್ಥಿ. ಅವನನ್ನು ಆಗಸ್ಟ್ 23, 2012ರಂದು ಅಮಾನತ್ತು ಮಾಡಲಾಗಿತ್ತು, ಅಪಮಾನ ತಡೆಯಲಾಗದೆ ಆತ್ಮಹತ್ಯೆ ಮಾಡಿಕೊಂಡ. ಅವನು ತೆಲಂಗಾಣದ ನಲಗೊಂಡ ಜಿಲ್ಲೆಯ ಮರಲಿಂಗತಾಂಡದ ಆದಿವಾಸಿ ಹುಡುಗ. ಐಐಟಿ-ಜೇಇ ಪರೀಕ್ಷೆಯಲ್ಲಿ ಪರಿಶಿಷ್ಟ ಬುಡಕಟ್ಟು ವಿಭಾಗದಲ್ಲಿ 17ನೇ ರ್‍ಯಾಂಕ್ ಪಡೆದು ಅವರ ನಡುವೆ ಹೀರೋ ಎನಿಸಿಕೊಂಡಿದ್ದ. ಅವನಿಗೆ ಐಐಟಿ ಅಂಟಿಸಿದ ಅಸಮರ್ಥನೆಂಬ ಹಣೆಪಟ್ಟಿ ಹೊತ್ತು 15 ಲಂಬಡ ಕುಟುಂಬಗಳ ತಾಂಡಕ್ಕೆ ವಾಪಸ್ಸು ಬರಲು ಧೈರ್ಯವಿರಲಿಲ್ಲ. ಆಗ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಒಂದು ಸಣ್ಣ ವರದಿ ಬಂತು. 'ಕಾಲೇಜು ಸಂತಾಪಸೂಚಕ ಪತ್ರವನ್ನು ಕೂಡ ಕಳಿಸಲಿಲ್ಲ ಎಂದು ವಾದಿತ್ಯನ ತಂದೆ ಆರೋಪಿಸಿದರು. ಇದಕ್ಕೆ ಐಐಟಿ-ಕೆ ಅಧಿಕಾರಿಗಳು ಪ್ರತಿಕ್ರಿಯಿಸಲು ನಿರಾಕರಿಸಿದರು.' ಇಷ್ಟಕ್ಕೇ ವರದಿ ಮುಗಿದಿತ್ತು. ಅವರಪ್ಪ ತನ್ನ ಮಗನಿಗೆ ಜವಹರಲಾಲ್ ನೆಹರು ಅವರ ಹೆಸರನ್ನು ಇಟ್ಟಿದ್ದರು. ಐಐಟಿಯನ್ನು ಸ್ಥಾಪಿಸುವ ಕನಸು ಕಂಡಿದ್ದ ನೆಹರು ಅವರಿಗೆ ಹೀರೋ ಆಗಿದ್ದರು.

ನಾನು, ನನ್ನಂತಹವರು ಮತ್ತು 'ಔಟ್‌ಲುಕ್' ಯಾಕೆ ಅಪರಾಧಿಗಳು ಅನ್ನೋದನ್ನು ವಿವರಿಸುತ್ತೇನೆ. ನಾವು ಎಷ್ಟೇ ಒಳ್ಳೆಯವರಿರಬಹುದು, ನಮ್ಮ ಉದ್ದೇಶಗಳು ತುಂಬಾ ಒಳ್ಳೆಯದಾಗಿ ತೋರಬಹುದು. ಆದರೂ ಇದರಲ್ಲಿ ನಮ್ಮ ಪಾಲೂ ಇದೆ. ನಾನು ಈ ಪತ್ರಿಕೆಯಲ್ಲಿ ಸುಮಾರು ಏಳು ವರ್ಷಗಳ ಕಾಲ ಚೆನ್ನೈನ ಪ್ರತಿನಿಧಿಯಾಗಿ ಕೆಲಸ ಮಾಡಿದ್ದೇನೆ. ನನಗೆ ಕೆಲಸ ಸಲೀಸಾಗಿ ಸಿಕ್ಕಿತು. ನಾನು ನಿನ್ನ ಹಾಗಲ್ಲ, ನನಗೆ ಪ್ರಭಾವಿ ಜನರು ಮತ್ತು ಪ್ರಭಾವೀ ಜನರನ್ನು ಬಲ್ಲ ಜನರ ಪರಿಚಯವಿತ್ತು. ಇದು ನಡೆದಿದ್ದು ಮೇ 22, 2002ರಲ್ಲಿ, ಆಗ ತಿರುಚಿನಾಪಳ್ಳಿ ಜಿಲ್ಲೆಯ ತಿನ್ನಿಯಂ ಹಳ್ಳಿಯಲ್ಲಿ ಮುರುಗೇಶನ್ ಹಾಗೂ ರಾಮಸಾಮಿ ಎಂಬ ಇಬ್ಬರು ದಲಿತರಿಗೆ ಒಬ್ಬರ ಹೇಲನ್ನು ಇನ್ನೊಬ್ಬರು ತಿನ್ನುವಂತೆ ಒತ್ತಾಯಿಸಲಾಯಿತು. ಅವರನ್ನು ಸಾರ್ವಜನಿಕವಾಗಿ ಕಾದ ಕಬ್ಬಿಣದ ಸರಳಿನಿಂದ ಬಡಿಯಲಾಯಿತು. ಆ ಇಬ್ಬರು ದಲಿತರು ನಿನ್ನ ಉಪಕುಲಪತಿಯಂತಹ, ಒಬ್ಬ ಹಳ್ಳಿಯ ಮುಖಂಡನಿಂದ ತಮಗೆ ಅನ್ಯಾಯ ಆಗಿದೆ ಎಂದು ಸಾರ್ವಜನಿಕವಾಗಿ ಹೇಳಿದ್ದಕ್ಕೆ, ಇಷ್ಟೆಲ್ಲಾ ಅನುಭವಿಸಬೇಕಾಯಿತು. ನಾನು ಈ ಕುರಿತು ವರದಿ ಬರೆಯುತ್ತೇನೆ ಎಂದು ಗೋಗರೆದೆ. ವಿನೋದ್ ಮೆಹ್ತಾ 'ಅದೇನು ಸುದ್ದಿ ಮಾಡುವಷ್ಟು ಮಹತ್ವದ್ದಲ್ಲ' ಎಂದು ತಳ್ಳಿಹಾಕಿದರು. ಇದೊಂದು ಸಣ್ಣ ವಿಷಯವೂ ಆಗಿರಲಿಲ್ಲ ಅಥವಾ ಇದನ್ನು ವಿರೋಧಿಸಿ ಜನರು ಸಂಘಟಿತರಾಗಿರಲಿಲ್ಲ ಎಂದೂ ಅಲ್ಲ. ತಿರುಚ್ಚಿಯಲ್ಲಿ ಇದನ್ನು ಖಂಡಿಸಿ 2 ಲಕ್ಷ ಜನ ಸೇರಿದ್ದರು.

ದೆಹಲಿಯಲ್ಲಿ ದೀಪಾವಳಿಯಂದು ಕೇಶೋಪುರದ ಟ್ರೀಟ್‌ಮೆಂಟ್ ಕೊಳವೆ ಕಟ್ಟಿಕೊಂಡಿತ್ತು. ಅದನ್ನು ಸರಿಮಾಡಲು 22 ವರ್ಷದ ವಿನಯ್ ಸಿರೋಹಿ ಹೋಗಿದ್ದ. ಮದುವೆ ಆಗಿ 11 ತಿಂಗಳಾಗಿತ್ತು. ಊಟಕ್ಕೆ ಬರುವುದಾಗಿ ಹೆಂಡತಿಗೆ ಹೇಳಿ ಹೋಗಿದ್ದ. ಆದರೆ ಮತ್ತೆ ಬರಲಿಲ್ಲ. ಅಧಿಕಾರಿಗಳು ಅವನ ಸಾವಿಗೆ ಅವನೇ ಹೊಣೆ ಅಂದರು. ಅವನು ಸುರಕ್ಷತೆಯ ಕವಚ ಧರಿಸಬೇಕಿತ್ತಂತೆ. ದಿನಪತ್ರಿಕೆಯ ಸ್ಥಳೀಯ ಸುದ್ದಿಪುಟಗಳಲ್ಲಿ ಸಿರೋಹಿ ಸಾವಿನ ಸುದ್ದಿ ಒಂದೆರಡು ದಿನ ಬಂತು. ಹಾಗೆಯೇ ಸಿರೋಹಿ ಮರೆತುಹೋದ. ನಿನ್ನಂತೆ ಅವನು ಹೀರೊ ಆಗಲಿಲ್ಲ. ಗ್ಯಾಸ್ ಕಟ್ಟರ್ಸ್‌ಗಳನ್ನು ಬಳಸಿ ಪೈಪನ್ನು ಕತ್ತರಿಸಿ ಅವನ ದೇಹವನ್ನು ಈಚೆ ತೆಗೆದ ಮೇಲೆ 'ದಿ ಇಂಡಿಯನ್ ಎಕ್ಸಪ್ರೆಸ್' ಅವನ ಫೋಟೊವನ್ನು ಪ್ರಕಟಿಸಿತು. ನನ್ನ ಒಂದಿಷ್ಟು ಹೇಲು ಮತ್ತು ನನ್ನ ನಿರ್ಲಕ್ಷ್ಯತನ ಅವನ ಉಸಿರು ಕಟ್ಟಿಸಿರಬೇಕು. ಆದರೆ ನಾನು ಎಂದಿನಂತೆ ಇದ್ದೇನೆ.

ಆಮೇಲೆ ಬೇಜವಾಡದ ಸಫಾಯಿ ಕರ್ಮಚಾರಿ ಆಂದೋಲನದ ವಿಲ್ಸನ್ ನನ್ನನ್ನು "ಪತ್ರಿಕೆಯಲ್ಲಿ ಒಂದಿಷ್ಟು ಸುದ್ದಿ ಬರೋದಕ್ಕೆ ಸಹಾಯಮಾಡು" ಎಂದು ಕೇಳಿಕೊಂಡರು. ನಾನು ನನ್ನ ಅಸಹಾಯಕತನವನ್ನು ತೋಡಿಕೊಂಡೆ. ವಿಲ್ಸನ್ ಸುದ್ದಿಮಾಧ್ಯಮದೊಂದಿಗೆ ನಿಕಟಸಂಪರ್ಕವಿದ್ದವರು. ಎಲ್ಲಾ ವಿಷಯಗಳ ಬಗ್ಗೆಯೂ ಮಾಧ್ಯಮಗಳಲ್ಲಿ ಅಭಿಪ್ರಾಯ ನೀಡುತ್ತಿದ್ದ ವ್ಯಕ್ತಿ, ಸತ್ಯಮೇವ ಜಯತೆಯಲ್ಲಿ ಕೂಡ ಕಾಣಿಸಿಕೊಂಡಿದ್ದರು. ಕಳೆದ 20 ವರ್ಷಗಳಲ್ಲಿ ಸಫಾಯಿ ಕಾರ್ಮಿಕರಿಗೆ ಸಂಬಂಧಿಸಿದ ಎಲ್ಲಾ ಬಗೆಯ ಕಾನೂನುಗಳನ್ನೂ ಜಾರಿಗೊಳಿಸಲು ಪ್ರಯತ್ನಿಸಿದ್ದಾರೆ. ಮ್ಯಾನ್ಯುಯಲ್ ಸ್ಕಾವೆಂಜಿಂಗ್ ವಿರುದ್ಧ ಸುಪ್ರೀಂಕೋರ್ಟಿನ ಆದೇಶವೂ ಜಾರಿಯಾಗುವಂತೆ ನೋಡಿಕೊಂಡಿದ್ದಾರೆ. ಈಗ ಭಾರತಾದ್ಯಂತ 125 ದಿನಗಳ ಭೀಮಯಾತ್ರೆಯನ್ನು ಸಫಾಯಿ ಕರ್ಮಚಾರಿ ಆಂದೋಲನವು ಆಯೋಜಿಸಿದೆ. 25 ರಾಜ್ಯಗಳಲ್ಲಿ, 500 ಜಿಲ್ಲೆಗಳಲ್ಲಿ ಈ ಯಾತ್ರೆ ನಡೆಯಲಿದೆ. ಅಲ್ಲೆಲ್ಲಾ ಈ ಕಾನೂನು ಜಾರಿಯಾಗುವಂತೆ ನೋಡಿಕೊಳ್ಳುವುದು ಈ ಯಾತ್ರೆಯ ಉದ್ದೇಶ. ಭೀಮಯಾತ್ರೆಯು ಏಪ್ರಿಲ್ 14ರಂದು ದೆಹಲಿಯಲ್ಲಿ ಸಮಾರೋಪಗೊಳ್ಳಲಿದೆ. ಅಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 125ನೇ ವಾರ್ಷಿಕೋತ್ಸವ. ಅವರ ಘೋಷಣೆ ತುಂಬಾ ಸರಳವಾಗಿದೆ. 'ನಮ್ಮನ್ನು ಕೊಲ್ಲುವುದನ್ನು ನಿಲ್ಲಿಸಿ'. ಡಿಸೆಂಬರ್ 10ರಂದು ಸಣ್ಣದಾಗಿ ಪ್ರಾರಂಭವಾದ ಯಾತ್ರೆ ಸಣ್ಣದಾಗೇ ಮುಗಿಯುತ್ತದೆ. ಮಾಧ್ಯಮದವರು ಯಾರೂ ಇವರ ಬಸ್ಸಿನಲ್ಲಿ ಕುಳಿತು ದಿನದಿನದ ವರದಿಯನ್ನು ಮಾಡುತ್ತಿಲ್ಲ. ನಾವು ಮಾಡಿದ ಗಲೀಜನ್ನು ದಲಿತರಿಂದ ಒತ್ತಾಯವಾಗಿ ಕ್ಲೀನ್ ಮಾಡಿಸುತ್ತಲೇ ಇದ್ದೇವೆ. ಇದು ನಮ್ಮ ಕಸುಬಾಗಿಬಿಟ್ಟಿದೆ. ನಾವು ಕಾನೂನು ಹಾಗೂ ವ್ಯವಸ್ಥೆಯನ್ನು ಬಯ್ದುಕೊಂಡು ಪಾರಾಗಿಬಿಡುತ್ತೇವೆ. "ಹಾಗಾದರೆ ಇನ್ನು ಮುಂದೆ ನಾವೇನು ದಿನ ಬಿಟ್ಟು ಮಾತ್ರ ಕಕ್ಕಸ್ಸಿಗೆ ಹೋಗಬೇಕಾ?" ಎಂದು.

ದೆಹಲಿಯ ನನ್ನ ಸ್ನೇಹಿತೆಯೊಬ್ಬಳು ಹೇಳುತ್ತಿ[...] ತನ್ನ ಅಪಾರ್ಟ್‌ಮೆಂಟಿನಲ್ಲಿ ಕಕ್ಕಸ್ಸು ಪೈಪು ಕಟ್ಟಿಕೊಂ[...] ಅದನ್ನು ಜಾಡಮಾಲಿಯೊಬ್ಬ ಶುಚಿಗೊಳಿಸುತ್ತಿದ್ದ. ಆ ಒ[...] ಗಂಟೆಗಳ ಕಾಲ ಟಾಯಲೆಟ್ ಬಳಸಬೇಡಿ ಎ[...] ಅಪಾರ್ಟ್‌ಮೆಂಟಿನ ಜನರನ್ನು ಒಪ್ಪಿಸಲು ಪಾಪ ಅವ[...] ಸಾಧ್ಯವಾಗಲೇ ಇಲ್ಲವಂತೆ. ತನ್ನ ಅಸಹಾಯಕತೆಯ[...] ನನ್ನೊಂದಿಗೆ ತೋಡಿಕೊಳ್ಳುತ್ತಿದ್ದಳು. ಅವರೆಲ್ಲಾ 'ನ[...] ಒಳ್ಳೆಯವರಾಗಿರೋಣ, ಬೇರೆಯವರೂ ಒಳ್ಳೆಯವರಾಗಿ[...] ಅಂತ ಹೇಳುವ ಉದಾರವಾದಿಗಳು. ಆದರೆ ಅ[...] ಎಂದೂ ಒಳ್ಳೆಯವರಾಗಿರುವುದಿಲ್ಲ. ಬಹುಶಃ ಅವರೆಂ[...] ತಮ್ಮ ಮನೆಯಲ್ಲಿ ಕೆಲಸ ಮಾಡುವವರಿಗೆ ತಮ್ಮ ಮನೆ[...] ಶೌಚಾಲಯವನ್ನಾಗಲೀ ಅಥವಾ ಲಿಫ್ಟನ್ನಾಗಲೀ ಬಳಸು[...] ಬಿಟ್ಟವರಲ್ಲ. ನಾವೆಲ್ಲಾ ರೈಲು ನಿಂತಿದ್ದ ಸಮಯದಲ್ಲಿ ಕ[...] ಹೋಗುವ ಮಂದಿ. ನಂತರ ಯಾರು ಅದನ್ನು [...] ಮಾಡುತ್ತಾರೆ ಅನ್ನುವುದರ ಬಗ್ಗೆ ನಾ[...] ತಲೆಕೆಡಿಸಿಕೊಳ್ಳುವುದಿಲ್ಲ.

ನೀನು ಸತ್ತ ಎರಡೇ ದಿನಗಳಲ್ಲಿ ನಾಲ್ಕು [...] ಜಾಡಮಾಲಿಗಳು ಹಾಗೂ ಸೆಪ್ಟಿಕ್ ಟ್ಯಾಂಕ್ ಕೆಲಸಗಾ[...] ಸತ್ತ ಸುದ್ದಿಯನ್ನು ವಿಲ್ಸನ್ ಸಂಗ್ರಹಿಸಿದ್ದರು. ಅ[...] ವಿಚಿತ್ರವೆಂದರೆ ಅವರು ಆ ಕುರಿತು ಸಿನಿಕರಾಗಿರ[...] ನಾನಾಗ ಈ ವರದಿಯನ್ನು ಬರೆಯುತ್ತಿದ್ದೆ. ಬಸ್ ಯಾತ್[...] ಒಳ್ಳೆಯ ಫೋಟೋಗಳನ್ನು ಕಳಿಸಿಕೊಡುವಂತೆ ಅವ[...] ಕೇಳಿದೆ. "ನೋಡಿ ವಿಲ್ಸನ್ ಆ ಬಗ್ಗೆ ಏನಾದರೂ [...] ಪ್ರಕಟಿಸುವುದಕ್ಕೆ ನಮಗೆ ಇದೊಂದು ಅವಕಾಶ. ಮುಂ[...] ವಾರ 'ಔಟ್‌ಲುಕ್'ಗೆ ಇದನ್ನೆಲ್ಲಾ ಪ್ರಕಟಿಸುವ [...] ಇರುವುದಿಲ್ಲ, ಈ ಫೋಟೊಗಳು ಚೆನ್ನಾಗಿಲ್ಲ ಎ[...] ನೆಪವೊಡ್ಡಿ ಅವರು ಅವುಗಳನ್ನು ಪ್ರಕಟಿಸದೇ ಇರಬಹು[...] ಏನಾದರೂ ಆಗಲಿ ಕಳಿಸಿಕೊಡಿ" ಎಂದು ಅವರಿಗೆ ಹೇ[...]

ನಾವು ಎಲ್ಲವನ್ನು ಇನ್ನೊಂದು ಬಗೆಯ[...] ನೋಡುವುದನ್ನು ಅಭ್ಯಾಸ ಮಾಡಿಕೊಂಡಿರುವುದರಿಂದ [...] ಸಮಾಜದಲ್ಲಿ ಯಾವುದನ್ನಾದರೂ ಆದರ್ಶವಾದದ್ದು ಅ[...] ಒಪ್ಪಿಕೊಳ್ಳುವುದು ನಮಗೆ ಕಷ್ಟ. ನನಗೆ ದಣಿದು ಸೋ[...] ಮುಖಗಳು ಕಾಣುತ್ತವೆ. ಪ್ರತಿದಿನ ನಾಲ್ಕಕ್ಕಿಂತ ಹ[...] ದಲಿತ ಹೆಣ್ಣುಮಕ್ಕಳು ಅತ್ಯಾಚಾರಕ್ಕೆ ಒಳಗಾಗುತ್ತಿದ[...] ಪ್ರತಿವಾರ 13 ದಲಿತರು ದಲಿತೇತರರಿ[...] ಕೊಲೆಯಾಗುತ್ತಿದ್ದಾರೆ, ಇತ್ಯಾದಿ, ಇತ್ಯಾದಿ. ಇಂ[...] ವಾತಾವರಣದಲ್ಲಿ ರೋಹಿತ್, ನೀನು ನಿನ್ನ ಸಾವಿನ[...] ಪತ್ರಿಕೆಯವರನ್ನು ನಿಲ್ಲಿಸಲು ಯಶಸ್ವಿಯಾಗಿಬಿಟ್ಟಿದ್ದೀ[...] ನೀನು ನಿನ್ನ ಬದುಕಿನಲ್ಲಿ ಮಾಡಲು ಸಾಧ್ಯವಾಗದ್ದನ್ನು [...] ಸಾವಿನಿಂದ ಸಾಧಿಸಿಬಿಟ್ಟಿದ್ದೀಯ. ಹೈದರಾಬಾ[...] ವಿಶ್ವವಿದ್ಯಾನಿಲಯದಲ್ಲಿ ನನ್ನ ಸಹಪಾಠಿಯಾಗಿದ್ದವನೊ[...] ಈಗ ಅಲ್ಲಿ ಅಧ್ಯಾಪಕನಾಗಿದ್ದಾನೆ. ಅವನು ಹೇಳು[...] "ನಾನು ಇಂತಹ ಐದು ದಲಿತರ ಆತ್ಮಹತ್ಯೆಯ[...] ನೋಡಿದ್ದೇನೆ. ಆದರೆ ರೋಹಿತ್‌ನ ಸಾವು ನನ್ನನ್ನು ತುಂ[...] ಕಾಡುತ್ತಿದೆ." ಒಂದು ಪಕ್ಷ ನೀನು ತೆಲುಗಿನಲ್ಲಿ ಟಿ[...] ಬರೆದಿಟ್ಟಿದ್ದರೆ ಏನಾಗುತ್ತಿತ್ತು? ನೀನು ಏನೂ ಬರೆಯ[...] ಹೋಗಿದ್ದರೆ ಏನಾಗುತ್ತಿತ್ತು?

ನಕ್ಷತ್ರಗಳ ನಡುವಿನಿಂದ ನೀನು ಭೂಮಿಯ[...] ಕವಿದಿರುವ ಅಂಧಕಾರವನ್ನು ನೋಡಿ ಲೇ[...] ಮಾಡುತ್ತಿದ್ದೀಯ. ನೀನು ನಿನ್ನ ಮೇಲೆ ಪೂರ್ಣವಿರಾ[...] ಚಿಹ್ನೆಯನ್ನು ವಾಕ್ಯ ಮುಗಿಯುವ ಮೊದ[...] ಹಾಕಿಕೊಂಡುಬಿಟ್ಟೆ. ನೀನಿನ್ನೂ ಆರಂಭಿಸಿರಲೇ ಇಲ್ಲ, ಅ[...] ನಾವು ಬಡಬಡಿಸುತ್ತಲೇ ಇದ್ದೇವೆ ಮತ್ತು ಮುಂ[...] ಬಡಬಡಿಸುತ್ತಲೇ ಇರುತ್ತೇವೆ. ನೀನು ನಮ್ಮ ಬಗ್ಗೆ ವಿ[...] ಕಳೆದುಕೊಂಡುಬಿಟ್ಟೆ. ಬರವಣಿಗೆಯನ್ನು ತಮ್ಮ ಬದುಕ[...] ಮಾಡಿಕೊಂಡವರು ನಿನ್ನ ಬರವಣಿಗೆಯ 'ವಾಗ್ಮಿಖರಿಯ[...] ಕೊಂಡಾಡುತ್ತಿದ್ದಾರೆ. ನೀನು ರಚಿಸುವ ಸಣ್ಣ ಸಣ್ಣ ವಾಕ್ಯ[...] ಮತ್ತು ನೀನು ಮಾಡಿರುವ ಕತ್ತರಿ ಪ್ರಯೋಗದ ಸೊಗ[...] ಬಗ್ಗೆ ಮೆಚ್ಚುಗೆ ಸೂಚಿಸುತ್ತಿದ್ದಾರೆ. ಅವುಗಳಲ್ಲಿ ಕೆಲ[...] ಅನುಮಾನ ಹುಟ್ಟಿಸುತ್ತವೆ, ಕೆಲವು ಅನುಗ್ರಹಿಸುವಂತಿರುತ್[...] ಇನ್ನು ಕೆಲವು ಹೀಗೇ ಸುಮ್ಮನೆ ಆಡಿದಂತಿರುತ್ತವೆ. [...] ಬಗ್ಗೆ ತಲೆಕೆಡಿಸಿಕೊಳ್ಳಬೇಡ. ಅವರು ದಲಿತನೊಬ್ಬನೊ[...] ವ್ಯವಹರಿಸುತ್ತಿದ್ದಾರೆ. ಆ ದಲಿತನಿಗೆ ಇದ್ದದ್ದು ಅಮ್ಮ ಮಾ[...] ಅವನು ಜೀವವಿಜ್ಞಾನದಲ್ಲಿ ಎಂಎಸ್ಸಿ ಮುಗಿ[...] ಅಂಬೇಡ್ಕರನನ್ನು ಕಂಡುಕೊಂಡಿದ್ದ. ನಂತರ ವಿಜ್ಞಾ[...] ತಂತ್ರಜ್ಞಾನ ಹಾಗೂ ಸಮಾಜ ಅಧ್ಯಯನದಲ್ಲಿ ಪಿಎಚ್‌ಡಿ[...] ನೋಂದಾಯಿಸಿಕೊಂಡ. ಅದೂ ಕೋಟಾ ಸೀಟಲ್ಲ, ಕೇವ[...] 'ಮೆರಿಟ್' ಮೇಲೆ ಪಡೆದ ಸೀಟ್. ಅಹಾ, ಮೀಸಲಾತಿಯ[...] ರದ್ದುಪಡಿಸುವುದಕ್ಕೆ ಇದಕ್ಕಿಂತ ಒಳ್ಳೆಯ ಕಾರಣ ಬೇಕ[...] ಕೆಲವರು ಅವನ ಜಾತಿಯ ಸರ್ಟಿಫಿಕೇಟ್ ನೋಡಬೇಕಂ[...] ಇನ್ನು ಕೆಲವರಿಗೆ ಇದು ಜಾತಿಯ ಸಮಸ್ಯೆಯೇ ಅಲ್[...]

ನಿನಗೆ ಕಾರ್ಲ್ ಸಗಾನ್ ಥರ ಬರೆಯಬೇಕೆಂ[...] ಆಸೆ ಇದ್ದಿರಬಹುದು. ಆದರೆ ನನಗೆ ನೀನು ಜೊನಾಥ[...] ಸ್ವಿಫ್ಟ್ ಮತ್ತು ನಾಮದೇವ್ ಢಸಾಲ್ ಅವರ ಪ್ರೀತಿ[...]

ನಂತೆ ಕಾಣುತ್ತೀಯ (ನಾಮದೇವ್ ಹೇಳುತ್ತಿದ್ದರು ನವ, ಮೊದಲು ನೀನು ಚೂರು ಚೂರಾಗಿ ಹೋಗಬೇಕು"). ನೀನು ಡಿಸೆಂಬರ್ 18, ರಂದು ಉಪಕುಲಪತಿಗೆ ಬರೆದ ಪತ್ರವನ್ನು ಖಿಸುತ್ತಿದ್ದೇನೆ. ಅದನ್ನು ನೀನು 'ದಲಿತ ಸಮಸ್ಯೆಗೆ ಗಳು' ಅಂತ ಕರೆದಿದ್ದೀಯೆ. ನನಗೆ ಜೊನಾಥನ್ ಅವರ 'ಬಡವರ ಮಕ್ಕಳು ತಮ್ಮ ಪೋಷಕರಿಗೆ ತಮ್ಮ ದೇಶಕ್ಕೆ ಹೊರೆಯಾಗದಂತೆ ಮಾಡಲು ಸಮಾಜಕ್ಕೆ ಉಪಯುಕ್ತವಾಗುವಂತೆ ಮಾಡಲು ವಿನಮ್ರ ಸಲಹೆ' ಎಂಬ 1729ರ ದಾಖಲೆ ಯಿತು. ಆದರೆ ನಿನ್ನ ಟಿಪ್ಪಣಿ ಅದಕ್ಕಿಂತಲೂ ವಾಗಿದೆ, ನಿಖರವಾಗಿದೆ ಮತ್ತು ಹೆಚ್ಚು ಸ್ಪಷ್ಟವಾಗಿದೆ.

1. ಎಲ್ಲಾ ದಲಿತ ವಿದ್ಯಾರ್ಥಿಗಳಿಗೂ ಅವರ ಾತಿಯ ಸಮಯದಲ್ಲಿ 10 ಮಿಲಿಗ್ರಾಂ ಸೋಡಿಯಂ ಡ್ ಕೊಡಿ. ಅಂಬೇಡ್ಕರ್‌ನ್ನು ಓದಬೇಕು ಅನ್ನಿಸಿದಾಗ ಗೆ ಅದನ್ನು ತಿನ್ನಲು ಸೂಚನೆ ನೀಡಿ.

2. ಒಂದು ಒಳ್ಳೆಯ ಹಗ್ಗವನ್ನು ಎಲ್ಲಾ ದಲಿತ ರ್ಥಿಗಳ ಕೊಠಡಿಗೆ ನಿಮ್ಮ ಗೆಳೆಯರಾದ ಮಹಾನ್ ನ್ ಅವರಿಗೆ ಹೇಳಿಸರಬರಾಜು ಮಾಡಿಸಿ

ಹಲವರಂತೆ ನಾನು ಸೋಡಿಯಂ ಅಜೈಡ್ ಅಂದರೇನು, ನ್ನ ತೆಗೆದುಕೊಂಡರೆ ಮನುಷ್ಯರಿಗೆ ಏನಾಗುತ್ತದೆ ಎಂದು ಕಬೇಕಾಯಿತು. ನೀನು ಸಾಯುವ ಒಂದು ತಿಂಗಳ ವಲೇ ನೀನು ಉಪಕುಲಪತಿಗಳಿಗೆ ಹೇಳಿದ್ದೆ, ರಹಾಕಿದ ವಿದ್ಯಾರ್ಥಿಗಳು "ಆಗಲೇ ಆ ಘಟ್ಟವನ್ನು ಪಿದ್ದಾರೆ. ಅವರು ಈಗಾಗಲೇ ದಲಿತ-ಸ್ವಾಭಿಮಾನಿ ಳಿಯ ಸದಸ್ಯರಾಗಿದ್ದಾರೆ ಮತ್ತು ದುರದೃಷ್ಟವೆಂದರೆ ಗೆ ಒಂದು ಸಲೀಸಾದ ಹೊರಮಾರ್ಗ ಸಿಕ್ಕಿಲ್ಲ". ದ್ಯಾನಿಲಯದ ಆಡಳಿತವು ನಿಮ್ಮನ್ನು ಹೊರಹಾಕಿದಾಗ, ರಿ 4ರಂದು ನೀವು ಸ್ವಲ್ಪವೂ ವಿಚಲಿತರಾಗದೆ ರನಡೆದಿರಿ. ಸಾಮಾಜಿಕ ನ್ಯಾಯಕ್ಕಾಗಿನ ಜಂಟಿಕ್ರಿಯಾ ತಿಯವರು ಪೋಸ್ಟ್ ಮಾಡಿದ್ದ ಒಂದು ಚಿತ್ರವನ್ನು ಡಿದೆ. ಅದರಲ್ಲಿ ನೀವು ನಿಮ್ಮ ಹಾಸಿಗೆ ಇತ್ಯಾದಿಗಳ ತೆಗೆ ಒಂದು ದೊಡ್ಡ ಅಂಬೇಡ್ಕರ್ ಫೋಟೋವನ್ನು ಟಿಕೊಂಡು ಹೋಗುತ್ತಿದ್ದುದನ್ನು ನೋಡಿದೆ. ಇದ್ದಕ್ಕಿದ್ದ ನೀವು ಭರವಸೆ ಇಟ್ಟುಕೊಂಡಿದ್ದ ಅಂಬೇಡ್ಕರ್ ತಿಕನಾಗಿ ಬಿಟ್ಟಿದ್ದ. ನಿನ್ನ ಹಾಗೆಯೇ ರಾಷ್ಟ್ರವಿರೋಧಿ ಗಿಬಿಟ್ಟ. ನೀವು ಯುನಿವರ್ಸಿಟಿ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ು ಟೆಂಟ್ ಹಾಕಿಕೊಂಡಿರಿ. ದೊಡ್ಡ ಗಾತ್ರದ ಬುದ್ಧ ರ, ಗುರ್ರಮ್ ಜಸ್ತುವ, ಅಂಬೇಡ್ಕರ್, ಕಾನ್ಷಿರಾಮ್, ತ್ರಿಬಾಯಿ ಫುಲೆ, ಜ್ಯೋತಿಬಾ ಫುಲೆ, ಅಯ್ಯನ್‌ಕಲಿ ೊ ಪೆರಿಯಾರ್ ಮೊದಲಾದವರ ವಿನೈಲ್ ಮುದ್ರಿತ ಟೋಗಳನ್ನು ಹಾಕಿದ್ದಿರಿ. ಕೆಳಗಡೆ ಅವರ ಹೆಸರುಗಳಿದ್ದವು. ನಿನ್ನ ನಿಜವಾದ ನೆಲೆ. ಆದರೆ ನಕ್ಷತ್ರಗಳನ್ನು ಸೇರುವ ವೂ ನಿನಗಿತ್ತು.

1917ರಲ್ಲಿ ಅಂಬೇಡ್ಕರ್ ಕೊಲಂಬಿಯಾ ವಿಶ್ವವಿದ್ಯಾನಿಲ ಂದ ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಎರಡು ಡಾಕ್ಟರೇಟುಗಳನ್ನು ಪಡೆದು 'ಮನೆ'ಗೆ ರುಗಿದ ಮೇಲೆ, ಬರೋಡದ ಮಹಾರಾಜರ ಸೇವೆ ಬೇಕಾಗಿತ್ತು, ಬರೋಡದಲ್ಲಿ ಬಂದಿಳಿದಾಗ ಅವರು ನ್ನೇ ಕೇಳಿಕೊಂಡರು, "ಎಲ್ಲಿಗೆ ಹೋಗುವುದು? ಯಾರು ನ್ನ ಸೇರಿಸಿಕೊಳ್ಳುತ್ತಾರೆ?" ಎಂದು. ಅವರಿಗೆ ಬಾಡಿಗೆಗೆ ವನ್ನು ಕೊಡಲು ಯಾರೂ ತಯಾರಿರಲಿಲ್ಲ, ಸುಳ್ಳು ಹೇಳಿ ಒಂದು ಪಾರ್ಸಿ ಹೋಟೆಲಿನಲ್ಲಿ ಹನ್ನೊಂದು ಇದ್ದರು. ಅವರು ಮಹರ್ ಎಂದು ತಿಳಿದ ಕೂಡಲೇ ರನ್ನು ಅಲ್ಲಿಂದ ಹೊರಹಾಕಿದರು. ಅವರು ಕಾಮಾತಿ ನಲ್ಲಿ ಐದು ಗಂಟೆ ಕಳೆದು ನಂತರ ರಾತ್ರಿ ಒಂಬತ್ತು ಗೆ ಬಾಂಬೆಗೆ ರೈಲು ಹಿಡಿದು ಹೊರಟರು. ನಂತರ ಬಗ್ಗೆ ಬರೆಯುತ್ತಾ ಅಂಬೇಡ್ಕರ್ "ನಾನು ಅಲ್ಲಿ ತಿದ್ದಾಗ ನನ್ನ ತಲೆ ಖಾಲಿಯಾಗಿತ್ತು, ನನ್ನ ಆಗಿನ ರು ಬಗ್ಗೆ ದುಃಖವಾಗಿತ್ತು, ನನ್ನಂತೆ ತಬ್ಬಲಿಯ ುಲ್ಲಿರುವ ಮಕ್ಕಳಂತೆ ನಾನು ನನ್ನ ತಂದೆ ತಾಯಿಯನ್ನು ಕೊಂಡೆ."

ನೂರು ವರ್ಷಗಳ ನಂತರ ನೀನೂ ಹಾಗೇ ಳಗಾದಾಗ, ಯಾವುದೂ ಸರಿಯಾಗಿ ತೋರುವುದಿಲ್ಲ, ಹೆಚ್ಚು ದೀಸೆಂಟ್ ಆಯ್ಕೆ ಎನಿಸುತ್ತದೆ. ದಲಿತರ ಸ್ಯೆಗಳಿಗೆ ನೀನು ಸೂಚಿಸಿದ ಪರಿಹಾರಗಳನ್ನು ರಿಲ್ಲದೆ ಒಪ್ಪಿಕೊಳ್ಳೋಣ. ಪುನರುತ್ಥಾನ ಸಾಧ್ಯವಿಲ್ಲ ್ಲೇದು ನಮಗೆ ಗೊತ್ತು, ಸೆನ್ಸಸ್ ಅಂಕಿಅಂಶಗಳ ರ 200 ಮಿಲಿಯನ್ ದಲಿತರಲ್ಲಿ ಕೇವಲ ಶೇಕಡ 4ರಷ್ಟು ದಲಿತರು ಮಾತ್ರ ಪದವೀಧರರು. ನೀನು ದ ಸಲಹೆಗಳನ್ನು ಅವರಿಗೆ ಅನ್ವಯಿಸೋಣ. ದವರು ಹೇಗೂ ಸತ್ತಂತೆಯೇ ಇದ್ದಾರೆ. ಅವರಿಂದ ವುದೇ ಅಪಾಯವೂ ಇಲ್ಲ.


ನನಗೆ ಪದ್ಯಗಳು ಅಂದರೆ ಇಷ್ಟ ಅನ್ನಿಸುತ್ತದೆ. ಂದು ಗಾಲಿಬ್‌ನ ಪದ್ಯ ಇದೆ.

ನಾನು ಪ್ರೀತಿಗೆ ಯೋಗ್ಯನಲ್ಲ, ಪ್ರೀತಿಯು ನನಗಲ್ಲ
ನಾನು ಇನ್ನೂ ಹೆಚ್ಚು ಕಾಲ ಬದುಕಿದ್ದರೆ ಕಾಯುವುದೇ
ವಿಧಿಯಾಗುತ್ತಿತ್ತು

■ ಎಸ್.ಆನಂದ್


ಕೊಡಗು: ಕಾಂಗ್ರೆಸ್‌ಗೆ ಸತತ ಗೂಸ

ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆಗಳು ಮುಗಿದಿದೆ. ಸಾಹಿತ್ಯ ಪರಿಷತ್ ಚುನಾವಣೆಗಳು ಕೂಡ ಮುಗಿದಿದೆ. ಚುನಾವಣಾ ಫಲಿತಾಂಶದ ವಿಮರ್ಶೆಗಳು ನಡೆಯುತ್ತಿವೆ. ಸೋಲಿಗೆ ಕಾರಣಗಳು ಹಾಗೂ ಯಾರು ಕಾರಣಕರ್ತರು ಎಂಬುದು ಈಗ ಚರ್ಚೆಯ ವಿಚಾರವಾಗಿದೆ. ಕೊಡಗು ಜಿಲ್ಲೆಯಲ್ಲಿ ಮಾತ್ರ ಈ ಚರ್ಚೆಗಳು ವಿಚಿತ್ರ ರೀತಿಯಲ್ಲಿ ನಡೆಯುತ್ತಿದೆ.



ಬಹುತೇಕ ಎಲ್ಲರ ವಾಟ್ಸ್‌ಪ್‌ನಲ್ಲಿ ಒಂದು ಅಂಕಿಅಂಶ ಹರಿದಾಡುತ್ತಿದೆ. ಅದರಲ್ಲಿ 'ಕಾಂಗ್ರೆಸ್ ಮುಕ್ತ ಕೊಡಗು ಜಿಲ್ಲೆ - ಹಿಂದೂ ವಿರೋಧಿ ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಕೊಡಗಿನ ಜನತೆಯಿಂದ ಟಿಪ್ಪು ಜಯಂತಿಯ ಭರ್ಜರಿ ಗಿಫ್ಟ್' ಎಂದು ಬರೆಯಲಾಗಿದೆ. ಇದರಲ್ಲಿ ಇಲ್ಲಿನ ಲೋಕಸಭಾ ಸದಸ್ಯರು ಬಿಜೆಪಿ, ಇಲ್ಲಿನ ವಿಧಾನಸಭಾ ಸದಸ್ಯರು ಬಿಜೆಪಿ, ಇಲ್ಲಿನ ವಿಧಾನ ಪರಿಷತ್ ಸದಸ್ಯರು ಬಿಜೆಪಿ, ಇಲ್ಲಿನ ಜಿಲ್ಲಾ ಪಂಚಾಯತ್ ತಾಲೂಕು ಪಂಚಾಯತ್ ಸ್ಥಾನಗಳು ಬಿಜೆಪಿ ಎಂದು ವಿಶ್ಲೇಷಿಸಲಾಗಿದೆ. ಇದರ ಕರ್ತೃ ಯಾರು ಎಂಬುದು ಎಲ್ಲರಿಗೂ ತಿಳಿದಿದೆ. ಇಂಗ್ಲಿಷಿನಲ್ಲಿ **'Kodava Nad is India`s first congress mukth district'** ಎಂದು ಬರೆಯಲಾಗಿದೆ.

ರೋಗಗ್ರಸ್ತ ಮನಸ್ಸಿನವರ ವಿಶ್ಲೇಷಣೆ ಇದಾಗಿದೆ. ಇದನ್ನು ಕೆಲವು ಚಿಡ್ಡಿ ಪತ್ರಕರ್ತರು ಪ್ರಕಟಿಸಿ ವಿಕೃತ ಸಂತೋಷವನ್ನು ಅನುಭವಿಸುತ್ತಿದ್ದಾರೆ. ವಾಸ್ತವದಲ್ಲಿ ಇವರೇ ಇದರ ಮೂಲ ಎಂಬುದು ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯಬಹುದು. ಕೊಡಗು ಜಿಲ್ಲೆಯಲ್ಲಿ ಈ ಬಾರಿಯ ಜಿಲ್ಲಾ ಪಂಚಾಯತಿಯಲ್ಲಿ 29 ಸ್ಥಾನಗಳ ಪೈಕಿ ಹತ್ತು ಸ್ಥಾನಗಳು ಕಾಂಗ್ರೆಸಿಗೆ ದಕ್ಕಿದೆ. ಅದೇ ರೀತಿ ತಾಲೂಕು ಪಂಚಾಯತಿಯಲ್ಲಿಯೂ ಸ್ಥಾನಗಳು ಲಭಿಸಿವೆ. ಆಡಳಿತ ನಡೆಸಲು ಕಾಂಗ್ರೆಸಿಗೆ ಸಾಧ್ಯವಾಗದಿದ್ದರೂ ಒಂದಷ್ಟು ಸ್ಥಾನಗಳನ್ನು ಕಾಂಗ್ರೆಸ್ ಗಳಿಸಿದೆ ಎನ್ನುವುದು ಸುಳ್ಳಲ್ಲ. ಹಾಗಾಗಿ ಕಾಂಗ್ರೆಸ್ ಮುಕ್ತ ಜಿಲ್ಲೆ ಕೊಡಗು ಆಗಿದೆ ಎಂದು ಹೇಳುತ್ತಿರುವುದು ಕುಚೋದ್ಯದ ಮಾತು.



ಕೊಡಗು ಜಿಲ್ಲೆಯ ಇಬ್ಬರೂ ಶಾಸಕರು ಬಿಜೆಪಿಯವರಾಗಿ 10 ವರ್ಷ ಕಳೆದಿದೆ. ಹಲವಾರು ವರ್ಷಗಳಿಂದ ಬಿಜೆಪಿಯ ಶಾಸಕರೇ ಇಲ್ಲಿ ಆಯ್ಕೆಯಾಗುತ್ತಿದ್ದಾರೆ. ಅದೇರೀತಿ ಸಂಸತ್ ಸದಸ್ಯರು ಕೂಡ ಆಯ್ಕೆಯಾಗಿ ಸುಮಾರು ಎರಡುವರೆ ವರ್ಷ ಕಳೆದಿದೆ. ಜಿಲ್ಲಾ ಪಂಚಾಯತಿ ಹಾಗೂ ತಾಲೂಕು ಪಂಚಾಯತಿಗಳು ಹಿಂದಿನ 5 ವರ್ಷವೂ ಬಿಜೆಪಿಯ ಕೈಯಲ್ಲಿಯೇ ಇತ್ತು, ಕೇವಲ ವಿಧಾನ ಪರಿಷತ್ ಸ್ಥಾನ ಕಾಂಗ್ರೆಸಿನ ಕೈಯಲ್ಲಿ ಇತ್ತು, ಅದಕ್ಕೂ ಕಾರಣ ಬಿಜೆಪಿಯವರೇ ಆಗಿದ್ದರು. ಅವರ ಅಭ್ಯರ್ಥಿಯಾಗಿದ್ದ ಎಸ್.ಜಿ. ಮೇದಪ್ಪನವರ ವಿರುದ್ಧ ಬಹಿರಂಗವಾಗಿ ಅವರುಗಳೇ ಕಾರ್ಯ ನಿರ್ವಹಿಸಿದ್ದರಿಂದ ಅವರು ಸೋತು, ಟಿ. ಜಾನ್ ಗೆದ್ದಿದ್ದರು. ಮತಗಳ ಆಧಾರದಲ್ಲಿ ಬಿಜೆಪಿಯೇ ಗೆಲ್ಲಬೇಕಾಗಿತ್ತು, ಹಿಂದೆಯೂ ಕೊಡಗು-ಮಂಗಳೂರು ಲೋಕಸಭಾ ಕ್ಷೇತ್ರದ ಸದಸ್ಯರಾಗಿದ್ದವರು ಧನಂಜಯಕುಮಾರ್ ಮತ್ತು ಡಿ.ವಿ. ಸದಾನಂದಗೌಡರು.

ಇವೆಲ್ಲವೂ ಆಗಿ ಬಹಳಷ್ಟು ವರ್ಷಗಳು ಕಳೆದಿವೆ. ಹಾಗಾಗಿ ಟಿಪ್ಪು ಜನ್ಮ ದಿನಾಚರಣೆಯನ್ನು ಕರ್ನಾಟಕ ರಾಜ್ಯ ಸರಕಾರ ಆಚರಿಸಿದ ನಂತರ ಆದ ಬದಲಾವಣೆ ಇದು ಮತ್ತು ಇದನ್ನು ಕೊಡಗಿನ ಜನತೆ ಕರ್ನಾಟಕ ರಾಜ್ಯ ಸರಕಾರಕ್ಕೆ ನೀಡಿರುವ ಗಿಫ್ಟ್ ಎನ್ನುವುದು ಸಂಪೂರ್ಣವಾಗಿ ಸುಳ್ಳು ಎಂದು ಹೇಳಬಹುದು.

ಇಷ್ಟು ಮಾತ್ರವಲ್ಲ ಜಿಲ್ಲಾ ಪಂಚಾಯತಿಯಲ್ಲಿ ಗಂಭೀರ ಕ್ಷೇತ್ರವಾಗಿದ್ದ ಮಾದಾಪುರದಿಂದ ಕಾಂಗ್ರೆಸಿಗರು ಗೆದ್ದಿದ್ದಾರೆ. ಕಾಂಗ್ರೆಸಿನ ಕುಮುದ ಧರ್ಮಪ್ಪ ಇಲ್ಲಿ ಆಯ್ಕೆಯಾಗಿದ್ದಾರೆ. ಮಾದಾಪುರವು ಶಾಸಕ ಅಪ್ಪಚ್ಚು ರಂಜನ್‌ರವರ ಸ್ವಕ್ಷೇತ್ರ. ಜೊತೆಗೆ ಟಿಪ್ಪು ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಹತ್ಯೆಗೀಡಾಗಿದ್ದಾರೆ ಎಂದು ಬಿಜೆಪಿಯವರು ಬಿಂಬಿಸಿದ ವಿಶ್ವ ಹಿಂದೂ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಕುಟ್ಟಪ್ಪನವರ ಕ್ಷೇತ್ರವು ಇದೇ ಆಗಿದೆ. ಕುಟ್ಟಪ್ಪ ನಿಧನರಾದಾಗ ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಬಿಜೆಪಿ ನಾಯಕರುಗಳು, ಸಚಿವರುಗಳು, ರಾಜ್ಯ ಬಿಜೆಪಿ ಅಧ್ಯಕ್ಷರು ಸಾಂತ್ವನದ ನೆಪದಲ್ಲಿ ಇಲ್ಲಿಗೆ ಬಂದಿದ್ದರು. ಹಾಗಾಗಿ ಇಲ್ಲಿ ಆ ಕಾವು ಹಾಗೇ ಉಳಿದುಕೊಂಡಿತ್ತು, ಆದರೆ ಇಷ್ಟೆಲ್ಲ ಕಾವಿನ ನಡುವೆಯೂ ಇಲ್ಲಿ ಗೆದ್ದದ್ದು ಕಾಂಗ್ರೆಸಿನ ಕುಮುದ ಧರ್ಮಪ್ಪ. ಹಿಂದಿನ ಅವಧಿಯಲ್ಲಿ ಇಲ್ಲಿ ಬಿಜೆಪಿಯ ಸಂದೇಶ್ ಎಂಬವರು ಆಯ್ಕೆಯಾಗಿದ್ದರು ಎಂಬುದು ಕೂಡ ಗಮನಾರ್ಹವಾದ ವಿಚಾರ. ಹಾಗಿರುವಾಗ ಟಿಪ್ಪು ಎಫೆಕ್ಟ್ ಎಂದರೆ ಏನು ಎಂದು ಪ್ರಶ್ನಿಸಬೇಕಾಗುತ್ತದೆ.

ಜಿಲ್ಲಾ ಪಂಚಾಯತಿಯ ಕಳೆದ ಅವಧಿಯಲ್ಲಿ ಕಾಂಗ್ರೆಸಿಗೆ ಇದ್ದದ್ದು 29 ಸ್ಥಾನಗಳ ಪೈಕಿ ಕೇವಲ 6 ಸ್ಥಾನಗಳು. ಬಿಜೆಪಿಗೆ 21 ಸ್ಥಾನಗಳು ಇದ್ದವು. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸಿಗೆ 10 ಸ್ಥಾನಗಳು ಲಭಿಸಿವೆ. ಅಂದರೆ 4 ಹೆಚ್ಚುವರಿ ಸ್ಥಾನಗಳನ್ನು ಕಾಂಗ್ರೆಸ್ ಗಳಿಸಿಕೊಂಡಿದೆ. ಬಿಜೆಪಿಗೆ 18 ಸ್ಥಾನಗಳು ಲಭಿಸಿದೆ. ಅಂದರೆ 3 ಸ್ಥಾನಗಳನ್ನು ಬಿಜೆಪಿ ಕಳೆದುಕೊಂಡಿದೆ. ಹಾಗಾದರೆ ಇದನ್ನು ಟಿಪ್ಪು ಎಫೆಕ್ಟ್ ಎನ್ನಬೇಕೋ ಅಥವ ಈಗ ಸುಳ್ಳು ಮಾಹಿತಿಯನ್ನು ನೀಡುತ್ತಿರುವುದನ್ನು ರೋಗಗ್ರಸ್ತ ಮನಸ್ಸಿನವರ ಟಿಪ್ಪು ಎಫೆಕ್ಟ್ ಎನ್ನಬೇಕೋ?

ಇದನ್ನು ವಿಶ್ಲೇಷಿಸಬೇಕಾದವರು ಕಾಂಗ್ರೆಸಿನವರು. ಕಾಂಗ್ರೆಸ್ ಮುಕ್ತ ಕೊಡಗು ಜಿಲ್ಲೆ ಆಗುತ್ತಿದೆ ಎಂದು ಹೇಳುತ್ತಿರುವಾಗ, ಆ ಅಂಕಿಅಂಶಗಳು ಸುಳ್ಳು ಎಂದು ಹೇಳಿ, ವಾಸ್ತವವನ್ನು ಜನತೆಯ ಮುಂದಿಡಬೇಕಾದ ಜವಾಬ್ದಾರಿ ಕಾಂಗ್ರೆಸಿಗರ ಮೇಲೆ ಇದೆ. ಆದರೆ ಇಲ್ಲಿಯವರೆಗೆ ಅವರು ಅದರ ಗೋಜಿಗೇ ಹೋಗಿಲ್ಲ, ಕಾರಣ ಕೊಡಗಿನಲ್ಲಿ ಜಾತ್ಯತೀತ ಮನೋಭಾವದ ಕಾಂಗ್ರೆಸಿಗರು ಪಕ್ಷದ ಚುಕ್ಕಾಣಿಯನ್ನು ಹಿಡಿದಿಲ್ಲ, ಚುಕ್ಕಾಣಿ ಇರುವುದು ಕಮಲ ಕಾಂಗ್ರೆಸಿಗರ ಕೈಯಲ್ಲಿ, ಹಾಗಾಗಿ ಅವರಿಗೆ ಇದರ ಚಿಂತೆ ಇಲ್ಲ, ಅವರು ಬಿಜೆಪಿಯ ಏಜೆಂಟರಾಗಿಯೇ ಕಾಂಗ್ರೆಸಿನಲ್ಲಿ ಇದ್ದಾರೆ.

ಸಾಹಿತ್ಯ ಪರಿಷತ್ ಚುನಾವಣೆಯಲ್ಲಿಯೂ ಹೊಲಸು ರಾಜಕಾರಣ


ಸಾಹಿತ್ಯ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿಯೂ ಕೊಡಗು ಜಿಲ್ಲೆಯಲ್ಲಿ ಹೊಲಸು ರಾಜಕಾರಣವು ಪ್ರವೇಶಿಸಿತ್ತು, ಈ ಬಾರಿ ಜಿಲ್ಲೆಯ ಹಿರಿಯ ಸಾಹಿತಿಗಳಲ್ಲೊಬ್ಬರಾದ ಬಿ.ಎ. ಷಂಶುದ್ದೀನ್ ಸ್ಪರ್ಧಿಸಿದ್ದರು. ಅವರ ಪ್ರತಿಸ್ಪರ್ಧಿಯಾಗಿ ಕಣದಲ್ಲಿದ್ದವರು ಲೋಕೇಶ್ ಸಾಗರ್ ಎಂಬ ವ್ಯಕ್ತಿ. ಷಂಶುದ್ದೀನ್ ಬಹುಭಾಷಾ ಸಾಹಿತಿಯಾಗಿರುವವರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದಲ್ಲಿ ಕಾರ್ಯದರ್ಶಿಯಾಗಿ ಬಹಳಷ್ಟು ವರ್ಷಗಳ ಕಾಲ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿರುವವರು. ಜಿಲ್ಲೆಯಲ್ಲಿ ಲೇಖಕರ ಮತ್ತು ಕಲಾವಿದರ ಬಳಗವನ್ನು ಸ್ಥಾಪಿಸಿದ ವ್ಯಕ್ತಿ, ಲಂಕೇಶ್ ಪತ್ರಿಕೆಯೂ ಸೇರಿದಂತೆ ಹಲವಾರು ಪತ್ರಿಕೆಗಳ ವರದಿಗಾರರಾಗಿ, ಸಂಪಾದಕರಾಗಿ ಕಾರ್ಯ ನಿರ್ವಹಿಸಿದವರು. ವಿಧಾನ ಪರಿಷತ್ ಸದಸ್ಯರಾಗಿದ್ದ ಬಿ.ಎ. ಹುಸೇನಬ್ಬರವರ ಸಹೋದರ. ಸೌಮ್ಯ ಸ್ವಭಾವದ ಷಂಶುದ್ದೀನ್ ಆಯ್ಕೆಯಾಗಬೇಕಾಗಿತ್ತು ಎಂಬುದು ಜಿಲ್ಲೆಯ ಹಿರಿಯ ಮತ್ತು ಪ್ರಮುಖ ಸಾಹಿತಿಗಳ ಮತ್ತು ಸಾಹಿತ್ಯಾಸಕ್ತರ ಅಭಿಪ್ರಾಯವಾಗಿತ್ತು.

ಆದರೆ ಇಲ್ಲಿಯೂ ಹೊಲಸು ರಾಜಕಾರಣ ಮಧ್ಯ ಪ್ರವೇಶಿಸಿತ್ತು, ಆರಂಭದಲ್ಲಿ ಲೋಕೇಶ್ ಸಾಗರ್ ಬಿಜೆಪಿ ಶಾಸಕ ಅಪ್ಪಚ್ಚು ರಂಜನ್‌ರ ಬೆಂಬಲವನ್ನು ಕೇಳುವ ಮೂಲಕ ಸಾಹಿತ್ಯ ಪರಿಷತ್ತಿಗೆ ರಾಜಕೀಯ ಪ್ರವೇಶಕ್ಕೆ ಅಣಿ ಮಾಡಿಕೊಟ್ಟಿದ್ದರು. ನಂತರ ಶಾಸಕ ಕೆ.ಜಿ. ಬೋಪಯ್ಯ ಮತ್ತು ಅಪ್ಪಚ್ಚು ರಂಜನ್ ತಮ್ಮ ಪ್ರಭಾವವಿರುವ ಸಾಹಿತ್ಯ ಪರಿಷತ್ತಿನ ಸದಸ್ಯರಿಗೆ ಷಂಶುದ್ದೀನ್‌ರವರನ್ನು ಸೋಲಿಸುವಂತೆ ಸೂಚನೆ ನೀಡಿದರು. ಷಂಶುದ್ದೀನ್ ಕಾಂಗ್ರೆಸಿನ ವ್ಯಕ್ತಿಯೇನೂ ಆಗಿರಲಿಲ್ಲ, ಆದರೆ ಆತ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವ್ಯಕ್ತಿ ಎನ್ನುವ ಏಕೈಕ ಕಾರಣಕ್ಕೆ ಇಬ್ಬರೂ ಶಾಸಕರು ಲೋಕೇಶ್ ಸಾಗರ್ ಅವರನ್ನು ಬೆಂಬಲಿಸಿದರು. ಇದರ ಜೊತೆಯಲ್ಲಿ ಮೊದಲ ಬಾರಿಗೆ ಲೋಕೇಶ್ ಸಾಗರ್ ಅವರ ಪತ್ನಿಯ ಸ್ವಜಾತಿ ಬೆಂಬಲಿಗರು, ಜಾತಿ ಪ್ರೇಮವನ್ನು ಪ್ರದರ್ಶಿಸಿ, ಸಾಹಿತ್ಯ ಕ್ಷೇತ್ರಕ್ಕೂ ಜಾತಿಯ ಲೇಪನವನ್ನು ಮಾಡಿದರು.

ಷಂಶುದ್ದೀನ್‌ರವರ ಸೋಲಿಗೆ ಮತ್ತೊಂದು ಕಾರಣವೂ ಇದೆ. ಅವರು ಹಾಲಿ ಜಿಲ್ಲಾ ಕಾಂಗ್ರೆಸಿನ ಹಂಗಾಮಿ ಅಧ್ಯಕ್ಷರಾಗಿರುವ ಟಿ.ಪಿ. ರಮೇಶ್ ಅವರ ಜೊತೆಗಾರರು. ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾಗಿದ್ದವರು ಟಿ.ಪಿ. ರಮೇಶ್. ಅವರು ಸಾಹಿತ್ಯ ಪರಿಷತ್ತಿನ ಚಟುವಟಿಕೆಯನ್ನು ಕೊಡಗು ಜಿಲ್ಲೆಯಲ್ಲಿ ಯಶಸ್ವಿಯಾಗಿ ಮಾಡಿರುವುದರಲ್ಲಿ ಸಂಶಯವಿಲ್ಲ, ಜಿಲ್ಲೆಯ ಸಾಕಷ್ಟು ಸಂಘಟನೆಗಳಲ್ಲಿ ದುಡಿದಿರುವ ಅವರು, ಸರ್ವಾಧಿಕಾರಿ ಎಂಬ ಪಟ್ಟವನ್ನು ಹೊತ್ತಿದ್ದಾರೆ. ಇದರ ಫಲವಾಗಿಯೇ ಈಗ ಟಿ.ಪಿ. ರಮೇಶ್ ಮೇಲಿನ ಸಿಟ್ಟನ್ನು ಷಂಶುದ್ದೀನ್‌ರವರ ವಿರುದ್ಧ ಮತ ಚಲಾಯಿಸುವ ಮೂಲಕ ವ್ಯಕ್ತಪಡಿಸಿದ್ದಾರೆ. ಜಿಲ್ಲಾ ಪಂಚಾಯತಿ ಚುನಾವಣೆಯಲ್ಲೂ ಟಿ.ಪಿ. ರಮೇಶ್ ತಮ್ಮ ಪಕ್ಷದವರ ಜೊತೆಯಲ್ಲಿ ನಡೆದುಕೊಂಡ ರೀತಿಯ ಬಗ್ಗೆ ಹಲವರಲ್ಲಿ ಅಸಮಾಧಾನವಿದೆ. ಸರಿಯಾಗಿ ಟಿಕೆಟು ಹಂಚಿಕೆಯನ್ನು ಮಾಡಿದ್ದರೆ ಖಂಡಿತವಾಗಿಯೂ ಕಾಂಗ್ರೆಸ್ ಪಕ್ಷ ಮತ್ತಷ್ಟು ಸ್ಥಾನಗಳನ್ನು ಗಳಿಸಲು ಶಕ್ತವಾಗುತ್ತಿತ್ತು ಎನ್ನುವುದು ಹಲವರ ಅಭಿಪ್ರಾಯವಾಗಿದೆ. ಆದರೆ ಟಿ.ಪಿ. ರಮೇಶ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ದಿನೇಶ್ ಗುಂಡೂರಾವ್ ನಿರಂತರವಾಗಿ ಹೇಳಿಕೆಗಳನ್ನು ನೀಡುತ್ತಾ "ನಾವು 13 ಸ್ಥಾನಗಳನ್ನು ಅಂದಾಜಿಸಿದ್ದೆವು. 10 ಸ್ಥಾನ ದೊರಕಿದೆ" ಎಂದು ಹೇಳುತ್ತಿದ್ದಾರೆ. ಅಧಿಕಾರಕ್ಕೆ ಬರಬೇಕಾದರೆ ಕನಿಷ್ಠ 17 ಸ್ಥಾನಗಳು ಬೇಕು. ಅಷ್ಟಾದರೂ ತಮ್ಮ ಲಕ್ಷ್ಯ ಅಧಿಕಾರದ ಗದ್ದುಗೆಯತ್ತ ಇತ್ತು ಎಂದು ಅವರು ಹೇಳುತ್ತಿಲ್ಲ, ಹಾಗಾಗಿ ಕಾಂಗ್ರೆಸಿಗೆ ಈ ದುಸ್ಥಿತಿ ಬಂದಿದೆ. ಅದರ ಪರಿಣಾಮ ಸಾಹಿತ್ಯ ಪರಿಷತ್ತಿನ ಚುನಾವಣೆಯ ಮೇಲೆಯೂ ಆಗಿದೆ. ಈಗಷ್ಟೇ ಮುಗಿದ ವಿಧಾನ ಪರಿಷತ್ ಚುನಾವಣೆಯ ಸೋಲೂ ಸೇರಿದಂತೆ, ಇದು ಟಿ.ಪಿ. ರಮೇಶ್‌ಗೆ ಮೂರನೇಯ ಸೋಲು. ಒಂದು ರೀತಿಯಲ್ಲಿ ಸರಣಿ ಸೋಲು ಎಂದೇ ಹೇಳಬಹುದು. ಅವರು ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವುದು ಒಳ್ಳೆಯದು.

■ ಬಿ.ಎಸ್. ಮನುಶೆಣೈ

ಮಂಡ್ಯ: ಹನಕೆರೆ ನಾಗಣ್ಣನ ಹಂತಕರಿಗೆ ಕೊನೆಗೂ ಶಿ


ಹನಕೆರೆ ನಾಗಣ್ಣ

ಮಂಡ್ಯದ ಅಬಕಾರಿ ಕುಳ ಕಮ್ ಕಾಂಗ್ರೆಸ್ ಮುಖಂಡನೆನಿಸಿದ್ದ ಹನಕೆರೆ ನಾಗಣ್ಣ (ಎಚ್.ಪಿ. ನಾಗೇಂದ್ರ)ನನ್ನು ಹಾಡುಹಗಲೇ ಕೊಚ್ಚಿ ಕೊಲೆ ಮಾಡಿದ್ದ ಹಂತಕರಿಗೆ ಕೊನೆಗೂ ಜೀವಾವಧಿ ಶಿಕ್ಷೆ ಕಾಯಂ ಆಗಿದೆ. ತನ್ನ ಸೋದರಮಾವ, ಕುಖ್ಯಾತ ರೌಡಿ ಜಡೇಜಾ ರವಿ ಹತ್ಯೆಯಲ್ಲಿ ಹನಕೆರೆ ನಾಗಣ್ಣನ ಕೈವಾಡವಿದೆ ಅಂತ ಭಾವಿಸಿದ್ದ ಡೇಂಜರ್ ಶಿವ, ನಾಗಣ್ಣನನ್ನು ಕೊಲ್ಲಲು ಸ್ಕೆಚ್ ಹಾಕಿದ್ದ. ಅದರಂತೆ 2007ರ ಡಿಸೆಂಬರ್ 9ರಂದು ಮೈಸೂರಿನ ಯಾದಗಿರಿಯಲ್ಲಿರುವ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಓದುತ್ತಿರುವ ಮಗನನ್ನು ನೋಡಲೆಂದು ಹೆಂಡತಿ ಜೊತೆ ಹೋಗಿದ್ದ ನಾಗಣ್ಣನ ಮೇಲೆ ಡೇಂಜರ್ ಶಿವನ ಹಂತಕ ಪಡೆ ಮಾರಣಾಂತಿಕ ಮಚ್ಚು ಲಾಂಗುಗಳ ಸಮೇತ ಹಲ್ಲೆ ಮಾಡಿತ್ತು, 2 ದಿನಗಳ ಕಾಲ ಬಿ.ಎಂ.ಆಸ್ಪತ್ರೆಯಲ್ಲಿ ನರಳಾಡಿದ ನಾಗಣ್ಣ ಬದುಕುಳಿಯಲೇ ಇಲ್ಲ.

ಇಡೀ ಪ್ರಕರಣದ ಪ್ರಮುಖ ಆರೋಪಿ ಡೇಂಜರ್ ಶಿವನ ಜತೆಗೆ ರಾಮಚಂದ್ರ ಅಲಿಯಾಸ್ ಮಳವಳ್ಳಿ, ಬಸವರಾಜ್ ಅಲಿಯಾಸ್ ಕೆಂಚ, ಚಿಕ್ಕಮಂಡ್ಯ ವಿನೂತ್‌ಕುಮಾರ್, ಶರತ್, ರಘು ಅಲಿಯಾಸ್ ಟಿಬೆಟ್, ರಮೇಶ್, ಬೆಂಗಳೂರಿನ ಕುಖ್ಯಾತ ರೌಡಿಗಳಾದ ರಾಮ-ಲಕ್ಷ್ಮಣ, ಪೊಲೀಸ್ ಪೇದೆ ಎಂ.ಬಿ.ಮಂಜುನಾಥ್ ಸೇರಿ ಒಟ್ಟು 10 ಮಂದಿಯನ್ನು ಮೈಸೂರು ಪೊಲೀಸರು ಫಿಟ್ ಮಾಡಿದ್ದರು. ಇವರ ಪೈಕಿ ಡೇಂಜರ್ ಶಿವ, ರಾಮಚಂದ್ರ, ಬಸವರಾಜು, ವಿನೂತ್‌ಕುಮಾರ್‌ರನ್ನು ಬಿಟ್ಟು ಉಳಿದವರಿಗೆ ಸಲೀಸಾಗಿ ಜಾಮೀನು ಸಿಕ್ಕಿತ್ತು. ಈ ನಾಲ್ವರಿಗೂ ಈಗ್ಗೆ ಒಂದೆರಡು ವರ್ಷಗಳ ಕೆಳಗೆ ಜಾಮೀನು ಸಿಕ್ಕಿದ್ದರಿಂದ ಜೈಲಿನಿಂದ ಹೊರಬಂದಿದ್ದರು.

ಮಂಡ್ಯದ ಅಬಕಾರಿ ಉದ್ಯಮದ ಕುಳ ಹನಕೆರೆ ಪುಟ್ಟಪ್ಪನ ಮಗ ಎಚ್.ಪಿ.ನಾಗೇಂದ್ರ ಹಲವು ಕೋಟಿಗಳಿಗೆ ತೂಗುತ್ತಿದ್ದ ಆಸಾಮಿ. ಹಾಗಾಗಿ ಈ ಹತ್ಯೆ ಪ್ರಕರಣ ವಿಪರೀತ ಕುತೂಹಲ ಕೆರಳಿಸಿತ್ತು. 8 ವರ್ಷಗಳಿಂದ ಮೈಸೂರಿನ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಕೇಸಿಗೆ ಫೆ.27ರಂದು ಅಂತಿಮ ತೀರ್ಪು ಹೊರಬಿದ್ದಿದೆ. 6ನೇ ಹೆಚ್ಚುವರಿ ನ್ಯಾಯಾಲಯದ ನ್ಯಾಯಾಧೀಶರಾದ ವಿಜಯ ಕುಮಾರ್ ಎಂ.ಪಾವಲಿಯವರು ತಮ್ಮ ತೀರ್ಪಿನಲ್ಲಿ ಸಾಕ್ಷ್ಯಾಧಾರಗಳ ಕೊರತೆಯಿಂದ ಆರು ಮಂದಿಯನ್ನು ಖುಲಾಸೆಗೊಳಿಸಿದ್ದರೆ, ಇನ್ನುಳಿದ ನಾಲ್ವರು ಆರೋಪಿಗಳಾದ ಡೇಂಜರ್ ಶಿವ, ರಾಮಚಂದ್ರ, ಬಸವರಾಜು, ವಿನುತ್ ಕುಮಾರನಿಗೆ ಜೀವಾವಧಿ ಶಿಕ್ಷೆ ಕಾಯಂಗೊಳಿಸಿದ್ದಾರೆ. ಇದರ ಜೊತೆಗೆ ಡೇಂಜರ್ ಶಿವನಿಗೆ 3 ಲಕ್ಷ ರೂ. ದಂಡ ಹಾಗೂ ಉಳಿದ ಮೂವರಿಗೆ ತಲಾ 10 ಸಾವಿರ ರೂ. ದಂಡವನ್ನೂ ವಿಧಿಸಲಾಗಿದೆ. ಈ ದಂಡದ ಹಣದಲ್ಲಿ ಹತ್ಯೆಯಾದ ನಾಗಣ್ಣನ ಪತ್ನಿ ಹಾಗೂ ಮಗನಿಗೆ ತಲಾ 1 ಲಕ್ಷ ರೂಪಾಯಿ ಪರಿಹಾರ ರೂಪದಲ್ಲಿ ಸಂದಾಯವಾದರೆ ಉಳಿದದ್ದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಸೇರಲಿದೆ.

ಕೊಲೆಯ ಹಿಂದೆ...

ಹನಕೆರೆ ನಾಗಣ್ಣ ತನ್ನ ಅಬಕಾರಿ ಬಿಸಿನೆಸ್ ಜೊತೆಗೆ ಕಾಂಗ್ರೆಸ್ ಪಾರ್ಟಿಯ ಪ್ರಭಾವಿ ಮುಖಂಡನಾಗಿಯೂ ಗುರುತಿಸಿಕೊಂಡಿದ್ದ. ಅದೃಷ್ಟ ನೆಟ್ಟಗಿದ್ದರೆ ಮುಂದೊಮ್ಮೆ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಎಂಎಲ್‌ಎ ಆಗಬೇಕೆನ್ನುವ ಕನಸೂ ನಾಗಣ್ಣನಿಗಿತ್ತು, ಹಾಗಾಗಿಯೇ ಅಬಕಾರಿ ದುಡಿಮೆಯನ್ನೆಲ್ಲ ಸಮಾಜಸೇವಾ ಕಾರ್ಯಗಳಿಗೆ ಖರ್ಚು ಮಾಡುತ್ತಾ ಜನನಾಯಕನಾಗಲು ಹೊರಟಿದ್ದ. ಅಬಕಾರಿ ಉದ್ಯಮಿ ಅಂದಮೇಲೆ ಜೊತೆಗೆ ರೌಡಿಗಳು ಇರಲೇಬೇಕಲ್ಲವೇ? ನಾಗಣ್ಣ ತನ್ನ ಬೆಂಗಾವಲಿಗೆ ಇಟ್ಟುಕೊಂಡದ್ದು ಚೀರನಹಳ್ಳಿ ಶಂಕರ ಎಂಬ ರೌಡಿಯನ್ನು. ರೌಡಿಸಂ ದುಶ್ಮನಿಯ ಕಾರಣಕ್ಕೆ ಚೀರನಹಳ್ಳಿ ಶಂಕರನನ್ನು ಮತ್ತೊಬ್ಬ ನಟೋರಿಯಸ್ ರೌಡಿ ಜಡೇಜಾ ರವಿ ಕೊಲೆ ಮಾಡಿಸಿದ್ದ. ಶಂಕರ ಮತ್ತು ರವಿ ನಡುವಿನ ದುಶ್ಮನಿ ಯಾವ ಮಟ್ಟದ್ದಾಗಿತ್ತೆಂದರೆ ಶಂಕರನ ಹೆಣ ಕೆಡವಿದ ಮೇಲೂ ಜಡೇಜಾ ರವಿಯ ಸೇಡು ಹಿಂಗಿರಲಿಲ್ಲ. ಜೈಲಲ್ಲಿದ್ದುಕೊಂಡೇ ಶಂಕರನ ತಮ್ಮ ಚೀರನಹಳ್ಳಿ ಶಿವರಾಂನ ಹೆಣ ಹಾಕಿಸಿದ್ದ. ಈ ಸೇಡಿನ ಜಿದ್ದಿಗೆ ಬಿದ್ದ ಚೀರನಹಳ್ಳಿ ಶಂಕರನ ಅಕ್ಕನ ಮಕ್ಕಳಾದ ಚೇತನ್ ಹಾಗೂ ಮನು, ಕಲ್ಲಹಳ್ಳಿ ಅಶೋಕ್ ಪೈ ಜತೆ ಸೇರಿ 2007ರ ಡಿಸೆಂಬರ್ 7ರಂದು ಯಲಿಯೂರಿನ ಮಾಯಣ್ಣಕೊಪ್ಪಲು ಬಳಿ ಜಡೇಜಾ ರವಿಯನ್ನು ಬರ್ಬರವಾಗಿ ಹರಿದುಮುಕ್ಕಿದ್ದರು. ಚೀರನಹಳ್ಳಿ ಶಂಕರ, ಹನಕೆರೆ ನಾಗಣ್ಣನ ಪಾಳಯದಲ್ಲಿ ಇದ್ದುದರಿಂದ ಮತ್ತು ಶಂಕ್ರನ ಹತ್ಯೆಗೆ ಪ್ರತೀಕಾರವಾಗೇ ಜಡೇಜಾ ರವಿಯ ಹೆಣ ಬಿದ್ದಿದ್ದರಿಂದ ಹನಕೆರೆ ನಾಗಣ್ಣನೇ ಸಾಥ್ ಕೊಟ್ಟು ರವಿಯ ಕೊಲೆ ಮಾಡಿಸಿದ್ದಾನೆ ಅನ್ನೋ ಗುಮಾನಿ ರವಿ ಪಟಾಲಮ್ಮಿಗೆ ಇದ್ದೇ ಇತ್ತು, ಮುಖ್ಯವಾಗಿ ಜಡೇಜಾ ರವಿಯ ಅಕ್ಕನ ಮಗ ಶಿವಕುಮಾರ ಅಲಿಯಾಸ್ ಡೇಂಜರ್ ಶಿವ ಪ್ರತೀಕಾರಕ್ಕೆ ತಹತಹಿಸುತ್ತಿದ್ದ.

ಜಡೇಜಾ ರವಿ ಅಂತ್ಯಕ್ರಿಯೆ ಮುಗಿಸಿ ಬಂದ ಶಿವ ತನ್ನದೇ ಅಪೂರ್ವ ಲಾಡ್ಜ್‌ನಲ್ಲಿ ಸಹಚರರನ್ನು ಕಲೆಹಾಕಿ ನಾಗಣ್ಣನನ್ನು ಎತ್ತಲು ಪಕ್ಕಾ ಪ್ಲ್ಯಾನ್ ರೆಡಿ ಮಾಡಿದ್ದ. ಪ್ರತಿ ಭಾನುವಾರ ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಓದುತ್ತಿರುವ ಮಗ ವಿನೂತ್‌ನನ್ನು ನೋಡಲು ನಾಗಣ್ಣ ಹೋಗೇಹೋಗುತ್ತಾನೆ ಎಂಬ ಸುಳಿವಿಡಿದ ಶಿವನ ಹಂತಕ ಪಡೆ ಡಿಸೆಂಬರ್ 9ರ ಭಾನುವಾರ ಟಾಟಾ ಇಂಡಿಕಾ ಕಾರಿನಲ್ಲಿ ಮಂಡ್ಯದಿಂದ ಮೈಸೂರಿನವರೆಗೂ ನಾಗಣ್ಣನನ್ನು ಫಾಲೊ ಮಾಡಿದ್ದರು. ಹೆಂಡತಿ ವಿದ್ಯಾ ಜೊತೆಗೆ ಮಗನನ್ನು ಮಾತನಾಡಿಸಿಕೊಂಡು ಇನ್ನೇನು ವಾಪಾಸ್ ಹೊರಡಬೇಕೆನ್ನುವಾಗ ಅಟ್ಯಾಕ್ ಮಾಡಿದ ಹಂತಕರು ನಡುಬೀದಿಯಲ್ಲೇ ನಾಗಣ್ಣನ ದೇಹದೊಳಕ್ಕೆ ಲಾಂಗು-ಮಚ್ಚುಗಳನ್ನು ನುಗ್ಗಿಸಿ ಮನಸೋಇಚ್ಛೆ ಚಿಂದಿ ಮಾಡಿದ್ದರು. ನೆತ್ತರು ಹರಿಯುತ್ತಿದ್ದ ನಾಗಣ್ಣನನ್ನು ವಿಕ್ರಂ ಆಸ್ಪತ್ರೆಗೆ ಸೇರಿಸಲಾಯಿತಾದರು ಹೆಚ್ಚಿನ ಚಿಕಿತ್ಸೆಗಾಗಿ ಬಿ.ಎಂ.ಆಸ್ಪತ್ರೆಗೆ ತಂದು ಅಡ್ಮಿಟ್ ಮಾಡಿದ್ದರು. ಆಸ್ಪತ್ರೆಯ ಹಾಸಿಗೆಯಲ್ಲಿ ಎರಡು ದಿನ ಒದ್ದಾಡಿದ ನಾಗಣ್ಣ ಡಿಸೆಂಬರ್ 11ರಂದು ಕೊನೆಯುಸಿರೆಳೆದಿದ್ದ.


ಶಿಕ್ಷೆಗೀಡಾದ ಬಸವರಾಜು ವಿನುತಕುಮಾರ್- ಡೇಂಜರ್ ಶಿವ, ರಾಮಚಂದ್ರ

ಎಂಟು ವರ್ಷದ ಹಾದಿ

ಪ್ರಕರಣ ದಾಖಲಿಸಿಕೊಂಡಿದ್ದ ಮೈಸೂರಿನ ವಿ.ವಿ.ಪುರ ಠಾಣೆಯ ಅಂದಿನ ಸಬ್‌ಇನ್ಸ್‌ಪೆಕ್ಟರ್ ಟಿ.ಬಿ.ರಾಜಣ್ಣ 10 ಮಂದಿ ಆರೋಪಿಗಳನ್ನು ಬಂಧಿಸಿ ಸಾಕ್ಷ್ಯಗಳ ಕ್ರೋಢೀಕರಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ಬರೋಬ್ಬರಿ 8 ವರ್ಷಗಳ ಕಾಲ ವಿಚಾರಣೆ ನಡೆಯಿತು. ಸರ್ಕಾರಿ ಅಭಿಯೋಜಕರಾಗಿ ಆನಂದ ಎಂ.ಹೊಸಮನಿಯವರು ಆರೋಪಿಗಳ ವಿರುದ್ಧ ವಕಾಲತ್ತು ವಹಿಸಿದ್ದರು. ಈ ಮಧ್ಯೆ ಜಾಮೀನಿನ ಮೇಲೆ ಹೊರಬಂದಿದ್ದ ರೌಡಿ ಡೇಂಜರ್ ಶಿವ, ರಶ್ಮಿ ಎಂಬ ಹುಡುಗಿಯನ್ನ ಲವ್ ಮಾಡಿ ಮದುವೆಯನ್ನೂ ಆಗಿದ್ದ. ಅಷ್ಟಕ್ಕೂ ಈ ಡೇಂಜರ್ ಶಿವ ಪಕ್ಕಾ ಪರೋಡಿ. ಎಲಿಮೆಂಟೇನಲ್ಲ, ಅಪ್ಪ ಸುಂದರ್ ರೌಡಿಯಾಗಿ ಗುರುತಿಸಿಕೊಂಡಿದ್ದರೂ ಊಟಿಯಲ್ಲಿ ಓದಿ ಒಳ್ಳೆಯ ಹುಡುಗ ಎನಿಸಿಕೊಂಡವನೇ, ಆದರೆ ಅದ್ಯಾವ ಘಳಿಗೆಯಲ್ಲಿ ಮಂಡ್ಯಕ್ಕೆ ಮರಳಿ ಕಾಲಿಟ್ಟನೋ ಮಾವ ಜಡೇಜಾ ರವಿಯ ನೆತ್ತರು ಖಯಾಲಿ ಇವನಿಗೂ
ಸೋದರಮಾವ ತೆಕ್ಕೆಯಲ್ಲಿ ರೌಡಿಸಂನ ಓಂ
ಮಾಡಿಕೊಂಡ. ಇತ್ತ ಪೊಲೀಸರನ್ನು ಅಡ್ಜಸ್ಟ್ ಮಾ
ಸಾಲುಸಾಲು ಕೊಲೆ ಮಾಡುತ್ತಾ ಬಂದರೂ
ರವಿಗೆ ಶಿಕ್ಷೆಯೇ ಆಗದಿರುವುದು ಶಿವನಿಗೆ ಎಲ್ಲಿಲ್ಲ
ತಂದಿಕ್ಕಿತ್ತು, ಆದರೆ ಪಾಪದ ನೆತ್ತರು ಅದೆಷ್ಟು
ಹಾಯಾಗಿರಲು ಸಾಧ್ಯ! ಜಡೇಜಾ ರವಿಗೆ ಪ
ಏನು ಮಾಡಲಾಗದಿದ್ದರೂ ಅವನ ರೌಡಿಸಂ ದ
ಅವನನ್ನು ಅಡ್ಡಡ್ಡ ಮಲಗಿಸಿದ್ದವು. ಇದನ್
ಮಾಡಿಕೊಳ್ಳದ ಬಿಸಿರಕ್ತದ ಶಿವ ಥೇಟು ಫಿಲ್ಮಿ
ಪ್ರತೀಕಾರವ ಬೊಬ್ಬಿರಿದು ಹನಕೆರೆ ನಾಗಣ್ಣನ ಹೆ

ಕಣ್ಮುಂದೆಯೇ ಅಪ್ಪನ ಹತ್


ಪ್ರಕರಣದಲ್ಲಿ ಪ್ರಮುಖ ಸಾಕ್ಷಿಯಾಗಿ
ಹತ್ಯೆಯಾದ ನಾಗಣ್ಣನ ಮಗ ವಿನೂತ್. ತನ್ನ ತಂ
ತನ್ನ ಕಣ್ಣೆದುರೇ ಬರ್ಬರವಾಗಿ ಕೊಂದದ್ದನ್ನು ಕ
ಹುಡುಗ ಸ್ವಲ್ಪವೂ ಹೆದರದೆ ಹಂತಕರತ್ತ ಬೊಟ್ಟು
'ಇವರೇ ನನ್ನ ತಂದೆಯನ್ನು ಮಚ್ಚು- ಲಾಂಗ್
ಕೊಚ್ಚಿದ್ದು' ಅಂತ ಸಾಕ್ಷಿ ಹೇಳಿದ್ದ. ಜೊತೆಗೆ
ಪತ್ನಿ ವಿದ್ಯಾ, ಕಾರ್ ಡ್ರೈವರ್ ಉಮೇಶ್, ರ
ವಿದ್ಯಾಶಾಲೆಯ ವಾಚ್‌ಮನ್ ಬಸವಣ್ಣ
ಆರೋಪಿಗಳ ವಿರುದ್ಧ ಸಾಕ್ಷ್ಯಕ್ಕೆ ನಿಂತಿದ್ದರು
ಬಳಸಿದ್ದ ಕಾರಿನ ಕೀಲಿ ಕೈ ಹಾಗೂ
ಪ್ಲೇಟನ್ನು ತುಂಡು ಮಾಡಿ ಜಮೀನಿ
ಬಿಸಾಡಿದ್ದರು. ನಂಬರ್ ಪ್ಲೇಟ್ ಇಲ್ಲದ
ಶಿವನ ಕಾರು, ಪೊಲೀಸರು ಜಮೀನಿ
ವಶಪಡಿಸಿಕೊಂಡಿದ್ದ ನಂಬರ್ ಪ್ಲೇಟಿನ
ಗಳು ಹಂತಕರ ಕೃತ್ಯವನ್ನು ಸಾಬೀತುಮಾ

ಆದರೆ ಹತ್ಯೆಯಲ್ಲಿ ಭಾಗಿಯ
ಬೆಂಗಳೂರಿನ ನಟೋರಿಯಸ್
ರಾಮ-ಲಕ್ಷ್ಮಣರನ್ನು ನ್ಯಾಯಾಲಯ
ಮಾಡಿದೆ. ಡೇಂಜರ್ ಶಿವನಿಗೆ ಫೋನ್
ಪೊಲೀಸರು ಬೆನ್ನಟ್ಟಿರುವ ಮಾಹಿತಿ ನೀ
ನಂಬರ್ ಪ್ಲೇಟ್ ಮುರಿದು ಬಿಸಾಡುವಂ
ನೀಡಿದ್ದ ಪೊಲೀಸ್ ಜೀಪ್ ಚಾಲಕ ಮಂಜುನಾಥ್
ಇತರೆ ಆರೋಪಿಗಳಾದ ಶರತ್, ರಮೇಶ್, ರಘ
ಮೇಲಿನ ಆರೋಪಗಳಿಗೂ ಸೂಕ್ತ ಸಾಕ್ಷ್ಯವಿ
ಕೋರ್ಟ್ ಖುಲಾಸೆ ಮಾಡಿದೆ.

■ ವರದಿ

ಅವನು ಜಡೇಜಾ ರವಿ

ಮಂಡ್ಯದ ಸಭ್ಯಸ್ಥ ಚರಿತ್ರೆಯ ಪಾಲಿಗೆ ಮೆತ್ತಿದ ಕಳಂಕವೇ ಈ ಜಡೇಜಾ ರವಿ. ಭೂಗತಲೋಕದ ಪಾಲಿಗೆ ಖತರ್ನಾಕ್ ರೌಡಿ. ಸಾಲುಸಾಲಾಗಿ ನಾಲ್ಕು ಕೊಲೆ ಮಾಡಿಯೂ ದಕ್ಕಿಸಿಕೊಂಡವ. 1996ರಲ್ಲಿ ತನ್ನ ಅಕ್ಕ ನಾಗಮ್ಮಳ ಗಂಡ ರೌಡಿ ಸುಂದರನ ಹತ್ಯೆ ಮಾಡಿದ ರೌಡಿ ಅಣ್ಣಯ್ಯನನ್ನು ಕೊಲ್ಲುವ ಮೂಲಕ ಭೂಗತಲೋಕಕ್ಕೆ ಎಂಟ್ರಿ ಪಡೆದ. ಈ ಕೊಲೆಯಲ್ಲಿ ರೌಡಿ ಚೀರನಹಳ್ಳಿ ಶಂಕರ, ಕಲ್ಲಹಳ್ಳಿ ಅಶೋಕ್ ಪೈ ಕೂಡಾ ಭಾಗಿಯಾಗಿದ್ದರು. ರೌಡಿ ಅಣ್ಣಯ್ಯನ ಕೊಲೆ ಕೇಸಿನಲ್ಲಿ ಎಲ್ಲರೂ ಖುಲಾಸೆಯಾಗಿ ಬಂದ ನಂತರ ಮಂಡ್ಯ ಭೂಗತಲೋಕದ ಮೇಲೆ ಅಧಿಪತ್ಯ ಸಾಧಿಸುವ ಸಲುವಾಗಿ ಜಡೇಜಾ ರವಿ ಮತ್ತು ಚೀರನಹಳ್ಳಿ ಶಂಕರನ ನಡುವೆ ದುಶ್ಮನಿ ಶುರುವಾಯ್ತು, ಕೊನೆಗದು ಚೀರನಹಳ್ಳಿ ಶಂಕರನ ಹತ್ಯೆಯಲ್ಲಿ ಮುಕ್ತಾಯವಾಯಿತು. ಅದೊಂದು ದಿನ ಪೇಟೆಬೀದಿಯಲ್ಲಿರುವ ಕಾಳಿಕಾಂಭ ದೇವಸ್ಥಾನದ ಮುಂದೆ ಕಣ್ಮುಚ್ಚಿ ಕೈ ಮುಗಿಯುತ್ತಿದ್ದ ಶಂಕ್ರನ ಮೇಲೆ ಮುಗಿಬಿದ್ದ ಜಡೇಜಾ ರವಿ ಹುಡುಗರು ಭೀಕರವಾಗಿ ಕತ್ತರಿಸಿ ಪರಾರಿಯಾಗಿದ್ದರು. ಆದರೆ ಜಡೇಜಾ ರವಿ ಕೆಲದಿನಗಳ ಮಟ್ಟಿಗೆ ಜೈಲು ಪಾಲಾಗಿದ್ದ.


ಜಡೇಜಾ ರವಿ

ತನ್ನ ಅಣ್ಣ ಶಂಕ್ರನನ್ನು ಜಡೇಜಾ ರವಿ ಕೊಲ್ಲುವುದಕ್ಕೆ ಅವನ ಹಿಂದಿರುವ ಎಸ್.ಕೆ.ರಾಮಣ್ಣನ ಬಲವೇ ಕಾರಣ ಅನ್ನೋ ತೀರ್ಮಾನಕ್ಕೆ ಬಂದ ಶಂಕ್ರನ ತಮ್ಮ ಚೀರನಹಳ್ಳಿ ಶಿವರಾಮ. ಮಂಡ್ಯ ಭೂಗತಲೋಕದಲ್ಲಿ ಎಸ್.ಕೆ.ರಾಮಣ್ಣನದ್ದು ದೊಡ್ಡಹೆಸರು. ನೇರವಾಗಿ ಯಾವುದೇ ಕ್ರೈಮ್‌ನಲ್ಲಿ ಭಾಗಿಯಾಗದಿದ್ದರೂ ರೌಡಿಗಳನ್ನು ಬಿಟ್ಟು ತನ್ನ ಕೆಲಸ ಮಾಡಿಸಿಕೊಳ್ಳುವುದರಲ್ಲಿ ನಿಸ್ಸೀಮನಾಗಿದ್ದ. ಪೊಲೀಸ್ ಮತ್ತು ರೌಡಿಗಳ ನಡುವಿನ ಕೊಂಡಿಯಾಗಿಯೂ ಕೆಲಸ ಮಾಡುತ್ತಿದ್ದ ರಾಮಣ್ಣ ಮಾಜಿ ಸಚಿವ ಆತ್ಮಾನಂದ ಕುಟುಂಬಕ್ಕೆ ಆತ್ಮೀಯನಾಗಿದ್ದ. ಚುನಾವಣೆಗಳಲ್ಲಿ ಆತ್ಮಾನಂದ, ಅವರ ಚಿಕ್ಕಪ್ಪ ರಾಮಲಿಂಗೇಗೌಡರ ಅಣತಿಯಂತೆ ಕೆಲಸ ಮಾಡುತ್ತಿದ್ದ. ರೌಡಿಗಳ ಪಾಲಿನ ಗಾಡ್‌ಫಾದರ್‌ನಂತಿದ್ದ ಎಸ್.ಕೆ.ರಾಮಣ್ಣನನ್ನು ಎತ್ತಲೇಬೇಕೆಂಬ ಹಠಕ್ಕೆ ಬಿದ್ದ ಚೀರನಹಳ್ಳಿ ಶಿವರಾಮು ತನ್ನ ಗ್ಯಾಂಗ್ ಕಟ್ಟಿಕೊಂಡು ಹೊಳಲು ಸರ್ಕಲ್‌ನ ಡೆಲ್ಲಿ ಸ್ವೀಟ್ಸ್ ಮುಂದೆ ರಾಮಣ್ಣನನ್ನು ಭೀಕರವಾಗಿ ಹತ್ಯೆ ಮಾಡಿದ್ದ.


ಜೈಲಿನಲ್ಲಿದ್ದ ಜಡೇಜಾ ರವಿಯನ್ನು ಇದು ಅತಿಯಾಗಿ ಕೆರಳಿಸಿತ್ತು. ತನ್ನ ಪಾತಕಲೋಕದ ಗಾಡ್‌ಫಾದರ್‌ನಂತಿದ್ದ ಎಸ್.ಕೆ. ರಾಮಣ್ಣನನ್ನು ಕೊಲೆ ಮಾಡಿದ್ದಕ್ಕೆ ಪ್ರತಿಯಾಗಿ ಆತ ಪ್ರತೀಕಾರಕ್ಕೆ ಬಿದ್ದ. ಜೈಲಿನಲ್ಲಿದ್ದುಕೊಂಡೇ ಚೀರನಹಳ್ಳಿ ಶಂಕರನ ಮತ್ತೊಬ್ಬ ಶಿಷ್ಯ ಗೋಪಾಲಪುರ ಕಿಟ್ಟಿಯನ್ನು ತನ್ನ ಹುಡುಗರ ಮೂಲಕ ಕೊಲ್ಲಿಸಿದ. ರಾಮಣ್ಣನ ಕೊಲೆ ಕೇಸಿನಲ್ಲಿ ಖುಲಾಸೆಯಾಗಿ ಬಂದ ಸ್ವಲ್ಪ ದಿನಕ್ಕೇ ಚೀರನಹಳ್ಳಿ ಶಿವರಾಮನನ್ನು ಅವನ ಮನೆಗೆ ಕೂಗಳತೆ ದೂರದಲ್ಲೇ ಜಡೇಜಾ ರವಿಯ ಗ್ಯಾಂಗ್ ಕೊಂದು ಮುಗಿಸಿತು.

ಹೀಗೆ ಸಾಲುಸಾಲು ಹತ್ಯೆ ಮಾಡುತ್ತಾ ಬಂದ ಜಡೇಜಾ ರವಿಗೆ ರಾಜಕಾರಣಿಯಾಗುವ ಹುಚ್ಚು ಹಿಡಿದಿತ್ತು. 2007ರ ಮಂಡ್ಯ ನಗರಸಭೆ ಚುನಾವಣೆಯಲ್ಲಿ ನಾಲ್ಕನೇ ವಾರ್ಡ್ ಶಂಕರಪುರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದು ಕೌನ್ಸಿಲರ್ ಕೂಡಾ ಆಗಿದ್ದ. 2008ರ ವಿಧಾನಸಭೆ ಚುನಾವಣೆಯಲ್ಲಿ ಎಂಎಲ್‌ಎ ಟಿಕೆಟ್ ಕೇಳಲು ರೆಡಿಯಾಗಿ ಸಾಕಷ್ಟು 'ಸಂಪನ್ಮೂಲ'ವನ್ನೂ ಗುಡ್ಡೆ ಹಾಕಿಕೊಂಡಿದ್ದ. ಸಿಹಿನೀರುಕೊಳದ ಹಿಂಭಾಗ ದಿವಿನಾದ ಭವ್ಯ ಬಂಗಲೆ ಎಬ್ಬಿಸಿದ್ದ. ಬಿ.ಹೊಸೂರು ಬಳಿ ಹತ್ತಾರು ಎಕರೆ ಜಮೀನು ಖರೀದಿಸಿದ್ದ. ಲಿಟಿಗೇಷನ್ ಪ್ರಾಪರ್ಟಿಗಳ ವಿವಾದ ಬಗೆಹರಿಸಿ ಸಾಕಷ್ಟು ಹಣ ಮಾಡಿದ್ದ. ಮಂಡ್ಯದ ಶ್ರೀಮಂತ ವ್ಯಾಪಾರಿಗಳು ಜಡೇಜಾ ರವಿಗೆ ಕಪ್ಪ-ಕಾಣಿಕೆ ಸಲ್ಲಿ
ರೌಡಿಸಂನಿಂದ ದುಡಿದ ಹಣದಲ್ಲಿ ಎಂಎಲ್‌ಎ
ಕನಸು ಕಾಣುತ್ತಾ ಸಮಾಜ ಸೇವೆ ಶುರುವಿಟ್ಟುಕೊ

ಮಂಡ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿ
ಹಳ್ಳಿಯಲ್ಲೂ ಹುಡುಗರ ದಂಡೇ ಈತನ
ಸದಾ ಹತ್ತಾರು ಹುಡುಗರೊಂದಿಗೆ ಕಾರಿನಲ್ಲಿ
ಜಡೇಜಾ ರವಿಗೆ 2007ರ ಡಿಸೆಂಬರ್ 7
ದಿನವಾಗಿತ್ತು. ಅಂದು ತನ್ನ ಐವರು ಸಹಚ
ಮಂಡ್ಯದಿಂದ 7 ಕಿ.ಮೀ. ದೂರದ ಯಲಿಯೂ
ಇರುವ ಮಾಯಣ್ಣನ ಕೊಪ್ಪಲು ಗ್ರಾಮದ
ಸ್ನೇಹಿತನೊಬ್ಬನ ಹಾಲು-ತುಪ್ಪ ಮುಗಿಸಿ
ಸ್ಕಾರ್ಪಿಯೋದಲ್ಲಿ ಬರುತ್ತಿದ್ದಾಗ ಏಕಾಏಕಿ ಅಟ್ಯಾಕ್
ರೌಡಿ ಚೀರನಹಳ್ಳಿ ಶಂಕರನ ಅಕ್ಕನ ಮಕ್ಕಳಾದ
ಮನು, ಕರಿಬೋರ ಮೊದಲಾದವರ ಗ್ಯಾಂಗ್
ರವಿಯನ್ನು ಬರ್ಬರವಾಗಿ ಕೊಚ್ಚಿ ಹಾಕಿತ್ತು. ಬಿ
ಜಡೇಜಾ ರವಿಯ ತಲೆ ಸಂಪೂರ್ಣವಾಗಿ
ಮುದ್ದೆಯಾಗಿ ಹೊರಬಿದ್ದಿತ್ತು!

ಹಂತಕರ ವಿಕೃತರೋಷ ಎಷ್ಟಿತ್ತೆಂದರೆ ಜಡೇಜಾ
ಕೈಕಟ್ ಮಾಡಿ ತಂದು ರೌಡಿ ಚೀರನಹಳ್ಳಿ
ಗೋರಿಯ ಮೇಲೆ ಇಟ್ಟು ಹೋಗಿದ್ದರು. ಜಡೇ
ಪ್ರಕರಣದಲ್ಲೂ ಚೇತನ್ ಅಲಿಯಾಸ್ ಚೇತು,
ಕಲ್ಲಹಳ್ಳಿ ಅಶೋಕ್ ಪೈ ಎಲ್ಲರಿಗೂ ಜ
ಶಿಕ್ಷೆಯಾಗಿದೆ. ಮತ್ತೊಬ್ಬ ಅಬಕಾರಿ ಉದ್ಯಮಿ ರ
ಪುತ್ರ ಜಿ.ಪಂ. ಸದಸ್ಯನಾಗಿದ್ದ ಮಹೇಶ್ ಹತ್ಯೆ ಪ್ರ
ಭಾಗಿಯಾದ ಅಶೋಕ್ ಪೈ ಸೇರಿದಂತೆ
ಜೀವಾವಧಿ ಶಿಕ್ಷೆಯಾಗಿದೆ. ಈಗ ಹನಕೆರೆ
ಪ್ರಕರಣದಲ್ಲಿಯೂ ನಾಲ್ವರಿಗೆ ಜೀವಾವಧಿ ಶಿಕ್ಷೆ
ವುದರಿಂದ ಮಂಡ್ಯದ ಭೂಗತಲೋಕ ಸ್ತಬ್ಧವಾದ
ಮಂಡ್ಯ ಪೊಲೀಸರು ಜಡೇಜಾ ರವಿಯನ್ನು
ತಡವಿಕೊಳ್ಳುವ ಖದರು ತೋರಿದ್ದರೆ ಮಂಡ
ರೌಡಿಸಂ ನೆತ್ತರಿನಲ್ಲಿ ನೆಂದುಹೋಗುತ್ತಿರಲಿಲ್ಲ.
ರೌಡಿಸಂ ಚಾಪ್ಟರ್‌ಗೆ ಫುಲ್‌ಸ್ಟಾಪ್ ಅದೆಷ್ಟು
ವಾಗಿರುತ್ತದೆನ್ನುವುದನ್ನು ಇಂತಹ ಪ್ರಕರಣಗಳಿಂದ
ಯುವಜನತೆ ಅರ್ಥಮಾಡಿಕೊಂಡರೆ ಒಳ್ಳೆಯದ

ೂಸಕೋಟೆ: ಬಚ್ಚೇಗೌಡನ ರಾಜಕೀಯ ಸಮಾಧಿಗೆ ಎಂಟಿಬಿ ನಾಗರಾಜ್ ಗುಣಿ!




ದು 'ಕರ್ನಾಟಕದ ಬಿಹಾರ' ಎಂಬ ಕುಖ್ಯಾತಿಗೆ ಗಿದ್ದ ಹೊಸಕೋಟೆ. ಇಲ್ಲಿ ಬಿಜೆಪಿಯ ಬಚ್ಚೇಗೌಡನದ್ದೇ ಧಿಕಾರಿ 'ಅಂಧಾರಾಜ್'. ಅವರು ಹಾಕಿದ್ದೇ ಓಟು, ದ್ದೇ ಕಾನೂನು. ಸ್ಥಳೀಯ ಪೊಲೀಸರು ಇವರು ದ್ದನ್ನೆ ಮಾಡಬೇಕು. ಬಹುಶಃ ಹೊಸಕೋಟೆ ಕಿನಲ್ಲಿ ನಡೆದಷ್ಟು ರಾಜಕೀಯ ಕೊಲೆಗಳು ್ಟಕದ ಬೇರೆಲ್ಲೂ ನಡೆದಿರಲಿಕ್ಕಿಲ್ಲ. ಂಟೆ-ಗೋಮಾಳ-ಸ್ಮಶಾನ ಯಾವುದೂ ಬಚ್ಚೇಗೌಡರ ದಾಹ ತೀರಿಸಲಿಲ್ಲ.

ೌದು, ಇದು ಖಂಡಿತಾ ಉತ್ಪ್ರೇಕ್ಷೆಯಲ್ಲ. ಸ್ವಾತಂತ್ರ್ಯ ದ ಪರಿಸ್ಥಿತಿ ಇದು. ಇಲ್ಲಿನ ವಿಧಾನಸಭಾ ಕ್ಷೇತ್ರದ ರು ಮತಗಟ್ಟೆಗಳಲ್ಲಿ ಶೇಕಡ ನೂರರಷ್ಟು ದಾನವಾಗುತ್ತಿತ್ತು! ಅಷ್ಟೇ ಅಲ್ಲ, ಈ ಎಲ್ಲಾ ಮತಗಳು ಗೌಡನಿಗೇ ಬೀಳುತ್ತಿದ್ದವು!!

ಇಲ್ಲಿನ ಮತಗಟ್ಟೆಗಳಲ್ಲಿ ಕೂರಲು ಕಾಂಗ್ರೆಸ್ ಏಜೆಂಟರೇ ದಾಗುತ್ತಿರಲಿಲ್ಲ, ಒಂದುವೇಳೆ ಕೂತರೂ ಚುನಾವಣೆ ಿದ ಕೂಡಲೇ ಕಾಂಗ್ರೆಸ್ ಏಜೆಂಟ್‌ನ ಮನೆ ೀಪಟವಾಗುತ್ತಿತ್ತು, ಹೆಂಡತಿ-ಮಕ್ಕಳಾದಿಯಾಗಿ ಎಲ್ಲರನ್ನು ಬಿಸಾಕುತ್ತಿದ್ದರು. ಬೆಂಡಿಗಾನಹಳ್ಳಿ, ನಂದಗುಡಿ, ಳ್ಳಿಗಳಲ್ಲಿ ಬಚ್ಚೇಗೌಡರ ಬೆಂಬಲಿಗರ ಹೊರತಾಗಿ ಳ್ಳೆಯೂ ಸುಳಿಯುವಂತಿರಲಿಲ್ಲ, ಅಷ್ಟೇ ಏಕೆ, ಇಂದಿನ ಕರಾದ ಎಂಟಿಬಿ ನಾಗರಾಜ್‌ರನ್ನು ಕೂಡಿಹಾಕುವಷ್ಟು ೀಗೌಡರ ಬೆಂಬಲಿಗರ ಉಪಟಳ ಹದ್ದುಮೀರಿತ್ತು.

ಇದು ಕಳೆದ ಇಪ್ಪತ್ತೈದು ವರ್ಷಗಳಿಂದ ನಡೆದುಕೊಂಡು ದ ಸರ್ವಾಧಿಕಾರಿ ಸಂಪ್ರದಾಯ. ಬಚ್ಚೇಗೌಡರು ಾರು ಆರು ಬಾರಿ ಶಾಸಕನಾಗಿ, ಐದು ಬಾರಿ ವನಾಗಿ ಬೇರೆ ಪಕ್ಷದವರನ್ನು ಹಿಂಸಿಸಿದ ಪರಿ ಿಂತದ್ದಲ್ಲ. ಕಳೆದ 2013ರ ವಿಧಾನಸಭಾ ಚುನಾವಣೆಯಲ್ಲಿ ಈಗಿನ ಶಾಸಕ ಎಂಟಿಬಿ ನಾಗರಾಜ್ ಮೇಲೆ ತಿರುವರಂಗದಲ್ಲಿ ಬಚ್ಚೇಗೌಡರ ಚೇಲಾಗಳಿಂದ ಹಲ್ಲೆಯೇ ನಡೆದಿತ್ತು, ಅಂದೇರಾತ್ರಿ ಈ ಬಗ್ಗೆ ದೂರು ನೀಡಲು ಹೋಗಿದ್ದ ಎಂಟಿಬಿ ಬೆಂಬಲಿಗರನ್ನು ಬಿಜೆಪಿ ಬೆಂಬಲಿತ ತಿರುಮಲಶೆಟ್ಟಿ ಹಳ್ಳಿ ಪೊಲೀಸರು ನಡುರಾತ್ರಿಯಲ್ಲಿ ಅಟ್ಟಾಡಿಸಿ ಬಡಿದಿದ್ದರು. ಆ ಸಂಗತಿಯನ್ನು 'ಕರ್ನಾಟಕದ ಬಿಹಾರ್' ಎಂಬ ಶೀರ್ಷಿಕೆಯಡಿಯಲ್ಲಿ ಈ ನಿಮ್ಮ ಪತ್ರಿಕೆ ಪ್ರಕಟಿಸಿದ್ದು ನಿಮಗೂ ನೆನಪಿರಬಹುದು.

ಒಂದೆಡೆ ಹಣಬಲ, ಮತ್ತೊಂದೆಡೆ ಬಾಹುಬಲ ಇವೆರಡರ ನಡುವೆ ಬಡಿದಾಡುವ ಧೈರ್ಯ ಯಾರಿಗೂ ಇರಲಿಲ್ಲ, ಇದನ್ನು ಸವಾಲಾಗಿ ಸ್ವೀಕರಿಸಿದ್ದು ಎಂಟಿಬಿ ನಾಗರಾಜ್. ಇವರ ಬಳಿ ಹಣವೇನೋ ಇತ್ತು, ಆದರೆ ಬಾಹುಬಲ, ಅಧಿಕಾರದ ಬಲ ಇರಲಿಲ್ಲ. ಆದಾಗ್ಯೂ ಬಚ್ಚೇಗೌಡನ ಪಟಾಲಮ್ಮಿನ ವಿರುದ್ಧ ಸೆಟೆದು ನಿಂತ ಎಂಟಿಬಿ ಕಾಂಗ್ರೆಸ್ ಏಜೆಂಟರಿಲ್ಲದ ಬೂತ್‌ಗಳಲ್ಲಿ ತಾವೇ ಏಜೆಂಟಾಗಿ ಕೂತರು. ಬಚ್ಚೇಗೌಡರ 'ಕಾಲಾರಾಜ್' ನಿಂದ ನೊಂದಿದ್ದ ಮತದಾರರು ಅವರಿಗೆ ಬುದ್ಧಿ ಕಲಿಸಲು ತಯಾರಿದ್ದರು. ಆದರೆ ಅವರ ಸಹಾಯಕ್ಕೆ ನಿಲ್ಲಬಲ್ಲ ಒಬ್ಬ ನಾಯಕ ಬೇಕಿದ್ದ. ಎಂಟಿಬಿ ನಾಗರಾಜ್ ಆ ಸ್ಥಾನ ತುಂಬಿದ್ದರು. 2013ರ ಚುನಾವಣೆಯಲ್ಲಿ ಜಯಭೇರಿ ಬಾರಿಸಿ ಶಾಸಕರಾದ ಎಂಟಿಬಿ ಮಾಡಿದ ಮೊದಲ ಕೆಲಸವೆಂದರೆ ಬಚ್ಚೇಗೌಡ ಕೃಪಾಪೋಷಿತ ನಾಟಕ ಮಂಡಳಿಯ ಸದಸ್ಯರಂತಿದ್ದ ತಾಲೂಕು ಮಟ್ಟದ ಪೊಲೀಸ್ ಅಧಿಕಾರಿಗಳನ್ನು ಎತ್ತಂಗಡಿ ಮಾಡಿ ಆ ಸ್ಥಾನಕ್ಕೆ ದಕ್ಷ ಅಧಿಕಾರಿಗಳನ್ನು ತಂದದ್ದು. ಇತ್ತೀಚಿನ ಜಿಲ್ಲಾ ಪಂಚಾಯ್ತಿ-ತಾಲೂಕು ಪಂಚಾಯ್ತಿ ಚುನಾವಣೆ ಮತದಾನಕ್ಕೆ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಿಸಿದ್ದರು. ಮಾತ್ರವಲ್ಲದೆ, ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಕ್ಷೇತ್ರವಿಡೀ ಸುತ್ತಾಡಿ ಜನರಲ್ಲಿ ಜಾಗೃತಿ ಮೂಡಿಸಿದರು. ರಿಗ್ಗಿಂಗ್ ನಡೆಯುತ್ತಿದ್ದ ಬೂತ್‌ಗಳಲ್ಲಿ ಚುನಾವಣೆಯಂದು ತಾವೇ ಸಂಚರಿಸಿ ಅಕ್ರಮಗಳು ನಡೆಯದಂತೆ



ನೋಡಿಕೊಂಡರು. ಇದರ ಪ್ರತಿಫಲವೇ ಪಂಚಾಯ್ತಿ ಚುನಾವಣೆಯ ಫಲಿತಾಂಶ.

ಕಳೆದ ಇಪ್ಪತ್ತೈದು ವರ್ಷಗಳಿಂದ ಜೆಡಿಎಸ್-ಬಿಜೆಪಿ ಹೊರತಾಗಿ ಬೇರಾರು ಜಿಲ್ಲಾ ಪಂಚಾಯ್ತಿ-ತಾಲೂಕು ಪಂಚಾಯ್ತಿ ಚುನಾವಣೆಗಳಲ್ಲಿ ಗೆದ್ದಿರಲಿಲ್ಲ, ಕಾಂಗ್ರೆಸ್ ಖಾತೆಯನ್ನೇ ತೆರೆದಿರಲಿಲ್ಲ. ಆದರೆ ಈಗ ಆರು ಜಿಲ್ಲಾ ಪಂಚಾಯ್ತಿ ಸ್ಥಾನಗಳಲ್ಲಿ ನಾಲ್ಕನ್ನು, ಇಪ್ಪತ್ತೆರಡು ತಾಲೂಕು ಪಂಚಾಯ್ತಿ ಸ್ಥಾನಗಳಲ್ಲಿ ಹದಿನೈದನ್ನು ಕಾಂಗ್ರೆಸ್ ಪಡೆದಿದೆ. ಮೊದಲ ಬಾರಿ ಬಚ್ಚೇಗೌಡರ ಭದ್ರಕೋಟೆ ನುಚ್ಚು ನೂರಾದಂತಾಗಿದೆ. ಅದರಲ್ಲೂ ಬಚ್ಚೇಗೌಡನ ಅಷ್ಟೂ ಅಕ್ರಮಗಳ ಪಾಲುದಾರರಾಗಿದ್ದ ಸತೀಶ್‌ಗೌಡ ಹಾಗು ರಾಜಶೇಖರ ಗೌಡ ಎಂಬಿಬ್ಬರು ಹೀನಾಯವಾಗಿ ಸೋತಿದ್ದಾರೆ. ಇವರಿಬ್ಬರು ಬಚ್ಚೇಗೌಡನ ಅಣ್ಣನ ಮಕ್ಕಳು!

ಕಳೆದ ವಿಧಾನಸಭೆಯಲ್ಲಿನ ಸೋಲು, ಲೋಕಸಭೆ ಚುನಾವಣೆ ಸೋಲು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿನ ಪರಾಜಯ, ಈಗ ಜಿಲ್ಲಾ ಪಂಚಾಯ್ತಿ-ತಾಲೂಕು ಪಂಚಾಯ್ತಿಗಳ ಚುನಾವಣೆಯಲ್ಲಿ ಮುಖಭಂಗ! ಹೊಸಕೋಟೆ ಹಿಟ್ಲರ್ ಬಚ್ಚೇಗೌಡರ ರಾಜಕೀಯ ಭದ್ರಕೋಟೆಯ ಬುನಾದಿಗೇ ಅಂತಿಮ ಹಾರೆ ಮೀಟಿದ್ದಾರೆ 'ಗಧಾರಿ ನಾಗರಾಜ್'. ಹಿಂದೊಮ್ಮೆ ಇಂದಿನ ಹೊಸಕೋಟೆ ಶಾಸಕ ಎಂಟಿಬಿ ನಾಗರಾಜ್ ಅವರನ್ನು 'ಗಧಾರಿ ನಾಗರಾಜ್' ಎಂದು ಇದೇ ಬಚ್ಚೇಗೌಡರು ಲೇವಡಿ ಮಾಡಿದ್ದರು. ಇಂದು ಅದೇ ಗಧಾರಿ ನಾಗರಾಜ್ ಬಚ್ಚೇಗೌಡರ ರಾಜಕೀಯ ಸಾಮ್ರಾಜ್ಯಕ್ಕೆ ಗಡಾರಿ ಮೀಟಿದ್ದಾರೆ. ಮಾತ್ರವಲ್ಲ ಭದ್ರಕೋಟೆಯನ್ನೇ ಕೆಡವಿ ಹಾಕಿದ್ದಾರೆ.

'ಪ್ರಜಾಪ್ರಭುತ್ವದ ಸೌಂದರ್ಯ' ಎನ್ನುವುದು ಇದೇ ಇರಬಹುದೇನೊ.

■ ವರದಿಗಾರ

ಭುಜಗಳಿಲ್ಲದ ಬಚ್ಚೇಗೌಡ!

ಹಿಂದೊಂದು ಕಾಲವಿತ್ತು, ಹೊಸಕೋಟೆಯೆಂದರೆ ಚಿಕ್ಕೇಗೌಡ-ಮುನೇಗೌಡ-ಬಚ್ಚೇಗೌಡರೆಂಬ ತ್ರಿಮೂರ್ತಿಗಳ ರಾಜಕೀಯ ರಣಾಂಗಣವಾಗಿತ್ತು, ಆದರೆ ಯಾವಾಗ ಚಿಕ್ಕೇಗೌಡರ ವಿರುದ್ಧ ಸೆಣಸಿ ಬಚ್ಚೇಗೌಡ ಜೆಡಿಎಸ್‌ನಿಂದ ಖಾತೆ ತೆರೆದರೊ ಅವತ್ತಿಗೆ ಹೊಸಕೋಟೆಯ 'ರಾಜಕೀಯ ಕ್ರೌರ್ಯ' ಎಂಬ ಪುಸ್ತಕಕ್ಕೆ ಮತ್ತೊಂದು ಅಧ್ಯಾಯದ ಸೇರ್ಪಡೆಯಾಯ್ತು.

ಅಂದು ಬಚ್ಚೇಗೌಡರ ಬಲಭುಜ-ಎಡಭುಜಗಳಂತೆ ನಿಂತಿದ್ದವರು ಕೊಡಳ್ಳಿ ಸೊಣ್ಣಪ್ಪ ಮತ್ತು ದೊಡ್ಡ ಹುಲ್ಲೂರು ಮಂಜುನಾಥ್. ಇವರಿಬ್ಬರನ್ನು ಬಳಸಿಕೊಂಡೇ ಬಚ್ಚೇಗೌಡ ಎಲ್ಲರನ್ನೂ ಮಟ್ಟಹಾಕಿದ್ದು. ಇತ್ತ ಬಚ್ಚೇಗೌಡ ರಾಜಕೀಯವಾಗಿ ಬೆಳೆಯತೊಡಗಿದರೆ ಸೊಣ್ಣಪ್ಪನಂಥ ಹಿರಿಯರು ಎಲ್ಲಾ ನಿಂದನೆಗಳಿಗೂ ಗುರಿಯಾದರು. ಬಚ್ಚೇಗೌಡ ರಾಜ್ಯಮಟ್ಟದಲ್ಲಿ ಬೆಳೆಯುತ್ತಾ ಹೋದಂತೆ ತಾಲೂಕು ಮಟ್ಟದ ಸಣ್ಣಪುಟ್ಟ ರಾಜಕೀಯ ಹುದ್ದೆಗಳಿಗಷ್ಟೇ ಇವರು ತೃಪ್ತಿಪಡಬೇಕಾಯ್ತು. ಮನಸಿಕವಾಗಿ ಜೆಡಿಎಸ್‌ನಲ್ಲೇ ಇರುವ ಸೊಣ್ಣಪ್ಪ ಕುಟುಂಬ, ದೊಡ್ಡ ಹುಲ್ಲೂರು ಮಂಜುನಾಥ್ ಅಂತಹವರು ಬಚ್ಚೇಗೌಡರು ಬಿಜೆಪಿಗೆ ಸೇರ್ಪಡೆಯಾದರೂ ಅವರ ಬೆಂಬಲದಲ್ಲೆ ನಿಂತಿದ್ದರು. ಆದರೆ ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬಚ್ಚೇಗೌಡರು ಇವರಿಬ್ಬರ ಸಣ್ಣ ಮಾತನ್ನೂ ಕೇಳಿಸಿಕೊಳ್ಳದಂಥ ದುರಹಂಕಾರವನ್ನು ಬೆಳೆಸಿಕೊಂಡಿದ್ದೇ ಇವತ್ತಿನ ರಾಜಕೀಯ ಅವನತಿಗೆ ಕಾರಣ.

ಸೊಣ್ಣಪ್ಪನವರ ಇಬ್ಬರು ಮಕ್ಕಳಾದ ಮಂಜುನಾಥ ಗೌಡ ಮತ್ತು ಸುರೇಶ್ ಗೌಡರು ಹೊಸಕೋಟೆ ಕ್ಷೇತ್ರದಲ್ಲಿ ತಮ್ಮ ತಂದೆಯಷ್ಟೇ ರಾಜಕೀಯ ಪ್ರಾಬಲ್ಯ ಇಟ್ಟುಕೊಂಡವರು. ಇವರ ಪೈಕಿ ಮಂಜುನಾಥ ಗೌಡ ಪಕ್ಕದ ಮಾಲೂರಿನಿಂದ ಜೆಡಿಎಸ್ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದರು. ಸಹಜವಾಗಿಯೇ ತಂದೆ ಸೊಣ್ಣಪ್ಪ ಮಗನ ಪರವಾಗಿ ಮಾಲೂರಿನಲ್ಲಿ ತಮ್ಮೆಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿದರು. ದೊಡ್ಡ ಹುಲ್ಲೂರು ಮಂಜುನಾಥ್ ತಟಸ್ಥರಾದರು. ಬಲಭುಜ-ಎಡಭುಜಗಳಿಲ್ಲದ ಬಚ್ಚೇಗೌಡರು 2013ರ ವಿಧಾನಸಭಾ ಚುನಾವಣೆಯಲ್ಲಿ ಸೋಲಬೇಕಾಯ್ತು, ಆಮೇಲಾದರೂ ಬಚ್ಚೇಗೌಡ ಬುದ್ಧಿ ಕಲಿಯಲಿಲ್ಲ. ಲೋಕಸಭಾ ಚುನಾವಣೆಯಲ್ಲಿಯೂ ಮಾಲೂರು ಶಾಸಕ ಮಂಜುನಾಥ್ ಗೌಡ, ಒಕ್ಕಲಿಗರ ಸಂಘದ ನಿರ್ದೇಶಕ ದೊಡ್ಡಹುಲ್ಲೂರು ಮಂಜುನಾಥ್ ಮಾತನ್ನು ಲೆಕ್ಕಿಸಲೇ ಇಲ್ಲ, ಪರಿಣಾಮ ಲೋಕಸಭೆಯಲ್ಲೂ ಸೋಲು. ಕೊಡಳ್ಳಿ ಸೊಣ್ಣಪ್ಪ ಕುಟುಂಬ ಇಂದಿಗೂ ಹೊಸಕೋಟೆಯ ಕೆಲಭಾಗಗಳಲ್ಲಿ ತನ್ನ ಪ್ರಾಬಲ್ಯವನ್ನು ಇಟ್ಟುಕೊಂಡಿದೆ.

ಸೊಣ್ಣಪ್ಪ ಕುಟುಂಬದ ಕಿರಿತಲೆ ಮಂಜುನಾಥ್ ಗೌಡ ಇದೀಗ ಮಾಲೂರಿನ ಜೆಡಿಎಸ್ ಶಾಸಕ. ಇನ್ನುಳಿದಂತೆ ಹಿರಿಮಗ ಸುರೇಶ್ ಪಕ್ಕದ ಕೋಲಾರ ಕ್ಷೇತ್ರದಿಂದ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಈಗಾಗಲೇ ತಯಾರಿ ನಡೆಸಿದ್ದಾರೆ. ಇಷ್ಟುದಿನ ಬಚ್ಚೇಗೌಡನ ಬೆನ್ನಿಗೆ ಗಾಢವಾಗಿ ನಿಲ್ಲುತ್ತಿದ್ದ ಈ ಪ್ರಭಾವಿ ಕುಟುಂಬ ತಮ್ಮದೇ ರಾಜಕೀಯ ಹಾದಿಯಲ್ಲಿ ಮುನ್ನುಗ್ಗುತ್ತಿರುವುದರಿಂದ ಮುಂಬರುವ ದಿನಗಳಲ್ಲೂ ಬಚ್ಚೇಗೌಡರಿಗೆ ರಾಜಕೀಯ ಭವಿಷ್ಯ ಇದ್ದಂತೆ ತೋರುತ್ತಿಲ್ಲ.

ಾಮುಂಡಿ-ಮಹಿಷಾಸುರ ಇಬ್ಬರೂ ಬಲಿಪಶುಗಳೆ

ಸಾಕ್ಷಾತ್ ವಿಷ್ಣು ಹತ್ತು ಅವತಾರಗಳನ್ನೆತ್ತಿ ಅಸುರ ವನ್ನು ಸಂಹರಿಸಿದ ಕಥೆಗಳ ಅಸಲಿ ರೂಪ ಈಗಾಗಲೇ ಬಯಲಾಗಿದೆ. ಈ ದೇಶದ ಮೂಲನಿವಾಸಿಗಳಾದ ದ್ರರೇ ಅಂದಿನ ಅಸುರರು ಎಂದು ತಿಳಿಹೇಳುವ ಶ್ಯಕತೆ ಇಲ್ಲ, ಹಾಗಾಗಿ ಶೂದ್ರ ಜನಾಂಗದ ನಾಯಕರು ನ್ನು ಸಾವಿರಾರು ವರ್ಷಗಳ ಕಾಲ ಕೊಲ್ಲುತ್ತಲೇ ಬಂದ ಆರ್ಯ ಶ್ರೇಷ್ಠರೇ 'ದೇವತೆಗಳು'. ಆ ಆರ್ಯರ ಅನ್ಯಾಯ ಮಗಳನ್ನು ವಿರೋಧಿಸುತ್ತ ಅವರ ತಂತ್ರಕುತಂತ್ರಗಳಿಗೆ ಯಾಗಿ ಅನ್ಯಾಯವಾಗಿ ಕೊಲೆಯಾಗಿ ಹೋದ ಆರ್ಯವೀರರೇ 'ರಾಕ್ಷಸರುಗಳು'. ಇದು ಈ ದೇಶದ ಣ 'ಪುಣ್ಯ' ಕಥೆಗಳ ಕರಾಳ ಇತಿಹಾಸ. ಚಾಮುಂಡಿ ತ್ತು ಮಹಿಷಾಸುರನ ಪುರಾಣವೂ ಸಹ ಅಂಥದ್ದೇ ದು ದುರಂತ ಇತಿಹಾಸ.

ನನಗಾಗ ಸುಮಾರು ಹತ್ತು-ಹನ್ನೆರಡು ವರ್ಷವಿರಬಹುದು. ಸೂರಿನ ಒಂದು ವಠಾರದ ಮನೆಯಲ್ಲಿ ಬಾಡಿಗೆಗಿದ್ದೆವು. ್ಟೋಬರ್ ತಿಂಗಳು ದಸರಾ ಹಬ್ಬದ ಸಂದರ್ಭ. ಚಾಮುಂಡಿ ದಲ್ಲಿ ರಥೋತ್ಸವವಿತ್ತು, ಕುಟುಂಬ ಸಮೇತರಾಗಿ ನಾವು ಮುಂಡಿ ಬೆಟ್ಟಕ್ಕೆ ಹೊರಟುನಿಂತಿದ್ದೆವು. ಆ ವಠಾರದ ಮಾಲೀಕ ಳಿನ ವೆಂಕಟಸ್ವಾಮಿ ಎನ್ನುವ ವ್ಯಕ್ತಿ ನಮ್ಮ ತಂದೆಯ ತ "ಪುಟ್ಸಾಮಿ ಎಲ್ಲೋಗ್ತಿದ್ದೀರಿ?" ಎಂದು ಕೇಳಿದ. ನಮ್ಮ ವಿಷಯ ತಿಳಿಸಿದರು. ಅದಕ್ಕೆ ಆತ "ಆ ಚಾಮುಂಡೇಶ್ವರಿ ...ಅವ್ಳೆನ್ ಹೋಗಿ ಪೂಜೆ ಮಾಡೋದು?" ಎಂದ. ಗ ಭಯ, ಗಾಬರಿ, ಆಶ್ಚರ್ಯ ಎಲ್ಲಾ ಒಟ್ಟೊಟ್ಟಿಗೆ ್ತು, ನನ್ನ ತಂದೆಯ ಮುಖ ನೋಡಿದೆ. ಅದಕ್ಕೆ ಅವರು ಅಪ್ಪೊಬ್ಬ ಕುಡುಕ. ಕುಡಿದ ಜ್ಞಾನದಲ್ಲಿ ಏನೇನೋ ಬಂಗ್ ಬಂದಾಗ್ ಹೇಬಾಡ್ತಾನೆ" ಎಂದು ಹೇಳಿ ನಮ್ಮನ್ನು ಿರೊಟ್ಟರು.

ಚಾಮುಂಡಿ ಬೆಟ್ಟದಲ್ಲಿ ತೇರು ಚಲಿಸತೊಡಗಿತು. ಚಲಿಸುತ್ತಿದ್ದ ನಂಜನಗೂಡಿನ ದಿಕ್ಕಿನ ಒಂದು ಮೂಲೆಯಲ್ಲಿ ಬಹಳ ತು ನಿಂತು ಬಿಟ್ಟಿತು. ಅದಕ್ಕೆ ನನ್ನ ತಂದೆ "ಹೂಂ, ಇನ್ನು ಗಂಟೆ ತಾಯಿ ಮುಂದುಕ್ಕೋಗಲ್ಲ... ಅವ್ರ... ಒಂದ್ ಅರ್ಧಗಂಟೆ ಕಣ್ತುಂಬ ನೋಡಿ ತೃಪ್ತಿಯಾದ್ ಮೇಲೇನ ಅವ್ರು ಮುಂದುಕ್ಕೋಗೋದು" ಅಂದ್ರು. ನಮ್ಮ ತಂದೆಯ ಬಾಯಿಂದ ಅನಿರೀಕ್ಷಿತವಾಗಿ ಬಂದ ಆ ಮಾತಿನಿಂದ ನಾನು ಅವಾಕ್ಕಾದೆ. ಅಷ್ಟರಲ್ಲಿ "ಏನು ಗೌಡ್ರೆ ನೀವ್ ಹೇಳ್ತಿರೋ ಕಥೆ?" ಎಂದು ಪಕ್ಕದವ್ರ್ಯಾರೋ ಕೇಳಿದರು. ಅದಕ್ಕೆ ನಮ್ಮ ತಂದೆ "ನಂಜುಂಡೇಶ್ವರ ಚಾಮುಂಡಮ್ಮನ್.... ಈಗ ಅವ್ನಿಗೂ ಇವ್ಳಿಗೂ ಮಾತುಕತೆ ಇಲ್ಲ, ಒಬ್ರನ್ನೊಬ್ರು ನೋಡಲ್ಲ, ಆದ್ರೂ ವರ್ಷಕ್ಕೊಂದು ಸಲ ಈ ಯಮ್ಮ ಆ ಯಪ್ಪನ್ನ ಒಂದರ್ಧ ಗಂಟೆ ನಿಂತು ದುರ್ಗುಟ್ಕಂಡ ನೋಡ್ಕೊಂಡೇ ಮುಂದುಕ್ಕೋಗೋದು" ಅಂದಾಗ ಅಲ್ಲಿದ್ದ ಜನರೆಲ್ಲ ಹೌದು ಹೌದೆನ್ನುವಂತೆ ತಲೆಯಾಡಿಸಿ ನಗಾಡತೊಡಗಿದರು. ಆ ಕುಡುಕ ವೆಂಕಟಸ್ವಾಮಿ ಹೇಳಿದ್ದಕ್ಕು... ಆ ಕುಡುಕನನ್ನು ಬೈದು ಬಂದ ನನ್ನ ತಂದೆ ಸ್ವತಃ ಹೇಳಿದ ಈ ಕಥೆಗೂ ಏನೋ ಸಂಬಂಧವಿದೆ ಎಂದು ನನಗಾಗಲೇ ಅನಿಸತೊಡಗಿತು.

ಅದಾಗಿ ಒಂದೇಳೆಂಟು ವರ್ಷ ಕಳೆದಿರಬಹುದು. ನಾನು ಕಾಲೇಜಿಗೆ ಹೋಗುತ್ತಿದ್ದೆ. ಒಂದು ದಿನ ಮೈಸೂರಿನ ಸಿಟಿ ಬಸ್‌ಸ್ಟ್ಯಾಂಡ್‌ನಲ್ಲಿ ಮನೆಗೆ ಹೋಗಲು ಬಸ್ಸಿಗೆ ಕಾದು ಕುಳಿತಿದ್ದಾಗ ಮೂರ್‍ನಾಲ್ಕು ಜನ ಹೆಂಗಸರು ತಮ್ಮತಮ್ಮಲ್ಲೆ ಕಷ್ಟ ಸುಖ ಮಾತಾಡಿಕೊಳ್ಳುತ್ತಿದ್ದರು. ಅವರ ಮಾತುಕತೆಗಳಿಂದ ಅವರು....' ಮಾಡುವ ಹೆಂಗಸರು ಎನ್ನುವುದು ಯಾರಿಗಾದರೂ ತಿಳಿಯುತ್ತಿತ್ತು, ಅದರಲ್ಲಿ ಒಬ್ಬಳು "ಅಯ್ಯೋ ಆ ನಸ್ ತಾಯಿ ಚಾಮುಂಡೇಶ್ವರೀನೇ ಈ ನಮ್ ಕಸುಬ್ ಮಾಡ್ತಿದ್ಲಂತೆ. ಇನ್ನು ನರಮನುಷ್ಯರು ನಮ್ದೇನು ತಗೋ" ಎಂದಾಗ ಆ ಚಾಮುಂಡಿಯ ನಿಜದ ಕಥೆಯನ್ನು ತಿಳಿಯಬೇಕೆನ್ನುವ ನನ್ನ ಕುತೂಹಲ ಇನ್ನೂ ಹೆಚ್ಚಾಯ್ತು.

ನಾನು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಕನ್ನಡ ಎಂ.ಎ. ಮಾಡುವಾಗ ವಿಚಾರವಂತ ಅಧ್ಯಾಪಕರೊಬ್ಬರು ನಮ್ಮ ದೇಶದ ಪುರಾಣಗಳ ಹಿಂದಿನ ಐತಿಹಾಸಿಕ ಸತ್ಯಗಳನ್ನು ನಮಗೆ ವಿವರಿಸಿ ಹೇಳುತ್ತಿದ್ದರು. ಒಂದು ದಿನ ನಾನು ಚಾಮುಂಡೇಶ್ವರಿಗೆ ಸಂಬಂಧಿಸಿದ ಆ ಎರಡೂ ಘಟನೆಗಳನ್ನು ಅವರಿಗೆ ವಿವರಿಸಿ ಅದರ ಸತ್ಯಾಸತ್ಯತೆ ಏನಿರಬಹುದು? ಎಂದು ಕೇಳಿದ. ಆಗ ಅವರು ಆ ಪುರಾಣಕಥೆಯ ಹಿಂದಿನ ಐತಿಹಾಸಿಕ ಘಟನೆಯನ್ನು ವಿವರಿಸಿ ಹೇಳಿದರು...

ನಾಗಾ ಜನಾಂಗಕ್ಕೆ ಸೇರಿದ ಮಹಿಷ ಎನ್ನುವ ಪಾಳೆಗಾರನು ಆಗಿನ ಮೈಸೂರು ಪ್ರಾಂತ್ಯವನ್ನು ಸತ್ಯ, ಧರ್ಮ, ನಿಷ್ಠೆಯಿಂದ ಆಳುತ್ತಿದ್ದನು. ಆಗಿನ ಮೈಸೂರು ಪ್ರಾಂತ್ಯ ದಟ್ಟ ಅರಣ್ಯಗಳಿಂದ ಕೂಡಿತ್ತು, ಆ ಕಾಲಘಟ್ಟದಲ್ಲಿ ಹೋಮ-ಹವನಗಳ ನೆಪದಲ್ಲಿ ಆರ್ಯರು ಆ ಕಾಡನ್ನು ನಾಶ ಮಾಡಲು ಪ್ರಾರಂಭಿಸಿದರು. ಪರಿಸರ ಪ್ರೇಮಿಯಾದ ಮಹಿಷನು ಆರ್ಯರ ಆ ಅವೈಜ್ಞಾನಿಕ ಮತ್ತು ಪ್ರಕೃತಿ ವಿರೋಧಿ ಆಚರಣೆಯನ್ನು ಮಾಡಕೂಡದೆಂದು ನಿರ್ಬಂಧಿಸಿದನು. ಅದನ್ನು ಸಹಿಸದ ಆರ್ಯರು ಹೇಗಾದರು ಮಾಡಿ ಮಹಿಷನನ್ನು ಮುಗಿಸಲು ತೀರ್ಮಾನಿಸಿದರು. ಬಹಳ ಪರಾಕ್ರಮಿಯೂ, ಚಾಣಾಕ್ಷನೂ ಆದ ಮಹಿಷನನ್ನು ಕೊಲ್ಲುವುದು ಅವರಿಗೆ ಅಷ್ಟು ಸುಲಭವಾದ ಕೆಲಸವಾಗಿರಲಿಲ್ಲ, ಹಾಗಾಗಿ ಮಹಿಷನ ದೌರ್ಬಲ್ಯ ಏನಿರಬಹುದೆಂದು ಹುಡುಕಲಾಗಿ ಪಾಳೆಯಗಾರನಾದ ಮಹಿಷನಿಗೆ ಸ್ವಲ್ಪ ಸ್ತ್ರೀ ವ್ಯಾಮೋಹವಿದೆ ಎನ್ನುವುದು ತಿಳಿಯಿತು. ಆಗ ಅವರೆಲ್ಲರೂ ಸೇರಿ ಇದೇ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ಅವನನ್ನು ಮುಗಿಸಲು ಸಂಚು ರೂಪಿಸಿದರು. ಅದೇ ಸಮಯದಲ್ಲಿ ಚಾಮುಂಡಿ ಎನ್ನುವ ಸುಂದರ ಶೂದ್ರ ತರುಣಿಯೊಬ್ಬಳು... ವೃತ್ತಿಯಲ್ಲಿ ತೊಡಗಿದ್ದಳು. ಅವಳಿಗೆ ಆ ಆರ್ಯರು ಇನ್ನಿಲ್ಲದ ಆಸೆ-ಆಕಾಂಕ್ಷೆಗಳನ್ನು ಒಡ್ಡಿ ಅವಳು ಮಹಿಷನನ್ನು ತನ್ನ ಮೋಹ ಪಾಶದೊಳಕ್ಕೆ ಬೀಳಿಸಿಕೊಳ್ಳಲು ವೇದಿಕೆ ಸಿದ್ಧಪಡಿಸಿದರು. ಮಹಾನ್ ಸುಂದರಿಯಾದ ಚಾಮುಂಡಿಯು ಬಹಳ ಸುಲಭವಾಗಿ ಮಹಿಷನನ್ನು ತನ್ನ ಮೋಹದ ಬಲೆಯಲ್ಲಿ ಕೆಡವಿಕೊಂಡಳು.

ಮಹಿಷ ಮತ್ತು ಚಾಮುಂಡಿ ಪ್ರತಿರಾತ್ರಿ ಒಂದು ನಿಗದಿತ ಸ್ಥಳದಲ್ಲಿ ಸೇರತೊಡಗಿದರು. ಬ್ರಾಹ್ಮಣರ ದಂಡು ಶಸ್ತ್ರಾಸ್ತ್ರಗಳ ಸಮೇತರಾಗಿ ಮಹಿಷನನ್ನು ಕೊಲ್ಲಲು ಕಾದು ಕುಳಿತಿತ್ತು, ಆದರೆ ಚಾಣಾಕ್ಷ ಮಹಿಷನು ಯಾವುದೇ ಕಾರಣಕ್ಕು ಅಷ್ಟು ಸುಲಭವಾಗಿ ಮೈಮರೆಯುವ ಆಸಾಮಿಯಾಗಿರಲಿಲ್ಲ, ಹಾಗಾಗಿ ಸತತ ಒಂಬತ್ತು ರಾತ್ರಿಗಳು ನಿದ್ದೆಗೆಟ್ಟು ಕಾದರೂ ಅವನನ್ನು ಮುಗಿಸುವ ಆಸೆ ಕೈಗೂಡಲೇ ಇಲ್ಲ.

ಹತ್ತನೆಯ ದಿನ ಚಾಮುಂಡಿಯ ಮೂಲಕವೇ ಆಹಾರದಲ್ಲಿ 'ಮತ್ತು' ಬರಿಸುವ ಸೊಪ್ಪನ್ನು ಬೆರೆಸಿ ಅದನ್ನು ಮಹಿಷನಿಗೆ ತಿನ್ನಿಸಲಾಯ್ತು, ಅವನು ಆ ಮತ್ತಿನ ಗಮ್ಮತ್ತಿನಲ್ಲಿ ಮೈ ಮರೆತಿರುವಾಗ ಮುತ್ತಿಕೊಂಡ ಬ್ರಾಹ್ಮಣರು ತಮ್ಮ ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲ ಚಾಮುಂಡಿ ಕೈಗೆ ನೀಡಿ ಅವಳಿಂದ ಅವನನ್ನು ಕೊಲ್ಲಿಸಲು ಪ್ರಚೋದಿಸಿದರು. ಆದರೆ ಭಯದಿಂದಲೋ? ಪ್ರೀತಿಯಿಂದಲೋ? ಅಥವ ಮಾನವೀಯತೆಯಿಂದಲೋ ಏನೋ ಅವಳಿಗೆ ಅವನನ್ನು ಕೊಲ್ಲಲು ಸಾಧ್ಯವಾಗಲಿಲ್ಲ, ಇನ್ನೂ ತಡ ಮಾಡಿದರೆ ಮಹಿಷನಿಗೆ 'ಮತ್ತು' ಇಳಿದುಹೋಗಬಹುದು ಎಂದು ಮನಗಂಡ ಬ್ರಾಹ್ಮಣರೇ ಮಹಿಷನನ್ನು ಕೊಚ್ಚಿ ಕೊಂದು ಹಾಕಿದರು. ಇನ್ನು ಚಾಮುಂಡಿಯನ್ನು ಹಾಗೇ ಬಿಟ್ಟರೆ ಒಂದಲ್ಲ ಒಂದು ದಿನ ಸತ್ಯ ಬಯಲಾಗಬಹುದು ಎಂಬ ಭಯದಿಂದ ಅವಳನ್ನೂ ಸಹ ಕೊಂದು ಬಿಟ್ಟರು ಆ ನಿಜ ರಾಕ್ಷಸರು. ಆನಂತರ 'ಚಾಮುಂಡೇಶ್ವರಿ' ಎನ್ನುವ ದೇವತೆ ಜನ್ಮವೆತ್ತಿದ್ದೇ ಮಹಿಷಾಸುರನೆಂಬ ರಾಕ್ಷಸನ ಸಂಹಾರಕ್ಕಾಗಿ. ಅವಳ ಕಾರ್ಯಸಿದ್ಧಿಯಾದ ಮೇಲೆ ಅವಳ ಜನ್ಮ ಸಮಾಪ್ತಿಯಾಯಿತು ಎಂದು ಕಥೆ ಹಬ್ಬಿಸಿ ಆ ಚಾಮುಂಡಿಗೆ ಒಂದು ದೇವಸ್ಥಾನ ಕಟ್ಟಿಸಿ ತಮ್ಮ ಸ್ವಾರ್ಥ ಸಾಧಿಸಿಕೊಂಡರು ಆ ವಂಚಕ ಮಹಾಶಯರು. ಆದರೆ ಚಾಮುಂಡಿಯ ಅಸಲಿಯತ್ತು ಗೊತ್ತಿದ್ದ ಜನ ಸಾಮಾನ್ಯರು ಬ್ರಾಹ್ಮಣರು ಹೇಳಿದ ಕಥೆಯನ್ನು ನಂಬಲಿಲ್ಲ, ಅವರಿಗೆ ಓದುಬರಹ ಗೊತ್ತಿಲ್ಲದ ಕಾರಣ ಚಾಮುಂಡಿಯ ನಿಜದ ಕಥೆಯನ್ನು ಬಾಯಿಂದ ಬಾಯಿಗೆ ದಾಟಿಸುತ್ತಾ ಬಂದರು. ಆ ಕಥೆ ಈಗಲೂ ಜನಸಾಮಾನ್ಯರ ಬಾಯಲ್ಲಿ ಹರಿದಾಡುತ್ತಲೇ ಇದೆ.

ಮಹಿಷನ ಉದಾತ್ತ ಗುಣಗಳನ್ನು ಬಲ್ಲಂತಹ ಒಂದು ಜನಸಮೂಹ ಆಗಿನಿಂದಲೂ ಅವನನ್ನು ಆರಾಧಿಸುತ್ತಲೇ ಬಂದಿದ್ದಾರೆ. ಅದೂ ಈಗಲೂ ಮುಂದುವರಿದಿದೆ. ಇಷ್ಟು ಶತಮಾನಗಳು ಕಳೆದರೂ 'ಮೈಸೂರು' ಎನ್ನುವ ಹೆಸರನ್ನು ಹಾಗೇ ಉಳಿಸಿಕೊಂಡಿರುವುದೇ ಇದಕ್ಕೆ ಸಾಕ್ಷಿ.

■ ಪ್ರಕಾಶ್‌ರಾಜ್ ಮೇಹು, ಮೈಸೂರು



ಹುಣಸೂರು ಜೋಡಿ ಕೊಲೆ ಅವ್ವಾ ಮಾದೇಶ ಅಂದರ್!



ಕೊಲೆಯಾದ ರಾಜೇಶ್-ರಾಮು



ಬಂಧನಕ್ಕೊಳಗಾದ ಅವ್ವ ಮಾದೇಶ

ಪಾಪದ ಕಸುಬುಗಳಿಗೆ ಆಯಸ್ಸು ತುಂಬಾ ಕಮ್ಮಿ ಅನ್ನೋದು ಮತ್ತೆ ಸಾಬೀತಾಗಿದೆ. ಕಂಡವರ ಸೈಟುಗಳಿಗೆ ಕೈಯಿಕ್ಕಿ, ಅಮಾಯಕರ ಹೆಣ ಹಾಕಿದ್ದ ಮೈಸೂರು ನಗರಪಾಲಿಕೆ 32ನೇ ವಾರ್ಡ್ ಜೆಡಿಎಸ್ ಕಾರ್ಪೊರೇಟರ್ ಸಿ. ಮಾದೇಶ್ ಅಲಿಯಾಸ್ ಅವ್ವಾ ಮಾದೇಶ್ ಹಾಗೂ ಆತನ ಸಹೋದರ ಮಂಜುನಾಥ್ ಸೇರಿದಂತೆ ಏಳು ಮಂದಿಗೆ ಹುಣಸೂರಿನ ಜೋಡಿ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ನಿಕ್ಕಿಯಾಗಿದೆ. 2ನೇ ಹೆಚ್ಚುವರಿ ನ್ಯಾಯಾಲಯದ ನ್ಯಾಯಾಧೀಶರಾದ ವಿಜಯಕುಮಾರ್ ಎಂ.ಆನಂದಶೆಟ್ಟಿಯವರ ತೀರ್ಪು ಮೈಸೂರಿನ ಮಂದಿಗೆ ನೆಮ್ಮದಿಯನ್ನು ತಂದಿರಲಿಕ್ಕೂ ಸಾಕು!

ಇಲ್ಲಿಗೆ ಬರೋಬ್ಬರಿ ಎಂಟು ವರ್ಷಗಳ ಹಿಂದೆ ಹುಣಸೂರಿನ ತೋಟದ ಮನೆಯೊಂದಕ್ಕೆ ನುಗ್ಗಿ ಮಲಗಿದ್ದ ರಾಜೇಶ್, ರಾಮು ಎಂಬ ಅಂದಕಾಲತ್ತಿಲ್ ದೋಸ್ತಿಗಳನ್ನೇ ಕೊಚ್ಚಿ ಹಾಕಿದ್ದ ಕೇಸಿನಲ್ಲಿ ಅವ್ವಾ ಮಾದೇಶನಿಗೆ ಜೀವಾವಧಿ ಶಿಕ್ಷೆಯಾಗಿದೆ. ಹಾಗಂತ ಅವನ ಉಪಟಳ ಸಂಪೂರ್ಣ ಸದ್ದಡಗಿ ಹೋಗಿಬಿಡುತ್ತೆ ಅಂತ ಭ್ರಮಿಸಬೇಕಿಲ್ಲ. ಹೈಕೋರ್ಟ್‌ನಲ್ಲಿ, ಆಗಲಿಲ್ಲವೆಂದರೆ ಸುಪ್ರೀಂ ಕೋರ್ಟ್‌ನಲ್ಲಿ ಜಾಮೀನು ಪಡೆಯಲು ಅದಾಗಲೇ ಕಸರತ್ತುಗಳು ಶುರುವಾಗಿವೆ. ಅವ್ವಾ ಮಾದೇಶ ಮತ್ತು ಅವನ ಬೆನ್ನಿಗಿರುವ ರಾಜಕಾರಣಿಗಳಿಗೆ ಅದು ಕಷ್ಟದ ಕೆಲಸವೇನೂ ಅಲ್ಲ. ಅಷ್ಟಕ್ಕೂ ಮೈಸೂರಿನ ಹೆಚ್ಚುವರಿ ನ್ಯಾಯಾಧೀಶರಾದ ವಿಜಯ್‌ಕುಮಾರ್ ಆನಂದ್‌ಶೆಟ್ಟಿಯವರು ಅವ್ವಾ ಮಾದೇಶನಿಗೆ ಶಿಕ್ಷೆ ವಿಧಿಸಿರೋದೆ ಸಾಂದರ್ಭಿಕ ಸಾಕ್ಷಿಗಳ ಆಧಾರದಲ್ಲಿ, ಹಾಗಾಗಿ ಬೇಲ್ ಸಿಗಲು ಹೆಚ್ಚೇನು ಶ್ರಮ ಪಡಬೇಕಿಲ್ಲ; ನಿರಪರಾಧಿ ಅಂತ ಸಾಬೀತಾಗಿ ಖುಲಾಸೆಗೊಂಡರೂ ಅಚ್ಚರಿಪಡಬೇಕಿಲ್ಲ!

ಅವ್ವಾ ಮಾದೇಶ ಪಕ್ಕಾ ರೌಡಿ ಎಲಿಮೆಂಟು. ಮಾದೇಶನಂತಹ ರೌಡಿಗಳ ಉಪಟಳ ಒಂದು ಕಾಲಕ್ಕೆ ಮೈಸೂರಿನಲ್ಲಿ ಹದ್ದುಮೀರಿ ಹೋಗಿತ್ತು. ಆದರೆ ಯಾವಾಗ ಕಸ್ತೂರಿ ರಂಗನ್ ಮೈಸೂರಿನ ಪೊಲೀಸ್ ಕಮೀಷನರ್ ಆಗಿ ಕಾಲಿಟ್ಟರೋ ಆಗ ರೌಡಿಗಳಿಗೆಲ್ಲಾ ಸಂಕಟ ಶುರುವಾಗಿತ್ತು. ಭೂಗತ ಚಟುವಟಿಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ರೌಡಿ ನಿಗ್ರಹ ದಳ ರಚಿಸಿ ಮೈಸೂರಿನ ಬಹುತೇಕ ರೌಡಿ ಪಡೆಯನ್ನೆಲ್ಲಾ ಮಟ್ಟ ಹಾಕಿದ್ದರು. ಅವರೆಲ್ಲರಿಗೂ ರೌಡಿಸಂ ದಂಧೆ ಬಿಟ್ಟು ಬೇರೆ ದಾರಿ ನೋಡಿಕೊಳ್ಳುವಂತೆ ಭಯ ಹುಟ್ಟಿಸಿದ್ದರು. ಬಹುತೇಕರು ರೌಡಿಸಂ ಬಿಟ್ಟು ಇತರೆ ವ್ಯವಹಾರಗಳಲ್ಲಿ ತೊಡಗಿದರೆ ಅವ್ವಾ ಮಾದೇಶ ಮಾತ್ರ ರಿಯಲ್ ಎಸ್ಟೇಟ್ ಮಾಫಿಯಾ, ರಾಜಕೀಯ ಪುಢಾರಿಗಳ ಆಶೀರ್ವಾದ, ಹಣಬಲ, ತೋಳ್ಬಲವುಳ್ಳ ರೌಡಿ ಏನು ಮಾಡಬೇಕಾದುದ್ದೆಲ್ಲವನ್ನೂ ಮಾಡುತ್ತಿದ್ದ. ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡರೇ ಇವನ ಗಾಡ್‌ಫಾದರ್!

ಜೋಡಿ ಕೊಲೆ

ಸಣ್ಣಪುಟ್ಟ ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ ಕೈಯಿಕ್ಕಿ, ಬೆದರಿಸಿ ಸುಲಿದು ತಿನ್ನುತ್ತಿದ್ದ ಅವ್ವಾ ಮಾದೇಶ ಅದ್ಯಾವ ಘಳಿಗೆಯಲ್ಲಿ ಇಣಕಲ್ ಸರ್ಕಲ್ ಬಳಿ ಇರುವ ಹತ್ತಾರು ಎಕರೆ ಜಮೀನಿಗೆ ಕಣ್ಣಿಟ್ಟನೋ, ಅದೇ ಇವತ್ತು ಅವನನ್ನು ಜೈಲಿಗೆ ತಳ್ಳಿದೆ. ಈ ಜಮೀನಿನ ಮೂಲ ಮಾಲೀಕ 15ಕ್ಕೂ ಹೆಚ್ಚು ಜನರಿಗೆ ಸೇಲ್ ಅಗ್ರಿಮೆಂಟ್ ಮಾಡಿ ಮಾರಾಟ ಮಾಡಿದ್ದ. ಅದನ್ನು ಲಪಟಾಯಿಸುವ ಪ್ಲಾನ್ ಮಾಡಿದ ಅವ್ವಾ ಮಾದೇಶ, ತನ್ನ ರೌಡಿ ಕಮ್ ಪುಡೀರಿ ದೋಸ್ತಿಗಳಾದ ರಾಜೇಶ್, ರಾಮುವಿನ ಜೊತೆ ಸೇರಿಕೊಂಡು ಮೂಲ ಮಾಲೀಕನ ಮಗನಿಂದ ಸಹಿ ಮಾಡಿಸಿಕೊಂಡು ಅದೇ ಜಮೀನನ್ನು ಬೆಂಗಳೂರಿನ ರಿಯಲ್ ಎಸ್ಟೇಟ್ ಆಸಾಮಿಯೊಬ್ಬರಿಗೆ ಮಾರಾಟ ಮಾಡಿದ್ದ.

ಅದಾಗಲೇ ಆ ಜಾಗದಲ್ಲಿ ಮನೆ ಕಟ್ಟಿಕೊಂಡೊ, ಸಣ್ಣಪುಟ್ಟ ಕಾರ್ಖಾನೆಯನ್ನು ನಿರ್ಮಿಸಿಕೊಂಡೊ ಬದುಕು ನಡೆಸುತ್ತಿದ್ದವರ ಮೇಲೆ ದಾಳಿ ಮಾಡಿದ ಅವ್ವಾ ಮಾದೇಶ ಮತ್ತವನ ಹುಂಡ ಬೆಟಾಲಿಯನ್ ಮಾಲೀಕರ ಮಗನ ಸೇಲ್ ಡೀಡ್ ತೋರಿಸಿ ಬೆದರಿಕೆ ಹಾಕಿದ್ದರು. ಅದೊಂದು ದಿನ ಬುಲ್ಡೋಜರ್ ಸಮೇತ ಅಲ್ಲಿದ್ದ ಮನೆಗಳನ್ನೆಲ್ಲ ನೆಲಸಮ ಮಾಡಿ ಬೆಂಗಳೂರಿನ ಭೂಮಾಫಿಯಾಗೆ ಒಪ್ಪಿಸಿದ್ದರು.

ಈ ಡೀಲ್‌ನಿಂದ ಅವ್ವಾ ಮಾದೇಶನಿಗೆ ಕೋಟಿಗಟ್ಟಲೆ ಹಣ ಸಿಕ್ಕಿತ್ತು. ಮೊದಲೇ ಆಗಿದ್ದ ಮಾತುಕತೆಯಂತೆ ಬಂದ ಹಣದಲ್ಲಿ ರಾಜೇಶ್ ಮತ್ತು ರಾಮುವಿಗೂ ಒಂದು ಪಾಲು ಕೊಡಬೇಕಿತ್ತು. ಕಾಸು ನೋಡಿದ್ದೇ ತಡ ಅವ್ವಾ ಮಾದೇಶ ಕೊಟ್ಟ ಮಾತನ್ನೇ ಮರೆತ. ಅವರಿಬ್ಬರಿಗೂ ಉಂಡೆನಾಮ ತಿಕ್ಕಿ ಬರಿಗೈಲಿ ಕಳಿಸಿದ.

ಅಪ್ಪುದಿನ ದೋಸ್ತ್‌ಗಳಾಗಿದ್ದ ರಾಜೇಶ್ ಮತ್ತು ರಾಮು ಅವ್ವಾ ಮಾದೇಶನ ಮೇಲೆ ಕತ್ತಿ ಮಸೆಯಲು ಕಾರಣವಾಗಿದ್ದೇ ಈ ಡೀಲ್. ಹೇಳಿಕೇಳಿ ಅವರಿಬ್ಬರೂ ರೌಡಿ ಪಂಟರೇ! ಜೊತೆಗಿದ್ದವನೇ ಬೆನ್ನಿಗೆ ಚೂರಿ ಹಾಕಿದರೆ ಸುಮ್ಮನಿರುತ್ತಾರಾ?

2008ರ ಅದೊಂದು ದಿನ ರಾಜೇಶ್, ರಾಮು ತಮ್ಮ 20 ಮಂದಿಯ ಪಟಾಲಮ್ಮಿನ ಸಮೇತ ಅವ್ವಾ ಮಾದೇಶನ ಮೇಲೆ ಮುರಕೊಂಡು ಬಿದ್ದು ಮಾರಣಾಂತಿಕ ಹಲ್ಲೆ ಮಾಡಿದ್ದರು. ಆ ಹಲ್ಲೆಯಲ್ಲಿ ಅವ್ವಾ ಮಾದೇಶ ಖಲಾಸ್ ಆದನೆಂದೇ ಅವರೆಲ್ಲಾ ಭಾವಿಸಿದ್ದರು. ಆದರೆ ಅದೃಷ್ಟವಶಾತ್ ಮಾದೇಶ ಬಚಾವಾಗಿದ್ದ. ಈ ಘಟನೆಯಾದ ನಂತರ ಪ್ರತೀಕಾರದ ಸಲುವಾಗಿ ಎಲ್ಲಿ ತಮ್ಮ ಮೇಲೆ ಮಾದೇಶ ಹಲ್ಲೆ ಮಾಡಿಸುತ್ತಾನೊ ಅಂತ ರಾಜೇಶ್, ರಾಮುವಿಗೆ ಭಯ ಶುರುವಾಗಿದ್ದರೆ; ಜೀವ ಉಳಿಸಿಕೊಂಡಿದ್ದ ಮಾದೇಶನಿಗೂ ಮತ್ತೆಲ್ಲಿ ತನ್ನ ಮೇಲೆ ಹಲ್ಲೆ ಮಾಡಿ ಸಾಯಿಸುತ್ತಾರೊ ಅನ್ನೋ ಭೀತಿ ಕಾಡಲಾರಂಭಿಸಿತ್ತು.

ಹಾಗಾಗಿ ಅವ್ವಾ ಮಾದೇಶ ತನ್ನ ಪಟಾಲಂ ಸಮೇತ ಪಾಲಹಳ್ಳಿಯ ಮನೆಯೊಂದರಲ್ಲಿ ಅವಿತಿಟ್ಟುಕೊಂಡಿದ್ದರೆ, ರಾಜೇಶ್-ರಾಮು ತಂಡ ಹುಣಸೂರಿನ ಹೊರವಲಯದಲ್ಲಿರುವ ತೋಟದ ಮನೆಯಲ್ಲಿ ತಲೆ ಮರೆಸಿಕೊಂಡಿದ್ದರು. ಆದರೆ ಅದೆಷ್ಟು ತಾನೇ ಹೀಗೆ ಬಿಲ ಸೇರಿ ಬದುಕಲು ಸಾಧ್ಯ? ಈ ಪ್ರಶ್ನೆ ಮೊದಲು ಕಾಡಿದ್ದು ಅವ್ವಾ ಮಾದೇಶನನ್ನು. ಅಷ್ಟರಲ್ಲಾಗಲೆ ರಾಜಕಾರಣಿಗಳ ಒಡನಾಟ, ರಿಯಲ್ ಎಸ್ಟೇಟ್ ಕಸುಬುಗಳಿಂದ ಕೈಸೇರಿದ್ದ ಕೋಟಿಕೋಟಿ ಹಣ ಅವ್ವಾ ಮಾದೇಶನನ್ನು ಎದುರಾಳಿಗಳಿಗಿಂತ ಬಲಾಢ್ಯನನ್ನಾಗಿಸಿದ್ದವು. ಆತ ತಡ ಮಾಡಲೇ ಇಲ್ಲ; ತನ್ನ ಮೇಲೆ ಹಲ್ಲೆ ಮಾಡಿದ್ದ ರಾಜೇಶ್-ರಾಮುರಿಗೆ 'ಇತಿಶ್ರೀ ಹಾಡಲು' ನಿರ್ಧರಿಸಿಬಿಟ್ಟಿದ್ದ.

ಅವರಿಬ್ಬರೂ ಎಲ್ಲಿದ್ದಾರೆನ್ನುವ ಮಾಹಿತಿ ಅವ್ವಾ ಮಾದೇಶನ ಕಡೆಯವರಿಗೆ ತಿಳಿದಿರಲಿಲ್ಲ. ಜೀವ ಭಯದಿಂದ ರಾಜೇಶ್-ರಾಮು ಪಟಾಲಮ್ಮು ತೋಟದ ಮನೆಬಿಟ್ಟು ಹೊರಬರುತ್ತಲೇ ಇರಲಿಲ್ಲ. ಹಾಗಂತ ಅವ್ವಾ ಮಾದೇಶ ತೆಪ್ಪಗಾಗಲಿಲ್ಲ. ತನ್ನ ಹುಡುಗರನ್ನು ಜಾಸೂಸಿ ಕೆಲಸಕ್ಕಿಳಿಸಿದ.

ಅದೊಮ್ಮೆ ತೋಟದ ಮನೆಯಲ್ಲಿ ರಾಮುವಿನ ಜೊತೆಗಿದ್ದ ಶಿವು ಮತ್ತು ನಿಶ್ಚಿತ್ ಎಂಬಿಬ್ಬ ಹುಡುಗರು ಏನೋ ಖರೀದಿಸಲೆಂದು ಮೈಸೂರಿಗೆ ಬಂದಿದ್ದರು. ವಿಷಯ ತಿಳಿದ ಅವ್ವಾ ಮಾದೇಶ ಅವರನ್ನು ಕಿಡ್ನಾಪ್ ಮಾಡಿ ರಾಜೇಶ್-ರಾಮು ಅವಿತಿಟ್ಟುಕೊಂಡಿದ್ದ ಜಾಗವನ್ನು ಪತ್ತೆಹಚ್ಚಿದ್ದ. ಡಿಲೇ ಮಾಡಿದರೆ ಅಲ್ಲಿಂದಲೂ ಕದಲಿಬಿಡುತ್ತಾರೆನ್ನುವುದು ಮಾದೇಶನಿಗೆ ಚೆನ್ನಾಗಿ ಗೊತ್ತಿತ್ತು. 2008ರ ಮೇ 15ರ ಮಧ್ಯರಾತ್ರಿ ಮಾದೇಶನ ಟೀಮು ತೋಟದ ಕಾವಲುಗಾರನ ಮೇಲೆ ಹಲ್ಲೆ ನಡೆಸಿ, ಹೆಂಚುಗಳನ್ನು ತೆಗೆದು ಮನೆಯೊಳಗೆ ಇಳಿದು ಮಲಗಿದ್ದ ರಾಜೇಶ್, ರಾಮುವನ್ನು ಭೀಕರವಾಗಿ ಕತ್ತರಿಸಿ ಕೊಂದಿತ್ತು. ಮನೆಯಲ್ಲಿದ್ದ ಉಳಿದವರಿಗೂ ಮಚ್ಚು-ಲಾಂಗುಗಳ ರುಚಿ ತಟ್ಟಿತ್ತು. ಆದರೆ ಅವರೆಲ್ಲಾ ಪ್ರಾಣ ಉಳಿಸಿಕೊಂಡು ಅಲ್ಲಿಂದ ಪರಾರಿಯಾಗಿದ್ದರು. ಆ ಒಂಟಿ ಮನೆಯಲ್ಲಿ ಜೋಡಿ ಹೆಣಗಳು ಬಿದ್ದಿದ್ದವು; ಅವ್ವಾ ಮಾದೇಶನ ಪ್ರತೀಕಾರ ಕೇಕೆ ಹಾಕಿ ನಕ್ಕಿತ್ತು!

ಪ್ರಕರಣ ದಾಖಲಿಸಿಕೊಂಡಿದ್ದ ಹುಣಸೂರಿನ ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಸುಂದರ್‌ರಾಜ್ ಮತ್ತು ಮುತ್ತುರಾಜ್ ಕರಾರುವಾಕ್ಕಾಗಿ ತನಿಖೆ ನಡೆಸಿ 72 ಸಾಕ್ಷಿಗಳನ್ನು ನಮೂದಿಸಿ ಅವ್ವಾ ಮಾದೇಶನನ್ನು ರಾಮನಗರದ ಜೈಲಿಗಟ್ಟಿದ್ದರು. ಆಗಲೇ ಅವ್ವಾ ಮಾದೇಶನಿಗೆ ಬೆಂಗಳೂರಿನ ಕುಖ್ಯಾತ ರೌಡಿ ಸುನೀಲನೂ ಸೇರಿದಂತೆ ಪಾತಕಲೋಕದ ಸಕಲರ ಪರಿಚಯವಾದದ್ದು. ಜೈಲು ಸೇರಿದ 8 ತಿಂಗಳಿಗೆ ಜಾಮೀನು ಪಡೆದು ಹೊರಬರುವ ವೇಳೆಗಾಗಲೇ ಅವ್ವಾ ಮಾದೇಶ ಮತ್ತಷ್ಟು ನಟೋರಿಯಸ್ ಲಿಂಕ್‌ಗಳನ್ನು ಜೊತೆಗಾಕಿಕೊಂಡು ಬಂದಿದ್ದ.

ಆಮೇಲೆ ಬೆಂಗಳೂರಿನಲ್ಲಿ ಪಾತಕವೆಸಗುತ್ತಿದ್ದ ಭೂಗತ ಕ್ರಿಮಿಗಳಿಗೆ ಅವ್ವಾ ಮಾದೇಶನೇ ಮೈಸೂರಿನಲ್ಲಿ ಆಶ್ರಯ-ಅನ್ನದಾತನಾದ. ಅವ್ವಾ ಮಾದೇಶನಿಂದಾಗಿ ಸಿಲಿಕಾನ್ ಸಿಟಿಯ ರೌಡಿಗಳು ಮೈಸೂರಿನಲ್ಲೂ ದಾಂಧಲೆ ನಡೆಸಲು ಶುರುಮಾಡಿದರು. ಇದು ಪೊಲೀಸರಿಗೆ ಗೊತ್ತಾದರೂ ಹಣ ಮತ್ತು ಪೊಲಿಟಿಕ್ಸ್ ಅವರನ್ನು ತೆಪ್ಪಗಾಗಿಸಿದ್ದವು.

ಕೈಕೊಟ್ಟ ಮಾದೇಶನ ಲೆಕ್ಕಾಚಾರ

ರಾಜಕೀಯ ಬಲ, ಹಣಬಲ, ತೋಳ್ಬಲಗಳಿಂದ ಸಾಕ್ಷಿದಾರರನ್ನು ಒಲೈಸಿ, ಬೆದರಿಸಿ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದೆಂಬ ಕೊಲೆಪಾತಕರ ಲೆಕ್ಕಾಚಾರ ಇಲ್ಲಿ ಕೈಕೊಟ್ಟಿದೆ. ಒಟ್ಟು 72 ಸಾಕ್ಷಿಗಳ ಪೈಕಿ ಮೃತ ರಾಮುವಿನ ಸಹೋದರ ಲೋಕೇಶ್ ಒಬ್ಬನನ್ನು ಬಿಟ್ಟು 54 ಸಾಕ್ಷಿಗಳು ಉಲ್ಟಾ ಹೊಡೆದು ಅಂತಿಮವಾಗಿ ಅಪರಾಧಿಗಳ ಪರವಾಗಿಯೇ ಸಾಕ್ಷ್ಯ ನುಡಿದಿದ್ದರು. ಅವತ್ತು ರಾಮು-ರಾಜೇಶ್ ಜೊತೆಗಿದ್ದ ಅವ್ವಾ ಮಾದೇಶನ ಟೀಮಿನಿಂದ ಹಲ್ಲೆಗೊಳಗಾಗಿದ್ದ ಸುನಿಲ್ ಕೂಡ ಕೊನೆಗೆ ಉಲ್ಟಾ ಹೊಡೆದಿದ್ದ. ಆದರೆ ತನಿಖಾಧಿಕಾರಿಗಳ ಪ್ರಾಮಾಣಿಕತೆ ಹಾಗೂ ಸರ್ಕಾರಿ ಅಭಿಯೋಜಕರ ಖಡಕ್ ವಾದ ಅಪರಾಧಿಗಳನ್ನು ಜೈಲಿಗೆ ಕಳಿಸಿದೆ.

ಈ ಹಿಂದೆ ಪ್ರಕರಣದ ವಿಚಾರಣೆ ನಡೆಸುತ್ತಿದ್ದ ನ್ಯಾಯಾಧೀಶರಾದ ಸುಧಾ ಅವರು ಅಂದಿನ ಸರ್ಕಾರಿ ಅಭಿಯೋಜಕರು ಆರೋಪಿಗಳ ಪರವಾಗಿ ವರ್ತಿಸುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಪ್ರಕರಣವನ್ನು ಬೇರೆ ನ್ಯಾಯಾಲಯಕ್ಕೆ ವರ್ಗಾಯಿಸುವಂತೆ ಪ್ರಧಾನ ಜಿಲ್ಲಾ ಸೆಷನ್ಸ್ ನ್ಯಾಯಾಲಯಕ್ಕೆ ಪತ್ರ ಬರೆದಿದ್ದರು. ಆ ಕೋರಿಕೆ ಮೇರೆಗೆ ಅಂದಿನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾಗಿದ್ದ ಸಂದೇಶ್‌ರವರು 2ನೇ ಜಿಲ್ಲಾ ನ್ಯಾಯಾಲಯಕ್ಕೆ ಪ್ರಕರಣವನ್ನು ವಿಚಾರಣೆಗೆ ವರ್ಗಾಯಿಸಿದ್ದರು. ಜತೆಗೆ ಸರ್ಕಾರಿ ಅಭಿಯೋಜಕರನ್ನು ಬದಲಾಯಿಸಿ ನೇಮಕ ಮಾಡಿದ್ದರು.

ಹತ್ಯೆ ನಡೆದ ತೋಟದ ಮನೆಯಲ್ಲಿ ಹತ್ಯೆಗೆ ಬಳಸಿದ್ದ ಡ್ಯಾಗರ್‌ವೊಂದನ್ನು ವಶಪಡಿಸಿಕೊಳ್ಳಲಾಗಿತ್ತು. ಆ ಚಾಕುವಿಗೆ ಅಂಟಿದ್ದ ಕೂದಲನ್ನೂ ಹಾಗೂ ಆರೋಪ ಹೊತ್ತವರ ಕೂದಲನ್ನು ಫೋರೆನ್ಸಿಕ್ ಲ್ಯಾಬ್‌ಗೆ ಕಳಿಸಲಾಗಿತ್ತು. ಅದು ಪ್ರಕರಣದ 3ನೇ ಆರೋಪಿಯಾದ ಚಂದ್ರ ಎಂಬಾತನದು ಎಂದು ಲ್ಯಾಬ್‌ನಿಂದ ದೃಢಪಟ್ಟಿತ್ತು.

ಅಂದಹಾಗೆ, ಈ ಮೊದಲು ರಾಜೇಶ್ ಮತ್ತು ರಾಮು ತನ್ನ ಮೇಲೆ ಹಲ್ಲೆ ಮಾಡಿದ್ದಾಗ ಅವ್ವಾ ಮಾದೇಶ ಆ ಕುರಿತು ದೂರನ್ನೇ ನೀಡಿರಲಿಲ್ಲ. ಪೊಲೀಸ್ ಕೇಸು ಕೊಟ್ಟರೆ ತನ್ನ ಅಕ್ರಮವೆಲ್ಲ ಹೊರಬರುತ್ತೆ ಅಂತಲೋ ಅಥವಾ ಜೈಲು ಸೇರಿಸಿ ಅವರನ್ನು ಸೇಫ್ ಮಾಡುವುದಕ್ಕಿಂತ ಹೊರಗೆಬಿಟ್ಟುಕೊಂಡೇ ಖಲಾಸ್ ಮಾಡಿಬಿಡೋಣ ಅನ್ನೊ ಲೆಕ್ಕಾಚಾರದಲ್ಲೋ ಆತ ಕಂಪ್ಲೆಂಟ್ ಕೊಡುವ ಉಸಾಬರಿಗೇ ಹೋಗಿರಲಿಲ್ಲ. ಅದನ್ನೇ ನೆಪ ಮಾಡಿಕೊಂಡು 'ಅವರಿಬ್ಬರೂ ನನ್ನ ಸ್ನೇಹಿತರು, ನನ್ನ ಅವರ ನಡುವೆ ಯಾವ ವೈಷಮ್ಯವೂ ಇಲ್ಲ; ಅವರು ನನ್ನ ಮೇಲೆ ಹಲ್ಲೆ ನಡೆಸಿದ್ದರು ಎನ್ನುವ ಪೊಲೀಸರ ವಾದವೇ ಸುಳ್ಳು. ಹಾಗಿದ್ದರೆ ನಾನು ಪೊಲೀಸ್ ಕಂಪ್ಲೆಂಟ್ ಕೊಟ್ಟಿರಬೇಕಿತ್ತಲ್ಲವೇ?" ಅಂತ ತನ್ನ ವಕೀಲರ ಮೂಲಕ ಅವ್ವಾ ಮಾದೇಶ ವಾದ ಮಾಡಿಸಿದ್ದ. ಮಾದೇಶನ ಮೇಲೆ ಹಲ್ಲೆ ನಡೆದಾಗ ಆತ ಕಂಪ್ಲೇಂಟ್ ಕೊಟ್ಟಿರಲಿಲ್ಲವಾದರೂ ವಿ.ವಿ.ಪುರಂ ಪೊಲೀಸರು ತಮಗೆ ದೊರೆತ ಗುಪ್ತ ವರದಿ ಆಧಾರದ ಮೇಲೆ ಪೊಲೀಸ್ ಠಾಣೆ ದಿನಚರಿಯಲ್ಲಿ ಅದನ್ನು ದಾಖಲಿಸಿದ್ದರು. ಅಂದು ಮೈಸೂರಿನ ಡಿಸಿಪಿಯಾಗಿದ್ದ ಡಿಸೋಜಾ ಅವರು ಯಾವುದೋ ಕಾರ್ಯನಿಮಿತ್ತ ಆ ಠಾಣೆಗೆ ಭೇಟಿ ನೀಡಿದಾಗ ಈ ವಿಷಯ ಅವರ ಗಮನಕ್ಕೆ ಬಂತು. ಮತ್ತೆ ಅದರ ಬಗ್ಗೆ ತೀವ್ರತರ ತನಿಖೆ ನಡೆಸಿದಾಗ ರಾಜೇಶ್ ಮತ್ತು ರಾಮುವನ್ನು ಹತ್ಯೆ ಮಾಡಲು ಅವ್ವಾ ಮಾದೇಶ ಬೆಂಗಳೂರಿನಿಂದ ಕೆಲವು ಸುಪಾರಿ ಕಿಲ್ಲರ್ಸ್‌ರನ್ನು ಕರೆಸಿದ್ದ ಎಂಬ ವಿಷಯವೂ ನಮೂದಾಗಿತ್ತು. ಇದರಿಂದ ಎಚ್ಚೆತ್ತ ಡಿಸಿಪಿ ಡಿಸೋಜಾ ಅವ್ವಾ ಮಾದೇಶನನ್ನು ಠಾಣೆಗೆ ಕರೆಸಿ ಅನಾಹುತಕ್ಕೆ ಕೈ ಹಾಕದಂತೆ ಎಚ್ಚರಿಕೆ ನೀಡಿ ಕಳಿಸಿದ್ದರು. ಆದಾದ ಮೇಲೆಯೇ ಆತ ರಾಜೇಶ್-ರಾಮುವನ್ನು ಹತ್ಯೆ ಮಾಡಿದ್ದು.

ಯಾವಾಗ ಮಾದೇಶ ತನ್ನ ಮೇಲೆ ಹಲ್ಲೆಯಾದಾಗ ಕಂಪ್ಲೇಂಟ್ ನೀಡದ್ದನ್ನೇ ನೆಪ ಮಾಡಿಕೊಂಡು ನುಣುಚಿಕೊಳ್ಳಲು ಯತ್ನಿಸಿದನೋ ಆಗ ಖುದ್ದು ಡಿಸಿಪಿ ಡಿಸೋಜಾರೇ ನ್ಯಾಯಾಲಯದ ಮುಂದೆ ಈ ಹಿಂದೆ ನಡೆದಿದ್ದ ಘಟನೆ, ತಾನು ಅವ್ವಾ ಮಾದೇಶನಿಗೆ ಎಚ್ಚರಿಕೆ ನೀಡಿದ್ದು, ಪೊಲೀಸ್ ದಿನಚರಿಯಲ್ಲಿ ಹಲ್ಲೆ ಕುರಿತು ದಾಖಲಾದದ್ದು ಎಲ್ಲವನ್ನೂ ಸಾಕ್ಷಿ ಸಮೇತ ಹೇಳಿಕೆ ನೀಡಿದ್ದರು. ಅಲ್ಲದೆ ಕೊಲೆಗೆ ಸಂಚು ರೂಪಿಸಲಾಗಿತ್ತು ಎಂಬುದಕ್ಕೆ ಸಾಂದರ್ಭಿಕ ಸಾಕ್ಷ್ಯ ಒದಗಿಸಿದ್ದರು. ಕೊನೆಗೂ





ಅಭಿಯೋಜಕ ಎಚ್.ವಿ.ಆನಂದ್‌ಕುಮಾರ್ ಅವರ ...ವಾದ ಹಾಗೂ ಪೊಲೀಸರ ಕರ್ತವ್ಯ ನಿಷ್ಠೆಯಿಂದಾಗಿ ... ಕಂಬಿ ಎಣಿಸುವಂತಾಗಿದೆ.

...ದೇಶನ ಪೊಲಿಟಿಕಲ್ ಕಸರತ್ತು

... ನಡುವೆ ಷಡುವಾರಳ್ಳಿಯ ದೇವಸ್ಥಾನದ ...ೊಂದರ ವಿಚಾರದಲ್ಲಿ ಹುಣಸೂರಿನ ಜೋಡಿ ...ಳಿಲ್ಲಿ ಅಳಿದುಳಿದ ರಾಜೇಶ್-ರಾಮುವಿನ ...ದ ದೇವು ಮತ್ತಿತರ ಗುಂಪು ಅಪ್ಪಾ ಮಾದೇಶನ ... ರಿಯಲ್ ಎಸ್ಟೇಟ್ ಉದ್ಯಮಿ ಕರಿಯಪ್ಪನ ...ೀ ನುಗ್ಗಿ ಆತನನ್ನು ಹತ್ಯೆ ಮಾಡಿದ್ದರು. ಆ ಪ್ರಕರಣದ ...ಗಳೆಲ್ಲ ಸದ್ಯಕ್ಕೆ ಜೈಲಿನಲ್ಲಿದ್ದಾರೆ. ಅವರ ಮುಂದಿನ ...್ ಅಪ್ಪಾ ಮಾದೇಶ ಅನ್ನೋ ಗುಸುಗುಸು ...ಿನ ಪಾತಕ ವಲಯದಲ್ಲಿ ಹರಿದಾಡುತ್ತಿದೆ. ಸಕ್ಕರೆ ...ಯಂತಹ ಆರೋಗ್ಯ ಸಮಸ್ಯೆಗಳಿಂದ ಮೆತ್ತಗಾಗಿರುವ ...ಮಾದೇಶನಿಗೆ ಮೊದಲಿನಷ್ಟು ರೌಡಿಸಂ ಕಸುವೂ ...ಉತ್ಸಾಹವೂ ಇಲ್ಲ, ಹಾಗಾಗಿ ಆದಷ್ಟು ಬೇಗ ...ರಣಿಯಾಗಿ ಪ್ರತಿಷ್ಠಾಪಿತನಾದರೆ ಸೇಫಾಗಬಹುದು ...ಮ ಅವನ ಇರಾದೆ.

...ಗೆ ನೋಡಿದರೆ, ಕಳೆದ ಎಂಎಲ್‌ಎ ಚುನಾವಣೆಯಲ್ಲಿ ...ನ ಹರೀಶ್‌ಗೌಡ ಹಾಗೂ ಅಪ್ಪಾ ಮಾದೇಶನ ...ಜೆಡಿಎಸ್ ಟಿಕೆಟಿಗಾಗಿ ತೀವ್ರ ಹಣಾಹಣಿ ನಡೆದಿತ್ತು. ...ಗೆ ನಿಲ್ಲೋದು ಗ್ಯಾರಂಟಿ ಅಂತ ಅಪ್ಪಾ ಮಾದೇಶ ...ತಯಾರಿಯನ್ನೂ ಮಾಡಿಕೊಂಡಿದ್ದ. ರಾಜ್ಯೋತ್ಸವ, ... ಉತ್ಸವಗಳಿಗೆ ಕಾಸು ಸುರಿದು ಹುಡುಗರನ್ನು ...ಂಬಿಸಿ ಜೊತೆಗಿಟ್ಟುಕೊಂಡಿದ್ದ ಆದರೆ ಬಿಜೆಪಿಯಲ್ಲಿದ್ದ ...ರಲಿಂಗೇಗೌಡರು ಜೆಡಿಎಸ್‌ಗೆ ಬಂದಿದ್ದರಿಂದ ...ಗೌಡರು ಅವರಿಗೆ ಟಿಕೆಟ್ ನೀಡಿದ್ದರು. ಇಲ್ಲದೇ ...ದ್ದರೆ ತನ್ನಲ್ಲಿರುವ ಕಾಸು, ರೌಡಿ ಪಡೆಯನ್ನು ಚೆಲ್ಲಾಡಿ ...ಎಮ್ಮೆಲ್ಲೆಯೂ ಆಗಿಬಿಡುತ್ತಿದ್ದ.

...ಪ್ಪಾ ಮಾದೇಶ ಅದ್ಯಾವಪರಿ ಹವಾ ಮಡಗಿದ್ದಾನೆಂದರೆ ...ರಿನ ಒಂಟಿಕೊಪ್ಪಲ್, ವಿಜಯನಗರ, ಹೆಬ್ಬಾಳ, ...ಯಲ್ ಏರಿಯಾ, ಪಕ್ಕದ ಶ್ರೀರಂಗಪಟ್ಟಣ, ...ಳ್ಳಿಗಳಲ್ಲಿ ಇವತ್ತಿಗೂ ನೂರಾರು ಬೈಕ್‌ಗಳ ಮೇಲೆ ... ಮಾದೇಶನ ಹೆಸರು, ಫೋಟೊ ರಾರಾಜಿಸುತ್ತವೆ. ... ರೌಡಿಸಂಗೆ ಪಾದಾರ್ಪಣೆ ಮಾಡುತ್ತಿರುವ ಪುಡಿ ...ರದ್ದು ಅನ್ನೋದನ್ನು ಬಿಡಿಸಿಹೇಳುವ ಅಗತ್ಯವಿಲ್ಲ. ...ಜಯಶ್ರೀಪುರ, ವಿಜಯನಗರ ಹಾಗೂ ...ಸುತ್ತಲಿನ ಬೇನಾಮಿ ಆಸ್ತಿ-ಪಾಸ್ತಿಗಳಿರುವ ಅಪ್ಪಾ ...ೇಶ ಏನಿಲ್ಲವೆಂದರೂ 300 ಕೋಟಿಗೂ ಹೆಚ್ಚು ...ತ್ತಾನೆ. ಪಾಟಕ್ ಕನ್‌ಸ್ಟ್ರಕ್ಷನ್ ಮಾಲೀಕ ಪಾಟಕ್ ...ಂತೆ ಭೂಮಾಫಿಯಾದ ಬಿಲ್ಡರ್ಸ್‌ಗಳು ಯಾವುದೇ ...ನವನ್ನು ಕೊಳ್ಳಬೇಕಾದರೆ, ಬರುವ ಸಮಸ್ಯೆಗಳೆಲ್ಲವನ್ನೂ ...ಿ ಮೂಲಕ ಬಗೆಹರಿಸಿಕೊಡೋದೆ ಈ ಅಪ್ಪಾ ...ೇಶ. ಅಂಥಾ ಅಪ್ಪಾ ಮಾದೇಶನಿಗೆ ನ್ಯಾಯಾಲ ...ನೊ ಜೀವಾವಧಿ ಶಿಕ್ಷೆ ವಿಧಿಸಿದೆ, ಆದರೆ ಅದು ...ಮಟ್ಟಿಗೆ ಅನುಷ್ಠಾನಕ್ಕೆ ಬರುತ್ತೆನ್ನುವುದೇ ಪ್ರಶ್ನೆ. ...ಂದರೆ ಮೇಲಿನ ಕೋರ್ಟ್‌ಗಳಲ್ಲಿ ಬೇಲ್ ಪಡೆದು ...ೀದು ಅಪ್ಪಾ ಮಾದೇಶನಂತಹ ಪೊಲಿಟಿಕಲ್ ರೌಡಿ ...ಂಟುಗಳಿಗೆ ಕಷ್ಟವೇನೂ ಅಲ್ಲ. ತೀರ್ಪು ...ಾಗುವ ದಿನ ತನ್ನ ಮೇಲಿನ ಕೇಸು ಖುಲಾಸೆಯಾಗುತ್ತೆ ... ಭರವಸೆಯಲ್ಲೇ ಕೋರ್ಟ್ ಆವರಣದಲ್ಲಿ ಸಾವಿರಾರು ...ುಲ್ಲಿ ಹಿಂಬಾಲಕರು ಜಮಾಯಿಸುವಂತೆ ನೋಡಿ ...ದ್ದ. ನಿರಪರಾಧಿಯೆಂದು ಕೋರ್ಟ್‌ನಿಂದ ಬಿಡುಗಡೆ ...ವ ಅಪ್ಪಾ ಮಾದೇಶನನ್ನು ಮೆರವಣಿಗೆ ಮೂಲಕ ...ೊಯ್ಯಲು ಸಕಲ ಸಿದ್ಧತೆಗಳೂ ನಡೆದಿದ್ದವು. ಸೇರಿದ್ದ ...ಲ್ಲಿ ಗಲಾಟೆ ಮಾಡಿ ಕಾನೂನಿನ ವ್ಯವಸ್ಥೆ ಹದಗೆಡಿಸು... ಅಂತ ಡಿಸಿಪಿ ಡಾ.ಎಚ್.ಟಿ. ಶೇಖರ್‌ರವರ ...ದಲ್ಲಿ ನ್ಯಾಯಾಲಯದ ಆವರಣದಲ್ಲಿ ಪೊಲೀಸರು ...ಂದೋಬಸ್ತ್‌ಗೆ ನಿಂತಿದ್ದರು. ಜಿಲ್ಲಾ ಎಸ್ಪಿ ಅಭಿನವ್ ...ದ್ದು ನ್ಯಾಯಾಧೀಶರ ಮುಂದೆ ಹಾಜರಿದ್ದರು.

...ಜ ಹೇಳಬೇಕೆಂದರೆ, ಕೋರ್ಟ್‌ನಿಂದ ಜೀವಾವಧಿ ...ಶಿಕ್ಷೆ ಪ್ರಕಟವಾದ ನಂತರವೂ ಅಪ್ಪಾ ಮಾದೇಶನ ...ದಲ್ಲಿ ಕಿಂಚಿತ್ತೂ ಆತಂಕವಿರಲಿಲ್ಲ; ಹೊರಗೆ ...ಬರುತ್ತೇನೆ ಅನ್ನೋ ... ವಿಶ್ವಾಸ ...ಮಾಡುತ್ತಿತ್ತು!

■ ಮೋಹನ್

ರಾಘು ಸ್ವಾಮಿಯ ರೊಕ್ಕ ನಾಪತ್ತೆ!

ದಲಿತರೋ, ರೈತಕೂಲಿಗಳೋ, ನಿರ್ಗತಿಕ ಮಹಿಳೆಯರೋ ತಮ್ಮ ಮೇಲಾದ ದೌರ್ಜನ್ಯಕ್ಕೆ ಸೊಲ್ಲೆತ್ತಿದರೆ, ಪ್ರತಿಭಟನಾ ಸಭೆ ಮಾಡಿದರೆ ಅದಕ್ಕೊಂದು ಅರ್ಥವಿದೆ. ಆದರೆ ಮಠಾಧಿಪತಿಗಳೆಲ್ಲ ಸೇರಿಕೊಂಡು ತಮ್ಮ ವಿರುದ್ಧದ ದೌರ್ಜನ್ಯಗಳ ವಿರುದ್ಧ ಹೋರಾಡುವುದಕ್ಕೆಂದೇ ಸಂಘಟನೆಯೊಂದನ್ನು ಹುಟ್ಟುಹಾಕ ಹೊರಟರೆ? ಅಥವಾ ಪ್ರತಿಭಟನಾ ಸಮಾವೇಶ ಹಮ್ಮಿಕೊಂಡರೆ?

ಎಂಥಾ ಕಾಲ ಬಂತುನೋಡಿ! ಒಬ್ಬರಲ್ಲ ಇಬ್ಬರಲ್ಲ ಬರೋಬ್ಬರಿ ಮುನ್ನೂರಕ್ಕೂ ಅಧಿಕ ಮಂದಿ ಸೋಕಾಲ್ಡ್ ಮಠಾಧಿಪತಿ, ಪೀಠಾಧಿಪತಿ, ಸಾಧು, ಸಂತ, ಸ್ವಾಮೀಜಿಗಳೆಲ್ಲ ಅತ್ಯಾಚಾರಿ ಆರೋಪಿ ರಾಘವೇಶ್ವರನ ಮೇಲಾದ ಅನ್ಯಾಯ (?)ದ ವಿರುದ್ಧ ಹೋರಾಟದ ಕಹಳೆ ಮೊಳಗಿಸಿದ್ದಾರೆ!

ಈ ಸೋಕಾಲ್ಡ್ ಸ್ವಾಮಿಗಳ ಹೋರಾಟ, ಚೀರಾಟ, ವೀರಾವೇಶದ ವಿಪರೀತ ಹೇಗಿತ್ತೆಂದರೆ ಬಟವಾಡೆಗೆಂದು ರಾಘುಸ್ವಾಮಿ ತಂದಿಟ್ಟುಕೊಂಡಿದ್ದ 30 ಲಕ್ಷದ ನೋಟಿನ ಕಂತೆಗಳೇ ಮಂಗಮಾಯವಾಗಿ ಕಲಿಯುಗ ಪವಾಡವೇ ಸಂಭವಿಸಿದೆ!

ಅರ್ಥವಾಗಲಿಲ್ಲವೆ? ಯಾವ ಸಾಧುಸಂತರು, ಸ್ವಾಮೀಜಿಗಳೆಂದು ರಾಘು ಸ್ವಾಮಿ ತನ್ನ ಪರ ಷೋ ಆಫ್‌ಗೆಂದು ಗುಡ್ಡೆ ಹಾಕಿದ್ದನೋ ಅವರೆಲ್ಲ ಸೇರಿಕೊಂಡು ರಾಘು ಸ್ವಾಮಿಯ ಪಾಪದ ದುಡ್ಡನ್ನೇ ಕಿತ್ತೊಯ್ದಿದ್ದಾರೆ. ಇನ್ನೂ ಸಿಂಪಲ್ಲಾಗಿ ಹೇಳಬೇಕೆಂದರೆ ರಾಘು ಮೇಲಾದ ದೌರ್ಜನ್ಯದ ವಿರುದ್ಧ ಸಾಧುಸಂತರ ಸಮಾವೇಶಕ್ಕೆಂದು ಬಂದಿದ್ದ ಖಾವಿಧಾರಿಗಳೇ ರಾಘು ದುಡ್ಡನ್ನು ರಾಬರಿಗೈದಿದ್ದಾರೆ. ಅದೂ ಒಂದಲ್ಲ ಎರಡಲ್ಲ ಮೂವತ್ತು ಲಕ್ಷದ ಮಠದ ರೊಕ್ಕವನ್ನು.

ಸಹಸ್ರ ಸಂತ ಸಂಗಮ?

ಎಲೆಕ್ಷನ್ನಿಗೆ ಹಂಚಲೆಂದು ಪುಢಾರಿಗಳು ಲಕ್ಷದ ಕಂತೆ ಜೋಡಿಸಿಟ್ಟಂತೆ, ರ್‍ಯಾಲಿ ಮೆರವಣಿಗೆಗೆಂದು ರಾಜಕೀಯ ನಾಯಕರು ರೊಕ್ಕದ ಗಂಟು ಜೋಪಾನವಾಗಿಟ್ಟಂತೆ ಅವತ್ತು ರಾಘುಸ್ವಾಮಿಯೂ ಸ್ವಾಮೀಜಿಗಳಿಗೆಂದು ಹಂಚಲು ತಂದಿದ್ದು ಐನೂರು, ಸಾವಿರ ರೂಪಾಯಿಗಳ ನೋಟಿನ ಕಂತೆಗಳನ್ನೆ. ಅದು ಮೊನ್ನೆ ಫೆಬ್ರವರಿ 5 ರ ಶುಕ್ರವಾರದ ಮಧ್ಯಾಹ್ನ. ಕೋರಮಂಗಲದ ಕ್ರೀಡಾಗ್ರಾಮದ ಇಂಡೋರ್ ಸ್ಟೇಡಿಯಂನಲ್ಲಿ ರಾಮಚಂದ್ರಾಪುರಮಠದ ಅಧಿಕೃತ ಪ್ರಾಯೋಜಕತ್ವದಲ್ಲಿ ಏರ್ಪಾಡಾಗಿದ್ದ 'ಸಹಸ್ರ ಸಂತ ಸಂಗಮ'ವೆಂಬ 'ಷೋ ಆಫ್'ಗೆ ಬಂದದ್ದು ಕೇವಲ ಮುನ್ನೂರರಷ್ಟಿದ್ದ ಖಾವಿಧಾರಿಗಳು ಮಾತ್ರ. ಹೆಚ್ಚೆಂದರೆ ಮುನ್ನೂರೈವತ್ತು ಇದ್ದಿರಬಹುದು.

ಬೇಲಿ ಮಠದ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರಸ್ವಾಮೀಜಿ, ನಿನ್ನೆ ಮೊನ್ನೆಯತನಕ ಮುಖಕ್ಕೆ ಮೇಕಪ್ ಮಾಡಿಕೊಂಡು ಅಳಲೆಕಾಯಿ ಸೊಪ್ಪಿನ ರಸದ ಔಷಧಿ ಹೇಳಿಕೊಂಡಿದ್ದು ರಾತ್ರೋರಾತ್ರಿ ಸ್ವಾಮೀಜಿ ಗೆಟಪ್ಪಿಗೆ ಬಂದ ಸಂತೋಷ್ ಗುರೂಜಿ ಉರ್ಫ್ ಶ್ರೀ ವಿಶ್ವಸಂತೋಷ ಭಾರತಿ ಸ್ವಾಮೀಜಿ, ಕುಣಿಗಲ್‌ನ ಒಕ್ಕಲಿಗ ಜಗದ್ಗುರು ಸಿದ್ಧರಾಮ ಚೈತನ್ಯ ಸ್ವಾಮೀಜಿ, ಕುಕ್ಕೆ ಸುಬ್ರಹ್ಮಣ್ಯದ ಶ್ರೀ ವಿದ್ಯಾಪ್ರಸನ್ನ ಸ್ವಾಮೀಜಿ, ಪುತ್ತೂರು ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ, ಆಂದೋಲದ ಕರುಣೇಶ್ವರ ಮಠದ ಶ್ರೀ ಸಿದ್ಧಲಿಂಗೇಶ್ವರ ಸ್ವಾಮೀಜಿ, ಪಾಂಡವಪುರ ಬೇಲಿಮಠದ ತ್ರಿನೇತ್ರ ಮಹಾಂತಸ್ವಾಮಿ, ಕುಪ್ಪೂರು ಗದ್ದುಗೆ ಮಠದ ಸ್ವಾಮಿ, ವಿಭೂತಿಪುರ ಮಠದ ಸ್ವಾಮಿ, ಶಿವಗಂಗೆ ಮೇಲಣಗವಿ ಮಠದ ಮಲಯ ಶಾಂತವೀರ ಶಿವಾಚಾರ್ಯ, ಹೂವಿನಹಡಗಲಿ ಹಾಲಸ್ವಾಮಿ ಸೇರಿದಂತೆ ರಾಘೂ ಷೋ ಆಫ್‌ಗೆಂದು ಬಂದ ಖಾವಿಧಾರಿಗಳ್ಯಾರೂ ತೂಕದ ಸ್ವಾಮಿಗಳಲ್ಲ, ಒಂದಿಬ್ಬರನ್ನು ಹೊರತುಪಡಿಸಿದರೆ ಬೇರೆ ಯಾರಿಗೂ ಸಾಮಾಜಿಕವಾಗಿ ಅಂಥ ಪೂಜ್ಯತೆಯೂ ಇದ್ದಂತಿಲ್ಲ.

ಅಷ್ಟಕ್ಕೂ ಹಿಂದೂ ಸಾಧುಸಂತರ ಮೇಲೆ ನಡೆಯುತ್ತಿರುವ ದಮನ ದಬ್ಬಾಳಿಕೆಗಳ ವಿರುದ್ಧ ಮಠಾಧೀಶರ ಪ್ರತಿಭಟನಾ ಸಮಾವೇಶವೆಂದು ಪತ್ರಿಕೆಗಳಲ್ಲಿ ಸುದ್ದಿಯಾಗಿದ್ದೇ ಅನೇಕರು ಹುಬ್ಬೇರಿಸಿದ್ದುಂಟು. ಏನಪ್ಪಾ ಇದು ಕಲಿಗಾಲ ಎಂದು ತಲೆ ಕೆರೆದುಕೊಂಡರೆ ಅಲ್ಲಿ ಕಾಣಿಸಿದ್ದು ರೇಪ್‌ಕೇಸ್ ರಾಘವೇಶ್ವರನ ಹೆಸರು. ಆಗಲೇ ಅನೇಕರಿಗಿದರ ಮರ್ಮ ಅರ್ಥವಾಗಿತ್ತು, ಅಂದರೆ ತಾನು ಮಾಡಿದ್ದ ಹಲ್ಕಾ ಕೆಲಸಕ್ಕೆ ರಾಘು ಧರ್ಮ ಮತ್ತು ಸಾಧುಸಂತರನ್ನು ಗುರಾಣಿಯಾಗಿಸಿಕೊಳ್ಳುತ್ತಿದ್ದಾನೆ!

ಸಮಾನಶೀಲ ವ್ಯಸನ

ಇದ್ದ ಕುತೂಹಲವೇನೆಂದರೆ ರಾಘು ಪರ ದನಿಯೆತ್ತಲು ಬರಬಹುದಾದ ಮಹನೀಯರಾದರೂ ಎಂತೆಂಥವರೆಂಬ ಬಗ್ಗೆ ಮಾತ್ರ. ಬೇಲಿ ಮಠದ ಸ್ವಾಮಿಗೆ ಅಷ್ಟಿಷ್ಟು ಗೌರವವಿದೆ. ಕುಣಿಗಲ್‌ನ ಸಿದ್ಧರಾಮ ಚೈತನ್ಯರು ಇತ್ತೀಚಿನ ದಿನಗಳಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಅನುಭಾವಿ ಶರಣರು. ಇವರಿಬ್ಬರು ಅದ್ಯಾವ ಮುಲಾಜಿಗೆ ಬಿದ್ದು ಇಂಥ ಸಮಾವೇಶಕ್ಕೆ ಒಪ್ಪಿಕೊಂಡರೋ ಗೊತ್ತಿಲ್ಲ, ಮಿಕ್ಕಂತೆ ಸಂತೋಷ್ ಗುರೂಜಿ ಮದನ ಕಾಮರಾಜ. ಕುಕ್ಕೆ ಸುಬ್ರಹ್ಮಣ್ಯದ ವಿದ್ಯಾಪ್ರಸನ್ನರದ್ದೂ ರಾಘೂ ಸ್ವಾಮಿಯದ್ದೇ ರಸಿಕ ಶಿಖಾಮಣಿ ಬುದ್ಧಿ. ನಿಡುಮಾಮಿಡಿ ಸ್ವಾಮಿ, ರಾಮಕೃಷ್ಣಾಶ್ರಮದ ಧರ್ಮಭಾರತಿ, ಉಡುಪಿಯ ಕಾಣಿಯೂರು ಸ್ವಾಮಿ, ಹುಕ್ಕೇರಿಯ ಚಂದ್ರಶೇಖರ ಶಿವಾಚಾರ್ಯ, ಬೇಬಿ ಮಠದ ತ್ರಿನೇತ್ರ ಮಹಂತ, ಹೂವಿನಹಡಗಲಿ ಹಾಲಸ್ವಾಮಿ, ಕುಮಟಾ ಶಾರದಾ ಪೀಠದ ಸರಸ್ವತಿ ಭಾರತಿ ಇತ್ಯಾದಿಗಳೆಲ್ಲ ವ್ಯಕ್ತಿ ಮತ್ತು ಪ್ರವೃತ್ತಿಯಿಂದ ಸಮಾನಶೀಲ ವ್ಯಸನಿಗಳೇ!

ಇಂಥವರೆಲ್ಲ ಏಕಾಏಕಿ ರಾಘವೇಶ್ವರನ ಮೇಲೆ ದಾಖಲಾದ ರೇಪ್‌ಕೇಸ್‌ಗಳ ವಿರುದ್ಧ ಸರ್ಕಾರದ ವಿರುದ್ಧವೇ ಪ್ರತಿಭಟನೆಗೆ ನಿಂತಿದ್ದೇ ಜನಕ್ಕೊಂದು ಬಿಟ್ಟಿ ಮನರಂಜನೆಯಾಗಿತ್ತು. ದೇಶಾದ್ಯಂತ ವೋಟು ಆಲೆಮನೆ, ಹಿಂದೂ ಸಮಾಜೋತ್ಸವಗಳ ಮೂಲಕ ಕೋಮು ಧಗೆಯೆಬ್ಬಿಸಿದ್ದ ಹಿಂದಿದ್ದವರೆಲ್ಲ, ಈ ಥರದ ಪುಡಿಪುಕ್ಕಾಗಳೇ. ಕೇಂದ್ರದಲ್ಲೀಗ ಇವರದ್ದೇ ಮೋದಿ ಸರ್ಕಾರವಿದೆ. ಮಿಸುಕಾಡಿದರೂ ಭಯೋತ್ಪಾದನೆ ಹೆಸರಲ್ಲಿ ಯಾರನ್ನು ಬೇಕಾದರೂ ಮಟ್ಟಹಾಕಲು ಸಿಬಿಐ, ಎನ್‌ಡಿಎ ಅವರ ಹಿಡಿತದಲ್ಲೇ ಇದೆ. ಹೀಗಿದ್ದೂ ಹಿಂದೂ ಸಾಧುಸಂತರ ಮೇಲೆ ದೌರ್ಜನ್ಯ ನಡೆಯುತ್ತಿದೆಯೆಂದರೆ ಅದನ್ನು ನಂಬುವಷ್ಟು ಮುಠ್ಠಾಳರಾದರೂ ಯಾರು?

ನಿಜಾರ್ಥದಲ್ಲದು ತನ್ನ ಅನಾಚಾರ ಮುಚ್ಚಿಕೊಳ್ಳಲು ರಾಘು ತನ್ನದೇ ದುಡ್ಡಲ್ಲಿ ತನ್ನದೇ ಮೂಗಿನ ನೇರಕ್ಕೆ ತಕ್ಕಂತೆ ಆಡಿದ ಕಳ್ಳಾಟವಾಗಿತ್ತು. ಇದಕ್ಕೆ ರಾಘು ಬಲಗೈ ಬಂಟನಂತೆ ಅವತರಿಸಿದವನು ಸಂತೋಷ್ ಗುರೂಜಿ ಉರ್ಫ್ ಶ್ರೀ ವಿಶ್ವಸಂತೋಷ್ ಭಾರತಿ. ವಿಕಟವೆಂದರೆ ಈತ ಸ್ವಾಮಿ ವೇಷ ಧರಿಸಿದ್ದೇ ನ್ಯೂಸ್ ಚಾನಲ್ಲುಗಳ ಕೃಪೆಯಿಂದ. ಮೊದಮೊದಲು ಗಿಡಮೂಲಿಕೆ ಆಯುರ್ವೇದವೆಂದು ಟೀವಿಗಳ ಚರ್ಚೆಗೆ ಬರುತ್ತಿದ್ದವನು ಕಾಲಕ್ರಮೇಣ ಖಾವಿ ಧರಿಸಿ ತಾನೊಬ್ಬ ಸ್ವಾಮೀಜಿಯೆಂದು ಸ್ವಯಂಘೋಷಿಸಿಕೊಂಡ. ದಕ್ಷಿಣ ಕನ್ನಡದ ಬಂಟರಿಗೆ ತಾನೇ ಸ್ವಾಮೀಜಿ ಎಂದು ಒಂದಷ್ಟು ಐಲಾಟವಾಡಿದ. ಬಂಟರ್‍ಯಾರೂ ಸೊಪ್ಪು ಹಾಕಲಿಲ್ಲ. ಹಾಗಂತ ಸಂತೋಷ್‌ನ ಹುಚ್ಚು ಬಿಡಬೇಕಲ್ಲ. ಬೆಂಗಳೂರಿನ ಮಾಗಡಿ ರಸ್ತೆಯ ಬಿಇಎಲ್ ಲೇಔಟಿನಲ್ಲಿ ಎರಡು ವಿಲ್ಲಾಗಳನ್ನು ಖರೀದಿಸಿದ್ದೇ ಅದನ್ನೇ ತನ್ನ ಮಠವೆಂದು ಘೋಷಿಸಿಕೊಂಡ.

ಸಂತೋಷನ ವಿಲ್ಲಾದಲ್ಲಿ.....!

ಸ್ವಾಮಿಯೇ ಅಲ್ಲದ ಸ್ವಾಮಿ, ಸಂತನ ಯಾವ ಗುಣವಿಲ್ಲದೆಯೂ ಖಾವಿಧಾರಿಯಾದವನಿಗೆ ತನಗೆ ಹಿಂದೂ ಸ್ವಾಮಿಗಳಲ್ಲಿ ಚೂರುಪಾರಾದರೂ ಮಾನ್ಯತೆಗಿಟ್ಟಿದರೆ ಸಾಕೆಂಬ ದುರಾಶೆ. ಅದಕ್ಕೊಂದು ಹಿಂದೂ ಸಂತ ಪರಿಷತ್ ಹುಟ್ಟು ಹಾಕಲೆತ್ನಿಸಿ ಸ್ವಾಮೀಜಿಗಳಿಂದಲೇ ಛೀಮಾರಿಗೀಡಾಗಿದ್ದ. ಅಂಥವನಿಗೆ ಹಲ್ಲುಕಡ್ಡಿ ಆಸರೆಯೆಂಬಂತೆ ಸಿಕ್ಕವನೇ ರೇಪ್‌ಕೇಸ್



ರಾಘವೇಶ್ವರ. ಹೇಗೂ ರಾಘು ಬಳಿ ದುಡ್ಡಿದೆ. ಆತನ ದುಡ್ಡಲ್ಲಿ ತಾನು ಆಟವಾಡಿ ಒಂದಷ್ಟು ಪುಡಿಪುಕ್ಕಾ ಸ್ವಾಮಿಗಳನ್ನು ಗುಡ್ಡೆಹಾಕಿ ಜೈ ಎನ್ನಿಸಿಬಿಟ್ಟರೆ ತನಗೂ ಸ್ವಾಮೀಜಿಯೆಂಬ ಮಾನ್ಯತೆ ಸಿಕ್ಕಿಬಿಡುತ್ತದೆಯೆಂಬ ಐಡಿಯಾ ಸಂತೋಷ್ ತಲೆ ಹೊಕ್ಕಿದ್ದೇ ರಾಘು ಜೊತೆ ಡೀಲು ಕುದುರಿಸಿದ್ದಾನೆ. ರೇಪ್‌ಕೇಸಿನಲ್ಲಿ ಸಿಲುಕಿ ನರಳಾಡುತ್ತಿರುವ ರಾಘುವಿಗೂ ಇದೇ ಬೇಕಿತ್ತು.

2015 ರ ಡಿಸೆಂಬರ್‌ನಲ್ಲಿ ಒಂದಷ್ಟು ಖಾವಿಧಾರಿಗಳನ್ನು ಕಲೆ ಹಾಕಿ ರಾಘು ಬೆಂಬಲಕ್ಕೆ ಸ್ವಾಮಿಗಳೂ ನಿಲ್ಲಲಿದ್ದಾರೆಂದು ರಿಹರ್ಸಲ್ಲಿಗೆ ನಾಂದಿ ಹಾಡಿದ್ದಾನೆ. ಸಂತೋಷ್‌ನ ವಿಲ್ಲಾದಲ್ಲಿ ಒಂದಷ್ಟು ಸ್ವಾಮಿಗಳು ಸೇರಿದ್ದೇ ರಾಘು ಕಿವಿ ನೆಟ್ಟಗಾಗಿದೆ. ಸಂತ ಸಂಗಮಕ್ಕೆ ಪೂರ್ವಭಾವಿ ಸ್ವಾಮೀಜಿಗಳ ಸಭೆ ಎಂದು ಮತ್ತೆ 2016 ರ ಜನವರಿ 8 ರಂದು ತನ್ನ ವಿಲ್ಲಾದಲ್ಲೇ ಇನ್ನೊಂದಿಷ್ಟು ಸ್ವಾಮಿಗಳನ್ನು ಸೇರಿಸಿದ್ದಾನೆ. ವಿಪರ್ಯಾಸವೆಂದರೆ ಈ ಬಾರಿ ಖುದ್ದು ರಾಘವೇಶ್ವರನೇ ಸಂತೋಷ್‌ನ ವಿಲ್ಲಾಕ್ಕೆ ಪಾದ ಬೆಳೆಸಿದ್ದ. ಅವತ್ತೂ ರಾಘು "ನೋಡಿ ಇದು ನನ್ನ ಮೇಲೆ ನಡೆದ ದೌರ್ಜನ್ಯದ ವಿರುದ್ಧ ರಕ್ಷಣೆಗೆಂದೇನಲ್ಲ. ಇನ್ನು ಮುಂದೆ ಬೇರೆ ಯಾರೇ ಹಿಂದೂ ಸ್ವಾಮೀಜಿಗಳ ವಿರುದ್ಧವೂ ಇಂಥ ಅನ್ಯಾಯ ನಡೆಯಕೂಡದು" ಎಂದಿದ್ದಾನೆ. ಆಗ ಒಂದಿಬ್ಬರು ಹಿರಿಯ ಸ್ವಾಮಿಗಳು "ಅಲ್ರೀ ನಾವು ನೆಟ್ಟಗಿದ್ದರೆ ಯಾರೇನ್ರೀ ಮಾಡ್ತಾರೆ? ಜನಕ್ಕೆ ಬುದ್ಧಿ ಹೇಳೋರಾಗಿ ನಾವೇ ಹಲ್ಕಾ ಕೆಲ್ಸ ಮಾಡುದ್ರೆ ಹೆಂಗ್ರೀ....?" ಎಂದು ಎದ್ದು ನಡೆದಿದ್ದಾರೆ.

ಇನ್ನು ಮಿಕ್ಕ ಸ್ವಾಮಿಗಳಿಗೆಲ್ಲಿ ತನ್ನ ಕಳ್ಳಾಟ ಗೊತ್ತಾಗುತ್ತೋ ಎಂದು ಮುಖ ಗಂಟಿಕ್ಕಿದ್ದ ರಾಘು "ನನ್ನ ವಿಷಯ ಬಿಟ್ಟುಬಿಡಿ. ಬೇರೆ ಯಾರೇ ಸಾಧುಸಂತರ ಮೇಲೆ ಹಿಂಗಾಗದ ಹಾಗೆ ಹೋರಾಟಕ್ಕಾದ್ರೂ ಒಂದು ಸಂಘಟನೆ ಅಂತ ಮಾಡೋಣ" ಎಂದು ಹಲ್ಲುಗಿಂಜಿದ್ದಾನೆ. ಫೆಬ್ರವರಿ ಐದಕ್ಕೆ ಸಂತ ಸಂಗಮವೇನೋ ನಿಗದಿಯಾಗಿದೆ. ಬೆಂಗಳೂರಿನ ಕೋರಮಂಗಲದ ಕ್ರೀಡಾ ಗ್ರಾಮದ ಇಂಡೋರ್ ಸ್ಟೇಡಿಯಂನಲ್ಲಿ ಯಾವ ತೆಲುಗು ಸಿನಿಮಾದ ಸೆಟ್ಟುಗಳನ್ನೂ ಮೀರಿಸುವಂತೆ ಐಷಾರಾಮಿ ವೇದಿಕೆಗೆಂದೇ ರಾಘು ಹತ್ತು ಲಕ್ಷ ಸುರಿದಿದ್ದ. ಸಿಂಹಾಸನದಂಥ ರಾಜಪೀಠದಲ್ಲಿ ರಾಘು ವಿರಾಜಮಾನನಾಗಿದ್ದ. ಪೀಠಿಕೆ ಹಾಕಿದ ಸಂತೋಷ್ ಗುರೂಜಿ ಕಾರ್ಯಕ್ರಮದ ಉದ್ದೇಶವನ್ನೇ ತಿರುಚಿ ಇದು ರಾಘು ಮೇಲಿನ ದಾಳಿಯ ವಿರುದ್ಧದ ಪ್ರತಿಭಟನಾ ಸಭೆಯೆಂಬಂತೆ ಪುಢಾರಿ ಭಾಷಣ ಬಿಗಿದ. ನಿಡುಮಾಮಿಡಿ ಸ್ವಾಮಿ, ವಿದ್ಯಾಪ್ರಸನ್ನ, ಕಾಣಿಯೂರು ಸ್ವಾಮಿ, ಕರುಣೇಶ್ವರ ಮಠದ ಸ್ವಾಮಿ, ಬೇಬಿಮಠದ ತ್ರಿನೇತ್ರ, ರಾಮಕೃಷ್ಣಾಶ್ರಮದ ಧರ್ಮಭಾರತಿ ಇತ್ಯಾದಿಗಳೆಲ್ಲ ರಾಘು ಮೇಲೆ ರೇಪ್‌ಕೇಸ್ ಹಾಕಿದ ಸಿದ್ದು ಸರ್ಕಾರವನ್ನು ವಾಚಾಮಗೋಚರ ಬೈದದ್ದೇ ಬಂತು.

ರೊಕ್ಕ ಹಂಚಲು ನಿಂತವರು

ತಾನೇ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಗುರೂಜಿ ಭಾಷಣಕ್ಕೆ ನಿಂತ ರಾಘವೇಶ್ವರ ಮುಖ್ಯಮಂತ್ರಿ, ಸೇರಿದಂತೆ ಕೋರ್ಟು, ಪೊಲೀಸು, ಪತ್ರಿಕೆಗಳೆಲ್ಲವನ್ನೂ ಯದ್ವಾತದ್ವಾ ಬೈದಿದ್ದೇ "ನಾವು ಸಂತರೆಲ್ಲ ಸೇರಿಕೊಂಡೇ ಸಂತರ ರಕ್ಷಣೆ ಮಾಡಿಕೊಳ್ಳಬೇಕಾದ ಕಾಲ ಬಂದಿದೆ. ಇಲ್ಲಿನ ಪ್ರತಿ ಸಂತರೂ ಉರಿಯುವ ಜ್ಯೋತಿಯಂತೆ. ನಾವೆಲ್ಲ ಒಟ್ಟಿಗೆ ಸೇರಿಬಿಟ್ಟರೆ ಈ ದೇಶವನ್ನೇ ಬೆಂಕಿಯ ಕುಂಡವನ್ನಾಗಿ ಮಾಡುವ ಶಕ್ತಿ ನಮಗಿದೆ" ಎಂದು ಗುಡುಗಿಬಿಟ್ಟ.

ಕುಚೇಷ್ಟೆಯೆಂದರೆ ರಾಘು ಈ ಕಾರ್ಯಕ್ರಮಕ್ಕೆ ಕೊಟ್ಟ ಹೆಸರು 'ಸಹಸ್ರ ಸಂತ ಸಂಗಮ' ಎಂದು. ಎಲ್ಲಾ ಸೇರಿದರೂ ಐವತ್ತನ್ನು ಮೀರುವುದು ಕಷ್ಟ ಎಂಬುದು ಮೊದಲೇ ಗೊತ್ತಿತ್ತಲ್ಲ, ಅದಕ್ಕೆಂದು ಒಂದಷ್ಟು ಮಂದಿ ನಕಲಿ ಸ್ವಾಮಿಗಳನ್ನು ರೆಡಿ ಮಾಡಿದ್ದ. ಸಿನಿಮಾ ಶೂಟಿಂಗಿಗೆಂದು ನಕಲಿ ಶಾಮರನ್ನು ಅಣಿಗೊಳಿಸಿದಂತೆ ನೂರಾರು ಮಂದಿ ಪುಡಿ ಪುಕ್ಕಾಗಳೂ ಸೇರಿದಂತೆ ಫ್ಯಾನ್ಸಿ ಡ್ರೆಸ್ಸುಧಾರಿಗಳೂ ಸಾಕಷ್ಟಿದ್ದರು. ಇನ್ನೇನು ಕಾರ್ಯಕ್ರಮ ಮುಗಿಯಿತು ಎನ್ನುತ್ತಿದ್ದಂತೆ ಭರ್ಜರಿ ಊಟದ ವ್ಯವಸ್ಥೆಗೆ ಖಾವಿಧಾರಿಗಳ ಒಂದು ಗುಂಪು ಮುಗಿಬಿದ್ದಿತು. ಊಟ ಮುಗಿದದ್ದೇ ತಡ ಬಂದ ಕೆಲಸಕ್ಕೆ ಕೂಲಿಯೆಂಬಂತೆ ದುಡ್ಡು ಹಂಚುವ ಕಾರ್ಯಕ್ರಮ ಶುರುವಾಗಿದೆ.

ಇದರರ್ಥ ದೂರದೂರದ ಹಳ್ಳಿಪಳ್ಳಿಗಳ ಪುಡಿಪುಕ್ಕಾ ಸ್ವಾಮಿಗಳು, ನಕಲಿಗಳಿಗೆಲ್ಲ ಬಂದ ಗಾಡಿಗೆ ಪೆಟ್ರೋಲು, ಬಾಟಾ, ಮೇಲ್ಕಾಸು ಎಲ್ಲವನ್ನೂ ರಾಘು ಮೊದಲೇ ನಿಗದಿಗೊಳಿಸಿದ್ದ. ರಾಘು ಆಪ್ತರಾದ ಜೆಡ್ಡು ರಾಮಚಂದ್ರ ಮತ್ತು ಕೆಕ್ಕಾರು ರಾಮಚಂದ್ರ ಎಂಬಿಬ್ಬರು ಸ್ಟೇಡಿಯಂನ ಹಿಂಬದಿಯ ರೂಮೊಂದರಲ್ಲಿ ಟೇಬಲ್ಲು ಹಾಕಿಕೂತಿದ್ದೇ ಸಾಲುಗಟ್ಟಿ ನಿಂತಿದ್ದ ಖಾವಿಧಾರಿಗಳಿಗೆಲ್ಲ ನೋಟಿನ ಕಂತೆ ಹಂಚಲಾರಂಭಿಸಿದ್ದರು. ಅಷ್ಟಿಷ್ಟು ಹೆಸರಿರುವ ಸ್ವಾಮಿಗೆ ಇಂತಿಷ್ಟು, ಪುಡಿಪುಕ್ಕಾ ಸ್ವಾಮಿಗಳಿಗೆ ಇಷ್ಟಿಷ್ಟೆಂದು ಕೆಳಗಿದ್ದ ಬ್ಯಾಗಿನಿಂದ ನೋಟಿನ ಕಂತೆಗಳಿಂದ ತೆಗೆದದ್ದೇ ಕವರ್ ಒಂದಕ್ಕೆ ತುರುಕಿ ತುರುಕಿ ಕೊಡುತ್ತಿದ್ದ. ಆದರೆ ಸ್ವಾಮಿಗಳು ಕೇಳಬೇಕಲ್ಲ, ನಾ ಮೊದಲು ತಾ ಮೊದಲು ಎಂದು ದುಡ್ಡು ಹಂಚುತ್ತಿದ್ದವರನ್ನು ಮುತ್ತಿಕೊಂಡರು. ನೋಡುನೋಡುತ್ತಿದ್ದಂತೆ ನೂಕುನುಗ್ಗಲು. ಅದೆಲ್ಲಿದ್ದರೋ ಉ.ಕ. ಭಾಗದ ಖಾವಿಧಾರಿಗಳ ಗುಂಪೊಂದು ಏಕಾಏಕಿ ಮುಗಿಬಿತ್ತು. ಏನಾಗುತ್ತಿದೆ ಎಂದು ದುಡ್ಡು ಹಂಚುತ್ತಿದ್ದವರಿಗೆ ಅರಿವಾಗುವ ಮೊದಲೇ ಮುತ್ತಿಗೆ ಅಸಹ್ಯದ ಹಂತ ತಲುಪಿತ್ತು. "ಎಷ್ಟೊತ್ತಲೇ ರೊಕ್ಕ ಎಣಸ್ಯಾಕೆ?" ಎಂದಿದ್ದೇ ಒಬ್ಬ ಸ್ವಾಮಿ ಕಂತೆಯೊಂದಕ್ಕೆ ಕೈಯಿಟ್ಟ. ಇನ್ನೊಬ್ಬ ಮತ್ತೊಂದು ಕಂತೆ ಎತ್ತಿಕೊಂಡಿದ್ದೇ "ನಿಮ್ಮ ಸ್ವಾಮಿಗೆ ನಾನೇ ಹೇಳ್ತೀನಿ ಬಿಡು" ಅಂದ. ಇಷ್ಟಾಗಿದ್ದೇ ಒಟ್ಟಿಗೆ ಡಜನ್ನುಗಟ್ಟಲೇ ಕೈಗಳು ಕೆಳಗಿದ್ದ ಬ್ಯಾಗಿಗೆ ಬಿದ್ದವು. ಐದೇ ನಿಮಿಷದಲ್ಲಿ ಬ್ಯಾಗೂ ಮಾಯ, ಬ್ಯಾಗಿನಲ್ಲಿದ್ದ ಕಂತೆಗಳೂ ಮಾಯ. ಸಂತೆಯಲ್ಲಿ ಘಟಿಂಗರ ಗುಂಪೊಂದು ಕೈಗೆ ಸಿಕ್ಕಿದ್ದನ್ನೆಲ್ಲ ಬಾಚಿಕೊಂಡಂತೆ ಸಿಕ್ಕಸಿಕ್ಕ ಖಾವಿಧಾರಿಗಳೆಲ್ಲ ಸಿಕ್ಕಷ್ಟು ಬಾಚಿಕೊಂಡು ಪರಾರಿಯಾದರು. ಬ್ಯಾಗಿನಲ್ಲಿದ್ದ ಒಟ್ಟು ಮೊತ್ತ ಮೂವತ್ತು ಲಕ್ಷವಂತೆ?

ಕೆಲ ಹಿರಿ ಸ್ವಾಮೀಜಿಗಳು "ಏನ್ರಪ್ಪಾ ಇದು? ನೀವೆಲ್ಲ ಸಂತರೇನ್ರೀ ಗಂಟುಕಳ್ಳರಂತೆ ಇದ್ದೀರಲ್ರೀ" ಎಂದು ಬಾಯಿ ಬಡಿದುಕೊಂಡರಂತೆ. ಈ ಸುದ್ದಿ ರಾಘು ಕಿವಿಗೆ ಬಿದ್ದು ಪಂಚೆ ಮೇಲೆತ್ತಿಕೊಂಡಿದ್ದೇ ಓಡೋಡಿ ಬರುವ ಹೊತ್ತಿಗೆ ಮೂವತ್ತು ಲಕ್ಷ ಪೂರ್ತಿ ಮಂಗಮಾಯವಂತೆ. ಕೇಳಿದರೆ ನಾನಲ್ಲ ಗೊತ್ತಿಲ್ಲ ಎಂದು ಪ್ರತಿಯೊಬ್ಬರೂ ತಲೆ ಅಲ್ಲಾಡಿಸಿದರಂತೆ. ರಾಘು ಮೈಮೇಲೆ ದೆವ್ವ ಬಂದವನಂತೆ "ನೋಡಿ ಪೊಲೀಸ್ ಕಂಪ್ಲೇಂಟ್ ಕೊಡಬೇಕಾಗ್ತದೆ. ಎಲ್ಲಾ ದುಡ್ಡು ತಂದು ವಾಪಸ್ ಕೊಟ್ರೆ ಸರಿ" ಎಂದು ಕೂಗಾಡುತ್ತಿದ್ದರೆ ಸಿಕ್ಕಿದ್ದೇ ಸೀರುಂಡೆ ಎಂದು ಬಾಚಿಕೊಂಡವರೆಲ್ಲ ಪೇರಿಕಿತ್ತರಂತೆ.

ಹಾಗಂತ ಬಂದವರನ್ನು ಬರಿಗೈಯಲ್ಲಿ ಕಳಿಸುವಂತಿಲ್ಲವಲ್ಲ. ಕೊನೆಗೆ ರಾಘು ಪರಮಾಪ್ತರ ಪೈಕಿ ಇನ್ನೊಬ್ಬ ವರ್ತೂರು ಮಹಾಬಲೇಶ್ವರ ಎಂಬಾತ ತನ್ನ ಕಾರಿನಲ್ಲಿಟ್ಟಿದ್ದ ಹದಿಮೂರು ಲಕ್ಷವನ್ನು ತಂದಿದ್ದೇ ಹ್ಯಾಪ್ರ ಮೋರೆ ಹಾಕಿ ನಿಂತಿದ್ದ ಉಳಿಕೆ ಸ್ವಾಮಿಗಳಿಗೆ ಬಟವಾಡೆ ಮಾಡಿದನಂತೆ. ದೋಚಿದ ಕಾಸನ್ನು ಕೇಳುವ ತಾಕತ್ತಿಲ್ಲ, ಪೊಲೀಸರಿಗೇನಾದರೂ ದೂರು ಕೊಟ್ಟರೆ ತನ್ನ ಮಾನಕ್ಕೇ ಕಂಟಕ. ಹೋಗಿದ್ದು ಮೂವತ್ತು ಲಕ್ಷವೇನೂ ಬೆವರಿನ ದುಡ್ಡಲ್ಲವಲ್ಲ, ಯಾರೋ ಭಕ್ತರು ಕೊಟ್ಟ ದುಡ್ಡಿಗೆ ಲೆಕ್ಕವಿಟ್ಟವರ್‍ಯಾರು? ಪಟಾಟಿ ದುಡ್ಡು ಹಾರಿಬಿಟ್ಟಿಗೆ ಸಾಲು!

ತನ್ನ ದುರಾಚಾರ ಮುಚ್ಚಿಕೊಳ್ಳಲು ಧರ್ಮ ಮತ್ತು ಸಂತರನ್ನು ಗುರಾಣಿಯಾಗಿಸಿಕೊಳ್ಳಲು ಹೋಗಿ ಸಾಗರ ಸ್ವಾಮಿ ಹುಚ್ಚು ಹಾಡಿದೆಯಲ್ಲ. ಬಹುಶಃ ಯಾವ ಕೇಡಿಗೂ ಇಂಥಾ ಗತಿ ಬಂದಿರಲಿಕ್ಕಿಲ್ಲ. ಪಾಪ ಸೊತ್ತು ಪರರ ಪಾಲು, ಸಂತರ ಸೋಗಿನ ಕಳ್ಳರ ಪಾಲು!

■ ರಾ. ಸೋಮನಾಥ್

ನೀಲಿ

ಕತೆ


ಮೊದಲ ಕೋಳಿ ಕೂಗಿತು. "ಅಯ್ಯೋ ಬೆಳಕ ಆತು. ಇಂದ ಬ್ಯಾರೆ ಅಮವಾಸಿ ಐತಿ ಹಾರಿಗೆಡಿಲಿ. ಈ ನಿದ್ದಿ ಒಂದ ನನಗ ದೆವ್ವ ಕಾಡಿದಂಗ ಕಾಡ್ತೈತಿ ನೋಡ. ಅಮವಾಸಿ ಅಡಗಿ ಮಾಡಬೇಕಾದ್ರ ಸೂರ್ಯಾ ನೆತ್ತಿ ಮ್ಯಾಲ ಬರ್‍ತಾನ" ಎಂದು ಗಡಬಡಿಸಿ ಹಾಸಗಿಯಿಂದ ಮ್ಯಾಲೆದ್ದು ನೀಲವ್ವ ಕಣ್ಣುಜ್ಜತೊಡಗಿದಳು. ತನ್ನ ಮಗ್ಗಲ ಮಲಗಿದ್ದ ಲಕ್ಷಪ್ಪ ಇನ್ನ 'ಗೊರ್'.. .. ಗೊರ್' ಗೊರಕಿ ಹೊಡಿತಿದ್ದ. ಹಿಂದಿನ ಜನ್ಮದಾಗ ಇಂವ ರಾಕ್ಷಯಾಗಿ ಇಟ್ಟದ್ದೋ ಏನೋ ಎಂದು ಗಂಡನ ಗೊರಕಿ ಶಬ್ದಾ ಕೇಳಿ ವಟಗುಡುತ್ತ ಮೆಲ್ಲಕ ಮ್ಯಾಲೆದ್ದು ಚಿಮನಿಗೆ ಒಂದ ಕಡ್ಡಿ ಗೀರಿ ಅದರ ಮೋತಿಗೆ ಇಟ್ಟಳು. ಮಗಳ ಮಲ್ಲವ್ವಳ ಗಗ್ಗರಿ ಮಣಕಾಲ ದಾಟ ಮ್ಯಾಲ ಹೋಗಿತ್ತು. ದೌಳಾಕ ಹೆಂಗ ಮಲಗ್ಯಾಳ ನೋಡ ಮದಿವಿ ಮಾಡಿ ಕೊಟ್ಟರ ವರ್ಷಒಪ್ಪತ್ಯಾಗ ಮಕ್ಕಳಾ ಹಡಿತಾಳ ಮೈಮ್ಯಾಲ ಅರಬಿ ಕಬರಿಲ್ಲದ ಮಲಗ್ಯಾಳ; ತಂದಿ ಇದ್ದಂಗ ಮಕ್ಕಳು ಅಂತ ನೀಲವ್ವ ಮಗಳ ಗಗ್ಗರಿ ಸರಿ ಹಡಿಸುತ್ತ ವಟಗುಟ್ಟಿದಳು. ಮಗಳ ನುಣುಪಾದ ತೊಡೆ ಕಂಡು ತನ್ನ ಹರೆಯದ ನೆನಪು ಎದೆಯಿಂದ ಚಿಮ್ಮಿ ಬಂತು. ತನ್ನ ದೇಹದ ಮೀಸಲಾ ಮುರಿದ ಕಿವುಡ ರಂಗ ನೆನಪಾದ. ರಂಗನಿಗೂ ತನ್ನ ಗಂಡನಿಗೂ ಎಷ್ಟೊಂದು ವ್ಯತ್ಯಾಸ ಇದೆ. ರಂಗ ತನ್ನ ದೇಹ ಸಾಗರದಲ್ಲಿ ಸುಸ್ತಾಗುವವರೆಗೂ ಈಜಾಡಿ ದಡ ಸೇರುತ್ತಿದ್ದ. ಆದ್ರೆ ಗಂಡ ಎನ್ನುವ ಈ ಪ್ರಾಣಿ ಮೂರ ಹೊತ್ತು ಕೂಳು ತಿಂದು ಹುಣ್ಣಿಗ್ಗೆ ಅಮವಾಸಿಗೊಮ್ಮೆ ಸವಾರಿ ನಡೆಸುವುದು ನೆನೆದು, ಇವನದು ಹೆಂತಾ ಸವಾರಿ? ಎರಡ ನಿಮಿಷನ್ಯಾಗ ಸುಸ್ತಾಗಿ ಗೊರಕಿ ಹೊಡೆಯೋ ಅಸಾಯಕ ಶೂರ ಎಂದು ತನ್ನ ಮನದನ್ನ ರಂಗ ಮತ್ತು ತನ್ನ ಗಂಡನ ಪುರುಷತ್ವ ಮನಸ್ಯಾಗ ತೂಗಿ ನೋಡುತ್ತಿದ್ದಳು. ಆಗ ಇವಳ ಮನದಾಗಿನ ಮಾತ ಆಲಿಸುತ್ತ ಚಿಮನಿ ನಗತೊಡಗಿತು.

ದಂದಕ್ಯಾಗ ಕಟ್ಟಿದ ಎಮ್ಮಿಗೊಡ್ಡ ಮಲಕ ಆಡಸ್ಕೋತ ಮಲಗಿತ್ತು. ಒಳಚಿಲಕಾ ತಗದ ಹೊರಗ ಒಂದಹೆಜ್ಜೆ ಮುಂದ ಹೋಗಿ ಗ್ವಾಡಿ ಮಗ್ಗಲ ಕುಳಿತು ಕಾಲಮಡದ ಮ್ಯಾಲೆದ್ದು ಥೂ.. ಥೂ.. ಥೂ.. ಅಂತ ಮೂರ ಸಾರ್ತಿ ಉಗಳಿ ಅತ್ತಾಗ ಇತ್ತಾಗ ನೋಡಿದ್ಲು. ಇನ್ನ ಯಾವ ಮನಿಯಾಗೂ ದೀಪ ಹೊತ್ತಿಕೊಂಡಿದ್ದಿಲ್ಲ. "ಈ ಹಾಳಾದ ಕೋಳಿ ಇಷ್ಟ್ಯಾಕ ಲಗೂನ ಕೂಗೇತಿ" ಎಂದು ಕೂಗಿದ ಕೋಳಿ ಬೈಯುತ್ತ ಒಳಗ ಬಂದು ಮತ್ತೆ ಮಲಗಬೇಕೆನಿಸಿತು. ಇನ್ನ ಮ್ಯಾಲ ಮಲಗಿದ್ರು ಕಳ್ಳ ನಿದ್ದಿ ಹತ್ತೈತಿ ಅನ್ನೂದ ಗೊತ್ತಾಗಿ ಒಲಿಕಡೆ ಹೋಗಿ ಒಲಿ ಬೂದಿ ತಗದು ನೀರು ಕಾಸಾಕ ಒಂದ ಗುಂಡಗಿ ಒಲಿಮ್ಯಾಗ ಇಟ್ಟಳು. ಮತ್ತೆ ರಂಗನ ನೆನಪು ಗಾಣದೆತ್ತಿನಂತೆ ಅವಳ ಮನತುಂಬ ಸುತ್ತತೊಡಗಿತು.

ಅಂದು ಮಟಮಟ ಮಧ್ಯಾಹ್ನ ಪಡಸಾಲ್ಯಾಗ ನೀಲವ್ವ ಒಬ್ಬಾಕೆ ಮನಿಯಾಗ ಅಕ್ಕಿ ಹಸಣ ಮಾಡುತ್ತ ಕುಂತಿದ್ಲು. ಎದರು ಮನಿ ಗೌಡರ ಆಳು ಕಿವುಡ ರಂಗ ದೆವ್ವಿನಂತ ಕೊಡ್ಡದ ತೆಲಿಮ್ಯಾಲ 'ದಿಪ್ಪ.. ದಿಪ್ಪ' ಅಂತ ಕೊಡಲಿಯಿಂದ ಏಟ ಹಾಕುತ್ತಿದ್ದ. ಆಗ ದೊಡ್ಡಾಕಿ ಆದ ನೀಲಿಗೆ ಕಿವುಡ ರಂಗನ ಕಟ್ಟುಮಸ್ತಾದ ತೋಳು, ವಿಶಾಲವಾದ ಎದೆ, ಚಿಗುರುಮೀಸೆ, ಅವನ ಎರಿ ಹೊಲದಂತ ಮೈ ಬಣ್ಣ ಅವಳ ಮನಸಿನಲ್ಲಿ ಗುಮಾನಿ ಗದ್ದಲ ನಡಿಸಿತ್ತು. ಅವನು ಕಟಗಿ ಒಡೆಯುವುದನ್ನು ಅಕ್ಕಿ ಹಸಣು ಮಾಡುತ್ತ ವಾರೆಗಣ್ಣಿನಿಂದ ಕದ್ದು ಕದ್ದು ನೋಡುತ್ತಿದ್ದಳು. ದೊಡ್ಡಾಕಿ ಆಗಿ ಒಂದು ವರ್ಷ ತುಂಬಿದ ಅವಳ ದೇಹ ಅನ್ಯ ಲಿಂಗದ ಆಲಿಂಗನಕ್ಕೆ ತಯಾರಾಗಿ ಕುಳಿತಿತ್ತು. ಇದರಿಂದ ನೀಲವ್ವನ ನೋಟಗಳು ತೀಕ್ಷ್ಣವಾಗಿದ್ದವು. ದೊಡ್ಡಾಕಿ ಆಗುವ ಮೊದಲಿನಿಂದಲೂ ಕಿವುಡ ರಂಗ ಅವಳ ದಿನಾಮಂದಕ್ಕೂ ಸತಾಯಿಸುತ್ತಿದ್ದ. ನೀಲಿ ಕಟ್ಟಿಮ್ಯಾಲ ಕುಂತು ತೆಲಿ ಹಿಕ್ಕೊಳುವಾಗ ಸುಮ್ಮಸುಮ್ಮನೆ ಜಡೆ ಜಗ್ಗಿ ಹೋಗುತ್ತಿದ್ದ. ಮನಿಮುಂದ ಕುಳಿತು ಮುಸರಿ ತಿಕ್ಕುವಾಗ ತಾನು ಕೊಡ ಹೊತ್ತು ನೀರು ತರುತ್ತಿದ್ದ ಕೊಡದಾಗಿನ ನೀರು ನೀಲಿಯ ಮೋತಿಗೆ ಗೊಜ್ಜಿ ನಕ್ಕೊಂತ ಹೋಗುತ್ತಿದ್ದ. "ಯವ್ವಾ ಈ ಕಿವುಡ ನನಗ ನೀರ ಗೊಜ್ಜಿದ" ಎಂದು ನೀಲಿವ್ವ ತನ್ನ ತಾಯಿ ದುಂಡವ್ವಗ ಪಿರ್ಯಾದಿ ಹೇಳಿದರೆ, "ನೀ ದುಂಡವ್ವ ನಕ್ಕೋತ ಅಂವಗ ಕಿವಡಾ ಅಂತಿ ಅದಕ ಅಂವ ಹಂಗ ಮಾಡ್ತಾನ" ಎಂದು ಇವರ ಕುಚೇಷ್ಟೆಯತ್ತ ಬಾಳ ತೆಲಿ ಕೆಡಿಸಿಕೊಳ್ಳುತ್ತಿರಲಿಲ್ಲ. ನೀಲಿ ಎದುರಿಗೆ ಬಂದರೆ ದಾರಿ ಕಟ್ಟಿ ಗಲ್ಲ ಹಿಂಡುತ್ತಿದ್ದ. ಆ ನೋವು ತಾಳದೆ "ಕಿವುಡಾ.. ಬಾಡ್ಯಾ" ಎಂದು ಇಡೀ ಊರೆ ಕೇಳುವ ಹಾಗೆ ನೀಲವ್ವ ರಂಗನನ್ನು ಬೈಯುತ್ತಿದ್ದಳು. ಓಣ್ಯಾಗ ಅಲ್ಲಲ್ಲಿ ಕುಳಿತ ಮುದುಕ್ಯಾರು "ಬಿಡಬ್ಯಾಡಲಾ ಆ ಬೆರಕಿ ಎಣ್ಣೇನ ಎತ್ತಾಗರ ಹಾರಸ್ಕೊಂಡ ಹೋಗು" ಎಂದು ಚಾಷ್ಟಿ ಮಾಡುತ್ತಿದ್ದರು. ನೀಲವ್ವನ ತಾಯಿ ದುಂಡವ್ವ "ನನ್ನ ಮಗಳ ಓಡಸ್ಕೊಂಡ ಹೋಗಬೇಕಾದ್ರ ಅಂವನ ಚೆಣ್ಣ ಬಾಳ ಗಟ್ಟಿ ಇರಬೇಕು" ಎಂದು ನಕಲಿ ಮಾಡಿ ಓಣಿಯ ಎಲ್ಲ ಮುದಿಕಿಯರೊಟ್ಟಿಗೆ ತಾನೂ ನಗುತ್ತಿದ್ದಳು.

ಕಿವುಡ ರಂಗನಿಗೂ ನೀಲಿಗೂ ಆಗಾಗ ಒಂದಿಷ್ಟು ಕೋಳಿ ಜಗಳ ಇದ್ದೇ ಇತ್ತು. ಓಣಿಯ ಮಂದಿ ಈ ಮಳ್ಳ ಹುಡುಗ್ರತ್ತ ತೆಲಿ ಕೆಡಸ್ಕೊತಿದ್ದಿಲ್ಲ. ನೋಡಿ ನೋಡದಂತೆ, ಕೇಳಿ ಕೇಳದಂತೆ ಇರುತ್ತಿದ್ದರು. ಕಿವುಡ ರಂಗ ಆ ಓಣಿ ಮಂದಿ ಮನಸ್ಸ ಗೆದ್ದಿದ್ದ. ಅದರಾಗ ಊರ ಗೌಡರ ಮನೆ ಆಳ ಮನಷ್ಯಾ ಅನ್ನು ಗೌರವ ಅವನಿಗಿತ್ತು. ಅತ್ತಾಗ ಹ್ವಾದ್ರು ರಂಗಾ ಇತ್ತಾಗ ಹ್ವಾದ್ರು ರಂಗ ಅಂತ ಕರಿತಿದ್ರು. ಹಿರ್‍ಯಾರಿಗೆ ಕಿರ್‍ಯಾರ್‍ಗೆ ನೆಡತಿ ಹಚ್ಚಿ ಕಾಕಾ, ದೊಡ್ಡಪ್ಪ ಅಕ್ಕಾ, ದೊಡ್ಡವ್ವ, ಚೀಗವ್ವಾ, ಮಾಂವಾ ಅಂತ ಕರಿತಿದ್ದ. ಹಿಂಗಾಗಿ ರಂಗನ ಮ್ಯಾಲ ಆ ಓಣಿ ಮಂದಿ ಅಷ್ಟ ಅಲ್ಲ ಊರ ಮಂದಿನೂ ಬಾಳ ಜಿಂವ.. ಜಿಂವ ಮಾಡ್ತಿದ್ರು.

ನಡತೆಯಿಂದ ದುಂಡವ್ವಗ ಅಕ್ಕಾ ಅಂತ ರಂಗ ಕರೀತಿದ್ದ. ರಂಗ ಜಾತಿಯಿಂದ ವಾಲಿಕಾರನಾದರೂ ಅವನ ನಡೆ ನುಡಿ ಸ್ವಭಾವ ಚಲೋ ಇರುದ್ರಿಂದ ದುಂಡವ್ವ ತಮ್ಮನ ಸ್ಥಾನ ಕೊಟ್ಟದ್ಲು. ರಂಗ ಹುಟ್ಟ ಪರದೇಸಿ ಮಗಾ ಆಗಿದ್ದ. 'ದಿಕ್ಕಿಲ್ಲದವ್ರಿಗೆ ದೇವ್ರ ಗತಿ' ಅನ್ನುವಂಗ ಇಡೀ ಓಣಿ ಮಂದಿ, ರಂಗನ್ನ ಮಗನತರಾ ಕಾಣತಿದ್ರು. ಒಂದಿನ ಜೋರಾಗಿ ಹೊಡೆದ ಮಳಿಗೆ ಊರ ಮುಂದಿನ ಬಗಸಿ ಹಳ್ಳ ತುಂಬಿ ಬರಟೆ ಹರಿತಿತ್ತು. ಹೊಲದಿಂದ ಮನಿಕಡೆ ಬರ್ತಿದ್ದ ರಂಗನ ಅವ್ವ ಅಪ್ಪನ ಆ ಬಗಸಿ ಹಳ್ಳ ನುಂಗಿತ್ತು. ಆಗ ರಂಗ ಮೂರ ವರ್ಷದ ಹುಡಗ. ರಂಗನ ಅಜ್ಜಿ ಯಮನವ್ವ ಊರಾಗ ಅವರಿವರ ಮನೆ ಕಸಾ ಮುಸರಿ



ಬೆಳಗಿ ಅವರ ಇವರ ಕೊಟ್ಟ ತಂಗಳನ್ನ ಸೀರಿ ಸೆರಗಿನ್ಯಾಗ ಮುಚಗೊಂಡ ಬಂದು ರಂಗಗ ಉಣಸಿ ತಿನಿಸಿ ದೊಡ್ಡಾಂವನ್ನ ಮಾಡಿದ್ಲು. ಊರ ಗೌಡರಿಗೆ "ದೈನಾಸ ಪಟ್ಟ ಮೊಮ್ಮಗನ್ನ ನಿಮ್ಮನ್ಯಾ ದನಾ ಕಾಯಾಕ ಇಟಗೊರ್‍ರೀ.. ನಾ ಇಂದೋ ನಾಳೆನೋ ಉದರಿ ಹೋಗೋ ಮರಾ.." ಎಂದು ಒಂದಿನ ಮಲ್ಲನ ಗೌಡರ ಮುಂದ ಯಮನವ್ವ ಕಣ್ಣೀರಿಟ್ಟಾಗ ಮಲ್ಲನಗೌಡರ ಮನಸು ಕರಗಿತು. "ಆಯ್ತು ನಾಳಿಯಿಂದ ಕಳಿಸಿಕೊಡು ನಿನ್ನ ಮೊಮ್ಮಗನ್ನ" ಎಂದು ಗೌಡ್ರು ಹೇಳಿದಾಗ ಯಮನವ್ವಗ ತನ್ನ ಮೊಮ್ಮಗ 'ಸರಕಾರಿ ನೌಕರಿ' ಸಿಕ್ಕಷ್ಟು ಸಂತೋಷವಾಯ್ತು, ರಂಗನೂ ಗೌಡರ ಮನಿ ಕೆಲಸಕ್ಕ ಹೋಗು ಮೊದಲ ಊರ ಹನಮಪ್ಪಗ ಎರಡ ಜೋಡುಗಾಯಿ ಒಡಸ್ಕೊಂಡ "ನನ್ನಿಂದ ಗೌಡರ ಮನಿಯ್ಯಾಗ ಯಾವ ತಪ್ಪು ಆಗದಂಗ ನೀನ ಕಾಯಪೋ" ಎಂದು ಹನುಮಪ್ಪನ ಕಿವಿಮ್ಯಾಲ ಇಟ್ಟಿದ್ದ.

ಯಮನವ್ವ ಯಾವಾಗಲೂ ಸಿಂಧೂರ ಲಕ್ಷ್ಮಣನ ಕತಿ ಹೇಳಿ ರಂಗನ ಬೆಳೆಸಿದ್ಲು. ರಂಗಗ ಸಿಂಧೂರ ಲಕ್ಷ್ಮಣ್ಣ ಅಂದ್ರ ಒಂದು ರೀತಿ ಅಭಿಮಾನ. ಊರಗ ಹನಮಪ್ಪನ ಗುಡಿಯಾಗ ಕಪ್ಪು ಬಿಳಪಿನ ಚೌಕಟ್ಟನಲ್ಲಿ ಬಂದಿಯಾಗಿದ್ದ ಸಿಂಧೂರ ಲಕ್ಷ್ಮಣನ ಫೋಟೋ ಆಗಾ ನೋಡಿ ತಾನೂ ಇವನಂಗ ಆಗ ಬೇಕು ಅಂತ ಚಿಗುರು ಮೀಸಿಮ್ಯಾಲ ಕೈ ಇಟ್ಟು ಕೊಳ್ಳುತ್ತಿದ್ದ. ಸಿಂಧೂರ ಲಕ್ಷ್ಮಣನ ನಾಟಕಾ ಯಾವೂರಾಗರ ಆಡಾಕತ್ಯಾರ ಅಂತ ಸುದ್ದಿ ತಿಳದ್ರ ಸಾಕ ಬಂವ್ ಅಂತ ಸೈಕಲ್ಲ ಹತ್ತಿ ಹೊಕ್ಕಿದ್ದ. ಮುಂದಿನ ಸಾಲಗ ಕುಂತ ಇಡೀ ರಾತ್ರಿ ನಾಟಕ ನೋಡಿ ಬಂದು ಊರಾಗ ಅಲ್ಲಲ್ಲಿ ತನ್ನ ವಾರಿಗೆ ಗೆಳೆಯರಾದ ಕೋತರ ಬಸ್ಯಾ ಹೂಗಾರ ಶರಣಯ್ಯನ ಮುಂದ ನಾಟಕದ ಡೈಲಾಗ ಹೊಡೆಯುತ್ತ ಚಿಗರು ಮೀಸಿ ತಿರುವುತ್ತ ಗಹಗಹಿಸಿ ನಗುತ್ತಿದ್ದ.

ಇವನ ಡೈಲಾಗ ಕೇಳಿದ ಗೆಳಿಯಾರು ಚಪ್ಪಾಳಿ ತಟ್ಟಿ "ನೀ. ಸೇಮಟು ಸೇಮ ಸಿಂಧೂರ ಲಕ್ಷ್ಮಣನ ಹಂಗ ಅದಿ" ಅಂತ ಶರಣಯ್ಯ ಹೇಳಿದಂಗಾತು ರಂಗಗೆ ಆಕಾಶ ಬಾಳ ದೂರೇನ ಉಳದಿರ್‍ಲಿಲ್ಲ.

ಸಾಲಿ ಹಿಂದು ಮುಂದ ಹಾಯದ ರಂಗನ ಬದುಕು ಮಲ್ಲನಗೌಡರ ದನದ ಕೊಟ್ಟಿಗೆಯಲ್ಲಿ ಮುಂದುವರೆದಿತ್ತು. ತನ್ನ ಸಾಕಿ ಬೆಳಸಿದ ಯಮನವ್ವ ಸತ್ತ ಮೇಲಂತೂ ಖಾಯಂ ಗೌಡರ ದನದ ಮನಿಯೇ ಅವನ ಅರಮನಿಯಾಯಿತು. ತಂದಿ ತಾಯಿ ಪ್ರೀತಿ ಕಾಣದ ರಂಗ ಯಮನವ್ವಜ್ಜಿನ ತಂದಿ ತಾಯಿ ಎಂದು ನಂಬಿತ್ತು, ಆಕೀನೂ ಸತ್ತ ಮ್ಯಾಲ ರಂಗಗ ಯಾರಂದ್ರ ಯಾರೂ ದಿಕ್ಕಿಲ್ಲದಂಗಾತು. ಇದ್ದ ಒಂದ ಹಾಳಮಣ್ಣಿನ ಕೋಣಿ ಮಳಿಗೆ ಮುಗ್ಗರಸಿ ಬಿದ್ದು ನೆಲಸಮವಾಗಿತ್ತು, ಗೌಡ್ರ ಮನೆ ದನಾ ಕಟ್ಟುವ ಕೊಟ್ಟಗೆ ಬಟ್ರೆ ರಂಗನಿಗೆ ಯಾವ ಜಗತ್ತಿನ ಪರಿಚಯ ಇರಲಿಲ್ಲ.

ರಂಗನ ಸಂಬಾಯಿತ ಬುದ್ದಿಗೆ ಗೌಡತಿ ಮನೆ ಮಗನಂತೆ ಕಾಣುತ್ತಿದ್ದಳು. ಆದ್ರೆ ಮಲ್ಲನಗೌಡರಿಗೆ ಇದು ಹಿಡಿಸುತ್ತಿರಲಿಲ್ಲ. "ಚಪ್ಪಲ್ಲು ಬಂಗಾರದ್ದು ಎಂದು ಜಗಲಿ ಮ್ಯಾಲ ಇಡಾಕ ಅಕ್ಕೈತೇನು" ಒಂದು ಸಾರಿ ಗೌಡತಿಯನ್ನು ಹಚ್ಚಿ ಜಾಡಿಸಿದ್ದ. ಅಂದಿನಿಂದ ರಂಗ ಬರೀ ಕಟಗಿ ಒಡಿಯೋದಿದ್ರೆ ಅಷ್ಟೇ ಗೌಡರ ಮನಿಕಡೆ ಬರ್ತಿದ್ದ. ಉಳಿದ ಸಮಯ ಅದೆ ದನದ ಕೊಟ್ಟಗೆಯಲ್ಲಿ ದನಕ್ಕೆ ನೀರು ಕುಡಿಸುವುದು, ಹೆಂಡಿ ಮಾಡುವುದು. ಕೆಲಸ ಇಲ್ಲದಿದ್ದಾಗ ತನ್ನ ವಾರಿಗೆ ಗೆಳೆಯರೊಂದಿಗೆ ಅಲ್ಲಲ್ಲಿ ಕಟ್ಟಗೆ ಕುಳಿತು ಹರಟೆ ಹೊಡೆಯುವುದು ಮಾಡುತ್ತಿದ್ದ. ರಂಗ ಹರಟೆ ಹೊಡೆಯುವುದನ್ನು ಸಹಿಸದ ಸೆಟ್ಟರ ಸುಭಾಷ ಕುದ್ದಾಗಿ ಗೌಡರ ಕಿವಿಯಲ್ಲಿ ಊದಿ ರಂಗನಿಗೆ ಚಾಸ್ತಿ ಮಾಡಿಸಿ ನಕ್ಕಿದ್ದ ಅಂದಿನಿಂದ ತಾನಾತು ತನ್ನ ಕೆಲಸಾತು ಯಾವ ಗೊಡವಿಗೂ ಹೋಗದೆ ರಂಗ ಸುಮ್ಮನಿದ್ದ.

ಅಂದು ಗೌಡತಿ "ಮನಿಯಾಗ ಒಂದೂ ಕಟಗಿಲ್ಲ, ಒಂದಿಷ್ಟ ಕಟಗಿ ಒಡದ ಕೊಟ್ಟ ಹೋಗಬಾ" ಎಂದು ರಂಗನನ್ನು ಕರೆಸಿದ್ದಳು. ಗೌಡರ ಮನಿಯಂಗಳದಲ್ಲಿ ಉರುಉರು ಬಿಸಿಲಲ್ಲಿ ರಂಗ ದೆವ್ವಿನಂತ ಕೊಡ್ಡದ ಜೋಡಿ ತಳಕಿಗೆ ಬಿದ್ದಿದ್ದ. ರಂಗ ಕಟಗಿ ಒಡೆಯುವುದನ್ನು ಕದ್ದು ಕದ್ದು ನೀಲಿ ನೋಡುತ್ತ ಅಕ್ಕಿಯಲ್ಲಿ ಹಳ್ಳ ಹುಡುಕುತ್ತಿದ್ದಳು. ಆಗಷ್ಟೇ ಹತ್ತನೇತೆ ಪಾಸಗಿದ್ದ ನೀಲಿಯ ಮನಸ್ಸು ಹಕ್ಕಿಯಂತೆ ಎಲ್ಲೆಂದರಲ್ಲಿ ಹಾರಾಡಬೇಕು ಅಂತ ಅನಿಸುತ್ತಿತ್ತು. "ರಂಗ ಮೊದಲಿನಂತೆ ನನ್ಯಾಕ ಕಾಡಸ್ತಿಲ್ಲ, ಜಡಿಹಿಡಿದು ಜಗ್ಗುತ್ತಿಲ್ಲ, ಕೊಡಹೊತ್ತು ನೀರು ತರುವಾಗ ನನಗೇಕೆ ಮಾರಿಗೆ ನೀರು ಚಿಮುಕಿಸುತ್ತಿಲ್ಲ, ದಾರಿಗಟ್ಟಿ ನನ್ನ ಗಲ್ಲ ಏಕೆ ಹಿಂಡುತ್ತಿಲ್ಲ" ಎಂದು ನೀಲಿ ಮನದಲ್ಲಿ ಚಡಪಡಿಸಿದಳು. ರಂಗನ ಕಬ್ಬಿಣದಂತ ಕೈ ಸ್ಪರ್ಶ ನೀಲಿಗೆ ಈಗ ಬೇಕೆನಿಸುತ್ತಿತ್ತು.

ದಬ್ ದಬ್ ಕಟ್ಟಿಗೆ ಒಡೆಯುತ್ತಿದ್ದ ರಂಗನ ಎದೆಯಲ್ಲಿ ಬೆವರು ಹರಿಯುತ್ತಿತ್ತು, ಮೈಯೆಲ್ಲ ತೈಲಮಯವಾಗಿತ್ತು. ತುಂಬಿದ ತೋಳುಗಳು ಮಿರಮಿರನೆ ಮಿನುಗುತ್ತಿದ್ದವು. ಅವನ ಚಿಗುರು ಮೀಸೆಯಲ್ಲಿ ಬೆವರ ಹನಿ ಜಿನುಗುತ್ತಿತ್ತು. ಯಾವಾಗೂ ತನ್ನ ಮನೆಯ ಕಡೆ ಕಣ್ಣು ಹರಿಬಿಡುವ ಅವನ ಕಣ್ಣುಗಳೇಕೆ ಇಂದು ಇತ್ತ ಹಾಲುತ್ತಿಲ್ಲ ಎಂದ[...] ನೀಲಿಗೆ ಸಿಟ್ಟು ಬರತೊಡಗಿತು. ಹೆಂಗೋ ಧೈರ್ಯಮಾ[...] ಜೋರಾಗಿ "ಕಿವುಡಾ" ಎಂದು ಕರುಚಿದಳು. ಆಗ ರಂ[...] ಇವಳತ್ತ ಗಮನಿಸದೆ ಕಟಗಿ ಒಡೆಯುತ್ತಲೇ ಇದ್ದ. "ಇ[...] ದಿನಾ ಈ ಮೂಳ ನಾ ಬ್ಯಾಡ ಅಂದ್ರೂ ಕಾಡಸ್ತಿ[...] ಈಗೇನಾಗೇತಿ ಇಂವಗ ಈಗ ದಾಡಿ" ಎಂದು ಮನದಲ್ಲಿ[...] ರಂಗನ್ನು ಬೈಯುತ್ತಿದ್ದಳು.

ಅವಳಿಗೆ ರಂಗನ ಮೊದಲಿನ ಚೇಷ್ಟೆ ಬೇಕೆನಿಸುತ್ತಿ[...] ಮತ್ತೆ ಮತ್ತೆ ಕಿವುಡಾ ಎಂದು ಮೆಲ್ಲನೆ ಗೊಣಗಿದಾ[...] ರಂಗ ಬೆವರು ಒರೆಸಿಕೊಳ್ಳುತ್ತ ನೀಲಿಯನ್ನು ನೋಡಿ ಚಿಗುರ[...] ಮೀಸೆ ನೆವರುತ್ತ ಮುಗುಳ್ನಕ್ಕ. ಆಗ ನೀಲಿ ನವಿಲಾದಳ[...] ಗರಿಗೆದರಿದಳು. ಅವನನ್ನೇ ನೋಡುತ್ತ ಎಷ್ಟೋ ಹೊತ್ತ[...] ಕುಳಿತಳು. ರಂಗ ಆಗಾಗ ಇವಳತ್ತ ನೋಟ ಹರಿಸುತ್ತಿ[...] ನೀಲಿ ಗಿಳಿಮರಿಯಂತೆ ನಗುತ್ತಿದ್ದಳು. ಮತ್ತೊಮ್ಮೆ ಮೆಲ್ಲ[...] ಕಿವುಡಾ ಎಂದು ಉಲಿದಾಗ ರಂಗ ಕಣ್ಸನ್ನೆ ಮಾಡಿನ[...] ಆಗ ನೀಲಿಯ ಮೈಯಲ್ಲಿ ಕರೆಂಟು ಪಾಸಾದಂತೆ ಆಯಿತು[...] ಬಾಗಿಲ ಹತ್ತಿರ ಬಂದು ಮೇಕೆ ಮರಿಯ ಬೆನ್ನು ಸವರು[...] ರಂಗನಿಗೆ ತಾನೂ ಕಣ್ಸನ್ನೆಗೆ ಸಮ್ಮತಿ ನೀಡಿ ಪ್ರೀತಿಯ[...] ಗುಡಿಗೆ ದೀಪ ಹಚ್ಚಿಟ್ಟಳು.

* * *

ಗೌಡರು ಪ್ರತಿವರ್ಷವೂ ಭರತ ಹುಣ್ಣಿಗೊಮ್ಮೆ ಸವದ[...] ಯಲ್ಲಮ್ಮ ಗುಡ್ಡಕ್ಕ ಎತ್ತಿನ ಬಂಡಿ ಕಟ್ಟಿಕೊಂಡ[...] ಹೋಗುತ್ತಿದ್ದರು. ಹುಣ್ಣಿಮೆ ನಾಳೆ ಇದೆ ಎಂದಾಗ ಅವ[...] ಎತ್ತಿನ ಬಂಡಿ ಇಂದೇ ಸಜ್ಜಾಗಿಹೋಗುವ ತಯಾರಿಯ[...] ಇರುತ್ತಿತ್ತು, ಊರ ಗೌಡರು ಬಂಡಿ ಹೂಡ್ಯಾರಂದ್ರ ನಾವ್ಯಾ[...] ಸುಮ್ನಿರುದು ಅಂತ ಊರಾಗಿನ ಮಂದಿನೂ ಬಂಡ[...] ಕೊಳ್ಳಗಟ್ಟುತ್ತಿದ್ರು. ಇಪ್ಪತ್ತರಿಂದ ಇಪ್ಪತ್ತೈದು ಬಂಡಿ ಸಾಲುಗಟ್ಟ[...] ಎಲ್ಲಮ್ಮನ ಗುಡ್ಡದ ಹಾದಿ ಹಿಡಿತಿದ್ದವು. ಗೌಡರ ಬಂಡ[...] ಪ್ರತಿ ವರ್ಷನೂ ಮುಂದ ಹೋಗಬೇಕು ಅನ್ನುವ[...] ಸಂಪ್ರದಾಯ ಇತ್ತು, ಗೌಡರ ಬಂಡಿ ಹಿಂದ ಸೆಟ್ಟರ[...] ಬಂಡಿ, ಅದರ ಹಿಂದ ಐಗೋಳ ತಿಪ್ಪಯ್ಯನ ಬಂಡಿ, ಕಡ[...] ಕಡೆಗೆ ಹೊಲ್ಯಾರು ದಾಸರು ಬಂಡಿಗೋಳು ಬರ್ತಿದ್ದವು.

ಎಳ್ಳ ಹಚ್ಚಿದ ಸಜ್ಜೆರೊಟ್ಟಿ, ಹುಳಿಬಾನ, ಗುರೆಳ್ಳ ಹಿಂಡಿ[...] ಸಿಂಗಾದ ಹಿಂಡಿ, ಹುರದ ಕರಚಿಕಾಯಿ ಒಂದ ಹಾ[...] ಇರಾಕಲೆ ಮನಿಯಾಗ ಹೆಣ್ಣಮಕ್ಕಳು ಸಿದ್ಧಮಾಡಕೋತಿದ್ರು[...] ತೆಳ್ಳಗ ಬಿಳಿಜ್ವಾಳದ ರೊಟ್ಟನೂ ಮಾಡಿ ಪುಟ್ಟಿಗಂಟ್ಲೆ ತುಂಬ[...] ಇಡತಿದ್ರು. ಬೇಕ ಬ್ಯಾಡಾದ್ದು ಎಲ್ಲವನ್ನು ಕಟ್ಟಿಕೊಂಡು[...] ಇಳಿ ಸಂಜಿ ಹೊತ್ತಿಗೆ ಊರಿಂದ ಬಂಡಿಗೋಳು ಹೊರಡಲು[...] ಸಿದ್ಧವಾದವು.

ಊರ ಜನರು ಎತ್ತುಗಳ ಮೈ ತೊಳೆದು, ಕೊಂಬು[...] ಸವರಿ, ಬಣ್ಣಬಣ್ಣದ ರಿಬ್ಬನ್ನು ಕಟ್ಟಿ, ಕಾಲಿಗೆ ನಾಲು ಕಟ್ಟಿಸಿ[...] ಮೈತುಂಬ ಜೂಲಾ ಹಾಕಿ ಶೃಂಗಾರ ಮಾಡಿದ್ದರು. ಎತ್ತುಗಳು[...] ಹುರುಪಿನಿಂದ ನಲಿಯುತ್ತಿದ್ದವು. ರಂಗನೂ ಎತ್ತುಗಳ ಮೈ[...] ತೊಳೆದು ಕಾರ ಹುಣ್ಣಿಮೆಯಂದು ಅಲಂಕಾರ ಮಾಡಿದಂತೆ[...] ಅಲಂಕಾರ ಮಾಡಿದ್ದ. ಆನೆ ಎತ್ತರದ ಗೌಡರ ಎತ್ತುಗಳು[...] ಊರಿಗೆ ದೊಡ್ಡವು. ಎಲ್ಲರ ಕಣ್ಣುಗಳು ಆ ಎತ್ತಿನತ್ತಲೆ[...] ಇರುತ್ತವೆ ಎಂದು ಅವುಗಳ ಕಾಲಿಗೆ ನೆದರು ಆಗಬಾರದೆಂದು[...] ಮುಂಗಾಲಿಗೆ ಕರಿ ದಾರ ಕಟ್ಟಿದ್ದ.

ರಂಗ ಗುಡ್ಡಕ್ಕೆ ಹೋಗುವುದು ಖಚಿತಪಡಿಸಿಕೊಂಡು[...] ನೀಲಿಯೂ "ಗುಡ್ಡದೆಲ್ಲಮನಿಗೆ ನಾನೂ ಹೊಕ್ಕೇನಿ" ಎಂದು[...] ನಾಕಾರು ದಿನದಿಂದಲೇ ದುಂಡವ್ವನಿಗೆ ಗಂಟು ಬಿದ್ದಿದ್ದಳು. ದುಂಡವ್ವ "ಮುಂದಿನ ವರ್ಷ ಹೋಗೂವಂತೆ ಈ ವರ್ಷ ಬ್ಯಾಡ" ಎಂದು ಎಷ್ಟ ಹೇಳಿದರೂ ಊಟ ಬಿಟ್ಟು ಹಠಮಾಡಿ ಕುಳಿತಾಗ "ಹುಡಗಿ ಅಷ್ಟ ಜಿಂವಾ ತಿಂತೈತಿ ಕಳಿಸಿಕೊಡು, ನಾವೇನ ಹೊರಗಿನವರೇನು. ನಮ್ಮ ಜೋಡಿ ಬರವಳ್ಳು" ಎಂದು ಗೌಡನ ಹೆಂಡತಿ ದುಂಡವ್ವಗ ಅಂದಾಗ ಗೌಡತಿ ಮಾತ ಮೀರದೆ ದುಂಡವ್ವ ಒಪ್ಪಗೊಂಡ್ಳು.

ಹಕ್ಕಿಗಳು ಗೂಡು ಸೇರುವ ಹೊತ್ತಿಗೆ ಊರಿಂದ ಒಂದೊಂದೇ ಗಾಡಿಗಳು ಮೆಲ್ಲಕ ಸವದತ್ತಿ ಗುಡ್ಡದತ್ತ ಸಾಗಿದವು. ಗೌಡರ ಬಂಡಿ ಹೊಡೆಯುವ ರಂಗ ಗೌಡರು ತಂದು ಕೊಟ್ಟ ಹೊಸಾ ಬಟ್ಟೆ ತೊಟ್ಟುಕೊಂಡು ರಾಜಕುಮಾರನಂತೆ ಕಾಣುತ್ತಿದ್ದ. ತಲೆಯ ಕರಾಪು ನೀಟಾಗಿ ಮಾಡಿಸಿಕೊಂಡು ನೀಲಿಯ ಮುದ್ದಾದ ಕಣ್ಣುಗಳಿಗೆ ಮನ್ಮಥನಂತೆ ಕಾಣುತಿದ್ದ. ಊರ ಬಂಡಿಗೋಳಕ್ಕಿಂತ ತನ್ನ ಬಂಡಿ ಮುಂದ ಹೊಂಟದ್ದು ರಂಗನಿಗೊಂದು ದೊಡ್ಡ ಹೆಮ್ಮೆ ವತ್ತಟ್ಟಿಗಾದರೆ, ತನ್ನ ಮನದಲ್ಲಿ ದಿನಾಲೂ ನಿದ್ದೆಗೆಡಿಸುವ ದೇವತೆ ನೀಲಿ ತನ್ನ ಬಂಡಿಯಲ್ಲಿ ಬಂದದ್ದು ರಂಗನಿಗೊಂದು ಸಂಭ್ರಮ ತಂದಿತ್ತು.

"ಉಧೋ.. ಉಧೋ ಉಧೋ ಎಲ್ಲಮ್ಮ ನಿನ್ನಾಲಿಕೂಧೋ.. ಜೋಗಳ ಬಾಯಿ ಸತ್ಯವ್ವ ನಿನ್ನಾಲೂಧೋ.. ಪರಶುರಾಮಾ ನಿನ್ನಾಲೂಧೋ" ಎಂದು ಬಂಡಿಯಲ್ಲಿದ್ದವರು ದೇವಿ ಯಲ್ಲಮ್ಮ ತಾಯಿಯನ್ನು ಭಕ್ತಿಭಾವದಿಂದ ನೆನೆಯುತ್ತಿದ್ದರು. ರಂಗನೂ ಎತ್ತುಗಳ

⏭ 15

ಜೆಎನ್‌ಯು ವಿವಾದ ಮತ್ತು ಸಂಘ ಪರಿವಾರದ ಕಾರ್ಯಸೂಚಿ

2014ರ ಮೇ ತಿಂಗಳಿನಿಂದೀಚೆಗೆ ಭಾರತದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ದೇಶದ ಅಲ್ಪಸಂಖ್ಯಾತರನ್ನು, ದಲಿತರನ್ನು, ಆದಿವಾಸಿಗಳನ್ನು ದಮನಿಸಿ ಅವರನ್ನೆಲ್ಲ ಎರಡನೆ, ಮೂರನೆ ದರ್ಜೆಯ ಪ್ರಜೆಗಳಾಗಿಸುವ ಹುನ್ನಾರವೊಂದು ಜಾರಿಯಲ್ಲಿರುವುದನ್ನು ಗುರುತಿಸಬಹುದು. ಸಂವಿಧಾನಕ್ಕೆ ತಿಲಾಂಜಲಿಯಿತ್ತು ಮನುಸ್ಮೃತಿಯನ್ನು ರಾಷ್ಟ್ರಗ್ರಂಥವಾಗಿಸಿ ಜಾತಿಪದ್ಧತಿಯನ್ನು ಮುಂದುವರಿಸಲು ಬಯಸುತ್ತಿರುವಂತಹ ಈ ಆರೆಸ್ಸೆಸ್‌ನ ಗುರು ಗೋಲ್ವಲ್ಕರ್ ಬಹಳ ಸ್ಪಷ್ಟವಾಗಿ ಹೇಳಿರುವಂತೆ ಹಿಂದೂ ರಾಷ್ಟ್ರೀಯವಾದಿಗಳೆ ದೇಶಭಕ್ತರು, ಮಿಕ್ಕವರೆಲ್ಲ (ಅರ್ಥಾತ್ ಮುಸ್ಲಿಮರು, ಕ್ರೈಸ್ತರು, ಕಮ್ಯೂನಿಸ್ಟರಂಥವರು) ದೇಶದ್ರೋಹಿಗಳು; ಭಾರತದ ಸಂಸ್ಕೃತಿಯನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತಿರುವುದು ಭಗವಾ ಧ್ವಜವೆ ಹೊರತು ತ್ರಿವರ್ಣಧ್ವಜವಲ್ಲ, ಇದೆಲ್ಲವೂ ಗೋಲ್ವಲ್ಕರ್ ವಿರಚಿತ 'ವಿ ಆರ್ ಅವರ್ ನೇಷನ್‌ಹುಡ್ ಡಿಫೈನ್ಡ್' ಮತ್ತು 'ಬಂಚ್ ಆಫ್ ಥಾಟ್ಸ್' ಎಂಬ ಎರಡು ಹೊತ್ತಿಗೆಗಳಲ್ಲಿ ನಿರೂಪಿಸಲ್ಪಟ್ಟಿದೆ. ಇವು ಸಂಘ ಪರಿವಾರದ ಧರ್ಮಗ್ರಂಥಗಳೆಂದೇ ಪರಿಗಣಿಸಲ್ಪಟ್ಟಿವೆ. ಇವತ್ತಿನ ಸನ್ನಿವೇಶದಲ್ಲಿ ಪ್ರಸ್ತುತವಾಗುವ ಕೆಲವು ಆಣಿಮುತ್ತುಗಳು:

"ಹಿಂದೂಸ್ತಾನದಲ್ಲಿರುವ ವಿದೇಶೀಯ ಜನಾಂಗಗಳು (ಅರ್ಥಾತ್ ಮುಸ್ಲಿಮರು ಮತ್ತು ಕ್ರೈಸ್ತರು)..... ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ತ್ಯಜಿಸಿ ಹಿಂದೂ ಜನಾಂಗದೊಳಕ್ಕೆ ಸೇರಿಕೊಳ್ಳಬೇಕು. ಇಲ್ಲ ಯಾವುದಕ್ಕೂ ಆಗ್ರಹಿಸದೆ, ಯಾವುದೇ ಸವಲತ್ತುಗಳಿಗೂ, ವಿಶೇಷ ಸೌಕರ್ಯಗಳಿಗೂ ಅರ್ಹರಾಗದೆ, ನಾಗರಿಕ ಹಕ್ಕುಗಳನ್ನು ಸಮೇತ ಕೇಳದೆ ಹಿಂದೂ ರಾಷ್ಟ್ರಕ್ಕೆ ಪೂರ್ತಿ ಅಧೀನರಾಗಿ ದೇಶದೊಳಗಿರಬಹುದು" (ವಿ ಆರ್ ಅವರ್ ನೇಷನ್‌ಹುಡ್ ಡಿಫೈನ್ಡ್).

"ಯಾರು ಹಿಂದೂ ಜನಾಂಗವನ್ನು ಹಾಗೂ ಹಿಂದೂ ರಾಷ್ಟ್ರವನ್ನು ಕೊಂಡಾಡಿ, ಅವುಗಳನ್ನು ತಮ್ಮ ಹೃದಯಕ್ಕೆ ಸಮೀಪವಾಗಿರಿಸುವ ಹೆಬ್ಬಯಕೆಯೊಂದಿಗೆ ಚಟುವಟಿಕೆಯಲ್ಲಿ ತೊಡಗಲು ಪ್ರೇರೇಪಿತರಾಗಿ, ಗುರಿಸಾಧನೆಗಾಗಿ ದುಡಿಯುತ್ತಾರೋ ಅವರು ಮಾತ್ರ ರಾಷ್ಟ್ರೀಯವಾದಿ ದೇಶಭಕ್ತರು. ಮಿಕ್ಕವರೆಲ್ಲರೂ ಒಂದೋ ದೇಶದ್ರೋಹಿಗಳು ಮತ್ತು ರಾಷ್ಟ್ರೀಯ ಧ್ಯೇಯೋದ್ದೇಶದ ಶತ್ರುಗಳು ಅಥವಾ ಒಂದಿಷ್ಟು ಉದಾರತೆಯಿಂದ ಕರೆಯುವುದಾದರೆ, ಮೂರ್ಖರು" (ವಿ ಆರ್ ಅವರ್ ನೇಷನ್‌ಹುಡ್ ಡಿಫೈನ್ಡ್).

"ನಮ್ಮ ನಾಯಕರು ನಮ್ಮ ದೇಶಕ್ಕಾಗಿ ಹೊಸದೊಂದು ಧ್ವಜವನ್ನು ಆಳವಡಿಸಿಕೊಂಡಿದ್ದಾರೆ. ಅವರೇಕೆ ಹಾಗೆ ಮಾಡಿದರು? ಅದು ಗೊತ್ತುಗುರಿಯಿಲ್ಲದಿರುವಿಕೆ ಮತ್ತು ಅನುಕರಣೆ..... ನಮ್ಮದು ಭವ್ಯ ಇತಿಹಾಸವಿರುವ ಪ್ರಾಚೀನ ಹಾಗೂ ಮಹಾನ್ ದೇಶ. ಹಾಗಾದರೆ ನಮಗೆ ನಮ್ಮದೇ ಆದ ಧ್ವಜ ಇರಲಿಲ್ಲವೇ?......" (ಬಂಚ್ ಆಫ್ ಥಾಟ್ಸ್).

(ಭಾರತದ) ಮಹಾನ್ ಸಂಸ್ಕೃತಿಯನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತಿರುವುದು ಭಗವಾಧ್ವಜ (ಜುಲೈ 14, 1946, ನಾಗಪುರದಲ್ಲಿ "ಶ್ರೀ ಗುರೂಜಿ ಸಮಗ್ರ ದರ್ಶನ್" ನಲ್ಲಿ ಉಲ್ಲೇಖಿಸಿರುವಂತೆ).

"ಒಂದು ಧ್ವಜ, ಒಬ್ಬ ನಾಯಕ ಮತ್ತು ಒಂದು ಸಿದ್ಧಾಂತದಿಂದ ಸ್ಫೂರ್ತಿ ಪಡೆಯುತ್ತಿರುವ ಆರೆಸ್ಸೆಸ್ ಈ ಮಹಾನ್ ದೇಶದ ಮೂಲೆಮೂಲೆಗಳಲ್ಲೂ ಹಿಂದೂತ್ವದ ಜ್ಯೋತಿಯನ್ನು ಬೆಳಗಿಸುತ್ತಿದೆ" (1940, ಮದ್ರಾಸ್‌ನಲ್ಲಿ - ಶ್ರೀ ಗುರೂಜಿ ಸಮಗ್ರ ದರ್ಶನ್ ನಲ್ಲಿ ಉಲ್ಲೇಖಿಸಿರುವಂತೆ). ಫ್ಯಾಸಿಸಂ ಮತ್ತು ನಾಜಿಸಂಗಳಿಗೂ ಸ್ಫೂರ್ತಿಯಾಗಿದ್ದುದು ಇದೇ ಒಂದು ಧ್ವಜ, ಒಬ್ಬ ನಾಯಕ ಮತ್ತು ಒಂದು ಸಿದ್ಧಾಂತ ಎಂಬುದನ್ನು ಗಮನಿಸಬೇಕಾಗಿದೆ.

ಭಗವಾಧ್ವಜ, ಏಕನಾಯಕತ್ವ ಮತ್ತು ಹಿಂದೂತ್ವ ಸಿದ್ಧಾಂತದಿಂದ ಸ್ಫೂರ್ತಿ ಪಡೆಯುವ ಆರೆಸ್ಸೆಸ್‌ಗೆ ಕೇಂದ್ರದಲ್ಲಿ ತನ್ನದೇ ಮೋದಿ ಸರ್ಕಾರ ಬಂದ ನಂತರ ತನ್ನ ಚಟುವಟಿಕೆಗಳನ್ನು ತೀವ್ರಗೊಳಿಸಲು ಮುಕ್ತ ರಹದಾರಿ ದೊರೆತಿದೆ. ಭಾರತವನ್ನು ಹಿಂದೂ ರಾಷ್ಟ್ರವಾಗಿ ಪರಿವರ್ತಿಸುವ ಅಜೆಂಡಾದ ಭಾಗವಾಗಿಯೆ ಇಂದು ಸಾಮಾಜಿಕ, ಸಾಂಸ್ಕೃತಿಕ ಮತ್ತಿತರ ವಲಯಗಳ ಕೇಸರೀಕರಣ ನಡೆಯುತ್ತಿದೆ. ಐಸಿಎಚ್‌ಆರ್, ಐಸಿಸಿಆರ್, ಮದ್ರಾಸ್ ಐಐಟಿ, ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ, ಹೈದರಾಬಾದ್ ವಿವಿ ಇತ್ಯಾದಿಗಳ ನಂತರ ಇದೀಗ ಜವಹರ್‌ಲಾಲ್ ನೆಹರೂ ವಿವಿ (ಜೆಎನ್‌ಯು) ಸರದಿ. ಭವಿಷ್ಯದಲ್ಲಿ ಟಾಟಾ ಸಮಾಜ ವಿಜ್ಞಾನ ಸಂಸ್ಥೆ ಮತ್ತು ಇಂತಹದೇ ಇನ್ನಿತರ ಸಂಘಸಂಸ್ಥೆಗಳ ಸರದಿ ಬರಲಿರುವುದಂತೂ ನಿಶ್ಚಿತ.


ಕೇಂದ್ರಬಿಂದುವಾದ ಅಂಶವನ್ನು ಎತ್ತಿಕೊಳ್ಳೋಣ. ಸಂಸತ್ ದಾಳಿ ಪ್ರಕರಣದಲ್ಲಿ ಅಫ್ಜಲ್ ಗುರು ಅಪರಾಧಿ ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಮಾನಿಸಿದ ಹನ್ನೆರಡು ವರ್ಷಗಳ ನಂತರ 2013ರ ಫೆಬ್ರವರಿ 9ರಂದು ಆತನನ್ನು ಗಲ್ಲಿಗೇರಿಸಲಾಯಿತು. ಆದರೆ, ಕಾಶ್ಮೀರದ ಪ್ರಜಾಸತ್ತಾತ್ಮಕ ಜನತಾ ಪಕ್ಷ (ಪಿಡಿಪಿ) ಮತ್ತು ಜೆಎನ್‌ಯುನ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಒಕ್ಕೂಟ (ಡಿಎಸ್‌ಯು) ಸೇರಿದಂತೆ ಅನೇಕರ ಪಾಲಿಗೆ ಇವತ್ತಿಗೂ ಅವನೊಬ್ಬ ಹುತಾತ್ಮ. ಅಫ್ಜಲ್ ಗುರು ಮತ್ತು ಮಕ್‌ಬೂಲ್ ಭಟ್ ಸಾವುಗಳನ್ನು "ನ್ಯಾಯಾಂಗದಿಂದಾದ ಹತ್ಯೆ" ಎಂದು ಕರೆದ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಒಕ್ಕೂಟ ಅದನ್ನು ಪ್ರತಿಭಟಿಸುವ ಸಲುವಾಗಿ ಜೆಎನ್‌ಯು ಕ್ಯಾಂಪಸ್‌ನಲ್ಲೊಂದು ಸಾಂಸ್ಕೃತಿಕ ಸಭೆ ನಡೆಸಲು ನಿರ್ಧರಿಸಿತು. ಬಳಿಕ ನಿಯಮಾವಳಿಗಳ ಅನುಸಾರ ಆಡಳಿತದಿಂದ ಅನುಮತಿಯನ್ನೂ ಪಡೆದುಕೊಂಡಿತು. ಆದರೆ ಕಾರ್ಯಕ್ರಮ ಆರಂಭವಾಗಲು ಇನ್ನೇನು 20 ನಿಮಿಷಗಳಿದ್ದಾಗ ಇದ್ದಕ್ಕಿದ್ದಂತೆ ಅನುಮತಿಯನ್ನು ಹಿಂದೆಗೆದುಕೊಳ್ಳಲಾಯಿತು. ಇದರಲ್ಲಿ ಸಂಘ ಪರಿವಾರದ ವಿದ್ಯಾರ್ಥಿ ಘಟಕವಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ (ಎಬಿವಿಪಿ) ಕೈವಾಡ ಇರುವುದು ಮೇಲುನೋಟಕ್ಕೇ ಸ್ಪಷ್ಟವಿದೆ. ಇದರ ಹಿನ್ನೆಲೆ ಹೀಗಿದೆ: ಜೆಎನ್‌ಯುವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಹೊಂಚು ಹಾಕುತ್ತಲೆ ಇದ್ದ ಸಂಘ ಪರಿವಾರ ಕೆಲವು ತಿಂಗಳುಗಳ



ಹಿಂದೆ ತನ್ನ ಬಂಟ ಡಾ. ಸುಬ್ರಮಣ್ಯನ್ ಸ್ವಾಮಿಯನ್ನು ಅಲ್ಲಿ ಉಪಕುಲಪತಿಯಾಗಿ ನೇಮಿಸಲು ಯತ್ನಿಸಿತ್ತು. ಈ ಪ್ಲಾನ್ ವಿಫಲವಾದ ಬೆನ್ನಿಗೆ ಜೆಎನ್‌ಯು ವಿದ್ಯಾರ್ಥಿ ಯೂನಿಯನ್ ಚುನಾವಣೆಗಳಲ್ಲಿಯೂ ಎಬಿವಿಪಿಗೆ ಸೋಲಾಗಿತ್ತು. ಹೀಗೆ ಎರಡೆರಡು ಬಾರಿ ಸೋಲನುಭವಿಸಿದ್ದ ಸಂಘ ಪರಿವಾರ ಸೂಕ್ತ ಅವಕಾಶಕ್ಕಾಗಿ ಕಾಯುತ್ತಿತ್ತು. ಅಫ್ಜಲ್ ಗುರು, ಮಕ್‌ಬೂಲ್ ಭಟ್ ಸಾವಿನ ವಿರುದ್ಧದ ಈ ಪ್ರತಿಭಟನಾ ಕಾರ್ಯಕ್ರಮ ಅದರ ಪಾಲಿಗೆ ದೈವದತ್ತ ಅವಕಾಶವಾಗಿ ಬಂದಿದೆ. ಗಮನಾರ್ಹ ವಿಷಯವೆಂದರೆ ಇಂತಹದೊಂದು ಕಾರ್ಯಕ್ರಮ ಕಳೆದ ವರ್ಷ ಕೂಡ ನಡೆದಿದ್ದು ಅಂದು ಯಾವುದೆ ಸದ್ದುಗದ್ದಲ, ಆಕ್ಷೇಪಣೆಗಳಿಲ್ಲದೆ ಸುಖಾಂತ್ಯಗೊಂಡಿತ್ತು!

ಇದರ ನಂತರ ಏನೆಲ್ಲ ಭಯಾನಕ ಘಟನೆಗಳು ಸಂಭವಿಸಿದವು ಎಂಬುದನ್ನು ನಾವೆಲ್ಲರೂ ಚೆನ್ನಾಗಿ ಬಲ್ಲೆವು. ದಿಲ್ಲಿ ಪೊಲೀಸರು ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷ ಕನ್ಹಯ್ಯಾ ಕುಮಾರನ ಮೇಲೆ "ರಾಷ್ಟ್ರದ್ರೋಹ" ಅಥವಾ "ರಾಷ್ಟ್ರದ ವಿರುದ್ಧ ಪಿತೂರಿ"ಯ ಆರೋಪ ಹೊರಿಸಿ ಆತನನ್ನು ಬಂಧಿಸಿದರು. ಈ ರೀತಿ ಪೊಲೀಸರು ಜೆಎನ್‌ಯು ಕ್ಯಾಂಪಸ್ ಪ್ರವೇಶಿಸಿ ಕ್ಷಣಮಾತ್ರದಲ್ಲಿ ವಿದ್ಯಾರ್ಥಿಗಳ ಮೇಲೆ ಕ್ರಮ ಕೈಗೊಂಡಿರುವುದು; ಪಟಿಯಾಲಾ ಹೌಸ್ ನ್ಯಾಯಾಲಯದ ಆವರಣದಲ್ಲಿ ಬಿಜೆಪಿಪ್ರೇರಿತ ಲಾಯರುಗಳಿಂದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪತ್ರಕರ್ತರ ಮೇಲೆ ಹಲ್ಲೆ ನಡೆದಿರುವುದು; ಹಲ್ಲೆಯ ವೇಳೆ ಪೊಲೀಸರು ಉದ್ದೇಶಪೂರ್ವಕವಾಗಿ ಕೈಕಟ್ಟಿಕೊಂಡು ನಿಂತಿರುವುದು; ಕೆಲವು ವಕೀಲರು ಪೊಲೀಸ್ ವಶದಲ್ಲಿದ್ದ ಕನ್ಹಯ್ಯಾನ ಮೇಲೆ ಸುಮಾರು ಮೂರು ಗಂಟೆಗಳ ಕಾಲ ನಿರಂತರ ದೌರ್ಜನ್ಯ ಎಸಗಿರುವುದು ಮುಂತಾದ ಘಟನೆಗಳು ಈ ದೇಶದ ಕಾನೂನುಪಾಲನಾ ವ್ಯವಸ್ಥೆ ಎಷ್ಟೊಂದು ಕೆಟ್ಟು ಕೆರಹಿಡಿದುಹೋಗಿದೆ ಎನ್ನುವುದನ್ನು ನಿಚ್ಚಳವಾಗಿ ಬಿಂಬಿಸುತ್ತವೆ. ಕೇಂದ್ರ ಗೃಹಸಚಿವರನ್ನೂ ಒಳಗೊಂಡಂತೆ ಬಿಜೆಪಿಯ ಹಲವಾರು ನಾಯಕಮಣಿಗಳಂತೂ ಎಂದಿನಂತೆ ಎಲುಬಿಲ್ಲದ ನಾಲಿಗೆಗಳನ್ನು ಮನಬಂದಂತೆ ಹರಿಯಬಿಟ್ಟಿದ್ದಾರೆ. ಇವರಲ್ಲಿ ಕೆಲವರು ಜೆಎನ್‌ಯು ವಿದ್ಯಾರ್ಥಿಗಳಿಗೆ ಪಾಕಿಸ್ತಾನದ ತಾಲಿಬಾನಿ ಸಂಘಟನೆಗಳೊಂದಿಗೆ ಸಂಪರ್ಕ ಇರುವುದಾಗಿ ಆರೋಪಿಸುತ್ತಾರೆ! ಇನ್ನು ಕೆಲವರು 'ಪಿಡುಗು ನಿಯಂತ್ರಣ' ಮೂಲಕ ಜೆಎನ್‌ಯುವನ್ನು ಶುದ್ಧೀಕರಿಸಬೇಕೆಂದು ಕರೆನೀಡುತ್ತಾರೆ! ಒಬ್ಬ ಮಹನೀಯರಂತೂ ಜೆಎನ್‌ಯು ಕ್ಯಾಂಪಸ್‌ನಲ್ಲಿರುವ ಕಾಂಡೋಮ್, ಸಾರಾಯಿ ಬಾಟಲ್ ಇತ್ಯಾದಿಗಳನ್ನು ಲೆಕ್ಕಹಾಕುವ ಮಟ್ಟಕ್ಕೆ ಇಳಿದಿದ್ದಾರೆ! ಇತರರು ದೇಶದ್ರೋಹಿಗಳಿಗೆ ಶಿಕ್ಷೆ ಆಗದಿದ್ದರೆ ಜಾಗರೂಕ ಯುವಕರಾದ ನಾವು ಕ್ಯಾಂಪಸ್‌ಗೆ ನುಗ್ಗಿ ಅಂಥವರನ್ನು ಗುಂಡಿಕ್ಕಿ ಕೊಲ್ಲುವೆವು ಎನ್ನುತ್ತಾರೆ! ಇನ್ನೂ ಹಲವರು ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮತ್ತು ಸಂಘ ಪರಿವಾರದ ವಿರುದ್ಧ ಮಾತನಾಡುವವರನ್ನೆಲ್ಲ ರಾಷ್ಟ್ರವಿರೋಧಿಗಳೆಂದು ಪರಿಗಣಿಸಲಾಗುವುದೆಂದು ಎಚ್ಚರಿಕೆ ನೀಡುತ್ತಾರೆ! ಅತ್ಯಂತ ಆತಂಕದ ವಿಚಾರವೆಂದರೆ ಕೆಲವು ಮಾಜಿ ಸೈನಿಕರೂ ಚೆಡ್ಡಿಗಳ ತಾಳಕ್ಕೆ ಕುಣಿಯುತ್ತ ಜೆಎನ್‌ಯು ಒಳಗಿರುವ ದೇಶದ್ರೋಹಿಗಳ ವಿರುದ್ಧ ಯುದ್ಧ ಟ್ಯಾಂಕುಗಳನ್ನು ಬಳಸುವಂತೆ ಕರೆನೀಡುತ್ತಾರೆ. ಇದೇ ವೇಳೆ ಇವರಿಗೆಲ್ಲಾ ಕಾಶ್ಮೀರದಲ್ಲಿ ಇವರದೆ ಬಿಜೆಪಿ ಪಕ್ಷ ಅಫ್ಜಲ್ ಹುತಾತ್ಮನೆಂದು ಪರಿಗಣಿಸುವ ಪಿಡಿಪಿ ಪಕ್ಷದ ಜೊತೆಗೂಡಿ ಸಮ್ಮಿಶ್ರ ಸರಕಾರ ನಡೆಸುವ ಬಗ್ಗೆ ಯಾವ ಆಕ್ಷೇಪವೂ ಇಲ್ಲದಿರುವುದು ದೊಡ್ಡ ವಿಪರ್ಯಾಸವೆ ಸರಿ! ಇನ್ನು ಕೆಲವೊಂದು ಟಿವಿ ಸಮನ್ವಯಕಾರರು ತಿರುಚಿದ ವಿಡಿಯೊ ಮತ್ತು ಏಕಪಕ್ಷೀಯ ಚರ್ಚೆಗಳ ಮೂಲಕ ಜನರನ್ನು ಉದ್ರೇಕಿಸುವ ಬೇಜವಾಬ್ದಾರಿ ವರ್ತನೆ ತೋರುತ್ತಿದ್ದಾರೆ. ಒಂದು ದೃಷ್ಟಿಯಲ್ಲಿ ಇದು ದೇಶವಿರೋಧಿ ಚಟುವಟಿಕೆ ಆಗುವುದಿಲ್ಲವೇ? ಪತ್ರಿಕಾಧರ್ಮವನ್ನು ಪೂರ್ತಿ ಮರೆತುಬಿಟ್ಟು ತಮ್ಮ ರಾಜಕೀಯ ಒಲವುಗಳನ್ನು ಇಷ್ಟೊಂದು ನಿರ್ಲಜ್ಜವಾಗಿ ಪ್ರದರ್ಶಿಸುವ ಇಂಥವರು ಪತ್ರಿಕಾವೃತ್ತಿಗೆ ದೊಡ್ಡ ಕಳಂಕವಷ್ಟೆ ಅಲ್ಲ ಪ್ರಜಾಸತ್ತೆಗೂ ಅಪಾಯಕಾರಿ ಎನ್ನುವುದರಲ್ಲಿ ತಪ್ಪಿಲ್ಲ.

ಈ ವಿದ್ಯಮಾನಗಳನ್ನೆಲ್ಲ ನೋಡುವಾಗ ಒಂದು ವಿಷಯವಂತೂ ಸ್ಪಷ್ಟವಾಗುತ್ತದೆ. ಅದೇನೆಂದರೆ ಸಂಘ ಪರಿವಾರ ಇದೆಲ್ಲವನ್ನೂ ಉದ್ದೇಶಪೂರ್ವಕವಾಗಿ ಮತ್ತು ಯೋಜನಾಬದ್ಧವಾಗಿ ನಡೆಸುತ್ತಿದೆ. ಜೆಎನ್‌ಯು ವಿದ್ಯಾರ್ಥಿಗಳು ಎಡಪಂಥೀಯರ ಹಿಡಿತದಲ್ಲಿದ್ದಾರೆ; ಅವರು ದೇಶದ ಸಮಗ್ರತೆ ಹಾಗೂ ಸಾರ್ವಭೌಮತೆಯನ್ನು ನಾಶಗೊಳಿಸಲು ಸಂಚು ಹೂಡುತ್ತಿದ್ದಾರೆ ಎಂದು ದೇಶಾದ್ಯಂತ ಗುಲ್ಲೆಬ್ಬಿಸುವುದೆ ಸಂಘಿಗಳ ಮುಖ್ಯ ಗುರಿಯಾಗಿದೆ. ಈ ರಾಷ್ಟ್ರೀಯವಾದಿಗಳು ತಾವು ಮಾತ್ರ ಧರ್ಮಿಷ್ಠರು ಮತ್ತು ದೇಶಪ್ರೇಮಿಗಳು ಎಂದು ಭಾವಿಸಿದ್ದಾರೆ. ವಾಸ್ತವದಲ್ಲಿ ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಕ್ಷಣವೂ ಭಾಗವಹಿಸದವರು. ತದ್ವಿರುದ್ಧವಾಗಿ ಬ್ರಿಟಿಷರ ಜೊತೆ ಕೈಜೋಡಿಸಿ ಸ್ವಾತಂತ್ರ್ಯ ಹೋರಾಟವನ್ನು ಬಗ್ಗುಬಡಿಯಲು ಸಹಕರಿಸಿದವರು. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿಯನ್ನು ಕೊಂದ ಗೋಡ್ಸೆ ದೇಶಭಕ್ತ ಎನ್ನುತ್ತ ಅವನಿಗೆ ಗುಡಿ ಕಟ್ಟಲು ಹೊರಡುವವರು. ಗಾಂಧಿ ಹತ್ಯೆಯನ್ನು ಸಿಹಿ ಹಂಚಿ ಸಂಭ್ರಮಿಸುವವರು. ಯಾವ ಮಾನದಂಡವನ್ನು ಅನ್ವಯಿಸಿದರೂ ದೇಶಪ್ರೇಮಿಗಳೆಂದು ಕರೆಯಲು ನಾಲಾಯಕ್ಕಾಗಿರುವ ಇಂಥವರು ಈಗ ತಮ್ಮನ್ನು, ತಮ್ಮ ಹಿಂದೂತ್ವ ಸಿದ್ಧಾಂತವನ್ನು ವಿರೋಧಿಸುವವರಿಗೆಲ್ಲ 'ರಾಷ್ಟ್ರವಿರೋಧಿ', 'ದೇಶದ್ರೋಹಿ' ಎಂಬ ಹಣೆಪಟ್ಟಿ ಕಟ್ಟಿ ಇವರನ್ನೆಲ್ಲ ಕೊಲ್ಲಲು ಹಿಂಜರಿಯೆವು ಎಂಬಂತಹ ಭಯೋತ್ಪಾದಕ ಹೇಳಿಕೆಗಳನ್ನು ನೀಡುತ್ತಿದ್ದಾರೆ. ತಮ್ಮ ಬೌದ್ಧಿಕ ಹಾಗೂ ದೈಹಿಕ ಭಯೋತ್ಪಾದನೆಯ ಮೂಲಕ ದೇಶದೆಲ್ಲೆಡೆ ಭಯದ ವಾತಾವರಣವನ್ನು ನಿರ್ಮಿಸುತ್ತಿದ್ದಾರೆ. ಏತನ್ಮಧ್ಯೆ 'ರಾಷ್ಟ್ರದ್ರೋಹ' ಅಥವಾ 'ರಾಷ್ಟ್ರದ ವಿರುದ್ಧ ಪಿತೂರಿ' ಎಂಬ ಅಪರಾಧದ ಕುರಿತು ಕಾನೂನು ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಏನು ಹೇಳುತ್ತವೆ ಎಂಬುದರ ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ. ಇಂತಹ ಘೋಷಣೆಗಳು ನೇರವಾಗಿ ಜನರನ್ನು ಹಿಂಸೆಗಿಳಿಯುವಂತೆ



ಪ್ರಚೋದಿಸಿದಾಗಷ್ಟೆ ಅದು ಅಪರಾಧ ಆಗುತ್ತದೆ ಎಂದು ಕಾನೂನುತಜ್ಞರು ಪದೇಪದೇ ಸ್ಪಷ್ಟಪಡಿಸಿದ್ದಾರೆ. ಇದರ ಹೊರತಾಗಿಯೂ ಕನ್ಹಯ್ಯಾ ಕುಮಾರ್ ಮತ್ತಿತರ ವಿದ್ಯಾರ್ಥಿಗಳನ್ನು ರಾಷ್ಟ್ರೀಯವಾದದ ಬಲಿಪೀಠಕ್ಕೆ ಸಮರ್ಪಿಸುವ ಸಕಲ ಸಿದ್ಧತೆಗಳಾಗುತ್ತಿರುವಂತಿದೆ.

ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದುದು ಅನ್ಯಾಯ ಎಂದವರು ಕೇವಲ ಕಾಶ್ಮೀರಿಗಳು ಮತ್ತು ಜೆಎನ್‌ಯು ವಿದ್ಯಾರ್ಥಿಗಳಷ್ಟೆ ಅಲ್ಲ, ದೇಶದ ಹಲವಾರು ಖ್ಯಾತ ಲೇಖಕರು, ಚಿಂತಕರು ಬುದ್ಧಿಜೀವಿಗಳು ಕೂಡ ಅಂದೇ ಇದನ್ನು ಹೇಳಿದ್ದಾರೆ. ಭಾರತದ ಸಂಸತ್ ಮೇಲಿನ ದಾಳಿಗೂ 30ರ ದಶಕದ ಜರ್ಮನ್ ಸಂಸತ್ ಮೇಲಿನ ದಾಳಿಗೂ ಸಾಮ್ಯಗಳಿಲ್ಲದಿಲ್ಲ ಎಂಬ ವಾದವೂ ಇದೆ. ಅದೇನೇ ಇರಲಿ. ಭಾರತದ ಸರ್ವೋಚ್ಚ ನ್ಯಾಯಾಲಯ ಅಫ್ಜಲ್ ಗುರು ದೋಷಿಯೆಂದು ತೀರ್ಮಾನಿಸಿದಾಗ ಆತನ ಪತ್ನಿ ತಬಸ್ಸುಮ್ ದಯಾಭಿಕ್ಷೆ ಕೋರಿ ರಾಷ್ಟ್ರಪತಿಗಳಿಗೆ ಅರ್ಜಿ ಸಲ್ಲಿಸಿದ್ದರೂ ಅದು ತಿರಸ್ಕೃತವಾಯಿತು. ಅರ್ಜಿಯನ್ನು ತಿರಸ್ಕರಿಸಿದ ವಿಷಯವನ್ನು ಆಕೆಗೆ ಸರಿಯಾದ ಸಮಯದಲ್ಲಿ ತಿಳಿಸದಿದ್ದ ಕಾರಣ ಅಫ್ಜಲ್‌ಗೆ ಭಾರತದ ನ್ಯಾಯಾಂಗ ವ್ಯವಸ್ಥೆಯಡಿ ಲಭ್ಯವಿರುವ ಪುನರ್‌ಪರಿಶೀಲನೆಯ ಅವಕಾಶವನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಫ್ಜಲ್‌ನನ್ನು ಗಲ್ಲಿಗೇರಿಸುವಾಗಲೂ ಇಂತಹದೇ ಘಟನೆ ನಡೆದಿದೆ. ಸರ್ಕಾರ ಅಫ್ಜಲ್‌ನ ಕುಟುಂಬಕ್ಕಾಗಲಿ ಲಾಯರುಗಳಿಗಾಗಲಿ ಸೂಕ್ತ ಸಮಯದಲ್ಲಿ ಮಾಹಿತಿ ನೀಡದೆ ಅವಸರವಸರವಾಗಿ ಆತನನ್ನು ಗಲ್ಲಿಗೇರಿಸಿದೆ. ವ್ಯಕ್ತಿಯೋರ್ವನನ್ನು ಈ ರೀತಿ ಗುಟ್ಟಾಗಿ ನೇಣಿಗೇರಿಸುವುದು ನಿಯಮಬಾಹಿರವಾಗಿದೆ ಮತ್ತು ಸರ್ವೋಚ್ಚ ನ್ಯಾಯಾಲಯ ವಿಧಿಸಿರುವ ಕಾನೂನಿನ ಉಲ್ಲಂಘನೆ ಯೂ ಆಗಿದೆ. ಇದಕ್ಕೆ ಆಳುವ ಸರ್ಕಾರಗಳು ಕದನಶೀಲ ದೇಶಭಕ್ತಿಯ ಭಾವನೆಗಳಿಗೆ ಮಣಿಯುವುದು ಒಂದು ಕಾರಣವಾದರೆ ಮತ್ತೊಂದು ಕಾರಣ ಮತಗಟ್ಟೆಯ ರಾಜಕಾರಣ.


ಸ್ವತಃ ಒಳ್ಳೆಯ ವಕೀಲರನ್ನು ಇಟ್ಟುಕೊಳ್ಳುವಷ್ಟು ದುಡ್ಡು ಬಡಪಾಯಿ ಅಫ್ಜಲ್ ಬಳಿ ಇರಲಿಲ್ಲ, ಹಾಗಾಗಿ ಆತ ಸರಕಾರ ಮತ್ತು ನ್ಯಾಯಾಲಯದಿಂದ ಕಾನೂನಿನ ನೆರವು ಯಾಚಿಸಬೇಕಾಯಿತು. ಆಗ ಸೀಮಾ ಗುಲಾಟಿ ಮತ್ತು ನೀರಜ್ ಬನ್ಸಲ್ ಎಂಬಿಬ್ಬರು ವಕೀಲರನ್ನು ನ್ಯಾಯಾಲಯವೆ ನೇಮಿಸಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ 1956ರ ತೀರ್ಪು (Hansraj and Ors vs State, AIR, 1956, p. 641) ಹೀಗೆ ಹೇಳುತ್ತದೆ: "ಪ್ರತಿಯೊಬ್ಬ ಆರೋಪಿಗೂ ತನ್ನ ಆಯ್ಕೆಯ ವಕೀಲರ ಮೂಲಕ ತನ್ನ ರಕ್ಷಣೆ ಮಾಡಿಕೊಳ್ಳುವ ಹಕ್ಕು ಇದೆ; ಈ ಹಕ್ಕನ್ನು ಆತನಿಂದ ಕಸಿದುಕೊಳ್ಳಲಾಗುವುದಿಲ್ಲ." ಇಲ್ಲಿ ಅಫ್ಜಲ್‌ಗೆ ತನ್ನ ಆಯ್ಕೆಯ ವಕೀಲರು ಸಿಕ್ಕಿಲ್ಲ. ವಿಚಾರಣೆಯ ಆರಂಭಿಕ ಹಂತದಲ್ಲೆ ಸೀಮಾ ಗುಲಾಟಿ, ಮೊದಲ ನೋಟಕ್ಕೆ ಸರ್ಕಾರಿ ವಕೀಲರ ಬಳಿ ಆರೋಪ ಹೊರಿಸಲು ಬೇಕಾದ ಪುರಾವೆಗಳಿವೆ ಎಂದು ಒಪ್ಪಿಕೊಂಡರು. ಅಷ್ಟು ಮಾತ್ರವಲ್ಲ, ಸರ್ಕಾರಿ ವಕೀಲರು ಹಾಜರುಪಡಿಸಿದ ಎಲ್ಲಾ ನಿರ್ಣಾಯಕ ದಾಖಲೆಪತ್ರಗಳು ಮತ್ತು ವಶಪಡಿಸಿಕೊಂಡ ವಸ್ತುಗಳಿಗೆ ಪುರಾವೆ ಒದಗಿಸುವಂತೆ ಕೇಳುವ ಬದಲು ಅವೆಲ್ಲವನ್ನೂ ಸೇರಿಸಿಕೊಳ್ಳಲು ಅನುಮತಿ ನೀಡಿದರು. ತರುವಾಯ ಇವೆಲ್ಲವುಗಳ ಆಧಾರದ ಮೇಲೆ ಅಫ್ಜಲ್‌ನನ್ನು ದೋಷಿಯೆಂದು ತೀರ್ಮಾನಿಸಲಾಯಿತು. ವಿಚಾರಣೆಯ ಮಧ್ಯದಲ್ಲಿ ಸೀಮಾ ಗುಲಾಟಿ ಬಿಟ್ಟುಹೋದಾಗ ನ್ಯಾಯಾಲಯ ಅವರ ಸ್ಥಾನಕ್ಕೆ ಅವರ ಜೂನಿಯರ್ ನೀರಜ್‌ರನ್ನು ನೇಮಿಸಿತು.

⏭ 16



ಅಮೆರಿಕಾದ ಪ್ರಖ್ಯಾತ ಕಾದಂಬರಿಕಾರ ಜೆ.ಡಿ. ಸಾಲಿಂಜರ್ ಬರೆದ 'ದಿ ಕ್ಯಾಚರ್ ಇನ್ ದಿ ರೈ' ಕಾದಂಬರಿ ಇಂಗ್ಲಿಷ್ ಸಾಹಿತ್ಯದ ಮೇರು ಕೃತಿ. ನಮ್ಮ ಬದುಕಿನ ಕಥೆ ಹೇಳುತ್ತಲೇ ಮತ್ತೊಂದು ದಡಕ್ಕೆ ಮುಟ್ಟಿಸಿ, ಆತ್ಮದ ಹಸಿವೆ ಹಿಂಗಿಸುವ ಸಾಹಿತ್ಯ ವಿಲಕ್ಷಣ ಸಂತೋಷ ಕೊಡುತ್ತದೆ. ಅದು ಕಾಲದ ಹಂಗು ತೊರೆದು ಚಿರಂತನವಾಗುತ್ತದೆ. ಈ ಕಾದಂಬರಿ ಹದಿಹರೆಯದ ಹುಡುಗನ ಒಬ್ಬಂಟಿ ಪಯಣವಾಗಿದೆ.

ಇಂಥ ಕಾದಂಬರಿ ಈಗ ಕನ್ನಡಕ್ಕೆ ಬಂದಿದೆ. ಕನ್ನಡ ಅನುವಾದದ ಸೊಗಸನ್ನು ಈ ಕಾದಂಬರಿ ಓದಿಯೇ ಅನುಭವಿಸಬೇಕು. ಈ ಕಾದಂಬರಿಯನ್ನು ಲೇಖಕ ಎಸ್.ಎಫ್. ಯೋಗಪ್ಪನವರ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದನ್ನು 'ಪಲ್ಲವ ಪ್ರಕಾಶನ' ಪ್ರಕಟಿಸಿದೆ. ಕಾದಂಬರಿಯ ಒಂದು ಅಧ್ಯಾಯವನ್ನು 'ಪತ್ರಿಕೆ'ಯ ಓದುಗರಿಗಾಗಿ ಕೊಡುತ್ತಿದ್ದೇವೆ.



ಸರೋವರದ ಬಳಿ ಬಾತುಕೋಳಿಗಳ ಧ್ಯಾನ...!

ನಾನು ಬಾಡಿಗೆಗೆ ಪಡೆದ ವಾಹನ ಬಹಳ ಹಳೆಯದಾಗಿತ್ತು. ಅದರಲ್ಲಿ ಇದೀಗ ವಾಂತಿ ಮಾಡಿಕೊಂಡಿರುವಂತೆ ವಾಸನೆ ಬರುತ್ತಿತ್ತು. ರಾತ್ರಿ ತಡವಾಗಿ ಹೊರಗೆ ಹೊರಟರೆ ನನಗೆ ಇಂತಹದೇ ವಾಂತಿ ವಾಸನೆಯ ಗಾಡಿಗಳು ಸಿಗುತ್ತವೆ. ಇನ್ನೂ ಕೆಟ್ಟ ವಿಷಯವೆಂದರೆ, ಇಂದು ಶನಿವಾರ ರಾತ್ರಿಯಾಗಿದ್ದರು ಕೂಡ ಹೊರಗೆ ನೀರವ ಹಾಗು ಒಂಟಿ ವಾತಾವರಣವಿತ್ತು. ನನಗೆ ಯಾರೊಬ್ಬರು ಬೀದಿಯಲ್ಲಿ ನೋಡಲು ಸಿಕ್ಕಲಿಲ್ಲ, ಆಗೀಗ ಒಂದು ಹುಡುಗ ಹಾಗು ಹುಡುಗಿ ನಡದ ಸುತ್ತ ಕೈಬಳಸಿ ಬೀದಿ ದಾಟುವುದನ್ನು ನೋಡಬಹುದಾಗಿತ್ತು, ಅಥವಾ ಪಾತಕಿಗಳಂತೆ ಕಾಣುವ ಕೆಲವು ವ್ಯಕ್ತಿಗಳು, ತಮ್ಮ ಜೊತೆಗಾರ್ತಿಯರ ಜೊತೆ ಕತ್ತೆ ಕಿರುಬಗಳ ಹಾಗೆ, ನಗಲು ಕಾರಣಗಳಿರದಿದ್ದರೂ, ನಗುವುದನ್ನು ನೋಡಬಹುದಾಗಿತ್ತೆಂದು ಶಪಥ ಮಾಡಿ ಹೇಳಬಹುದು. ತಡರಾತ್ರಿಯಲ್ಲಿ ಯಾವನಾದರು ನ್ಯೂಯಾರ್ಕ್ ಬೀದಿಯಲ್ಲಿ ನಕ್ಕರೆ ಅದು ಭಯಾನಕವಾಗಿರುತ್ತದೆ. ಅದನ್ನು ನೀನು ಮೈಲುಗಟ್ಟಲೆ ಕೇಳಬಹುದು. ಅದು ನಿನ್ನನ್ನು ಬಹಳಷ್ಟು ಒಬ್ಬಂಟಿಯನ್ನಾಗಿ ಮಾಡುತ್ತದೆ ಹಾಗು ಕುಗ್ಗಿಸುತ್ತದೆ. ನಾನು ಮನೆಗೆ ಹೋಗಿ ಮುದಿ ಫೀಬಿಯ ಜೊತೆ ಒಂದಿಷ್ಟು ಹಲ್ಲಿ ಹೊಡೆಯಬಹುದಾಗಿತ್ತೆಂದು ಬಯಸಿದ್ದೆ. ನಾನು ವಾಹನದಲ್ಲಿ ಪಯಣಿಸುತ್ತಿದ್ದಾಗ, ಸ್ವಲ್ಪ ಸಮಯದ ನಂತರ ವಾಹನದ ಚಾಲಕನ ಜೊತೆ ಸಂಭಾಷಣೆಗಿಳಿದೆ. ಅವನ ಹೆಸರು ಹಾರವಿಟ್ಜ್ ಈ ಮೊದಲಿನ ವಾಹನ ಚಾಲಕನಿಗಿಂತ ಇವನು ಬಹಳಷ್ಟು ಉತ್ತಮನಾಗಿದ್ದ. ಅಂತೂ, ಅವನಿಗೆ ಆ ಬಾತುಕೋಳಿಗಳ ಬಗ್ಗೆ ಗೊತ್ತಿರಬಹುದೆಂದು ಯೋಚಿಸಿದೆ.

'ಹೆ, ಹಾರವಿಟ್ಜ್', ಅವನನ್ನು ಕೇಳಿದೆ. 'ಆ ಕೇಂದ್ರ ಉದ್ಯಾನದ, ಸರೋವರದ ಬಳಿ ನೀನು ಎಂದಾದರು ಹಾದು ಹೋಗಿರುವೆಯಾ? ಕೇಂದ್ರ ಉದ್ಯಾನದ ಕೆಳಗೆ ದಕ್ಷಿಣಕ್ಕೆ?'

'ಏನದು?'

'ಸರೋವರ. ಆ ಸಣ್ಣ ಸರೋವರ, ಅಲ್ಲಿ ಬಾತುಕೋಳಿಗಳಿರುತ್ತವೆ. ನಿನಗೆ ಗೊತ್ತಿದೆಯಾ?'

'ಯಾ, ಅದರ ಬಗ್ಗೆ ಏನಾಗಬೇಕಾಗಿದೆ?'

'ಆಯ್ತು ಆ ಬಾತುಕೋಳಿಗಳು ಅಲ್ಲಿ ಈಜುತ್ತಿರುತ್ತವೆ ನಿನಗೆ ಗೊತ್ತಿದೆಯಾ? ವಸಂತ ಋತುವಿನ ಅಂತಹ ಋತುಮಾನದಲ್ಲಿ? ಅವು ಚಳಿಗಾಲದಲ್ಲಿ ಎಲ್ಲಿ ಹೋಗುತ್ತವೆ ಎನ್ನುವ ಬಗ್ಗೆ ಏನಾದರು ಗೊತ್ತಿದೆಯಾ? ಅಕಸ್ಮಾತ್ತಾಗಿ?'

'ಎಲ್ಲಿಗೆ ಯಾರು ಹೋಗುತ್ತಾರೆ?'

'ಬಾತುಕೋಳಿಗಳು.. ಅಕಸ್ಮಾತ್ತಾಗಿ, ಏನಾದರು ಗೊತ್ತಿದೆಯಾ? ಅಧರ ಅರ್ಥ ಯಾವನಾದರು ಟ್ರಕ್ಕಿನಲ್ಲಿ ಬಂದು ಅವುಗಳನ್ನು ಹಾಕಿಕೊಂಡು ಹೋದನೊ ಅಥವಾ ಅವು ತಮ್ಮಷ್ಟಕ್ಕೆ ತಾವು ಹಾರಿಹೋದವೊ- ದಕ್ಷಿಣದ ಕಡೆ ಅಥವಾ ಎಲ್ಲಿಗಾದರು?'

ಮುದಿ ಹಾರವಿಟ್ಜ್ ಸಂಪೂರ್ಣವಾಗಿ ನನ್ನ ಕಡೆ ಹಿಂದಕ್ಕೆ ಹೊರಳಿದ ಹಾಗು ನನ್ನನ್ನು ನೋಡಿದ. ಅವನು ಎಷ್ಟೊ ತಾಳ್ಮೆಯಿಲ್ಲದ ಗುಂಪಿನ ವ್ಯಕ್ತಿಯಾಗಿದ್ದ. ಆದರೆ, ಅವನು ಕೆಟ್ಟವನಲ್ಲ. 'ಹಾಳಾದ್ದು ನನಗೆ ಹ್ಯಾಗೆ ಗೊತ್ತಾಗುತ್ತದೆ?' ಎಂದು ಹೇಳಿದ. 'ಅಂಥ ಮೂರ್ಖ ಸಂಗತಿ ಅದು ಹ್ಯಾಗೆ ನನಗೆ ಗೊತ್ತಾಗುತ್ತದೆ?'

'ಆಗಲಿ, ಆ ಬಗ್ಗೆ ಬೇಜಾರು ಮಾಡಿಕೊಳ್ಳಬೇಡ,' ಎಂದು ಹೇಳಿದೆ. ಅವನಿಗೆ ಅದರಿಂದ ಬೇಜಾರಾಗಿತ್ತು.

'ಯಾರಿಗೆ ಬೇಜಾರಾಗಿದೆ? ಯಾರಿಗೂ ಬೇಜಾರಾಗಿಲ್ಲ.'

ನಾನು ಅವನ ಜೊತೆ ಚರ್ಚಿಸುವುದನ್ನು ನಿಲ್ಲಿಸಿದೆ, ಅವನು ಆ ಬಗ್ಗೆ ಬಹಳ ಮನಸ್ಸಿಗೆ ಹಚ್ಚಿಕೊಂಡಂತೆ ಕಂಡ. ಆದರೆ ಅವನೇ ಮತ್ತೆ ಪ್ರಾರಂಭಿಸಿದ. ಅವನು ಮತ್ತೆ ಸಂಪೂರ್ಣವಾಗಿ ನನ್ನ ಕಡೆ ಹೊರಳಿದ, ಹಾಗು ಹೇಳಿದ, 'ಮೀನುಗಳು ಎಲ್ಲಿಗೂ ಹೋಗುವುದಿಲ್ಲ, ಅವು ಎಲ್ಲಿ ಇರುತ್ತವೆಯೋ ಅಲ್ಲಿಯೇ ಉಳಿಯುತ್ತವೆ. ಅದೇ, ಆ ಸರೋವರದಲ್ಲಿಯೇ.'

'ಮೀನು- ಅದು ಬೇರೆ ವಿಷಯ. ಮೀನು ಬೇರೆ ರೀತಿಯದು. ನಾನು ಬಾತುಕೋಳಿಗಳ ಬಗ್ಗೆ ಕೇಳುತ್ತಿದ್ದೇನೆ,' ಎಂದು ಹೇಳಿದೆ.

'ಅದರಲ್ಲಿ ಏನು ಅಂತರ ಇದೆ? ಅದರಲ್ಲಿ ಯಾವ ಅಂತರವೂ ಇಲ್ಲ,' ಹಾರವಿಟ್ಜ್ ಹೇಳಿದ. ಅವನು ಹೇಳಿದ್ದ ಎಲ್ಲದರಲ್ಲಿಯೂ ಒಂದಿಷ್ಟು ಬೇಜಾರು ಇತ್ತು. 'ಕ್ರಿಸ್ತನ ಹೆಸರಿನಲ್ಲಿ, ಚಳಿಗಾಲದಲ್ಲಿ ಬಾತುಕೋಳಿಗಳಿಗಿಂತ ಮೀನುಗಳಿಗೆ ಕಷ್ಟ. ದೇವರ ಹೆಸರಿನಲ್ಲಿ, ನಿನ್ನ ತಲೆ ಉಪಯೋಗಿಸು.'

ಒಂದು ನಿಮಿಷ ನಾನು ಅವನಿಗೆ ಏನೂ ಹೇಳಲಿಲ್ಲ. ಆಮೇಲೆ ಹೇಳಿದೆ, 'ಆಗಲಿ, ಆ ಸರೋವರವೆಲ್ಲ ಭರ್ಫದ ಸಪಾಟಾದ ಗಡ್ಡೆಯಾದಾಗ, ಆ ಮೀನು ಏನು ಮಾಡುತ್ತವೆ, ಆ ಗಟ್ಟಿ ಭರ್ಫದ ಮೇಲೆ ಜನ ಸ್ಕೇಟಿಂಗ್ ಮಾಡುವಾಗ?'

ಮುದಿ ಹಾರವಿಟ್ಜ್ ಮತ್ತೆ ನನ್ನ ಕಡೆ ಹೊರಳಿದ, 'ಏನು ಹಾಳಾದ್ದು ನೀನು ಹೇಳುತ್ತಿರುವಿ, ಏನು ಮಾಡುತ್ತವೆ?' ಎಂದು ನನ್ನ ಕಡೆ ಚೀರಿದ. 'ಕ್ರಿಸ್ತನ ಹೆಸರಿನಲ್ಲಿ ಅವು ಎಲ್ಲಿವೆಯೋ ಅಲ್ಲಿಯೇ ಇರುತ್ತವೆ.'

'ಅವು ಭರ್ಫವನ್ನು ಅಲಕ್ಷಿಸಲಾರವು. ಅವು ಭರ್ಫವನ್ನು ನಿರ್ಲಕ್ಷಿಸಲಾರವು.'

'ಯಾರು ನಿರ್ಲಕ್ಷಿಸುತ್ತಾರೆ? ಯಾರೂ ನಿರ್ಲಕ್ಷಿಸುತ್ತಿಲ್ಲ!' ಹಾರವಿಟ್ಜ್ ಹೇಳಿದ. ಅವನು ಹಾಳಾದ್ದು ಬಹಳ ಕೆರಳಿದ್ದನು. ಅವನು ವಾಹನವನ್ನು ಬೀದಿಯ ದೀಪದ ಕಂಬಕ್ಕೆ ಹಾಯಿಸಿಬಿಡಬಹುದೆಂದು ಅಥವಾ ಆ ರೀತಿ ಮಾಡಬಹುದೆಂದು ಭಯಬಿದ್ದೆ. 'ಅವು ಆ ಭರ್ಫದ ಮಧ್ಯದಲ್ಲಿಯೇ ವಾಸ ಉಳಿಯುತ್ತವೆ. ಕ್ರಿಸ್ತನ ಹೆಸರಿನಲ್ಲಿ, ಅದು ಅವುಗಳ ಸ್ವಭಾವ. ಒಂದೇ ಮಗ್ಗುಲದಲ್ಲಿ ಅವುಗಳು ಕೂಡ ಚಳಿಗಾಲ ಪೂರ್ತಿ ಹೆಪ್ಪುಗಟ್ಟುತ್ತವೆ.'

'ಯಾ, ಹಾಗಾದರೆ ಏನು ತಿನ್ನುತ್ತವೆ? ಅವು ಗಡ್ಡೆಯಂತೆ ಹೆಪ್ಪುಗಟ್ಟಿದರೆ, ಅವು ಆಹಾರಕ್ಕಾಗಿ ಆ ಕಡೆ ಈ ಕಡೆ ಈಜಲಾರವು, ಆ ರೀತಿ ಮಾಡಲಾರವು.'

'ಕ್ರಿಸ್ತನ ಹೆಸರಿನಲ್ಲಿ, ಅವುಗಳ ದೇಹಗಳು- ನಿನಗೇನಾಗಿದೆಯೋ ನನಗೆ ಗೊತ್ತಿಲ್ಲ- ಅವುಗಳ ದೇಹಗಳು ಭರ್ಫದಲ್ಲಿಯ ಪಾಚಿ, ಜೊಂಡುಗಳ ಮುಖಾಂತರ ಪೌಷ್ಠಿಕ ಆಹಾರ ಪಡೆಯುತ್ತವೆ. ಅವು ತಮ್ಮ ದೇಹಗಳಲ್ಲಿಯ ಸಣ್ಣ ರಂಧ್ರಗಳನ್ನು ಯಾವಾಗಲೂ ತೆರೆದಿರುತ್ತವೆ. ದೇವರ ಹೆಸರಿನಲ್ಲಿ ಅದು ಅವುಗಳ ಸ್ವಭಾವವಾಗಿದೆ. ನಾನು ಹೇಳುವುದು ತಿಳಿಯಿತಾ?' ಮತ್ತೆ ಪೂರ್ತಿಯಾಗಿ ನನ್ನ ಕಡೆ ಹೊರಳಿದ ಹಾಗು ನನ್ನನ್ನು ನೋಡಿದ.

'ಹೊ,' ಎಂದು ಹೇಳಿದೆ. ಅದನ್ನು ಅಲ್ಲಿಗೆ ಬಿಟ್ಟೆ. ನಾನು ಅವನು ವಾಹನವನ್ನು ಎಲ್ಲಿಗಾದರು ಹಾಯಿಸಿ ಅದನ್ನು ಅಪಘಾತ ಮಾಡುತ್ತಾನೊ ಎಂದು ಭಯ ಬಿದ್ದಿದ್ದೆ. ಹೊರತಾಗಿ ಅವನು ಎಂತಹ ಮುಂಗೋಪಿಯಾಗಿದ್ದನೆಂದರೆ, ಅವನ ಜೊತೆ ಏನೇ ಮಾತನಾಡಿದರು ಅದು ಸಂತೋಷ ಕೊಡುತ್ತಿರಲಿಲ್ಲ. 'ನೀನು ಎಲ್ಲಿಯಾದರು ವಾಹನ ನಿಲ್ಲಿಸುತ್ತಿಯಾ, ನಾವು ಒಂದಿಷ್ಟು ಗುಂಡು ಹಾಕಬಹುದಾ?' ಎಂದು ಕೇಳಿದೆ.

ಆದಾಗ್ಯೂ ಅವನು ಉತ್ತರಿಸಲಿಲ್ಲ, ಅವನು ಇನ್ನೂ ಯೋಚಿಸುತ್ತಿರಬಹುದೆಂದು ಊಹಿಸಿದೆ. ಆದರೂ ಮತ್ತೆ ಅವನನ್ನು ಕೇಳಿದೆ. ಅವನು ಬಹಳ ಒಳ್ಳೆಯ ವ್ಯಕ್ತಿಯಾಗಿದ್ದ, ನಗೆಚಾಟಿಕೆಗಾಗಿ ಹಾಗು ಅಂತಹದಕ್ಕೆ.

'ಬಡ್, ನನಗೆ ಕುಡಿಯಲು ಸಮಯ ಇಲ್ಲ,' ಎಂದು ಹೇಳಿದ. 'ಏನೇ ಆಗಲಿ, ಹಾಳಾದದ್ದು ನಿನಗೆ ಎಷ್ಟು ವಯಸ್ಸಾಗಿದೆ? ಯಾಕೆ ಮನೆಯಲ್ಲಿ ಹಾಸಿಗೆಯಲ್ಲಿ ಬಿದ್ದಿರಬಾರದು?' ಎಂದು ಕೇಳಿದ.

'ನನಗೆ ಆಯಾಸವಾಗಿಲ್ಲ.'

ನಾನು ಎರ್ನಿ ಕ್ಲಬ್ ಎದುರು, ವಾಹನದಿಂದ ಕೆಳಗಿಳಿದೆ, ಬಾಡಿಗೆ ಹಣ ಕೊಟ್ಟೆ, ಆ ಮುದಿ ಹಾರವಿಟ್ಜ್ ಮತ್ತೆ ಮೀನುಗಳ ಬಗ್ಗೆ ತೆಗೆದ. ಅದು ಅವನ ತಲೆಯಲ್ಲಿ ಖಂಡಿತವಾಗಿ ಉಳಿದುಬಿಟ್ಟಿತ್ತು. 'ಕೇಳು,' ಎಂದು ಹೇಳಿದ. 'ನೀನು ಒಂದು ಮೀನು ಆಗಿದ್ದರೆ, ಪ್ರಕೃತಿ ತಾಯಿ ನಿನ್ನನ್ನು ಪೋಷಣೆ ಮಾಡುತ್ತಾಳೆ, ಆಕೆ ಪೋಷಣೆ ಮಾಡಲಾರಳೆ? ಆಗಬಹುದಾ? ಅವು ಚಳಿಗಾಲ ಬಂದರೆ ಸತ್ತು ಹೋಗುತ್ತವೆ ಎಂದು ಯೋಚಿಸಬೇಕಾಗಿಲ್ಲ, ಆ ರೀತಿ ಯೋಚನೆ ಮಾಡುವೆಯಾ?

'ಹಾಗಿಲ್ಲ, ಆದರೆ-'

'ಅದು ಸರಿಯಾದ ಯೋಚನೆ, ಅವು ಸಾಯುವುದಿಲ್ಲ,' ಹಾರವಿಟ್ಜ್ ಆ ರೀತಿ ಹೇಳಿದ ಹಾಗು ಅವನು ಹಾಳಾದ ತೊಗಲು ಬಾವಲಿಯಂತೆ ಅಲ್ಲಿಂದ ಅವಸರವಾಗಿ ಗಾಡಿ ಓಡಿಸಿಕೊಂಡು ಹಾರಿಹೋದ. ನಾನು ಭೇಟಿಯಾದ ವರಲ್ಲಿಯೇ ಅವನು ಸೂಕ್ಷ್ಮ ಸಂವೇದಿಯಾಗಿದ್ದ. ನೀನು ಏನೇ ಹೇಳಿದರು ಅದು ಅವನಿಗೆ ಬೇಸರ ತರಿಸುತ್ತಿತ್ತು.


ಆಗ್ಗೆ ರಾತ್ರಿ ಬಹಳ ಹೊತ್ತಾಗಿದ್ದರೂ, ಆ ಹಳೆಯ ಎರ್ನಿ ಕ್ಲಬ್ ಜನರ ನೂಕುನುಗ್ಗಲಿನಿಂದ ತುಂಬಿತ್ತು. ಬಹುತೇಕವಾಗಿ ಪ್ರೆಪ್ ಶಾಲೆಯ ಹಾಗು ಕಾಲೇಜಿನ ಮುಠ್ಠಾಳರಿಂದ ತುಂಬಿತ್ತು. ಜಗತ್ತಿನ ಎಲ್ಲ ಹಾಳಾದ ಶಾಲೆಗಳೂ ಕ್ರಿಸ್‌ಮಸ್ ರಜೆ ಪ್ರಾರಂಭವಾಗುವುದಕ್ಕಿಂತ ಮೊದಲೇ ರಜೆ ಬಿಡುತ್ತವೆ, ಆದರೆ ನಾನು ಹೋಗುವ ಶಾಲೆಗಳಲ್ಲಿ ಮಾತ್ರ ಅದು ಸಾಧ್ಯವಿರಲಿಲ್ಲ. ಎರ್ನಿ ಕ್ಲಬ್ ಎಷ್ಟು ಜನನಿಬಿಡವಾಗಿತ್ತೆಂದರೆ ಹಾಕಿದ ಕೋಟನ್ನು ಕೂಡ ತೆಗೆದುಕೊಡಲು ಸಾಧ್ಯವಾಗುತ್ತಿರಲಿಲ್ಲ. ಆದರೂ, ಸಾಕಷ್ಟು ಶಾಂತವಾಗಿತ್ತು ಯಾಕೆಂದರೆ ಎರ್ನಿ ಪಿಯಾನೊ ನುಡಿಸುತ್ತಿದ್ದ ಅವನು ಪಿಯಾನೊ ನುಡಿಸಲು ಕುಳಿತರೆ, ದೇವರ ಸಾಕ್ಷಿಯಾಗಿಯೂ, ಅದು ಪವಿತ್ರ ಕೆಲಸ ಎನ್ನುವಂತೆ ಕಾಣುತ್ತಿತ್ತು- ಅವನಷ್ಟು ಚೆನ್ನಾಗಿ ಯಾರೂ ನುಡಿಸಲಾರರು. ನನ್ನ ಪಕ್ಕದಲ್ಲಿ, ಮೂರು ದಂಪತಿಗಳ ಜೋಡಿ ಟೇಬಲ್‌ಗಾಗಿ ಕಾಯುತ್ತಿದ್ದರು, ಹಾಗು ಅವರೆಲ್ಲ ಆ ಗದ್ದಲದಲ್ಲಿಯೇ ತಮ್ಮ ತುದಿಗಾಲ ಮೇಲೆ ಹಣಿಕುತ್ತ ಎರ್ನಿ ಪಿಯಾನೊ ಬಾರಿಸುವುದನ್ನು ನೋಡುತ್ತಿದ್ದರು. ಅವನು ನುಡಿಸುತ್ತಿದ್ದ ಪಿಯಾನೊದ ಎದುರು ದೊಡ್ಡ ಕನ್ನಡಿ ಇತ್ತು ಹಾಗು ಅವನ ಮೇಲೆ ವಿಶೇಷವಾಗಿ ಬೆಳಕು ಚೆಲ್ಲಲಾಗಿತ್ತು, ಅವನು ನುಡಿಸುವಾಗ ಎಲ್ಲರೂ ಅವನ ಮುಖ ನೋಡಲೆಂದು. ಅವನು ನುಡಿಸುವಾಗ ಅವನ ಕೈಬೆರಳುಗಳು ಕಾಣಿಸುತ್ತಿರಲಿಲ್ಲ- ಅವನ ದೊಡ್ಡದಾದ ಮುದಿ ಮುಖ ಮಾತ್ರ ಕಾಣಿಸುತ್ತಿತ್ತು. ಅದೊಂದು ಮಹಾ ಸಂಗತಿ. ನಾನು ಒಳಗಡೆ ಪ್ರವೇಶಿಸಿದಾಗ, ಅವನು ಯಾವ ಹಾಡು ನುಡಿಸುತ್ತಿದ್ದನೋ ಸರಿಯಾಗಿ ಗೊತ್ತಾಗಲಿಲ್ಲ, ಅದು ಯಾವುದಾದರು ಇರಲಿ, ಅದನ್ನು ಗಬ್ಬು ಎಬ್ಬಿಸಿದ್ದ. ಅವನು ಆ ಎಲ್ಲ ನಿರ್ಜೀವ, ಎತ್ತರದ ಶೃತಿಗಳ ತರಂಗಗಳನ್ನೆಬ್ಬಿಸಿದ್ದ, ಹಾಗು ಬಹಳಷ್ಟು ಕೀಳು ತಂತ್ರಗಾರಿಕೆಯ ಸ್ವರಗಳನ್ನು ನುಡಿಸುತ್ತಿದ್ದ ಅದು ಮುಕಳಿ ನೋಯುವಂತೆ ಮಾಡುತ್ತಿತ್ತು. ಅವನು ಮುಗಿಸಿದಾಗ ಆ ಪ್ರಶಂಸೆಯನ್ನು ಕೇಳಬೇಕಾಗಿತ್ತು, ನೀವು ವಾಂತಿ ಮಾಡಿಕೊಳ್ಳುತ್ತಿದ್ದಿರಿ. ಅವರೆಲ್ಲ ಹುಚ್ಚೆದ್ದು ಹೋಗಿದ್ದರು. ಅವರು ಅದೇ ಹೆಡ್ಡರಂತಿದ್ದರು, ಯಾರು ಚಲನಚಿತ್ರ ಗೃಹಗಳಲ್ಲಿ ನಗಲು ಏನೂ ಇರದಿದ್ದರೂ, ಕತ್ತೆ ಕಿರುಬಗಳ ಹಾಗೆ ನಗುತ್ತಾರೋ ಅವರಂತೆ. ನಾನು ದೇವರಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ, ನಾನು ಪಿಯಾನೊ ನುಡಿಸುವವನಾಗಿದ್ದರೆ ಅಥವಾ ನಟ, ಅಂಥವನಾಗಿದ್ದರೆ, ಅಲ್ಲಿ ಸೇರಿದ ಎಲ್ಲ ಮಂದ ಬುದ್ಧಿಯವರು ನಾನು ಭಾರೀ ಎಂದು ತಿಳಿದಿದ್ದರೆ, ಅಂತಹ ಪ್ರಶಂಸೆಯನ್ನು ನಾನು ತಿರಸ್ಕರಿಸುತ್ತಿದ್ದೆ. ನಾನು ಅವರು ಚಪ್ಪಾಳೆ ಕೂಡ ಹೊಡೆಯಬಾರದೆಂದು ಬಯಸುತ್ತೇನೆ. ಜನರು ಯಾವಾಗಲು ತಪ್ಪು ಸಂಗತಿಗಳಿಗಾಗಿ ಚಪ್ಪಾಳೆ ಹೊಡೆಯುತ್ತಾರೆ. ನಾನು ಪಿಯಾನೊ ನುಡಿಸುವವನಾಗಿದ್ದರೆ, ಹಾಳಾದ ಮರೆಯಾದ ಜಾಗೆಯಲ್ಲಿ ನುಡಿಸುತ್ತಿದ್ದೆ. ಇರಲಿ, ಅವನು ಪಿಯಾನೊ ನುಡಿಸುವುದನ್ನು ಮುಕ್ತಾಯಗೊಳಿಸಿದ ಹಾಗು ಅಲ್ಲಿದ್ದವರೆಲ್ಲರು ತಲೆಗಳು ಹಾರಿ ಹೋಗುವಂತೆ ಚಪ್ಪಾಳೆ ತಟ್ಟುತ್ತಿದ್ದರು, ಮುದಿ ಎರ್ನಿ ಸ್ಟೂಲ್ ಮೇಲೆಯ... ಕುಳಿತಲ್ಲಿಂದ ಸುತ್ತೂ ಕಡೆ ಹೊರಳಿ, ಬಗ್ಗಿ ಕೃತಕ ವಿನಯವ... ವ್ಯಕ್ತಪಡಿಸುತ್ತಿದ್ದ- ಇವನು ಭಾರೀ ಪಿಯಾನೊ... ನುಡಿಸುವವನಲ್ಲದೇ, ಭಾರೀ ವಿನಯವಂತನೂ ಕೂ... ಎನ್ನುವಂತೆ ವರ್ತಿಸುತ್ತಿದ್ದ. ಇದು ಬಹಳ ಮೋಸದ್ದು... ಅದರ ಅರ್ಥ ಅವನೊಬ್ಬ ದೊಡ್ಡ ಬಡಿವಾರದವನಾಗಿ... ಹಾಗು ಆ ರೀತಿ ಎಲ್ಲವೂ. ಆದರೂ, ನಾನು ಅವನ... ಮುಕ್ತಾಯಗೊಳಿಸಿದಾಗ, ತಮಾಷೆಯಲ್ಲಿ ಅವನ ಬ... ವಿಷಾದ ಭಾವ ಹೊಂದಿದ್ದೆ. ಅವನಿಗೆ ಪಿಯಾನೊ... ನುಡಿಸುವಾಗ ಯಾವುದು ಸರಿ ಯಾವುದು ತಪ್ಪು ಎನ್ನು... ಕನಿಷ್ಠ ಪರಿಜ್ಞಾನವೂ ಕೂಡ ಇತ್ತೆಂದು ನಾನು ತಿಳಿದಿಲ್ಲ... ಆ ತಪ್ಪೆಲ್ಲ ಅವನದೇ ಎಂದು ಭಾವಿಸಿಲ್ಲ, ಅದು ಭಾಗಶ... ಅಲ್ಲಿ ತಲೆ ಹಾರಿ ಹೋಗುವಂತೆ ಚಪ್ಪಾಳೆ ತಟ್ಟುವವ... ದಾಗಿತ್ತು- ಅವರಿಗೆ ಅವಕಾಶ ಕೊಟ್ಟರೆ, ಯಾರನ್ನಾದರು... ಹಾಳು ಮಾಡಬಹುದಾಗಿತ್ತು, ಇರಲಿ ಅದು ನನ್ನನ್ನು... ಕುಂದುವಂತೆ ಮಾಡಿತು ಮತ್ತು ಅಸಹ್ಯಗೊಳಿಸಿತು, ಹಾಗೆ... ನಾನು ನನ್ನ ಕೋಟನ್ನು ಮರಳಿ ಪಡೆದು ಹೋಟೆಲ್‌... ಮರಳಬೇಕೆಂದಿದ್ದೆ, ಆಗ ಅದು ಬಹಳ ಬೇಗ ಆಗಿತ್ತು... ಹಾಗು ಆಗ ನನ್ನಷ್ಟಕ್ಕೆ ನಾನು ಒಬ್ಬಂಟಿಯಾಗಿರಲು... ಬಯಸಿರಲಿಲ್ಲ.

ಅಂತೂ ಕೊನೆಗೆ, ಅವರು ನನಗೊಂದು ವಾಸನ... ಹಿಡಿದ ಟೇಬಲ್ ಕೊಟ್ಟರು, ಅದು ಗೋಡೆಗೆ ಎದುರಾಗಿ... ಹಾಗು ಹಾಳಾದ ಕಂಬದ ಹಿಂದುಗಡೆ, ಅಲ್ಲಿಂದ ನೀವು... ಏನೂ ನೋಡಲಾಗುತ್ತಿರಲಿಲ್ಲ. ಅದು ಅತ್ಯಂತ ಸಣ್ಣ ಟೇಬಲ್... ಆಗಿತ್ತು, ಪಕ್ಕದ ಟೇಬಲ್‌ನವರು ಎದ್ದು ಜಾಗೆ ಕೊಡದಿದ್ದ... ಹೋಗಲಾಗುತ್ತಿರಲಿಲ್ಲ ಹಾಗು ಪಕ್ಕದವರು ಎಂಥ ಮಿಂಡ್ರಿ... ಹುಟ್ಟಿದವರೆಂದರೆ ಹಾಗೆ ಜಾಗೆ ಕೊಡುತ್ತಿರಲಿಲ್ಲ- ನಾನು... ವಾಸ್ತವದಲ್ಲಿ ನನ್ನ ಕುರ್ಚಿಯ ಮೇಲೆ ಕಾಲಿಟ್ಟು... ಹೋಗಬೇಕಾಗಿತ್ತು. ನಾನು ಒಂದು ಪೆಗ್ ಸ್ಕಾಚ್ ಮತ್ತು... ಸೋಡಾ ಕೊಡಲು ಹೇಳಿದೆ, ಅದು ಡೆಕಿರಿಸ್ ಕಾಕ್‌ಟೇಲ್... ನಂತರದ ನನ್ನ ಆಸಕ್ತಿಯ ಪಾನೀಯವಾಗಿತ್ತು, ನಿನಗೆ ಆರು... ವರ್ಷಗಳಾಗಿದ್ದರೂ ಕೂಡ ನೀನು ಎರ್ನಿಯಲ್ಲಿ ಮದ್ಯವನ್ನು... ಪಡೆಯಬಹುದಾಗಿತ್ತು, ಆ ಜಾಗೆ ಬಹುವಾಗಿ ಕತ್ತಲಿನಿಂದ... ತುಂಬಿತ್ತು, ಹಾಗು ಜೊತೆಗೆ, ನಿನಗೆ ಎಷ್ಟು ವಯಸ್ಸಾಗಿದೆ... ಎನ್ನುವ ಬಗ್ಗೆ ಅಲ್ಲಿ ಯಾರು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ... ನೀನು ಮಾದಕ ದ್ರವ್ಯದ ವ್ಯಸನಿಯಾಗಿದ್ದರೂ ಕೂಡ ಯಾರೂ... ಗಮನ ಕೊಡುತ್ತಿರಲಿಲ್ಲ.

ಅಲ್ಲಿ ನಾನು ನಾಲಾಯಕರಿಂದ ಸುತ್ತುವರಿದಿದ್ದೆ. ನಾನು... ತಮಾಷೆ ಮಾಡುತ್ತಿಲ್ಲ. ನನ್ನ ಎಡಬದಿಯ ಬಲಬಾಜುವಿನ... ಸಣ್ಣ ಟೇಬಲ್‌ನಲ್ಲಿ, ಅದು ವಾಸ್ತವದಲ್ಲಿ ನನ್ನಿಂದ ಸ್ವಲ್ಪ... ಮೇಲೆ ಇತ್ತು, ಅಲ್ಲೊಬ್ಬ ವಿಲಕ್ಷಣವಾಗಿ ಕಾಣುವ ಹುಡುಗ... ಹಾಗು ವಿಚಿತ್ರವಾಗಿ ಕಾಣುವ ಹುಡುಗಿ ಇದ್ದರು. ಅವರು... ನನ್ನ ವಯಸ್ಸಿನವರಾಗಿದ್ದರು ಅಥವಾ ನನಗಿಂತ ಸ್ವಲ್ಪ... ದೊಡ್ಡವರಾಗಿದ್ದರು. ಅದು ತಮಾಷೆಯಿಂದ ಕೂಡಿತ್ತು... ಅವರು ಎಷ್ಟು ಜಾಗರೂಕರಾಗಿದ್ದರೆಂದರೆ ಅವರು ತಮ್ಮ... ಪಾನಿಯಗಳನ್ನು ಕನಿಷ್ಠ ವೇಗದಲ್ಲಿಯೂ ಕೂಡ... ಕುಡಿಯುತ್ತಿರಲಿಲ್ಲ. ನಾನು ಕೆಲವು ಸಮಯ ಅವರ... ಸಂಭಾಷಣೆಯನ್ನು ಕೇಳಿದೆ, ಯಾಕೆಂದರೆ ನನಗೆ ಮಾಡಲು... ಬೇರೆ ಏನೂ ಕೆಲಸವಿರಲಿಲ್ಲ. ಅವನು ಆ ದಿನ ಸಾಯಂಕಾಲ... ನೋಡಿದ ವೃತ್ತಿನಿರತರ ಫುಟಬಾಲ್ ಆಟದ ಬಗ್ಗೆ ಹೇಳುತ್ತಿದ್ದ... ಅವನು ಹಾಳಾದ ಆ ಆಟದ ಪ್ರತಿಯೊಂದು ಚೆಂಡಿನ... ಬಗ್ಗೆಯೂ ವಿವರಣೆ ಕೊಟ್ಟ- ನಾನು ನಗೆಚಾಟಿಕೆ... ಮಾಡುತ್ತಿಲ್ಲ- ನಾನು ಕೇಳಿಸಿಕೊಂಡವರಲ್ಲಿಯೇ ಅವನು... ಅತಿ ಕೊರೆಯುವ ಹುಡುಗನಾಗಿದ್ದ ಹಾಗು ಅವನ... ಜೊತೆಗಾರ್ತಿಗೂ ಕೂಡ ಆ ಹಾಳಾದ ಆಟದ ಬಗ್ಗೆ... ಕೇಳುವುದರಲ್ಲಿ ಎಳ್ಳಷ್ಟೂ ಆಸಕ್ತಿ ಇರಲಿಲ್ಲ, ನಾನು... ಊಹಿಸಿದಂತೆ ಆಕೆ ಅವನಿಗಿಂತ ತಮಾಷೆಯಾಗಿ... ಕಾಣುತ್ತಿದ್ದಳು, ಆದ್ದರಿಂದ ಆಕೆ ಅದನ್ನು ಕೇಳಲೇಬೇಕಾಗಿತ್ತು... ನಿಜವಾದ ಕುರೂಪಿ ಹುಡುಗಿಯರಿಗೆ ಅದು ಇನ್ನೂ... ಕಷ್ಟವಾಗಿರುತ್ತದೆ. ಕೆಲವು ಸಮಯ, ಅಂಥವರ ಬಗ್ಗೆ ಕನಿಕರ...

ಬುತ್ತದೆ. ಕೆಲವು ವೇಳೆ ನಾನು ಅವರ ಕಡೆ ನೋಡಲೂ ೀಗುವುದಿಲ್ಲ ವಿಶೇಷವಾಗಿ ಅವಿವೇಕಿಯೊಬ್ಬ ಆ ರೀತಿ ಾದ ಆ ಫುಟಬಾಲ್ ಆಟದ ಬಗ್ಗೆ ಹೇಳುತ್ತಿದ್ದಾಗ. ರೆ ನನ್ನ ಬಲಗಡೆ ನಡೆದ ಸಂಭಾಷಣೆ ಇನ್ನೂ ದಾಗಿತ್ತು ನನ್ನ ಬಲಭಾಗದಲ್ಲಿ ಪಾದ್ರಿಯಷ್ಟು ಪವಿತ್ರನಾದ ುಗ ಕುಳಿತಿದ್ದ ಬೂದು ಬಣ್ಣದ ಮೆತ್ತನೆಯ ಉಣ್ಣೆಯ ುು ತೊಟ್ಟಿದ್ದ ಹಾಗು ಒಳಗಡೆ ಚೌಕಾಣಿ ಬಟ್ಟೆಯ ್ಸ್ಟಕೋಟ್ ಧರಿಸಿದ್ದ. ಎಲ್ಲಾ ಐವಿ-ಲೀಗ್ ಸೂಳೆ ್ಳು ಒಂದೇ ರೀತಿಯಲ್ಲಿಯೇ ಕಾಣಿಸುತ್ತಾರೆ. ನನ್ನ ೆ ನನ್ನನ್ನು ಯೇಲ್ ಅಥವಾ ಪ್ರಿನ್ಸ್‌ಟನ್ ಕಾಲೇಜುಗಳಿಗೆ ಲು ಬಯಸಿದ್ದ ಆದರೆ ಆಣೆಮಾಡಿ ಹೇಳುತ್ತೇನೆ, ು ಸತ್ತರೂ ಕೂಡ ಈ ಐವಿ-ಲೀಗ್ ಯುನಿವರ್ಸಿಟಿಯ ುವುದೇ ಕಾಲೇಜುಗಳಿಗೂ ಹೋಗುವುದಿಲ್ಲ, ದೇವರ ರಿನಲ್ಲಿ, ಇರಲಿ, ಆ ಪವಿತ್ರಾತ್ಮ ಹುಡುಗನ ಬಳಿ ಕ್ಷಣವಾಗಿ ಕಾಣುವ ಒಬ್ಬ ಹುಡುಗಿ ಕುಳಿತಿದ್ದಳು. ಯ, ಆಕೆ ಚೆಲುವೆಯಾಗಿದ್ದಳು. ಆದರೆ ನೀನು ಅವರ ಾಷಣೆಯನ್ನು ಕೇಳಬೇಕಾಗಿತ್ತು, ಮೊದಲನೆಯದಾಗಿ, ಇಬ್ಬರೂ ಒಂದಿಷ್ಟು ನಿಶೆಯಾಗಿದ್ದರು. ಅವನು ಏನು ಡುತ್ತಿ ದ್ದನೆಂದರೆ ಆಕೆಗೆ ಟೇಬಲ್ ಕೆಳಗೆ ಆಗಲೇ ಿ ಹೊಡೆ ಯಲು ಶುರು ಹಚ್ಚಿಕೊಂಡಿದ್ದ, ಮತ್ತು ೇ ಸಮಯದಲ್ಲಿ ಅವನ ಶಾಲೆಯ ವಾಸಗೃಹದಲ್ಲಿ ನು ಒಂದು ಬಾಟಲಿಯಷ್ಟು ಆಸ್ಪಿರಿನ್ ಗುಳಿಗೆಗಳನ್ನು ಗಿ ಬಹುತೇಕವಾಗಿ ಆತ್ಮಹತ್ಯೆ ಮಾಡಿಕೊಂಡ ಘಟನೆಯ ಹೇಳುತ್ತಿದ್ದ. ಅವನ ಜೊತೆಗಾರ್ತಿ ಅವನಿಗೆ ಳುತ್ತಿದ್ದಳು, 'ಎಂಥ ಘೋರ.... ಬೇಡ, ಪ್ರಿಯ. ುವಿಟ್ಟು. ಬೇಡ. ಇಲ್ಲಿ ಬೇಡ.' ಟೇಬಲ್ ಕೆಳಗೆ ಳಿಗೆ ಶುರು ಹಚ್ಚಿಕೊಂಡು, ಅದೇ ಸಮಯದಲ್ಲಿ ಗೆ ಆತ್ಮಹತ್ಯೆ ಮಾಡಿಕೊಂಡವನ ಬಗ್ಗೆ ಹೇಳುವುದನ್ನು ಿಸಿಕೊಳ್ಳಿ! ಅವರು ನನ್ನನ್ನು ನಾಶ ಮಾಡಿದ್ದರು.

ಆದರೂ, ಅಲ್ಲಿ ನಾನೊಬ್ಬನೇ ನನ್ನಷ್ಟಕ್ಕೆ ನಾನು ಕುಳಿತದ್ದು ಡಿತವಾಗಿಯೂ ಬೇರ್ಪಡಿಸಿದ ಗೆದ್ದ ಕುದುರೆಯ ಕಳಿಯಂತೆ ಕಾಣುತ್ತಿತ್ತು, ಅಲ್ಲಿ ಕುಡಿಯುವುದು ಹಾಗು ುವುದನ್ನು ಬಿಟ್ಟರೆ ಬೇರೆ ಏನೂ ಇರಲಿಲ್ಲ, ಆದರೂ, ು ಏನು ಮಾಡಿದೆನೆಂದರೆ, ಆ ಮುದಿ ಪಿಯಾನೊ ತಿಸುವ ಎರ್ನಿ, ನನ್ನ ಜೊತೆಗೂಡಿ ಒಂದು ಪೆಗ್ ವಿಸ್ಕಿ ಿಯುತ್ತಾನೊ ಹೇಗೊ ಎನ್ನುವ ಬಗ್ಗೆ ಕೇಳು ಎಂದು



ಪರಿಚಾರಕನಿಗೆ ಹೇಳಿದೆ. ನಾನು ಡಿ.ಬಿ.ಯ ಸಹೋದರ ಎಂದು ಹೇಳಲು ತಿಳಿಸಿದೆ. ಹಾಗಿದ್ದರೂ, ಅವನು ಆ ಸಂದೇಶವನ್ನು ಅವನಿಗೆ ಮುಟ್ಟಿಸಲಾರ ಎಂದು ತಿಳಿದೆ. ಆ ಸೂಳೆ ಮಕ್ಕಳು ನಿನ್ನ ಸಂದೇಶವನ್ನು ಯಾರಿಗೂ ಮುಟ್ಟಿಸಲಾರರು.

ಒಮ್ಮಿಂದೊಮ್ಮೆಲೇ, ಈ ಹುಡುಗಿ ನನ್ನ ಬಳಿ ಬಂದಳು ಹಾಗು ಹೇಳಿದಳು, 'ಹೋಲ್ಡನ್ ಕಾಲ್‌ಫೀಲ್ಡ್!' ಆಕೆಯ ಹೆಸರು ಲಿಲಿಯನ್ ಸೈಮನ್ಸ್. ಕೆಲವು ಸಮಯ ನನ್ನ ಸಹೋದರ ಡಿ.ಬಿ. ಆಕೆಯ ಜೊತೆ ಸುತ್ತಿದ್ದ. ಆಕೆಗೆ ಕೊಡದಂತಹ ಬಲು ದೊಡ್ಡ ಮೊಲೆಗಳಿದ್ದವು.

'ಹಿ,' ಎಂದು ಹೇಳಿದೆ. ಸ್ವಾಭಾವಿಕವಾಗಿ, ನಾನು ಮೇಲೆ ಏಳಲು ಪ್ರಯತ್ನಿಸಲಿಲ್ಲ, ಆದರೆ ಅಂತಹ ಜಾಗೆಯಲ್ಲಿ ಮೇಲೆ ಏಳುವುದೇ ಕಷ್ಟದ ಕೆಲಸವಾಗಿತ್ತು, ಆಕೆಯ ಜೊತೆ ನೌಕಾಬಲದ ಅಧಿಕಾರಿಯೊಬ್ಬ ಇದ್ದ, ಅವನ ಮುಖ ಇದೀಗ ಮಾಡಿಸಿಕೊಂಡು ಬಂದವನಂತಿತ್ತು.

'ನಿನ್ನನ್ನು ನೋಡುವುದು ಎಷ್ಟು ಅದ್ಭುತ!' ಎಂದು ಮುದಿ ಲಿಲಿಯನ್ ಸೈಮನ್ಸ್ ಹೇಳಿದಳು. ಬಹಳ ಕೃತಕವಾಗಿತ್ತು, 'ನಿನ್ನ ದೊಡ್ಡ ಸಹೋದರ ಹೇಗಿದ್ದಾನೆ?' ಅದು ಮಾತ್ರ ಆಕೆಗೆ ಗೊತ್ತಾಗಬೇಕಾಗಿತ್ತು,

'ಅವನು ಚೆನ್ನಾಗಿದ್ದಾನೆ. ಅವನು ಹಾಲಿವುಡ್‌ನಲ್ಲಿದ್ದಾನೆ?'

'ಹಾಲಿವುಡ್‌ನಲ್ಲಿ! ಎಷ್ಟು ಅದ್ಭುತ! ಏನು ಮಾಡುತ್ತಿದ್ದಾನೆ?'

'ನನಗೆ ಗೊತ್ತಿಲ್ಲ. ಬರಹಗಾರನಾಗಿದ್ದಾನೆ,' ಎಂದು ಹೇಳಿದೆ. ನನಗೆ ಆ ಬಗ್ಗೆ ಚರ್ಚಿಸಲು ಮನಸ್ಸಿರಲಿಲ್ಲ. ಅವನು ಹಾಲಿವುಡ್‌ನಲ್ಲಿದ್ದದ್ದು ಭಾರೀ ಸಂಗತಿ ಎಂದು ಆಕೆ ಭಾವಿಸಿದಂತಿತ್ತು, ಪ್ರತಿಯೊಬ್ಬರೂ ಹಾಗೆಯೇ ತಿಳಿಯುತ್ತಾರೆ. ಬಹುತೇಕವಾಗಿ ಯಾರು ಅವನ ಕತೆಗಳನ್ನು ಓದಿಲ್ಲವೋ ಅವರು. ಆದರೂ, ಅದು ನನ್ನನ್ನು ಹುಚ್ಚನನ್ನಾಗಿ ಮಾಡುತ್ತದೆ.

'ಎಷ್ಟು ಸಂತೋಷದಾಯಕ,' ಮುದಿ ಲಿಲಿಯನ್ ಹೇಳಿದಳು. ನಂತರ ನೌಕಾಬಲದ ಅಧಿಕಾರಿಗೆ ಪರಿಚಯಿಸಿದಳು. ಅವನ ಹೆಸರು ಕಮಾಂಡರ್ ಬ್ಲಾಪ್ ಅಥವಾ ಅಂತಹದು. ಇವನು ಕೈ ಕುಲುಕುವಾಗ, ಕೈಕುಲುಕುವವನ ಬೆರಳುಗಳನ್ನು ಮುರಿಯದೇ ಹೋದರೆ ತನ್ನನ್ನು ಹೆಣ್ಣಿಗ ಎಂದು ಕರೆಯುತ್ತಾರೆ ಎಂದು ತಿಳಿದವರ ಪೈಕಿಯಾಗಿದ್ದ. ದೇವರೇ, ನಾನು ಅಂಥದನ್ನು ದ್ವೇಷಿಸುತ್ತೇನೆ. 'ನೀನೊಬ್ಬನೇ ಇದ್ದೀಯಾ, ಬೇಬಿ,' ಎಂದು ಮುದಿ ಲಿಲಿಯನ್ ಕೇಳಿದಳು. ಅಲ್ಲಿ ಅಡ್ಡಾಡುವ ಹಾದಿಗೆ ಆಕೆ ಸಂಪೂರ್ಣವಾಗಿ ತಡೆಯೊಡ್ಡಿದ್ದಳು. ನೀವು ಆಕೆಗೆ ಸಾರಿಗೆ ಸಂಚಾರ ತಡೆಯುವವಳೆಂದು ಕರೆಯಬಹುದಾಗಿತ್ತು, ಅಲ್ಲಿಯ ಪರಿಚಾರಕ ಆಕೆ ಹಾದಿಬಿಡಲೆಂದು ಬಹಳ ಹೊತ್ತಿನವರೆಗೆ ಕಾಯುತ್ತಿದ್ದ, ಆದರೆ ಆಕೆ ಅವನ ಕಡೆ ಗಮನವನ್ನೂ ಕೂಡ ಕೊಡಲಿಲ್ಲ, ಅದು ತಮಾಷೆಯಿಂದ ಕೂಡಿತ್ತು; ಆ ಪರಿಚಾರಕ ಆಕೆಯನ್ನು ಇಷ್ಟಪಡುತ್ತಿರಲಿಲ್ಲ ಎಂದು ನೀವು ಹೇಳಬಹುದಾಗಿತ್ತು, 'ನಿನಗೆ ಜೊತೆಗಾರ್ತಿ ಇಲ್ಲವೆ, ಬೇಬಿ?' ಎಂದು ನನ್ನನ್ನು ಕೇಳಿದಳು. ನಾನು ಈಗ ಮೇಲಕ್ಕೆ ಎದ್ದೆ ಮತ್ತು ಆಕೆ ನನಗೆ ಕುಳಿತಿರಲು ಹೇಳಲಿಲ್ಲ. ಆಕೆ ಯಾವ ರೀತಿಯವಳೆಂದರೆ ನಿನ್ನನ್ನು ತಾಸುಗಟ್ಟಲೇ ನಿಲ್ಲಿಸುತ್ತಾಳೆ. 'ಇವನು ಸ್ಫುರದ್ರೂಪಿಯಲ್ಲವೆ?' ಎಂದು ನನ್ನನ್ನು ತೋರಿಸುತ್ತ ನೌಕಾಧಿಕಾರಿಯನ್ನು ಕೇಳಿದಳು. 'ಹೋಲ್ಡನ್ ನೀನು ಪ್ರತಿ ಸಿಮಿಷವೂ ಸುಂದರನಾಗುತ್ತಿರುವಿ.' ಆ ನೌಕಾಧಿಕಾರಿ ಆಕೆಯನ್ನು ಬರಲು ಹೇಳಿದ. ಅವನು ಅಡ್ಡಾಡುವ ದಾರಿಗೆ ನಾವು ತಡೆಯೊಡ್ಡುತ್ತಿದ್ದೇವೆ ಎಂದು ಹೇಳಿದ. 'ಹೋಲ್ಡನ್ ಬಾ, ನಮ್ಮ ಜೊತೆ ಕೂಡು,' ಎಂದು ಮುದಿ ಲಿಲಿಯನ್ ಕೇಳಿದಳು. 'ನಿನ್ನ ವಿಸ್ಕಿ ತೆಗೆದುಕೊಂಡು ಬಾ.' 'ಇಲ್ಲ, ನಾನು ಸದ್ಯ ಹೊರಡುತ್ತಿದ್ದೇನೆ,' ಎಂದು ಆಕೆಗೆ ಹೇಳಿದೆ. 'ನಾನು ಯಾರನ್ನೋ ಭೇಟಿಯಾಗಬೇಕಾಗಿದೆ.' ಆಕೆ ನನ್ನ ಜೊತೆ ಒಳ್ಳೆಯವಳಾಗಬೇಕೆಂದು ಪ್ರಯತ್ನಿಸುತ್ತಿದ್ದಳೆಂದು ನೀವು ಹೇಳಬಹುದಾಗಿತ್ತು, ಅಂದರೆ ನಾನು ಅದನ್ನೆಲ್ಲ ಆ ಮುದಿ ಡಿ.ಬಿ.ಗೆ ಹೇಳುತ್ತೇನೆ ಎಂದು ತಿಳಿದಿದ್ದಳು.

'ಆಗಲಿ, ನೀನು ಅತಿ ಪುಟ್ಟ ಇಂತಿಂತವನೇ. ನಿನಗೆ ಒಳ್ಳೆಯದಾಗಲಿ. ನೀನು ನಿನ್ನ ಸಹೋದರನನ್ನು ಭೇಟಿಯಾದಾಗ, ನಾನು ಅವನನ್ನು ದ್ವೇಷಿಸುತ್ತಿದ್ದೇನೆ ಎಂದು ಹೇಳು.'

ನಂತರ ಆಕೆ ಹೊರಟಳು. ನಾನು ಹಾಗು ಆ ನೌಕಾ ವ್ಯಕ್ತಿ ನಾವಿಬ್ಬರೂ ಭೇಟಿಯಾದದ್ದು ಸಂತೋಷ ತಂದಿದೆ ಎಂದು ಹೇಳಿದೆವು. ಅಂತಹದು ನನ್ನನ್ನು ಸರ್ವನಾಶ ಮಾಡುತ್ತದೆ. ನಾನು ಯಾವಾಗಲು ಮತ್ತೊಬ್ಬರಿಗೆ ಹೇಳುತ್ತೇನೆ, 'ನಿಮ್ಮನ್ನು ಭೇಟಿಯಾಗಿ ಸಂತೋಷವಾಗಿದೆ,' ಎಂದು, ನನಗೆ ಆ ಭೇಟಿ ಯಾವ ರೀತಿಯ ಸಂತೋಷವನ್ನೂ ತಂದಿರುವುದಿಲ್ಲ, ಆದರೆ, ನೀನು ಬದುಕಿ ಉಳಿಯಬೇಕಾಗಿದ್ದರೆ ಅಂತಹ ಅಸಬದ್ಧವನ್ನು ಹೇಳಲೇಬೇಕಾಗುತ್ತದೆ.

ನಾನು ಆಕೆಗೆ ಯಾರನ್ನೊ ಭೇಟಿಯಾಗಬೇಕಾಗಿದೆ ಎಂದು ಹೇಳಿದ ನಂತರ, ನನಗೆ ಅಲ್ಲಿಂದ ಹೊರಡದೇ ಹಾಳಾದ ಬೇರೆ ಯಾವ ಮಾರ್ಗವೂ ಇರಲಿಲ್ಲ, ನಾನು ಆ ಮುದಿ ಎರ್ನಿಯ ಉಳಿದ ಅರ್ಧದಷ್ಟು ಸಮಯದ ಏನಾದರು ಒಳ್ಳೆಯದಾದ ಹಾಡನ್ನು ಕೇಳುವ ಹಾಗು ಅಲ್ಲಿ ಉಳಿಯುವ ಯಾವ ಅವಕಾಶವೂ ಇರಲಿಲ್ಲ, ಆದರೆ ಖಂಡಿತವಾಗಿಯೂ ನಾನು ಆ ಮುದಿ ಲಿಲಿಯನ್ ಸೈಮನ್ಸ್ ಹಾಗು ನೌಕಾವ್ಯಕ್ತಿಯ ಟೇಬಲ್ಲಿಗೆ ಹೋಗಿ ಬೇಸರದಲ್ಲಿ ಸಾಯಲು ಸಿದ್ಧನಿರಲಿಲ್ಲ, ಕಾರಣ ಅಲ್ಲಿಂದ ಹೊರಟೆ. ಆದರೂ ನನ್ನ ಕೋಟನ್ನು ಮರಳಿ ಪಡೆದಾಗ, ಹುಚ್ಚನಂತಾಗಿದ್ದೆ. ಜನರು ಯಾವಾಗಲೂ ನಿನ್ನ ಅವಕಾಶಗಳನ್ನು ಹಾಳು ಮಾಡುತ್ತಾರೆ. ■

2 ⏮ ನೀಲಿ

ಿ ಮುಟ್ಟುತ್ತ ಹುಸ್ಸಾ.. ಹುಸ್ಸಾ.. ಅನ್ನುತ್ತ ಬಂಡಿ ಸುವ ಖುಷಿಯಲ್ಲಿದ್ದ, ಸದಾ ರಂಗನ ಧ್ಯಾನದಲ್ಲಿರುವ ಿ ರಂಗ ಬಂಡಿ ಹೊಡೆಯುವ ಗತ್ತು, ಎತ್ತುಗಳನ್ನು ುವ ರೀತಿ ನೋಡುತ್ತ ಬಂಡಿಯಲ್ಲಿ ಪುಟ್ಟ ಗುಬ್ಬಿಯಂತೆ ಗಿ ಕುಳಿತಿದ್ದಳು. ಬಂಡಿಯಲ್ಲಿ ಗೌಡ ಮತ್ತು ಗೌಡತಿ ದ್ದರಿಂದ ನೀಲಿಯನ್ನು ತಿರುಗಿ ನೋಡುವ ಸಾಹಸ ಗ ಮಾಡುತ್ತಿರಲಿಲ್ಲ.

ರಾತ್ರಿಯಾದಾಗಂತೂ ಹಿಟ್ಟು ಚೆಲ್ಲಿದಂತ ಬೆಳದಿಂದಳ ಕಲ್ಲಿ ಬಂಡಿಗಳು ರಸ್ತೆಯ ಮೇಲೆ ಸಾಲು ಇರುವೆಯಂತೆ ಾಗಿ ಸಾಗುತ್ತಿದ್ದವು. ಎದುರಿಗೆ ಬರುವ ಮೋಟಾರ ಹನ ಬೆಳಕು ಗಾಡಿಯನ್ನು ಪ್ರವೇಶಿಸಿ ಗಾಡಿಯಲ್ಲಿದ್ದವರ ್ಣ ಕುಕ್ಕುಸುತ್ತಿದ್ದವು. ರಂಗನಿಗೆ "ನಿಧಾನ ಹೋಗ್ಲೀ ಏನೂ ್ಜೆಂಟ್ ಇಲ್ಲ" ಎಂದು ಗೌಡ ಆಗಾಗ ಹೇಳುತ್ತಲೇ ುತ್ತಿದ್ದ ಅಲ್ಲಲ್ಲಿ ಬಂಡಿ ನಿಲ್ಲಿಸಿ ಎತ್ತುಗಳಿಗೆ ಮೇವುಮಿಡಚಿ ಿ, ತಾವೂ ತಿಂದು ಮತ್ತೆ ಬಂಡಿಕೊಳ್ಳಗಟ್ಟುತ್ತಿದ್ದರು.

ಮೂಡಣದಲ್ಲಿ ಬೆಳ್ಳಿಚುಕ್ಕಿ ಮೂಡುವ ಹೊತ್ತಿಗೆ ಡಿಗಳು ಗುಡ್ಡ ಹೊಕ್ಕವು. ಎಲ್ಲರೂ ಬಂಡಿ ಕೊಳ್ಳ ಿದು, ಎತ್ತುಗಳಿಗೆ ಕಸಕಿ ಹಾಕಿ, ತಾವು ಜಳಕಾ ಮಾಡಿ ವಿಯ ದರುಶನಕ್ಕೆ ತಯಾರಾದರು. ನೀಲಿ ಸೀರಿ ಟ್ಟುಕೊಂಡು ಮಧುಮಗಳಿತ್ತಿಯಂತೆ ತಯಾರಾಗಿ ನಿಂತಾಗ ್ಗೆ ಕಸಕಿ ಹಾಕುತ್ತಿದ್ದ ರಂಗ ಅವಳ ಚಲುವಿಗೆ ಬೆರಗಾಗಿ ವಳನ್ನೇ ನೋಡುತ್ತ ನಿಂತುಕೊಂಡ. ನೀಲಿ ರಂಗನನ್ನು ೋಡುತ್ತ ಕಣ್ಣು ಸನ್ನೆ ಮಾಡಿ 'ನೀನೂ ಗುಡಿಗೆ ಬಾ' ಿದು ಕರೆದಳು. ರಂಗ ಇಲ್ಲ ಅನ್ನುವ ರೀತಿ ಗೋಣು ಾಡಿಸಿದ. ಗೌಡರೊಟ್ಟಿಗೆ ಅಂವ ಬರುವುದಿಲ್ಲ ುವುದನ್ನು ನೀಲಿ ಅರಿತುಕೊಂಡಿದ್ದಳು. ಎಲ್ಲರು ದೇವರ ದರ್ಶನ ಪಡೆದು ತಮಗೆ ತೋಚಿದತ್ತ ಅತ್ತಿತ್ತ ಹೋದರು. ಿ ಗೌಡತಿಯ ಕಣ್ಣು ತಪ್ಪಿಸಿ ರಂಗನನ್ನು ಹುಡುಕಿಕೊಂಡು ಗನ ಸಂಗ ಬಯಸಿದಳು. ಎಷ್ಟೋ ಹೊತ್ತು ಕದ್ದು ುಚ್ಚಿ ಕೈ ಕೈ ಹಿಡಿದು ಅಡ್ಡಾಡಿದರು. ತಮ್ಮ ಪ್ರೀತಿ ಿಗುಡದ ಸಲ್ಲಾಪದ ಸವಿ ಆ ಜಾತ್ರೆಯಲ್ಲಿಯೇ ಹಿತವಾಗಿ ಅನುಭವಿಸಿದರು. ತನ್ನ ಪ್ರೀತಿಯ ಸಂಕೇತವೆಂದು ಿಸಿದ್ದ ತಾಯಿತವನ್ನು ರಂಗನ ಕೊರಳಿಗೆ ತಾನೇ ಿ ರಂಗನ ಕೆನ್ನೆಗೊಂದು ಮುತ್ತನ್ನು ಒತ್ತಿದಳು. ರಂಗನೂ ಿದು ಉಂಗುರ ಅವಳ ಬೆರಳಿಗೆ ತೊಡಿಸಿ ಅವಳ ಿಗೆ ಮುತ್ತಿನ ಮಳೆ ಸುರಿಸಿದನು. ಇವರ ಕಲ್ಲಾಟವನ್ನು, ಿದ ಸುಭಾಷನು ಹೇಗೋ ನೋಡಿಬಿಟ್ಟದ್ದ; ಊರಿಗೆ

ಹೋಗಿ ಈ ಮಗನಿಗೆ ತಕ್ಕ ಶಾಸ್ತಿ ಮಾಡಬೇಕೆಂದು ಮನದಲ್ಲಿಯೇ ತನ್ನ ಕೋಪ ತಾಪವನ್ನು ಅದುಮಿಟ್ಟುಕೊಂಡಿದ್ದ.

ಊರಿಗೆ ಬಂದಮೇಲೆ ಕುಂತಲ್ಲಿ ನಿಂತಲ್ಲಿ ರಂಗನನ್ನೇ ಧ್ಯಾನಿಸತೊಡಗಿದಳು ನೀಲಿ. ದುಂಡವ್ವ ಮಗಳು ಗುಡ್ಡಕ್ಕ ಹೋಗಿ ಬಂದಾಗಿಂದ ಯಾಕೋ ಸಪ್ಪಗ ಆಗ್ಯಾಳ, ನೂರೆಂಟ ಮಂದಿ ಸೆರಗ ತಾಗಿರಬೇಕು. ಇಲ್ಲಂದ್ರ ನೀರಗೀರ ಬದಲಾಗಿ ಮೈಯಾಗ ಸ್ವಲ್ಪ ದುಗಾಡ ಬಂದಂಗ ಆಗೂದ ಸರಳ ಅಂತ ಅರ್ಥೈಸಿಕೊಂಡು ಸುಮ್ಮನಾದಳು.

ರಂಗ ಆಗಾಗ ಗೌಡರು ಮತ್ತು ಗೌಡತಿ ಕೊಟ್ಟ ಕೂಡಿಟ್ಟ ಹಣದಲ್ಲಿ ಒಂದು ಮೊಬೈಲ್ ಖರೀದಿಸಿ ನೀಲಿಗೆ ಗೊತ್ತಾಗುವಂತೆ ನಾನು ಮೊಬೈಲು ಖರೀದಿಸಿನ್ನಿ ನೋಡು. ಅನ್ನುವಂಗೆ ಧಿಮಾಕಿಲೆ ಕಿವಿಮ್ಯಾಲೆ ಇಟಗೊಂಡು ಯಾರೊಟ್ಟಿಗೋ ಮಾತಾಡುತ್ತ ಕೆಲಸ ಬಗಸಿ ಇಲ್ಲದೆ ಗೌಡರ ದನದ ಕೊಟ್ಟಿಗೆಯಲ್ಲಿ ಇರುವುದು ಬಿಟ್ಟು ನೀಲಿಯ ಮನೆಮುಂದು ಹಾದು ಗೌಡರ ಮನಿಯಂಗಳದಲ್ಲಿ ಬಂದು ನಿಂತು "ಅವ್ವಾರ.. ಅವ್ವಾರ.." ಅಂತ ಎರಡು ಬಾರಿ ಜೋರಾಗಿ ದನಿ ಮಾಡಿದ. ಒಳಗಿದ್ದ ಗೌಡ್ತಿ ಏನಾತು ಅಂತ ದುಡುದುಡು ಹೊರಗ ಬಂದಳು. "ಏನಾರ ಕೆಲಸ ಐತೇನ ಅಂತ ಬಂದ್ಯಾರಿ" ಅಂತ ಕೈಯಾಗಿದ್ದ ಮೊಬೈಲ್ ಗೌಡ್ತಿಗೆ ಕಾಣದಂತೆ ಮರಿ ಮಾಡಿ ಕೇಳಿದ. "ಕೆಲಸಿದ್ರ ನಾ ಹೇಳಿ ಕಳಿಸ್ತಿದ್ದಿಲ್ಲೇನ, ಬರೂದ ಬಂದಿ ಮನಿಗೆ ನಾಕ ಕೊಡ ನೀರ ತಂದ ಹೋಗು" ಅಂತ ಹೇಳುತ್ತ ಗೌಡ್ತಿ ಒಳಗ ನಡದ್ಳು, ಬಾಗಿಲಲ್ಲಿ ನಿಂತು ತಲೆ ಬಾಚಿಕೊಳ್ಳುತ್ತಿದ್ದ ನೀಲಿ ಸಂಭ್ರಮದಿಂದ ರಂಗನನ್ನು ನೋಡುತ್ತ ಅವನ ಕೈಯೊಳಗಿರುವ ಮೊಬೈಲ್ ನೋಡಿ ಖುಷಿಯಾದಳು. ಇನ್ನ ಮ್ಯಾಲ ಎಷ್ಟುಬೇಕೋ ಅಷ್ಟ ಫೋನನ್ಯಾಗ ಮಾತಾಡಬಹುದು ಅಂತ ಹಿರಿಹಿರಿ ಹಿಗ್ಗಿದಳು. ರಂಗ ನೀರಿಗೆ ಹೋಗುವುದೇ ತಡ ತಾನೂ ಒಂದ ಕೊಡ ತೆಗೆದುಕೊಂಡು ಬರಬರನೇ ನಳದತ್ತ ನಡೆದಳು. ನಳದಲ್ಲಿ ಯಾವ ಗುಬ್ಬಿ ಸುಳಿವೂ ಇರಲಿಲ್ಲ. "ಏನ್ ರಂಗ ಮೊಬೈಲ್ ತಗೊಂದಿಯಂತ ಬಾಳ ಜೋರಾತ ಬಿಡು ನಿಂದು. ನಂಬರ ಏನೈತಿ ಅದನ್ನ ಹೇಳು" ಎಂದು ಪಿಸುದನಿಯಲ್ಲಿ ನೀಲಿ ರಂಗನನ್ನು ಪಟಾಯಿಸಿದಳು. "ನನಗ ಇದರಾಗ ನಂಬರ ತಗ್ಯಾಕ ಬರೂದಿಲ್ಲ, ನೀನ ತಕ್ಕೋ. ಲಾಸ್ಟ ನಂಬರ್ 63 ಐತಿ ನೋಡ" ಎಂದು ಹೇಳಿದ. ರಂಗನ ಪೆದ್ದುತನ ನೋಡಿ ನೀಲಿ ನಸುನಗುತ್ತ ಅವನ ಕೈಯಾಗಿನ ಫೋನು ತಗೊಂಡು ತನ್ನ ಮನಿಯಲ್ಲಿರುವ ನಂಬರಿಗೊಂದು ಮಿಸ್ ಕಾಲ್ ಮಾಡಿ ಅವನ ಮೂತಿಗೊಂದಿಷ್ಟು ನೀರು ಗೊಜ್ಜಿ ನಕ್ಕೋತ ಮನಿಕಡೆ ಹೊಂಟಳು. ನೀಲಿ ಹೋಗುವುದನ್ನು ತದೇಕಚಿತ್ತದಿಂದ ರಂಗ ನಳದಲ್ಲಿ ನಿಂತೇ ನೋಡತೊಡಗಿದ. ಅವಳ ಮಿನುಗುವ ಕಣ್ಣು, ತುಂಬಿದ ಎದೆ, ಬಳಕುವ ಮೈ, ಮಾರುದ್ದ ಇರುವ ನೀಲಿಯ ಜಡೆ ಅವಳ ಬೆನ್ನಹಿಂದೆ ಇರುವ ವಿಶಾಲ ಏರುಗಳಿಗೆ ತಾಗಿದಾಗ ರಂಗನ ಮನಸು ಮಹೋತ್ಸವಕ್ಕೆ ಸಿದ್ಧಾಗುವ ಹುರುಪಿನಲ್ಲಿ ಲೀನವಾಗುತ್ತಿತ್ತು.

"ರಂಗಾ, ಇಂದು ಏನೇ ಆಗಲಿ ನಿನ್ನ ಅರಮನಿಗೆ ನಾ ಬಂದೆ ಬರುತ್ತೇನೆ" ಎಂದು ಹೇಳಿ ಫೋನೊಳಗೆ ಎಷ್ಟೊತ್ತನ ಮಾತಾಡಿ ನೀಲಿ ಫೋನ ಕಟ್ಟು ಮಾಡಿದಳು. ನೀಲಿಯ ಮಾತು ಕೇಳಿ ರಂಗನಿಗೆ ಭಯವಾಯ್ತು, ಬಂದ ಅವಕಾಶ ಕಳಕೊಬಾರ್ದು ಅಂತ ಒಳ ಮನಸ್ಸು ಜಿದ್ದಿಗೆ ಬಿದ್ದಿತ್ತು, ಒಂದು ಕೈ ನೋಡೆ ಬಿಡಬೇಕು ಅಂತ ಅವನ ಮನದ ಮಾತು ಕೇಳಿ ಹುರುಪುಗೊಂಡು ಹುಮ್ಮಸ್ಸಿನಿಂದ ರಂಗ ನೀಲಿ ಬರುವ ದಾರಿ ಕಾಯುತ್ತ ನಲಿಯುತ್ತಿದ್ದ.

ಮಟಮಟ ಮಧ್ಯಾಹ್ನ ಒಂದು ದಿನ ನೀಲಿ ರಂಗನಿರುವ ದನದ ಕೊಟಗಿಯತ್ತ ಹೆಜ್ಜೆ ಹಾಕಿದಳು. ಹಸಿದ ಹುಲಿ ಜಿಂಕೆಯ ದಾರಿಯನ್ನೇ ಕಾಯುವಂತೆ ರಂಗ ಕಾದು ಕುಳಿತಿದ್ದ ದೂರದಲ್ಲಿ ಬರುವ ನೀಲಿ ಧೈರ್ಯ ಕಂಡು ಬೆರಗಾದ. ಹೆಣ್ಣು ಮನಸು ಮಾಡಿದರೆ ಏನೆಲ್ಲ ಮಾಡಬಲ್ಲಳು ಅನ್ನುವುದಕ್ಕೆ ಇವಳೇ ಸಾಕ್ಷಿ ಎಂದು ರಂಗ ನೀಲಿಯನ್ನು ನೋಡುತ್ತಲೇ ಮೈಮರೆತ. ನೀಲಿ ಬಿಸಿಲಲ್ಲಿ ಬಂದದ್ದಕ್ಕೆ ಅವಳ ಮೈ ಬೆವರುಗೊಂಡು ಅವಳ ಸೌಂದರ್ಯವನ್ನು ದ್ವಿಗುಣಗೊಳಿಸಿತ್ತು, ಆ ಮಟಮಟ ಮಧ್ಯಾಹ್ನದಲ್ಲಿ ಆ ಎರಡೂ ದೇಹಗಳು ಹಾವುಗಳು ಮೈಮರೆತು ತಳಕು ಬಿದ್ದಂತೆ ಗೌಡರ ದನದ ಕೊಟಗೆಯಲ್ಲಿ ತಳಕು ಬಿದ್ದು ಎಷ್ಟೋ ದಿನ ಎದಿಯಲ್ಲಿ ಅಡಗಿದ ಆಸೆಯನ್ನು ತೀರಿಸಿಕೊಂಡವು. ನಿನ್ನ ಬಿಟ್ಟು ನಾ ಬದುಕಲಾರೆ ಅನ್ನುವ ನೀಲಿಯ ಮುಗ್ಧ ಮಾತಿಗೆ ನಾನೂ ನಿನ್ನ ಬಿಟ್ಟಿರಲಾರೆ ಎಂದು ರಂಗ ಹೇಳುತ್ತ ನೀಲಿಯನ್ನು ತನ್ನ ತೋಳ ತೆಕ್ಕೆಯಲ್ಲಿ ಬಚ್ಚಿಟ್ಟುಕೊಂಡು ಮುತ್ತಿನ ಅಭಿಷೇಕ ಮಾಡುತ್ತಿದ್ದ, ರಂಗನ ತೆಕ್ಕೆಯಲ್ಲಿ ಗುಬ್ಬಿ ಮರಿಯಂತೆ ಬೆಚ್ಚಗೆ ಕುಳಿತು ಅವನ ಮುತ್ತಿನ ಗುಟುಕು ಸ್ವೀಕರಿಸುತ್ತ ನೀಲಿ ತನ್ಮಯಗೊಂಡಳು. ಪ್ರತಿಯಾಗಿ ರಂಗನಿಗೂ ಸಾಕು ಬೇಕೆನ್ನುವಷ್ಟು ಮುತ್ತು ಹನಿಸಿದಳು. ಎರಡು ದೇಹಗಳು ತೃಪ್ತವಾದವು.

ರಂಗ ಮತ್ತು ನೀಲಿಯ ಪ್ರೀತಿ ಖುದ್ದಾಗಿ ತಪ್ಪಲಲ್ಲಿ ಬೆಳೆದ ಮಾವಿನ ಕಾಯಿಯಂತೆ ಬೆಳೆದಿತ್ತು, ಆ ಪ್ರೀತಿ ದಿನದಿಂದ ದಿನಕ್ಕೆ ಬೆಳೆದು ಹೆಮ್ಮರವಾಯಿತು. ಶೆಟ್ಟರ ಸುಭಾಶ ಒಂದು ದಿನ ಗುಟ್ಟಾಗಿ ಗೌಡರ ಕಿವಿಯಲ್ಲಿ ಈ ಸುದ್ದಿ ಊದಿದಾಗ ಗೌಡರ ಮನಸಿಗೆ ಬರಸಿಡಿಲು ಹೊಡೆದಂತಾಯಿತು. ಇದಕ್ಕೊಂದು ಕೊನೆ ಕಾಣಿಸಬೇಕೆಂದು ಗೌಡ ಆತುರಾತುರವಾಗಿ ನಿರ್ಣಯ ತೆಗೆದುಕೊಂಡು ಕೈಯಲ್ಲಿದ್ದ ಮೊಬೈಲ್ ಕಿವಿಗೆ ಇಟ್ಟುಕೊಂಡು ತಾಸುಗಟ್ಟಲೆ ಮಾತಾಡಿದ. ಗೌಡರು ಯಾರೊಂದಿಗೆ ಮಾತಾಡುತ್ತಿದ್ದಾರೆ ಎಷ್ಟು ಹೊತ್ತು ಮಾತಾಡುತ್ತಿದ್ದಾರೆ ಎಂದು ಶೆಟ್ಟರ ಸುಭಾಷ ಬೆರಗಾಗಿದ್ದ, ಗೌಡರು ಫೋನು ಇಟ್ಟವರೇ ಸುಭಾಶನತ್ತ ಬಂದು "ಈ ವಿಷ್ಯಾ ಯಾರಮುಂದೂ ಬಾಯ ಬಿಡಬೇಡ. ನೀಲಿ ನಮ್ಮ ಸ್ವಂತ ಅಕ್ಕನ ಮಗಳು" ಎಂದು ಜೋರಾಗಿ ಗುಡುಗಿದರು. ಸುಭಾಶ ಗೋನಾಡಿಸುತ್ತ ಆಯ್ತು ಅನ್ನುವ ರೀತಿ ತಲೆ ಅಲ್ಲಾಡಿಸಿದ. ಆದರೆ ಊರಲ್ಲಿ ಸಣ್ಣಗೆ ನೀಲಿ ರಂಗನಿಗೆ ಹೊಟ್ಟೆಲೆ ಆಗ್ಯಾಳೆ ಅನ್ನುವ ಗುಮಾನಿ ಸುದ್ದಿ ಹರಡಿತ್ತು, ಅದು ಸತ್ಯವೂ ಆಗಿತ್ತು.

ಕಿವುಡ ರಂಗ ತನ್ನ ಪ್ರೀತಿಯ ವಿಷಯ ಯಾರಿಗೂ ಗೊತ್ತೇ ಇಲ್ಲ ಅನ್ನುವ ರೀತಿ ರಾಜಾರೋಷವಾಗಿ ಸಿಳ್ಳೆ ಹಾಕುತ್ತ ಊರಲ್ಲಿ ದನಾ ಕಾಯುತ್ತ ಅಡ್ಡಾಡುತ್ತಿದ್ದ. ಅಂದು ಗೌಡರ ದನಗಳು ಹೊಟ್ಟೆ ತುಂಬ ಮೇಯ್ದು ಅಂಬಾ ಎನ್ನುತ್ತ ಕಿರುಗುಡ್ಡದಿಂದ ಇಳಿದು ಊರ ಹೊಕ್ಕವು. ದನಗಳ ಹಿಂದೆ ಬರುತ್ತಿದ್ದ ಕಿವುಡ ರಂಗ ಬರಲೇ ಇಲ್ಲ.

ನೀಲಿ ರಂಗನ ಫೋನಿನ ಹಾದಿ ಕಾದುಕಾದು ಕಣ್ಣೀರಿಟ್ಟಳು. ನೀಲಿಯ ಹೊಟ್ಟೆಯಲ್ಲಿ ಬೆಳೆಯುವ ಪಿಂಡವನ್ನು ಚಿವುಟಿ ಹಾಕಿ ವರ್ಷ ತುಂಬುವುದರೊಳಗೆ ಒಂದು ಗಂಡು ಹುಡುಕಿ ಗೌಡರು ನೀಲಿ ಮದುವೆ ಮಾಡಿದರು. ಇಡೀ ಊರೇ "ಗೌಡರು ರಂಗನನ್ನು ಹೇಳಾಕ ಹೆಸರಿಲ್ಲದಂಗ ಮಾಡಿದರು ನೋಡು. ಪಾಪ ಪರದೇಸಿ ಮಗಾ ಪರದೇಸಿ ಹೆಣವಾದ" ಎಂದು ಲೊಚಗುಟ್ಟಿದರು.

* * *

ಗಂಡನ ಗೊರಕೆಯ ಶಬ್ದ ಎವ್ವಿ ಕರಾ ಉರಲ ಹಕ್ಕೊಂಡಾಗ "ಗೊರ್.. ಗೊರ್" ಎಂದು ಮಾಡುವಂತೆ ನೀಲಿಗೆ ಕೇಳಿಸಿದಾಗ 'ತನಕ್ಕ' ಅಂಜಿ ಹಾರಿಗಿದಿಲಿ ಹೆಂಗ ನಿದ್ದಿ ಮಾಡತೈತಿ ನೋಡ ಈ ಪೀಡಾ ಅಂತ ಒಳಿಯಲ್ಲಿ ಕಟಗಿ ತುಂಡು ಹಾಕುತ್ತ 'ಉಫ್.. ಉಫ್' ಅಂತ ಒಲೆ ಊದುತ್ತಾ ಆ ಹುಗಿ ಹಿಡಿದ ಮನೆಯಲ್ಲಿ ಕಿವುಡ ರಂಗನ ನೆನಪು ಆ ಅಮಾಸೆಯ ದಟ್ಟ ಕತ್ತಲಲ್ಲಿ ಮಾಡಿಕೊಂಡಾಗ ನೀಲಿಯನ ಎದೆಯಲ್ಲಿ ಸೂಜಿ ಚುಚ್ಚಿದಂತಾಗಿ ಕಣ್ಣುತುಂಬಿಕೊಂಡವು. ■

02

ಎರಡು ಉದಾಹರಣೆಗಳನ್ನು ಗಮನಿಸೋಣ. ಈ ಬಜೆಟ್‌ನ ಒಂದು ಪ್ರಮುಖ ಘೋಷಣೆ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಬಂಡವಾಳದ ಮರು-ಪೂರೈಕೆ. ಸಾಲ ಪಡೆದುಕೊಂಡಿರುವವರು ಹಿಂತಿರುಗಿಸದೇ ಹೋದಲ್ಲಿ ಸಾಲದ ನಷ್ಟವನ್ನು ತುಂಬಿಕೊಳ್ಳಲು ಇದನ್ನು ಮಾಡಲಾಗುತ್ತಿದೆಯೆಂದು ಹೇಳಲಾಗಿದೆ. ಈ ಸದ್ಯ ತಾನು 25,000 ಕೋಟಿ ರೂ.ಗಳನ್ನು ಮಾತ್ರ ನೀಡುತ್ತೇನೆಂದು ಜೇಟ್ಲಿ ಹೇಳಿದ್ದಾರೆ. ಇದೇ ಸರ್ಕಾರವು ಕಳೆದ ಆಗಸ್ಟ್‌ನಲ್ಲೇ 'ಇಂದ್ರ ಧನುಷ್' ಯೋಜನೆಯಡಿ 70,000 ಕೋಟಿಗಳನ್ನು (ನಾಲ್ಕು ವರ್ಷಗಳ ಅವಧಿಯಲ್ಲಿ) ನೀಡುವುದಾಗಿ ಪ್ರಕಟಿಸಿಯಾಗಿತ್ತು. ಸುಮಾರು 1 ಲಕ್ಷ ಕೋಟಿಯಷ್ಟು ಅನುದಾನವನ್ನು ಬಿಡುಗಡೆ ಮಾಡುತ್ತಿರುವುದು ಯಾತಕ್ಕಾಗಿ? ಸಾಲ ಪಡೆದುಕೊಂಡಿರುವವರು ಹಿಂತಿರುಗಿಸದೇ ಇರುವುದರಿಂದ. ಅವರು ಎಷ್ಟು ಜನ? 39 ಜನ. ಎಷ್ಟು ಹಣ 4.34 ಲಕ್ಷ ಕೋಟಿ ರೂ.ಗಳು. ಹೌದು ತೃಣಮೂಲ ಕಾಂಗ್ರೆಸ್‌ನ ಸಂಸದೀಯ ಪಕ್ಷದ ನಾಯಕ ಡೆರಿಕ್ ಒಬ್ರಿಯಾನ್ ಇದನ್ನು ಅಧಿಕೃತವಾಗಿ ಬರೆದಿದ್ದಾರೆ ಮತ್ತು ಈ 39 ಜನ 'ಯಾರು' ಎಂಬುದನ್ನು ಏಕೆ ಬಹಿರಂಗಪಡಿಸುತ್ತಿಲ್ಲ ಎಂದು ಕೇಳಿದ್ದಾರೆ. ಇಂಥವರ ಸಾಲಮನ್ನಾ ಅಥವಾ 'ಸಾಲ ಮರುಹೊಂದಾಣಿಕೆ'ಗಾಗಿ ಕೇಂದ್ರ ಸರ್ಕಾರವೇ ಮುಂದೆ ನಿಂತು ಅನುದಾನ ಬಿಡುಗಡೆ ಮಾಡುತ್ತದೆ. ಅದಕ್ಕೆ ಬ್ಯಾಂಕುಗಳ ಮರುಬಂಡವಾಳೀಕರಣ ಎಂದು ಹೆಸರು!!.

ಇತ್ತೀಚೆಗೆ ತಾನೇ ವಿಜಯ್ ಮಲ್ಯನ ಸಾವಿರಾರು ಕೋಟಿ ರೂ. ಸಾಲವನ್ನು ಮನ್ನಾ ಮಾಡಿದ್ದನ್ನು ನೋಡಿದ್ದೇವೆ. ಅದೇ ರೀತಿ ಈ ಬಜೆಟ್‌ನಲ್ಲಿ ವೋಡಾಫೋನ್ ಮತ್ತು ಕೈರ್ನ್ ಕಂಪೆನಿಗಳು ಈ ಹಿಂದೆ ನೀಡಬೇಕಿದ್ದ ತೆರಿಗೆಯನ್ನೂ ಪೂರ್ವಾನ್ವಯವಾಗುವಂತೆ ಮನ್ನಾ ಮಾಡಲಾಗಿದೆ. ಇವೆಲ್ಲಾ ಯಾರಪ್ಪನ ಮನೆ ಹಣ? ಈ ಬಜೆಟ್‌ನಲ್ಲಿ ಮಾನ್ಯ ಅರುಣ್ ಜೇಟ್ಲಿಯವರು ಮತ್ತೊಂದು ಅಂಶವನ್ನೂ ಅಧಿಕೃತವಾಗಿ ತಿಳಿಸಿದ್ದಾರೆ. ಸರ್ಕಾರವು ಕಳೆದ ವರ್ಷ 'ಕಳೆದುಕೊಂಡ ಆದಾಯ' (ಕೇಂದ್ರ ತೆರಿಗೆ ವ್ಯವಸ್ಥೆಯಡಿಯ ತೆರಿಗೆ ಮನ್ನಾ) 6,11,128.31 ಕೋಟಿ ರೂ.ಗಳಾಗಿವೆ. ಹಿಂದಿನ ವರ್ಷ ಇದು 5,54,349.04 ಕೋಟಿ ಆಗಿತ್ತು. ಇದರಲ್ಲಿ 50 ಸಾವಿರ ಕೋಟಿಯಷ್ಟು ಮಧ್ಯಮವರ್ಗದವರ ಪಾವತಿ ಮಾಡಬೇಕಾದ ತೆರಿಗೆ ಎಂದಿಟ್ಟುಕೊಂಡರೂ, ಉಳಿದದ್ದು ಭಾರೀ ದೊಡ್ಡ ಕಾರ್ಪೊರೇಟ್ ಕಂಪೆನಿಗಳದ್ದೇ ಆಗಿರುತ್ತದೆ.

ಆದರೆ ಈ ವರ್ಷದ ಒಟ್ಟಾರೆ ಸಬ್ಸಿಡಿಯ ಪ್ರಮಾಣ 2,50,432.93 ಕೋಟಿ ಮಾತ್ರ. ಅಂದರೆ, ಬಡವರಿಂದ ಕಿತ್ತುಕೊಂಡು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಸುವ ತಮ್ಮ ನೀತಿಯಲ್ಲಿ ಈ ಸರ್ಕಾರವು ಎಳ್ಳಷ್ಟೂ ರಾಜಿ ಮಾಡಿಕೊಂಡಿಲ್ಲ, ಅದನ್ನು ಮತ್ತಷ್ಟು ಮುಂದುವರೆಸುವ ದೃಢ ಸಂಕಲ್ಪದೊಂದಿಗೆ ಸಾಗುತ್ತಿದೆ.

ಮೋದಿ-ಜೇಟ್ಲಿ ಬಜೆಟ್

ಒಂದು ಕಡೆ ಅನಿಶ್ಚಿತ ಜಾಗತಿಕ ಆರ್ಥಿಕ ಲೋಕದಲ್ಲಿ ಭಾರತವು 'ಸ್ಥಿರತೆಯ ಸ್ವರ್ಗ'ವಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಇನ್ನೊಂದು ಕಡೆ 'ಕಡಿಮೆ ಬೆಳವಣಿಗೆಯ ಆರ್ಥಿಕತೆ, ವಿಪರೀತ ಹಣದುಬ್ಬರ ಮತ್ತು ಹೂಡಿಕೆದಾರರಿಗೆ ವಿಶ್ವಾಸವೇ ಇಲ್ಲದಿದ್ದ ಸ್ಥಿತಿಯಲ್ಲಿ ನಾವು ಅಧಿಕಾರ ವಹಿಸಿಕೊಂಡೆವು. ಇದೇ ಸಂದರ್ಭದಲ್ಲಿ ಪ್ರಪಂಚ ಆರ್ಥಿಕತೆಯು ತೀವ್ರವಾದ ಹೊಡೆತಗಳಿಗೆ ಸಿಲುಕುತ್ತಿದ್ದರೂ, ಭಾರತವು ಒಂದು ಪ್ರಕಾಶಮಾನ ತಾಣವಾಗಿಯೇ ಉಳಿದುಕೊಂಡಿದೆ' ಎಂದು ಬಜೆಟ್ ಭಾಷಣದಲ್ಲಿ ಹೇಳಲಾಗುತ್ತದೆ. ಹಾಗಾದರೆ, ಕಳೆದ ವರ್ಷ ಸರ್ಕಾರಕ್ಕೆ ಆರ್ಥಿಕವಾಗಿ ಬಹಳ ಕಷ್ಟದಾಯಕವಾದ ವರ್ಷವಾಗಿತ್ತೇ?

ಮತ್ತು ಆರೋಗ್ಯ ಒಳಗೊಂಡಂತೆ)ಕ್ಕೆ ಮಾಡಿರುವ ವೆಚ್ಚ ಹೆಚ್ಚಾಗಿದೆ ಎಂದು ಬಿಂಬಿಸಲಾಗುತ್ತಿದೆ. ವಾಸ್ತವದಲ್ಲಿ ಅದು ಕಡಿಮೆಯಾಗಿದೆ. ಇದು ಹೆಚ್ಚು ಹೇಗೆಂದರೆ, ಕಳೆದ ವರ್ಷಕ್ಕಿಂತ ಹೆಚ್ಚು ಅಷ್ಟೇ. ಆದರೆ, 2013ಲ್ಲಿ ಒಟ್ಟಾರೆ ಜಿಡಿಪಿಯ 1.2ರಷ್ಟನ್ನು ಯುಪಿಎ ಸರ್ಕಾರವು ಸಾಮಾಜಿಕ ಕ್ಷೇತ್ರಕ್ಕೆ ನಿಗದಿಪಡಿಸಿತ್ತು. 2014ರಲ್ಲಿ (ಜೇಟ್ಲಿಯ ಮೊದಲ ಬಜೆಟ್) ಅದನ್ನು 0.5ಕ್ಕೆ ಇಳಿಸಲಾಗಿತ್ತು. 2015ರಲ್ಲಿ 0.7ಕ್ಕೆ ಏರಿಸಿ ಈಗ ಮತ್ತೆ 0.6ಕ್ಕೆ ಇಳಿಸಲಾಗಿದೆ. ಕೌಶಲ್ಯಾಭಿವೃದ್ಧಿಗೆ ನೀಡುವ ಹಣವೂ ಇದೇ ಅವಧಿಯಲ್ಲಿ 0.6ರಿಂದ 0.5ಕ್ಕೆ ಇಳಿದಿದೆ. ಅಂದರೆ, ಅಂಕಿ-ಸಂಖ್ಯೆಗಳ ಗೋಜಲಿನ ಮುಖಾಂತರ ಮೋಸ ಮಾಡುವ ತಂತ್ರಕ್ಕೆ



ಖಂಡಿತಾ ಇಲ್ಲ. ನಿರೀಕ್ಷೆಗಿಂತ ಹೆಚ್ಚಿನ ತೆರಿಗೆ ಸಂಗ್ರಹವಾಯಿತು. ಕಚ್ಚಾ ತೈಲದ ದರದಲ್ಲಿ ಭಾರೀ ಇಳಿಕೆಯಾಗಿದ್ದು, ಅದರ ಲಾಭವನ್ನು ದೇಶದ ನಾಗರಿಕರಿಗೆ ಕೊಡದೇ ಹೋದದ್ದರಿಂದ ಸರ್ಕಾರಕ್ಕೆ ಲಕ್ಷಾಂತರ ಕೋಟಿ ರೂ ಉಳಿತಾಯವಾಯಿತು. ಹಿಂದಿನ ವರ್ಷಗಳಿಗೆ ಹೋಲಿಸಿದರೆ, ಈ ವರ್ಷ ಸುಮಾರು 2.14 ಲಕ್ಷ ಕೋಟಿ ರೂ. ವನ್ನು ಅದು ಉಳಿಸಲಿದೆ. ಅದರ ಜೊತೆಗೆ ಸ್ಪೆಕ್ಟ್ರಂ ಹರಾಜಿನಲ್ಲಿ ತಾವು ಅದೆಷ್ಟೋ ಲಾಭ ಮಾಡಿದೆವೆಂದು ಬಿಜೆಪಿಯವರೇ ಕೊಚ್ಚಿಕೊಳ್ಳುತ್ತಾರೆ.

ಅವೆಲ್ಲಾ ಹಣವನ್ನು ಯಾರಿಗೆ, ಯಾವುದಕ್ಕೆ ಸುರಿಯುತ್ತಿದ್ದೀರಿ? ಈ ವರ್ಷ ಸಾಮಾಜಿಕ ಕ್ಷೇತ್ರ (ಶಿಕ್ಷಣ

ನಮ್ಮನ್ನು ಬಲಿಬೀಳಿಸುವ ಹುನ್ನಾರ ಅವರದ್ದಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ತೆರೆಯುವುದರ ಬಗ್ಗೆ ಮಾತನಾಡಲಾಗಿದೆ. ಜೆನೆರಿಕ್ ಔಷಧಿಗಳ ಮಳಿಗೆ ಇತ್ಯಾದಿಗಳ ಬಗ್ಗೆ ಮಾತು ಬಂದಾಕ್ಷಣ 'ಕಡೆಗೂ ಆರೋಗ್ಯ ಕ್ಷೇತ್ರವು ನಮ್ಮ ದೇಶದಲ್ಲಿ ಚರ್ಚೆಯ ಕೇಂದ್ರಕ್ಕೆ ಬಂದು ನಿಂತಿತು' ಎಂದು ಸರ್ಕಾರವನ್ನು ಶ್ಲಾಘಿಸುವ ಲೇಖನಗಳು ಬಂದುಬಿಟ್ಟವು. ಇದೇ ಸರ್ಕಾರವು ಫೆಬ್ರವರಿಯಲ್ಲೇ ಕ್ಯಾನ್ಸರ್, ಎಚ್‌ಐವಿ, ಹೀಮೋಫಿಲಿಯಾದಂತಹ ಮಾರಣಾಂತಿಕ ಕಾಯಿಲೆಗಳ ಔಷಧಿಗಳ ಬೆಲೆ ಹೆಚ್ಚಳವಾಗುವ ಕ್ರಮಕ್ಕೆ ಕೈಹಾಕಿದ್ದನ್ನು ಇಂಥವರು ಮರೆತಿದ್ದು ಹೇಗೆ? ಆ ಔಷಧಿಗಳ ಆಮದಿಗೆ ಇದ್ದ ತೆರಿಗೆ ವಿನಾಯಿತಿಯನ್ನು ಸರ್ಕಾರ ಹಿಂದೆಗೆದುಕೊಂಡಿದೆ. ಬಜೆಟ್‌ನಲ್ಲಿ ರಾಷ್ಟ್ರೀಯ ಆರೋ... ಅಭಿಯಾನಕ್ಕೆ ನೀಡುವ ಹಣವನ್ನು ಶೇ.3ರಷ್ಟು ... ಹೆಚ್ಚಿಸಿದೆ. ಇಂತಹ ಮೋಸಗಳು ಬಜೆಟ್‌ನ ... ಪುಟಗಳಲ್ಲೂ ಇದೆ.

ತಮ್ಮ ಪರವಾಗಿಯೇ ಬಜೆಟ್ ಇದ್ದರೂ ಕಾರ್ಪೊರೇ... ಕುಳಗಳು ಇದನ್ನೊಂದು 'ಪ್ರಾಗ್ಮಾಟಿಕ್' ಬಜೆಟ್ ... ಕರೆದಿದ್ದಾರೆ. ತಮಗೆ ಬೇಕಾದಷ್ಟು ಸಿಕ್ಕಿಲ್ಲ ಎಂಬ... ಅವರ ಅಳಲು. ಕಾರ್ಪೊರೇಟ್ ತೆರಿಗೆಯ ಬಾಬ... ಅವರಿಗೆ ಬೇಕಿದ್ದಷ್ಟು ಕಡಿತವನ್ನು ಮಾಡಿಲ್ಲವೆಂಬ... ನಿಜ. ಆದರೆ, ತೆರಿಗೆ ವ್ಯವಸ್ಥೆಯಲ್ಲಿ ಕಾರ್ಪೊರೇಟ್... ಬದಲಾವಣೆಗಳನ್ನು ತರಲಾಗಿದೆ. ಎಫ್‌ಡಿಐಗೆ ಅವ... ನೀಡಲಾಗಿದೆ. ಪಿಪಿಪಿ (ಸಾರ್ವಜನಿಕ ಮತ್ತು ಖಾ... ಸಹಭಾಗಿತ್ವ) ಯೋಜನೆಗಳಲ್ಲಿ ಮತ್ತು ಬ್ಯಾಂಕಿ... ವ್ಯವಸ್ಥೆಯಲ್ಲಿ ಖಾಸಗಿಯವರ ಪರವಾಗಿ ವ್ಯಾಜ್ಯಗ... ಬಗೆಹರಿಸುವ ಹೊಸ ಪದ್ಧತಿ ಇವೆಲ್ಲವೂ ಸಿಕ್ಕಿವೆ.

ಇಪಿಎಫ್‌ನಲ್ಲಿ ಶೇ.60ರಷ್ಟು ಹಣಕ್ಕೆ ತೆರಿಗೆ ಹಾ... ಪ್ರಕಟಣೆಯಂತೂ ಅತ್ಯಂತ ನಕಾರಾತ್ಮಕವಾದುದಾಗಿ... ಇಪಿಎಫ್ ವಂತಿಗೆ, ನಿವೃತ್ತಿಯ ನಂತರದ ಆದಾಯ ಮ... ಇಡುಗಂಟಿನ ಮೇಲೆ ಇದುವರೆಗೆ ತೆರಿಗೆ ಹಾಕಲಾಗುತ್ತಿರ... ಜೀವನವಿಡೀ ದುಡಿದ ಒಂದು ವ್ಯಕ್ತಿಯು ತನ್ನ ನಿವೃ... ತಾನೇ ಮಾಡಿಕೊಂಡ ಉಳಿತಾಯದ ಹಣದ ಮೇ... ಸರ್ಕಾರ ಕಣ್ಣು ಹಾಕುವುದು ಅಮಾನವೀಯವಾದು... ಸುಮಾರು 6 ಕೋಟಿ ಚಂದಾದಾರರಿಂದ ಸಂಗ್ರಹವ... 6.5 ಲಕ್ಷ ಕೋಟಿ ಹಣದ ಮೇಲೆ ಕೇಂದ್ರ ಸರ್ಕಾ... ಮೇಲೆ ಕಣ್ಣು ಬಿದ್ದಿದೆ. ಅವರು ತೋರಿಸಿರುವ ವಿನಾಯಿ... ಏನೆಂದರೆ, ಆ ಹಣವನ್ನು ನೀವು ಮತ್ತೆ 'ಮಾಸಿಕ ಆದಾ... ತಂದುಕೊಡುವ ವಿವಿಧ ರೀತಿಯ ಹೂಡಿಕೆಗಳ... ತೊಡಗಿಸಿದರೆ, ತೆರಿಗೆ ಹಾಕುವುದಿಲ್ಲ ಎಂದು. ಇದರ... ಮತ್ತೆ ಈ ಹಣವು ಕಾರ್ಪೊರೇಟ್ ಸಂಸ್ಥೆಗಳಿಗೇ ಲಭಿಸುತ್ತ... ಇದು ಕೇವಲ ಬಡ್ಡಿಗೆ ಹಾಕುವ ತೆರಿಗೆ, ಅಸಲಿಗೆ ... ಇತ್ಯಾದಿ ಸ್ಪಷ್ಟೀಕರಣದ ಮೇಲೆ ಸ್ಪಷ್ಟೀಕರಣ ನೀಡಿದರ... ನಿಧಾನಕ್ಕೆ ವೇತನದಾರರ ನಿವೃತ್ತಿಯ ಜೀವನವನ್ನೂ ಹಿಂಡು... ನಿಟ್ಟಿನಲ್ಲಿ ಮೊದಲ ಹೆಜ್ಜೆ ಇದು ಎಂಬುದರಲ್ಲಿ ಸಂದೇಹವಿ... ಸ್ಪಷ್ಟೀಕರಣಕ್ಕೆ ಸ್ಪಷ್ಟೀಕರಣ ನೀಡಿದ್ದರಿಂದ ಮತ್ತೊಂ... ಸ್ಪಷ್ಟೀಕರಣ ನೀಡಬೇಕಾಗಿ ಬಂದರೆ, ಅದು ಸ್ಪಷ್ಟೀಕರಣವಾ... ರುವುದಿಲ್ಲ; ಅದು ಕೇವಲ ಕಾಮಿಡಿ ಆಗಿರುತ್ತದೆ ಎಂ... ಡೆರಿಕ್ ಒಬ್ರಿಯಾನ್ ಹೇಳಿದ್ದು ಸರಿಯಾಗಿಯೇ ಇದೆ...

ದೇಶದ ರೈತಾಪಿಯಲ್ಲಿ ಶೇ.80ರಷ್ಟು ಸಣ್ಣ ಮ... ಅತೀಸಣ್ಣ ರೈತರೇ ಇದ್ದಾರೆ. ಒಳಸುರಿಯ ವೆಚ್ಚ ಹೆಚ್ಚಾಗಿ... ಬೆಲೆ ಖಾತರಿ ಇಲ್ಲ, ಸ್ವಂತ ಹೂಡಿಕೆ ಮಾಡಲು ಹಣವಿ... ಇದಕ್ಕೆ ಯಾವ ಪರಿಹಾರವನ್ನು ಈ ಬಜೆಟ್ ಸೂಚಿಸಿ... ದೇಶದ ರೈತಾಪಿಗೆ ಕನಿಷ್ಠ ದಾರಿ ತೋರಿಸದ, ಕುಬೇ... ಉದ್ದಿಮೆಪತಿಗಳ ಬಾಯಿಗೇ ಎಲ್ಲವನ್ನೂ ಹಾಕುವ ಬಜೆಟ್ಟ... ಕೇವಲ ಪತ್ರಿಕೆಗಳ ಶೀರ್ಷಿಕೆ ಆಧಾರದ ಮೇಲೆ ನಂಬಿದ... ಮೋಸ ಹೋಗುತ್ತೇವೆ. ■

ಜೆಎನ್‌ಯು ವಿವಾದ

13

ತನಗೆ ಈ ವಕೀಲರ ಮೇಲೆ ವಿಶ್ವಾಸವಿಲ್ಲವೆಂದು ಅಫ್ಜಲ್ ಹಲವಾರು ಬಾರಿ ನ್ಯಾಯಾಲಯಕ್ಕೆ ತಿಳಿಸಿದನಾದರೂ ಆತನ ಕೋರಿಕೆಯನ್ನು ಕಡೆಗಣಿಸಲಾಯಿತು. ಸರ್ಕಾರದ ವಾದಗಳನ್ನು ಸತ್ಯಾಂಶ ಅಥವಾ ಕಾನೂನಿನ ಆಧಾರದ ಮೇರೆಗೆ ವಿರೋಧಿಸುವ ವಿಚಾರದಲ್ಲಿ ನೀರಜ್ ಬನ್ಸಲ್ ವತಿಯಿಂದ ಹೆಚ್ಚುಕಮ್ಮಿ ಯಾವುದೇ ಪ್ರಯತ್ನ ಆಗದಿರುವುದು ಬಹಳ ಸ್ಪಷ್ಟವಿದೆ. ಕಾರ್ಯಸಮರ್ಥ ವಕೀಲರನ್ನು ಪಡೆಯುವ ಹಕ್ಕಿನ ಮಹತ್ವದ ಬಗ್ಗೆ ಸರ್ವೋಚ್ಚ ನ್ಯಾಯಾಲಯ ತನ್ನ 1978ರ ಒಂದು ತೀರ್ಪಿನಲ್ಲಿ "ಜಟಿಲ ಕಾರ್ಯವಿಧಾನಗಳು, ಕಾನೂನಿನ ವಾದಮಂಡನೆ ಮತ್ತು ಪುರಾವೆಗಳ ವಿಮರ್ಶಾತ್ಮಕ ಪರಿಶೀಲನೆಗಳನ್ನು ಹೊಂದಿರುವ ನ್ಯಾಯಾಂಗ ವೃತ್ತಿಪರ ತಜ್ಞತೆಯನ್ನು ನೆಚ್ಚಿಕೊಂಡಿರುತ್ತದೆ. ಒಂದು ಪಕ್ಷದ ಬಳಿ ಅಂತಹ ಬೆಂಬಲ ನೀಡುವ ಕೌಶಲ ಇಲ್ಲದಿದ್ದಾಗ ಸಮಾನ ನ್ಯಾಯ ಒದಗಿಸುವಲ್ಲಿ ವೈಫಲ್ಯಗಳಾಗುವ ಸಾಧ್ಯತೆಗಳಿವೆ" ಎಂದು ಹೇಳಿದೆ **(Madhav Hayawadanrao Hoskot vs State of Maharashtra, AIR 1978, SC 1548, para 3)**. ಇದನ್ನು ಅಫ್ಜಲ್ ಪ್ರಕರಣಕ್ಕೆ ಅನ್ವಯಿಸಿದಾಗ ಅಲ್ಲಿ ಸಮಾನ ನ್ಯಾಯದ ವೈಫಲ್ಯವನ್ನು ಕಾಣಬಹುದಾಗಿದೆ. "ನಾನು ಕೇವಲ ಕಾಶ್ಮೀರಿಗಳಿಗಷ್ಟೆ ಅಫ್ಜಲ್ ಅಲ್ಲ; ಭಾರತೀಯರಿಗೂ ನಾನು ಅಫ್ಜಲ್. ಆದರೂ ಅವರಿಬ್ಬರೂ ನನ್ನನ್ನು ತೀರಾ ವಿರುದ್ಧವಾಗಿ ಗ್ರಹಿಸಿಕೊಂಡಿದ್ದಾರೆ" ಎಂದು ಅಫ್ಜಲ್ ಹೇಳಿದ್ದ. ದಿಲ್ಲಿಯಲ್ಲಿ ನೆಲೆಸಿರುವ ಕಾಶ್ಮೀರಿ ಮುಸ್ಲಿಮರ ಪಾಡು ಹೇಗಿದೆಯೆಂದರೆ ಅವರ ಮೇಲೆ ಯಾವ ಕ್ಷಣದಲ್ಲೂ ದಾಳಿ ನಡೆಯಬಹುದು; ದೌರ್ಜನ್ಯಗಳಾಗಬಹುದು; ಅವರು ಯಾವಾಗ ಜೈಲಿನ ಕಂಬಿ ಎಣಿಸಬೇಕಾಗಬಹುದೆಂದೂ ಹೇಳಬರುವುದಿಲ್ಲ.


ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ ಮರಣದಂಡನೆಯ ಶಿಕ್ಷೆ ಅಷ್ಟೊಂದು ಪರಿಣಾಮಕಾರಿ ಯಲ್ಲವೆಂಬುದು ಅನೇಕ ತಜ್ಞರ ಅಭಿಪ್ರಾಯವಾಗಿದೆ. ಸರಕಾರದ ವಿರುದ್ಧ ಸಮರ ಸಾರಿ ಅದನ್ನು ಉರುಳಿಸಲೆತ್ನಿಸಿದ ಆರೋಪಗಳಿರುವ ಸಂದರ್ಭದಲ್ಲಿ ಮೂಲತಃ ಅದೊಂದು ರಾಜಕೀಯ ವಿಚಾರಣೆ ಆಗುತ್ತದೆ. ಅಂತಹ ಪ್ರಕರಣಗಳಲ್ಲಿ ನ್ಯಾಯದಾನದ ಮೇಲೆ ಹೆಚ್ಚು ಪ್ರಭಾವ ಬೀರುವುದು ಬಹುಸಂಖ್ಯಾತರ ರಾಜಕೀಯ ಲೆಕ್ಕಾಚಾರಗಳು. ಅವು "ಪ್ರಜಾತಾಂತ್ರಿಕ ಮೌಲ್ಯ"ಗಳ ಹೆಸರಿನಲ್ಲಿರುತ್ತವೆ ಅಷ್ಟೆ. ಅಫ್ಜಲ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ "ಜನರ ಸಮಷ್ಟಿ ಅಂತಃಸಾಕ್ಷಿ"ಯನ್ನು ತೃಪ್ತಿಪಡಿಸುವುದಕ್ಕೋಸ್ಕರ ಒಂದು ಪ್ರಾಣಬಲಿ ಕೊಡಬೇಕೆಂದು ಹೇಳಿರುವುದು ಇದನ್ನು ದೃಢಪಡಿಸುತ್ತದೆ. ಮರಣದಂಡನೆ ಎಂಬುದು ರಾಷ್ಟ್ರದ ಶಕ್ತಿ ಪ್ರದರ್ಶನ ಎಂಬಂತಾಗಿದೆ. ಇಲ್ಲಿ ಭಾರತದ ಸಮಗ್ರತೆ ಮತ್ತು ಸಾರ್ವಭೌಮತೆಗೆ ಅಪಾಯಕಾರಿಯಾದ ಉಗ್ರರನ್ನು ಗುರುತಿಸುವ ಪಾತ್ರವನ್ನು ನ್ಯಾಯಾಂಗ ವ್ಯವಸ್ಥೆ ಮತ್ತು ಮಾಧ್ಯಮಗಳು ವಹಿಸಿಕೊಂಡಿವೆ.

ಪಾಕಿಸ್ತಾನದ ವಿರುದ್ಧ ನಡೆಸಿದ "ಆಪರೇಷನ್ ಪರಾಕ್ರಮ" ಸೀಮಿತ ಯಶಸ್ಸು ಕಂಡ ನಂತರದ ಸಂಸತ್ ದಾಳಿಯ ಬಳಿಕ ರಾಷ್ಟ್ರಕ್ಕೆ ತನ್ನನ್ನು ತನ್ನ ವೈರಿಗಳಿಂದ ರಕ್ಷಿಸಿಕೊಳ್ಳಲು ಒಂದು ಬಲಿಯ ಅಗತ್ಯವಿತ್ತು. ಆಗ ಮಾಧ್ಯಮಗಳು, ಸೈನ್ಯ ಗುಪ್ತಚರ ಇಲಾಖೆ ಮತ್ತು ರಾಜಕಾರಣಿಗಳೆಲ್ಲ ಅಫ್ಜಲ್ ಗುರುವಾದರೆ ಹೇಳಿಮಾಡಿಸಿದಂತಿರುವ ಶತ್ರು ಎಂಬ ಒಮ್ಮತಕ್ಕೆ ಬಂದರು. ಏಕೆಂದರೆ ಅವನೊಬ್ಬ ಕಾಶ್ಮೀರಿ ಮುಸ್ಲಿಮನಾಗಿದ್ದ; ಉಗ್ರಗಾಮಿಯಾಗಿ ವಿಫಲನಾದೆನೆಂದು ತಪ್ಪೊಪ್ಪಿಕೊಂಡಿದ್ದ; ಭದ್ರತಾಸಂಸ್ಥೆಗಳ ಮಾಹಿತಿದಾರನಾಗಿ ಕೆಲಸ ಮಾಡಲು ನಿರಾಕರಿಸಿದ್ದ; ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ಕುಟುಂಬವನ್ನು ಸಲಹಲು ಪ್ರಯತ್ನಿಸುತ್ತಿದ್ದ; ಓರ್ವ ಒಂಟಿಜೀವಿಯಾಗಿದ್ದ ಅಫ್ಜಲ್ ವಸ್ತುತಃ ನಗಣ್ಯ ವ್ಯಕ್ತಿಯಾಗಿದ್ದ. ಆದರೆ ನ್ಯಾಯಾಲಯ ತನ್ನದೇ ನಿಯಮಗಳನ್ನು ಬದಿಗೊತ್ತಿ ಸಾಂದರ್ಭಿಕ ಪುರಾವೆಗಳ ಆಧಾರದಲ್ಲಿ ಆತನನ್ನು ದೋಷಿ ಎಂದು ತೀರ್ಮಾನಿಸಿತು. ಬಲಿ ಆಚರಣೆಗಳ ಪ್ರಾಮುಖ್ಯತೆಯನ್ನು ಗುರುತಿಸಿಯೊ ಎಂಬಂತೆ ಆತನನ್ನು ದೀಪಾವಳಿ ದಿನದಂದು ಗಲ್ಲಿಗೇರಿಸಬೇಕೆಂದು ನಿರ್ಧರಿಸಲಾಯಿತು. ಉತ್ತರ ಭಾರತದ ಜನ ಅದೇ ದಿನದಂದು ರಾವಣನ ಪ್ರತಿಕೃತಿಯನ್ನು ದಹಿಸುವ ಮೂಲಕ ರಾವಣನ ವಿರುದ್ಧ ರಾಮನ ಗೆಲವಿನ ಉತ್ಸವಾಚರಣೆ ನಡೆಸುವುದನ್ನು ಗಮನಿಸಬೇಕು. ಈ ತೀರ್ಪನ್ನು ತಡೆಹಿಡಿಯುವಂತೆ ಅರ್ಜಿ ಸಲ್ಲಿಸಿದಾಗ ಅದನ್ನು ಪ್ರಶ್ನಿಸಿದ ಆರೆಸ್ಸೆಸ್ ಸೈದ್ಧಾಂತಿಕನಾದ ಸ್ವಪನ್ ದಾಸ್‌ಗುಪ್ತ 'ಇದು ಭಾರತೀಯರು ಕೆಡುಕಿನ ವಿರುದ್ಧ ಒಳಿತಿನ ಗೆಲವನ್ನು ಆಚರಿಸುವ ಸಮಯವಾಗಿದೆ.... ನಮ್ಮ ಧರ್ಮಪ್ರಜ್ಞೆಯನ್ನು ಇಲ್ಲವಾಗಿಸುವ ಉದ್ದೇಶದ ಈ ಅಹಿತಕರ ಕೋರಿಕೆ ಇಂದು ದೇಶದ ಮುಂದೆ ಬಂದಿರುವುದು ಒಂದು ವ್ಯಂಗ್ಯವೇ ಸರಿ' ಎಂದು ಟೀಕಿಸಿದರು. ಹೀಗೆ ಧರ್ಮವನ್ನು ಎತ್ತಿಹಿಡಿಯುವವರು ಮತ್ತು ಧರ್ಮ ವಿರೋಧಿಗಳು ಎನ್ನಲಾದವರ ಮಧ್ಯೆ ಈಗಾಗಲೆ ಅಡ್ಡಗೆರೆಯೊಂದನ್ನು ಎಳೆಯಲಾಗಿದೆ.

ಪಾಕಿಸ್ತಾನದ ಪ್ರಭುತ್ವ ಕಾಶ್ಮೀರದಲ್ಲಿ ಪರೋಕ್ಷ ಯುದ್ಧ ನಡೆಸುತ್ತಿದೆ ಎಂದು ಭಾವಿಸುವ ಭಾರತದ ಪ್ರಭುತ್ವ ಕಾಶ್ಮೀರದ ಸ್ವಾಯತ್ತತೆಯ ಚಳವಳಿಗೆ ಜನಬೆಂಬಲ ಇರುವುದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಬದಲು ಆ ಚಳವಳಿಯನ್ನು ದಮನಿಸುವುದಕ್ಕಾಗಿ 25 ವರ್ಷಗಳಿಂದ ಸುಮಾರು 5 ಲಕ್ಷ ಸೈನಿಕರನ್ನು ನಿಯೋಜಿಸಲಾಗಿದೆ. ಆದರೆ ಸ್ವಾತಂತ್ರ್ಯಕ್ಕಾಗಿರುವ ಜನಹೋರಾಟಗಳ ಆಳದಲ್ಲಿ ಒಂದು ನೈತಿಕಪ್ರಜ್ಞೆ ಇದೆ. ಅಲ್ಲಿ ಸ್ವಾತಂತ್ರ್ಯಕ್ಕಾಗಿ ಆತ್ಮ ಸಮರ್ಪಣೆ ಮಾಡಿಕೊಳ್ಳುವ ಒಂದು ಗಟ್ಟಿಮುಟ್ಟಾದ ಸಂಪ್ರದಾಯವಿ... ನೇಣುಕಂಬಕ್ಕೇರಿದ ವಿಫಲ ಸ್ವಾತಂತ್ರ್ಯ ಹೋರಾಟಗಾ... ಅಫ್ಜಲ್ ಗುರು ಇದೀಗ ಹುತಾತ್ಮನಾಗಿ ಮರಳಿದ್ದಾ... ನಾವೀಗ ಅವನ ಹುತಾತ್ಮತೆಯ ಕಥಾಸುರು... ಬಿಚ್ಚಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಅಲ್ಲಿಂದು... ಹುಟ್ಟಿದೆ "ಎಷ್ಟೆ ಅಫ್ಜಲ್ ಗುರುಗಳನ್ನು ಸಾಯಿಸಿದರು... ಮನೆಮನೆಯಿಂದ ಅಫ್ಜಲ್ ಗುರುಗಳು ಹುಟ್ಟುಬರಲಿದ್ದಾ... ಎಂಬ ಘೋಷಣೆ.

ಕೊನೆಹನಿ: ಸಮಾಜವನ್ನು ಹೀಗೆ ದೇಶಪ್ರೇಮಿ... ದೇಶವಿರೋಧಿ, ಧರ್ಮಿಷ್ಠ-ಧರ್ಮವಿರೋಧಿ ಎಂದ... ಕಪ್ಪುಬಿಳುಪಿನ ಹಾಗೆ ವಿಭಜಿಸುವುದರ ಪರಿಣಾಮ... ಏನಿರಬಹುದು? ಕಳೆದ ಚುನಾವಣೆಗಳಲ್ಲಿ ಬಿಜೆಪಿ... ಅರ್ಥಾತ್ ಮೋದಿಗೆ ಮತ ಹಾಕದವರು ದೇಶವಿರೋಧಿ... ಧರ್ಮವಿರೋಧಿಗಳೆಂದಾದರೆ ಅಂಥವರನ್ನೆಲ್ಲ ಜೈಲಿ... ಕಳುಹಿಸಲಾಗುವುದೆ? ಆದರೆ ಈಗಾಗಲೆ ತುಂ... ತುಳುಕುತ್ತಿರುವ ನಮ್ಮ ಸೆರೆಮನೆಗಳಲ್ಲಿ ಇಷ್ಟೊಂದು ದೊ... ಸಂಖ್ಯೆಯ ಜನರನ್ನು ತುಂಬುವುದು ಅಸಾಧ್ಯದ ಮಾತಲ್ಲವೇ... ಹಾಗಾದರೆ ಮುಂದೇನು? 'ಹಿಡುಗು ನಿಯಂತ್ರಣ... ಮಾಡುವೆವು, ಎಕೆ 47 ಬಳಸುವೆವು, ಯುದ್ಧ ಟ್ಯಾಂಕ... ನಿಯೋಜಿಸುವೆವು, ಗುಂಡಿಕ್ಕಿ ಕೊಲ್ಲುವೆವು ಎಂ... ಆಕ್ರಮಣಶೀಲ ಮಾತುಗಳನ್ನು ಕೇಳುವಾಗಲಂತೂ ಮುಂದಿ... ಹಂತ ಸೆರೆಶಿಬಿರಗಳೆ (ಕಾನ್ಸೆಂಟ್ರೇಷನ್ ಕ್ಯಾಂಪ್... ಆಗಿರಬಹುದೆಂದು ತೋರುವುದಿಲ್ಲವೇ?

■ *(ಆಧಾರ: ಸಬ್‌ರಂಗ್‌ನಲ್ಲಿ ತಪನ್ ಬೋಸ್‌ರವ... ಲೇಖನ Afzal Guruhs execution ha... made him a martyr; ಶಂಶುಲ್ ಇಸ್ಲಾಂರವ... 'Know the RSS'; ಎ.ಜಿ.ನೂರಾನಿಯವ... 'ಆರೆಸ್ಸೆಸ್ ಮತ್ತು ಬಿಜೆಪಿ'*



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಆದಿನಾಥ ಪುರಾಣ: ಮುಗ್ಧತೆ ಸದಾ ಬೆತ್ತಲೆ

ಯೇಸು ಮಗುವಿನ ಮುಗ್ಧತೆಯನ್ನು ಕಂಡಿದ್ದ. ಮುಗ್ಧತೆಯಲ್ಲಿ ನಿರ್ವಂಚನೆಯನ್ನು ಕಂಡಿದ್ದ. ಒಳಗೊಂದು ೂರಗೊಂದು ಇಲ್ಲದೆ ಕಪಟರಹಿತವಾಗಿರುವುದನ್ನು ಕಂಡಿದ್ದ ಕ್ತಿಯಲ್ಲಿ ಕಪಟತನ ಮಾಡಬೇಡಿರೆಂದು ಸಾರಿ ಸಾರಿ ೀಳುತ್ತಾ, ದೇವಸ್ಥಾನದಲ್ಲಿ ವ್ಯಾಪಾರ ವ್ಯವಹಾರಗಳನ್ನು ರೋಧಿಸಿ, ಚಾವಟಿಯನ್ನು ತೆಗೆದುಕೊಂಡು ಕೋಪದಿಂದ, ೀವಸ್ಥಾನವನ್ನು ಮಾರುಕಟ್ಟೆಯನ್ನಾಗಿ ಮಾಡಬೇಡಿ" ಎಂದು ವರಿಸಿದ್ದ. ತನ್ನ ಮಾತುಗಳನ್ನು ತನ್ನ ಹಿಂಬಾಲಕರು, ಕಜೀವಿಗಳು ಅರ್ಥಮಾಡಿಕೊಳ್ಳುತ್ತಿಲ್ಲವೆಂದು ಅತ್ತಿದ್ದ, ಣ್ಣೀರು ಸುರಿಸುತ್ತಾ ರೇಗಿಕೊಂಡಿದ್ದ. ನಿಜಕ್ಕೂ ಯೇಸುವಿನ ಮಕಾಲಿನ ಜನರಿಗೆ ಮತ್ತು ಅವನ ಶಿಷ್ಯರಿಗೆ ಯೇಸು ೀಳುತ್ತಿರುವುದು ಪೂರ್ಣ ಅರ್ಥವಾಗಿರಲಿಲ್ಲ, ಸ್ಪಷ್ಟವೂ ಗಿರಲಿಲ್ಲ, ಕಾರಣ ಯೇಸುವಿನ ವಿವರಣಾ ಸಾಮರ್ಥ್ಯದ ೊರತೆಯಲ್ಲ. ಬದಲಾಗಿ ಅವರಲ್ಲಿದ್ದ ಪೂರ್ವಾಗ್ರಹಗಳ ಟ್ಟಿ ಪದರಗಳನ್ನು ಅಷ್ಟು ಸುಲಭವಾಗಿ ಕರಗಿಸಲು ಸಾಗಲಿ, ಯೇಸುವಿನ ಶಿಷ್ಯರಿಗೇ ಆಗಲಿ ಸಾಧ್ಯವಾಗಿರಲಿಲ್ಲ.

ಯೆಹೂದಿಗಳ ಸಂಪ್ರದಾಯವಾದಿಗಳಿಗೆ ಆಗ ರ್ಥವಾಗಿತ್ತು ಈ ಯೇಸುವೆಂಬ ಬಯಲು ತಮ್ಮ ಸಾಂಪ್ರದಾಯಿಕ ಗೋಡೆಗಳನ್ನು ಕೆಡವಿಬಿಡುತ್ತವೆ ಎಂದು. ಾಗೂ ಅವರ ಎಲ್ಲಾ ಕಪಟತನದ ದಾರಿಗಳನ್ನು ಅವನ ಯಲ ಮುಕ್ತತೆಯು ನುಂಗಿ ಹಾಕಿಬಿಡುತ್ತವೆ ಎಂದು. ಾಗಾಗಿ ಅವನ ಮೇಲೆ ಧರ್ಮದ್ರೋಹದ ಆಪಾದನೆ ೂರಿಸಲು ನೋಡಿದರು. ದೈವವಿರೋಧಿ ಎಂಬುದು ೋಂ ಪ್ರಭುತ್ವದಲ್ಲಿ ಅಷ್ಟೇನೂ ಗಿಟ್ಟುವುದಿಲ್ಲ ಎಂದಾದ ೀಲೆ ರಾಜದ್ರೋಹಿ ಪಟ್ಟವನ್ನು ತೊಡಿಸಲು ಯತ್ನಿಸಿದರು.

ಇಂದು ಜೆಎನ್‌ಯುನಲ್ಲಿ ವಿದ್ಯಾರ್ಥಿ ಮುಖಂಡ ನ್ಹಯ್ಯನ ಮೇಲೆ ದೇಶದ್ರೋಹದ ಆಪಾದನೆ ಹೊರಿಸಲು ಯತ್ನಿಸಿದಂತೆ. ಧರ್ಮ ತನ್ನ ಆಯುಧವನ್ನು ನೇರ ಪ್ರಹಾರ ಾಡುವುದನ್ನು ಸಮಾಜ ಮತ್ತು ಪ್ರಜಾಸಮೂಹ ಪ್ಪಲಾರದೆಂದು, ಪ್ರಭುತ್ವದ ಬೆಂಬಲ ಪಡೆಯಲು ಾರ್ಮಿಕ ಮತಾಂಧತೆಯು ಹೀಗಿಯೇ ವರ್ತಿಸುವುದು. ರ್ಮಾಂಧತೆಗೆ ಪ್ರಭುತ್ವವೇ ಕರಣ. ಅದನ್ನು ಉಪಯೋಗಿಸಿ ೊಂಡೇ ತನ್ನ ಇಚ್ಛೆಯನ್ನು ನೆರವೇರಿಸಿಕೊಳ್ಳಲು ಾಧ್ಯವಾಗುವ ಶಕ್ತಿಯನ್ನು ಹೊಂದಿರುತ್ತದೆ.

ಎಂತಾದರೂ ಮಾಡಿ ಯೇಸುವನ್ನು ಮುಗಿಸಲೇ ೀಕೆಂದು ಪುರೋಹಿತಶಾಹಿವರ್ಗವು ಯತ್ನಿಸಿತು. ಾಜ್ಯಪಾಲ ಪಿಲಾತ ತಾನೆಷ್ಟೇ ಹೆಣಗಾಡಿದರೂ ುರೋಹಿತರ ಮೇಲಾಟವು ಜನರ ಮೇಲೆ ಪ್ರಭಾವವನ್ನು ೀರಿ ಕೊನೆಗೂ ಶಿಲುಬೆಗೇರಿಸಲು ಬಿಟ್ಟುಕೊಟ್ಟು ತಾನು ತೊಳೆದುಕೊಂಡುಬಿಟ್ಟ.

ಕರ್ನಾಟಕದ ಕಲ್ಯಾಣದ ಕ್ರಾಂತಿಯಲ್ಲಿಯೂ ಬಸವಣ್ಣನ ಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗೆ ಅಡ್ಡಗಾಲಾಗಿದ್ದ ುರೋಹಿತಶಾಹಿವರ್ಗವು ಪ್ರಭುತ್ವವನ್ನು ಬಳಸಿಕೊಂಡಿತ್ತು. ೊಂಡಿ ಮಂಚಣ್ಣನಂತಹ ಸನಾತನಿಗಳ ವಿತಂಡವಾದ ೂರೆ ಬಿಜ್ಜಳನ ಬಾಯಿ ಕಟ್ಟಿತ್ತು, ನಯವಂಚಕತನದ ಾರಣಗಳೇನೇ ಇರಲಿ, ಬಸವನ ಗಡಿಪಾರು ಮಾಡಿತ್ತು. ುಂದೆ ಕೊಲೆಗೂ ಕಾರಣವಾಯಿತು. ರಾಜಕೀಯ ಪಲ್ಲಟ ುತ್ತು ಸಾಮಾಜಿಕ ಕ್ಷೋಭೆಗಳು ಉಂಟಾಗುವ ಹಾಗೆ ಾಡಿ ರಾಜ ಬಿಜ್ಜಳನ ಸಾವಿಗೂ ಕಾರಣವಾಯಿತು.


ಧಾರ್ಮಿಕ ಅಸಹನೆಯ ಮನಸ್ಸುಗಳೇ ಹೀಗೆ. ಅವುಗಳು ದಾ ಪ್ರಭುತ್ವವನ್ನು ಎಲ್ಲಾ ಕಾಲದಲ್ಲಿಯೂ ತಮ್ಮ ಕ್ರೂರ ಲಸಗಳಿಗೆ ಬಳಸಿಕೊಂಡಿವೆ. ಈಗಲೂ ಬಳಸಿಕೊಳ್ಳುತ್ತಿವೆ. ಾದರೆ, ಯೇಸುವಿನ ಮೇಲೆ ರಾಜದ್ರೋಹ ಮತ್ತು ರ್ಮದ್ರೋಹವನ್ನು, ಬಸವನ ಮೇಲೆ ಸಮಾಜದ್ರೋಹವನ್ನು ೊರಿಸಿ ಅವರ ಕ್ರಾಂತಿಯನ್ನು ಮತ್ತು ಅವರನ್ನು ಾಶಪಡಿಸಲು ಅಂತಹ ಅಂದಿನ ಅಸಹನೆಯ ಮನಸ್ಸುಗಳು ುತ್ನಿಸಿದಂತೆ ಇಂದು ಕನ್ಹಯ್ಯನ ವಿಷಯದಲ್ಲಿ ಆಗಲಾರದು. ್ಮೃತಿ ಇರಾನಿ ಎಂಬ ಸಂಘಿ ಮತ್ತು ಆಕೆಯನ್ನು ಬೆಂಬಲಿಸುವಂತಹ ಕಮಂಗಿಗಳು ಭಾರತದಂತಹ ನ್ಯಾಯಾಂಗ ್ಯವಸ್ಥೆಯನ್ನು ಪ್ರಭಾವಿಸಲಾರರು. ರಾಜಕೀಯ ವ್ಯವಸ್ಥೆ ಾರ್ಮಿಕ ಕಟ್ಟುಪಾಡು, ಸಾಂಪ್ರದಾಯಿಕ ಸಮಾಜದ ೊಂಬತನ, ಸ್ವಾರ್ಥ ಹಿತಾಸಕ್ತಿಗಳ ವ್ಯವಹಾರ; ಇವೆಲ್ಲವನ್ನೂ ೀರಿ, ಆದರೂ ಅದರೊಳಗೇ ಇರುವಂತಹ ಮಕ್ಕಳನ್ನು ೋಡಿ ಯೇಸು ರೂಪಕವನ್ನು ಕಂಡುಕೊಂಡ ಕಾರಣವೆಂದರೆ, ಅವರು ಪ್ರಕೃತಿ ಸಹಜವಾದಂತಹ ಮುಗ್ಧತೆಯನ್ನು ಹೊಂದಿರುವುದು. ಮುಗ್ಧತೆ ಮತ್ತು ಮಗುತನ ಇವುಗಳನ್ನು ಯೇಸು ಸಮಾನಾರ್ಥಕವಾಗಿ ನೋಡುತ್ತಾ ಬಂದಿದ್ದಲ್ಲದೇ ಅದೇ ಸಾಕ್ಷಾತ್ಕಾರದ ಸ್ಥಿತಿ ಎಂಬಂತೆಯೂ ತನ್ನ ಹಲವಾರು ಮಾತುಗಳಲ್ಲಿ ಮತ್ತು ಧೋರಣೆಗಳಲ್ಲಿ ವ್ಯಕ್ತಪಡಿಸುತ್ತಾನೆ.


ಆದಿನಾಥನ ವೈರಾಗ್ಯ

ಯೇಸು ಮಗುತನದ ಪ್ರತಿಮೆಯನ್ನು ನಿಲ್ಲಿಸಿ ಮುಕ್ತತೆ ಮತ್ತು ಮುಗ್ಧತೆಯ ರೂಪಕವಾದ ಸ್ವರ್ಗವನ್ನು ವಿವರಿಸುವಾಗ ಜೈನ ತೀರ್ಥಂಕರರ ಸಿದ್ಧಾಂತವನ್ನು ಗ್ರಹಿಸುವಂತಹ ಅಗತ್ಯ ಕಾಣುತ್ತದೆ. ಅದರಲ್ಲೂ ಆದಿನಾಥ, ಜೈನರ ಮೊದಲ ತೀರ್ಥಂಕರನೇ ಮೊದಲಾಗಿ ಮುಂದುವರಿಸುವ ಆ ಪರಂಪರೆ ಮಹಾವೀರನವರೆಗೂ ಅತ್ಯಂತ ಸುಂದರ ಮತ್ತು ಸಮಂಜಸವಾಗಿ ರೂಪಿಸುತ್ತಾ ಹೋಗುತ್ತದೆ.

ಆದಿನಾಥ ಅಥವಾ ಪಾರ್ಶ್ವನಾಥ ಅಯೋಧ್ಯೆಯ ರಾಜನಾಗಿದ್ದು ಅವನ ತಂದೆ ನಭಿರಾಜ ಮತ್ತು ತಾಯಿ ಮರುದೇವಿ. ಆದಿನಾಥನು ಅನೇಕ ಮೊದಲುಗಳನ್ನು ಮಾಡಿದವನೆಂದು ಪುರಾಣಗಳಲ್ಲಿ ಹೇಳುತ್ತಾರೆ. ಅದೇನೇ ಇರಲಿ, ಒಂದು ಪೌರಾಣಿಕವೋ, ಐತಿಹಾಸಿಕವೋ ಅಥವಾ ಎರಡರ ಮಿಶ್ರಣವೋ ಆದಂತಹ ಒಂದು ಪ್ರಕರಣನ್ನು ಮುಂದೊಡ್ಡಿ ಆದಿನಾಥನು ಮೋಕ್ಷಾಪೇಕ್ಷಿಯಾಗಿ ಹೋಗುವುದಕ್ಕೆ ಕಾರಣವನ್ನು ಹೇಳುತ್ತಾರೆ.

ಅದೆಂದರೆ ಒಮ್ಮೆ ದೇವೇಂದ್ರನೂ ಒಳಗೊಂಡಂತೆ ಒಂದು ಔತಣಕೂಟದಲ್ಲಿ ನೀಲಾಂಜನೆ ಎಂಬ ನರ್ತಕಿ ನರ್ತಿಸುತ್ತಿದ್ದಂತೆಯೇ ಸತ್ತುಬಿದ್ದಳು. ಅದನ್ನು ನೋಡಿದ







ಪಾರ್ಶ್ವನಾಥನಿಗೆ ವೈರಾಗ್ಯ ಬಂದಿತು. ಇನ್ನೂ ಕೆಲವು ಕೃತಿಗಳಲ್ಲಿ ಇಂದ್ರನು ನೀಲಾಂಜನೆಯು ಸತ್ತುದನ್ನು ಗಮನಿಸಿ ಅದು ಯಾರ ಗಮನಕ್ಕೂ ಬಂದಿಲ್ಲವೆಂದು ತಿಳಿದು, ಅವಳಿಗೆ ಹಾಗೆಯೇ ಜೀವದಾನ ಮಾಡಿ ನೃತ್ಯವು ಮುಂದುವರೆಯುವಂತೆ ಮಾಡಿದನಂತೆ. ಆದರೆ ಸೂಕ್ಷ್ಮಗ್ರಾಹಿಯಾದ ಪಾರ್ಶ್ವನಾಥನಿಗೆ ಅದು ತಿಳಿಯಿತು. ಜೀವ ಮತ್ತು ಜೀವನವು ಎಂತಹ ಕ್ಷಣಭಂಗುರವೆಂದು ಜಿಜ್ಞಾಸೆಗೆ ಒಳಗಾಗಿ ಮೋಕ್ಷಾಪೇಕ್ಷಿಯಾಗಿ ಹೊರಟುಹೋದ.

ಪಾರ್ಶ್ವನಾಥನಿಗೆ ಇಬ್ಬರು ಹೆಂಡತಿಯರು. ಆ ಇಬ್ಬರಿಂದ ನೂರೊಂದು ಜನ ಮಕ್ಕಳು. ಅವರಲ್ಲಿ ಭರತ ಮತ್ತು ಬಾಹುಬಲಿಯೂ ಕೂಡ. ಮಕ್ಕಳಿಗೆ ರಾಜ್ಯಭಾರದ ಜವಾಬ್ದಾರಿಯನ್ನು ವಹಿಸಿ ಕಾಡಿಗೆ ನಡೆದ. ಅವನೇ ಮೊಟ್ಟಮೊದಲ ದಿಗಂಬರ ಸ್ವಾಮಿ. ಮೊದಲ ತೀರ್ಥಂಕರ. ಅಲ್ಲಿಂದ ಮುಮುಕ್ಷುಗಳಿಗೆ ಹೊಸದೊಂದು ಪರಂಪರೆ ಪ್ರಾರಂಭವಾಯಿತು.

ಜೀವನದ ಸಹಜಚಕ್ರಕ್ಕೆ ಶರಣಾಗಿ ಮರಣಿಸಿದ ನೀಲಾಂಜನೆ, ವೈಭೋಗದ ಐಷಾರಾಮಕ್ಕಾಗಿ ಆ ಸತ್ಯವನ್ನು ಮರೆಮಾಚಿದ ಇಂದ್ರನ ನಡವಳಿಕೆ ಒಂದು ಭೌತಿಕ ಜಗತ್ತಿನ ವಿಶ್ಲೇಷಣೆಗೆ ಕಾರಣವಾಗುತ್ತದೆ. ಭೋಗ ಜಗತ್ತಿನ ಮೌಲ್ಯಮಾಪನವಾಗುತ್ತದೆ. ಈ ಸೂಕ್ಷ್ಮತೆಯನ್ನು ಕಂಡುಕೊಂಡ ಪಾರ್ಶ್ವನಾಥನ ಅನ್ವೇಷಣೆ ಮತ್ತು ಧ್ಯಾನ ಅತ್ಯಂತ ಎತ್ತರವಾದದ್ದು ಮತ್ತು ಆಳವಾದದ್ದು. ಈ ಆಳ ಎತ್ತರಗಳೆರಡೂ ಪ್ರಕೃತಿಯ ಸೂಕ್ಷ್ಮತೆ ಮಾತ್ರವಲ್ಲದೇ ವಿಶ್ವದ ಅಂತರ್ಯವನ್ನೂ ಹೊಕ್ಕಿ ಅರಿಯುವ ಪ್ರಯತ್ನವೇ ಆಗಿದೆ. ಅದಕ್ಕೆ ನೇರಾನೇರ ಎಂದರೆ ಪ್ರಾಕೃತಿಕವಾದಂತಹ ಮಾನಸಿಕ ಬಯಲನ್ನು ಮತ್ತು ದೈಹಿಕ ಬೆತ್ತಲನ್ನು ಒಪ್ಪುವುದು.

ಯಾವುದನ್ನು ಯೇಸು ಮಕ್ಕಳೆಂದು ರೂಪಕಗಳಲ್ಲಿ ಹೇಳುತ್ತಿದ್ದನೋ ಅದೇ ಮುಗ್ಧತೆಯನ್ನು, ಮುಕ್ತತೆಯನ್ನು ದೈಹಿಕವಾಗಿಯೂ ಸಾಮಾಜಿಕ ಪ್ರದರ್ಶನದಲ್ಲಿ ಧೈರ್ಯವಾಗಿ ಅಭಿವ್ಯಕ್ತಿಸಿದ ಧೀರರು ಮತ್ತು ವೀರರು ಈ ತೀರ್ಥಂಕರರು.

ಶಿಷ್ಟಾಚಾರದ ಉಡುಗೆಗಳಲ್ಲಿ ಪ್ರಕೃತಿಸಹಜದ ನಗ್ನತೆಯನ್ನು ಬಚ್ಚಿಡತೊಡಗುವ ಗಟ್ಟಿ ಸಂಪ್ರದಾಯದ ಸರಪಳಿಗಳನ್ನು ಕಿತ್ತೊಗೆದು ಬೆತ್ತಲಾಗುವುದು ಮಾನಸಿಕವಾಗಿ ಎಷ್ಟೂ ಸುಲಭದ ಮಾತಲ್ಲ. ಅದಕ್ಕೆ ಅಪರಿಮಿತ ಧೈರ್ಯ ಬೇಕು. ಮನಸ್ಸು ಮತ್ತು ಅರಿವು ಈ ಎರಡೂ ಪರಸ್ಪರ ಬದ್ಧತೆಯಿಂದ ಒಡಂಬಡಬೇಕು. ಆಗ ಮಾತ್ರವೇ ಸಾಧ್ಯ. ಆದರೆ ಚಂಚಲ ಮನಸ್ಸು ನಿರ್ಧಾರಗಳನ್ನು ಬದಲಿಸುತ್ತಿರುತ್ತದೆ. ಒಮ್ಮೆ ಒಪ್ಪಿಕೊಂಡದ್ದನ್ನು ಮತ್ತೊಮ್ಮೆ ನಿರಾಕರಿಸುತ್ತದೆ. ಅದಕ್ಕೆ ಅವರು ತಾವು ಸಮ್ಮತಿಸಿದ ದಾರಿಗೆ ಬದ್ಧವಾಗಿಯೇ ಇರಲು ಕಠಿಣ ಸಾಧನೆಗಳನ್ನು ಮಾಡಬೇಕಾಗುತ್ತದೆ. ಇಲ್ಲವಾದರೆ ಸಿದ್ಧಿಯು ಪ್ರಾಪ್ತವಾಗುವುದಿಲ್ಲ.

ಪಾರ್ಶ್ವನಾಥ ಜೀವನದ ಭೋಗಗಳನ್ನು ಕಂಡಿದ್ದರೂ ಸಿದ್ಧಿಪುರುಷನಾದ ಬಗೆಗೆ ಜಿಗುಪ್ಸೆ ಎಂಬುದು ಸಲ್ಲಿಸಿದ ಕಾಣಿಕೆ ಅಮೋಘವಾದದ್ದು.

ಇವರ ತಪಸ್ಸಿನ ಗುರಿ ಯಾವುದೇ ದೇವರ ಸಾಕ್ಷಾತ್ಕಾರವಲ್ಲ. ಪರಮಜ್ಞಾನ. ಪರಮಜ್ಞಾನದೊಳು ಸತತವಾಗಿ ನೆಲೆಸುವ ಪರಿ. ಆ ಸ್ಥಿತಿಯೇ ಒಂದು ವಿಶಿಷ್ಟ. ನೆನಪು ಮತ್ತು ಮರೆವುಗಳನ್ನು ಮೀರಿರುವುದು. ಭೂತ ಮತ್ತು ಭವಿಷ್ಯತ್ತುಗಳೆಂಬ ಕಾಲವನ್ನು ಕಳೆದುಕೊಂಡಿರುವುದು.

ಬರಿಯ ಮಾನಸಿಕವಾದಂತಹ ಮುಕ್ತ ಸ್ಥಿತಿಯೂ ಅಲ್ಲದೇ ದೈಹಿಕವಾಗಿಯೂ ಬೆತ್ತಲಾಗಿ ಬಯಲಾಗುವುದು ಒಂದು ತೀರ್ಥಂಕರರ ಪರಂಪರೆಯು ಭಾಗವಾಗಿ ಬಂದಿರುವುದು ವಿಶ್ವದ ಆಧ್ಯಾತ್ಮ ಕ್ಷೇತ್ರಕ್ಕೆ ಒಂದು ಅಪೂರ್ವ ದರ್ಶನ.

ಜೈನರಲ್ಲಿ ದಿಗಂಬರ ಅಥವಾ ಶ್ವೇತಾಂಬರ ಪಂಥದ ಬಗ್ಗೆ ತಲೆಕೆಡಿಸಿಕೊಳ್ಳುವುದಕ್ಕಿಂತ ತೀರ್ಥಂಕರರ ಬಗ್ಗೆ ತಿಳಿಯುವುದು ಮತ್ತು ಅವರ ಜೀವನದರ್ಶನ ಹಾಗೂ ಬೋಧನೆಗಳನ್ನು ಅರಿಯುವುದು ಬಹಳ ಪ್ರಮುಖವಾದ ಅಗತ್ಯಗಳಾಗಿವೆ.

ಮಹಾವೀರ

ಶ್ವೇತಾಂಬರರಾಗಲಿ, ದಿಗಂಬರರಾಗಲಿ ಈಗ ನಾವು ನೋಡುವ ಜೈನರನ್ನು ನೋಡಿ ಜಿನಧರ್ಮವನ್ನು ಅರಿಯಲು ಹೋದೆವೋ ಕೆಟ್ಟೆವು. ನಾವು ಜೈನರ ಅಂಗಡಿಗಳಿಗೆ ಹೋದಾಗ, ವೈದಿಕ ಮತ್ತು ಪೌರಾಣಿಕ ದೇವರುಗಳನ್ನು ನಿರಾಕರಿಸಿದ್ದ ಮಹಾವೀರನನ್ನು ಲಕ್ಷ್ಮೀಜಿ, ದುರ್ಗಾಜೀ, ಗಣೇಶ್‌ಜೀಗಳ ಜೊತೆ ಕೂರಿಸಿ ಚೌಕಟ್ಟು ಹಾಕಿಟ್ಟಿರುತ್ತಾರೆ. ಜಿನಧರ್ಮ ಅಲ್ಲೇ ತೂರಿಹೋಯಿತು. ವೈದಿಕರ ಆರಾಧನಾಪದ್ಧತಿಗಳೆಲ್ಲಾ ನುಸುಳಿ ಜಿನಾಲಯಗಳೂ ಆರಾಧನಾ ಮತ್ತು ಆಚಾರ ಪದ್ಧತಿಗಳ ಮಂದಿರವಾಗಿವೆಯೇ ಹೊರತು ಧ್ಯಾನ ಮಂದಿರಗಳಾಗದೇ ಇರುವುದು ವಿಪರ್ಯಾಸ.

ಇನ್ನೂ ಆಶ್ಚರ್ಯದ ವಿಷಯವೆಂದರೆ, ವೈದಿಕರ ದೇವರುಗಳೆಲ್ಲಾ ಜೈನರಲ್ಲಿ ಹೇಗೆ ಸ್ಥಾನ ಪಡೆದವು ಎಂಬುದು. ಮಹಾವೀರ ಸಂಪೂರ್ಣವಾಗಿ ದೇವರನ್ನು ನಿರಾಕರಿಸಿದ್ದ. ಸಮಾಜದ ಡಾಂಭಿಕತನವನ್ನು ನಿರಾಕರಿಸಿದ್ದ, ಖಂಡಿಸಿದ್ದ. ಸಮಾಜ ಸುಮ್ಮನಿರಲಿಲ್ಲ. ಮಹಾವೀರನಿಗೆ ಕಲ್ಲು ಹೊಡೆಯಿತು. ಹಳ್ಳಿಯಿಂದ ಹೊರಗೆ ತಳ್ಳಿದರು. ನಾಯಿಗಳನ್ನು ಬಿಟ್ಟು ಮಹಾವೀರನನ್ನು ಅಟ್ಟಿದರು. ಅವನ ಕಿವಿಗೆ ಲೋಹದ ಮೊಳೆಗಳಿಂದ ಚುಚ್ಚಿದರು. ನಾನಾರೀತಿಯ ಹಿಂಸೆಗಳನ್ನು ಕೊಟ್ಟರು ಮತ್ತು ಅಪಮಾನಿಸಿದರು. ಅದೇ ಮಹಾವೀರನನ್ನು ಇಂದು ದೇವರಸ್ಥಾನದಲ್ಲಿಟ್ಟು ಪೂಜಿಸುತ್ತಾರೆ.


ಈ ಧಾರ್ಮಿಕತೆಯ ಸಾಂಪ್ರದಾಯಿಕ ಆಚರಣೆ ಮತ್ತು ನಂಬುಗೆಗಳಲ್ಲಿರುವ ಬಹುದೊಡ್ಡ ವ್ಯಂಗ್ಯವೆಂದರೆ ಆ ಸಾಧನಾ ಪರಂಪರೆಯಿಂದ ಮತ್ತೊಬ್ಬನು ಹುಟ್ಟಿ ಬರಲಾಗದೆಂಬಂತೆ ಬರಡು ಮಾಡಿಕೊಳ್ಳುವುದು. ಮಹಾವೀರ ಕೊನೆಯ ತೀರ್ಥಂಕರನಾಗಬೇಕು, ಮಹಮದ್ ಕೊನೆಯ ಪೈಗಂಬರನಾಗಬೇಕು, ಕ್ರಿಸ್ತ ನಮ್ಮೊಳಗೆ ಮತ್ತೆ ಹುಟ್ಟಬಾರದು, ಬುದ್ಧನೆಂಬುವನು ಮತ್ತೊಬ್ಬನಿಲ್ಲ; ಇಂತಹ ಧೋರಣೆಗಳು. ಹಾಗಾಗಿ ಜೈನರು ಜೈನರಾಗಿಯೇ ಉಳಿದಿರಬೇಕು, ತೀರ್ಥಂಕರರು ಆಗುವಂತಿಲ್ಲ, ಹೊಸ ತೀರ್ಥಂಕರ ಹುಟ್ಟುವಂತಿಲ್ಲ, ಬೌದ್ಧರು ಸಾಯುವವರೆಗೂ ಬೌದ್ಧರಾಗಿಯೇ ಉಳಿದು ಬುದ್ಧನ ಹೆಸರಲ್ಲಿ ಆಶೀರ್ವಾದ ಅಥವಾ ಹಾರೈಕೆಗಳನ್ನು ಮಾಡುತ್ತಿರಬೇಕೇ ಹೊರತು, ತಾನೇ ಬುದ್ಧನಾಗುವ ದಿಕ್ಕಿನಲ್ಲಿ ಆಲೋಚಿಸುವುದೂ ಇಲ್ಲ, ಇನ್ನು ಸಾಧಿಸುವುದು ದೂರದ ಮಾತು. ಯಾವುದೇ ಧರ್ಮದ ಮೂಲ ಸಾರ-ಸತ್ವವು ಮತ್ತೊಬ್ಬ ತೀರ್ಥಂಕರನನ್ನು, ಪೈಗಂಬರನನ್ನು, ಕ್ರಿಸ್ತನನ್ನು, ಋಷಿಪುಂಗವನನ್ನು ಸೃಷ್ಟಿಸದೇ ಇರುವಷ್ಟು ಬರಡಲ್ಲ ಎಂದು ಆಯಾ ಧರ್ಮದ ವೈಶಾಲ್ಯವನ್ನೇ ಆಧರಿಸಿಕೊಂಡು ಹೇಳಲು ಸಾಧ್ಯವಿದೆ ಅಥವಾ ನಿರೂಪಿಸಲೇ ಸಾಧ್ಯವಿದೆ. ಆದರೆ ಅವುಗಳಿಗೆ ಕವಿದುಕೊಂಡಿರುವ ಪೌರಾಣಿಕ ಮಿಥಿಕಗಳು ನಮ್ಮ ಸಮಾಜದಲ್ಲಿರುವ ಆಯಾ ಧರ್ಮದ ಸಹಜೀವಿಗಳಿಂದಲೇ ಒಪ್ಪಿಕೊಳ್ಳಲು ಸಾಧ್ಯವಾಗದಿರುವಷ್ಟು ಗಟ್ಟಿಯಾಗಿ ಒಂದು ಭ್ರಾಮಕ ದೃಷ್ಟಿಯನ್ನು ಕಟ್ಟಿಕೊಟ್ಟಿವೆ. ಅದೇ ಎಲ್ಲಾ ಧರ್ಮಗಳ ದುರಂತ. ಅದಕ್ಕೇ ಹೇಳುವುದು, ಇಸ್ಲಾಂ ಅನ್ನು ಅರಿಯಬೇಕಾದರೆ ಮುಸಲ್ಮಾನರನ್ನು ನೋಡಬಾರದು, ಕ್ರಿಸ್ತನನ್ನು ಅರಿಯಬೇಕಾದರೆ ಕ್ರೈಸ್ತರನ್ನು ನೋಡಬಾರದು, ಜಿನನನ್ನು ಅರಿಯಬೇಕಾಧರೆ ಜೈನರನ್ನು ನೋಡಬಾರದು, ಬುದ್ಧನನ್ನು ಅರಿಯಬೇಕಾದರೆ ಬೌದ್ಧರನ್ನು ನೋಡಬಾರದು, ಪ್ರಾಚೀನ ಋಷಿಗಳನ್ನು ಅರಿಯಬೇಕಾದರೆ ಹಿಂದೂಗಳನ್ನು ನೋಡಬಾರದು.

ಒಂದು ವೇಳೆ ಯಾವುದೇ ಧರ್ಮೀಯರು ತಮ್ಮದೇ ಧರ್ಮದ ಮೂಲಕ್ಕೆ ಇಳಿದು ಅದರ ಆಧ್ಯಾತ್ಮದ ಆಳ ಮತ್ತು ವೈಚಾರಿಕತೆಯ ಎತ್ತರಗಳನ್ನು ಕಂಡಿದ್ದೇ ಆದರೆ ಸಹಜವಾಗಿ ಧರ್ಮವು ಒಂದು ದಾರಿಯೇ ಹೊರತು, ಗುರಿಯಲ್ಲ ಎಂಬುದನ್ನು ಅರಿತುಬಿಡುತ್ತಾರೆ ಮತ್ತು ಸಂಪೂರ್ಣವಾಗಿ ಎಲ್ಲಾ ಸಂಪ್ರದಾಯಗಳಿಂದ ಮುಕ್ತರಾಗಿಬಿಡುತ್ತಾರೆ. ಆಗ ಸಂಪ್ರದಾಯವಾದಿಗಳು ಅವರನ್ನು ಬಹಿಷ್ಕರಿಸುತ್ತಾರೆ, ಪ್ರಭುತ್ವದ ನೆರವನ್ನು ತೆಗೆದುಕೊಂಡು ನಾನಾ ಆರೋಪಗಳನ್ನು ಮಾಡಿ ಶಿಕ್ಷಿಸುತ್ತಾರೆ, ಕೊಲ್ಲಿಸುತ್ತಾರೆ.

ಹುಬ್ಬಳ್ಳಿಯ ಸಿದ್ಧಾರೂಢರು ಇತ್ತೀಚಿನ ಒಂದು ಮಹಾನ್ ಉದಾಹರಣೆ. ವೀರಶೈವರ ಮನೆಯಲ್ಲಿ ಹುಟ್ಟಿದ್ದ ಸಿದ್ಧಾರೂಢರಿಗೆ ಅರಿವಾಯಿತು ತಾನು ಧರಿಸಿರುವ ಲಿಂಗವು ಕುರುಹೇ ಹೊರತು ಅರಿವಲ್ಲ ಎಂದು. ಅರಿವನ್ನು ಹೊಂದಲು ಈ ಕುರುಹು ಬೇಕಾಗಿತ್ತೆಂದೂ, ಅರಿವುಂಟಾದ ಬಳಿಕ ಈ ಕುರುಹು ಬೇಡೆಂದು ತಮ್ಮ ಗುರುಪದದಲ್ಲಿ ಲಿಂಗವನ್ನು ತ್ಯಜಿಸಿದರು. ಅಷ್ಟಕ್ಕೇ ಅವರನ್ನು ಭವಿಯೆಂದು ಜರಿಯುತ್ತಾ ನಾನಾರೀತಿಯ ಹಿಂಸೆಗಳನ್ನು ಕೊಟ್ಟರು ಲಿಂಗವಂತ ಸಮಾಜವು. ಆದರೆ, ಯಥಾಪ್ರಕಾರ ಅವರನ್ನು ಐತಿಹ್ಯಗಳಿಂದ ಮುಚ್ಚಿ ಪವಾಡ ಪುರುಷನನ್ನಾಗಿ ಮಾಡಿದರು. ಸರಳ ಸಹಜ ಸಿದ್ಧರಾದ ಸಿದ್ಧಾರೂಢ, ಶಿರಡಿ ಸಾಯಿಬಾಬಾ ಅಂತಹವರ ಪವಾಡಗಳನ್ನು ತಾವೇ ಬರೆದು ಅವರ ತಮ್ಮ ಹೊಟ್ಟೆ ಹೊರೆದುಕೊಂಡರು. ■



ಚೆಡ್ಡಿಗಳನ್ನು ಸಿಯಾಚಿನ್‌ಗೆ ಕಳುಹಿಸಿ ಅವರ ದೇಶಪ್ರೇಮ ಟೆಸ್ಟ್ ಮಾಡಬೇಕ



ದಿಲ್ಲಿಯಲ್ಲಿ ಪಟಿಯಾಲ ಹೌಸ್ ಕೋರ್ಟಿನಲ್ಲಿ ಜೆಎನ್‌ಯು ವಿದ್ಯಾರ್ಥಿಯ ಮೇಲೆ ಭೀಕರ ಹಲ್ಲೆ ಮಾಡಿದ ಮೂರು ಜನ ವಕೀಲರನ್ನು ಪೊಲೀಸರು ಅರೆಸ್ಟ್ ಮಾಡಿ ಬೇಲ್ ಮೇಲೆ ಬಿಟ್ಟಿದ್ದಾರೆ. ಆದರೆ ಅವರಿಗೆ ಶಿಕ್ಷೆ ಕೊಡುವ ಬದಲು ಅವರ ದೇಶಪ್ರೇಮ ಸಾಬೀತುಮಾಡಲು ಅವರಿಗೆ ಇನ್ನೊಂದು ಅವಕಾಶ ಕೊಡಬೇಕು. ಈ ಮೂವರನ್ನೂ ಮಿಲಿಟರಿಯಲ್ಲಿ ಭರ್ತಿ ಮಾಡಿ ಅವರನ್ನು ಸಿಯಾಚಿನ್‌ಗೆ ಕಳುಹಿಸಿಕೊಟ್ಟು ಕೇವಲ ಒಂದು ತಿಂಗಳು ಅಲ್ಲಿ ಗಡಿ ಕಾಯುವಂತೆ ಮಾಡಿದರೆ ಸಾಕು. ಅವರ ರಾಷ್ಟ್ರಭಕ್ತಿಯ ಆಳ ಗೊತ್ತಾಗುತ್ತದೆ. ಅವರ ಪೌರುಷ, ಧೈರ್ಯ ಮತ್ತು ವೀರಾವೇಶವನ್ನು ಅವರು ಕೇವಲ ಒಂದು ತಿಂಗಳು ಸಿಯಾಚಿನ್‌ನಲ್ಲಿ ತೋರಿಸಿದರೆ ಸಾಕು, ಅವರನ್ನು ದಿಲ್ಲಿಯ ಕೋರ್ಟು ಕ್ಷಮಿಸಿ ಬಿಡಬಹುದು.

ಈ ಕೇಸರಿ ವಕೀಲರ ಆಟಾಟೋಪ ನೋಡಿಕೊಂಡು ಕೈಕಟ್ಟಿ ಕುಳಿತಿದ್ದ ದೇಶಭಕ್ತ ದಿಲ್ಲಿ ಪೊಲೀಸರಿಗೂ ಅವರ ರಾಷ್ಟ್ರಪ್ರೇಮ ತೋರಿಸಲು ಇನ್ನೊಂದು ಸರಿಯಾದ ಅವಕಾಶ ಕೊಡುವುದು ಒಳಿತು. ಈ ಕೇಸರಿ ಪೊಲೀಸರನ್ನೂ ಗಡಿ ಭದ್ರತಾ ಪಡೆಗೆ ಒಂದು ತಿಂಗಳ ಮಟ್ಟಿಗೆ ನಿಯೋಜನೆ ಮಾಡಿ ಪಾಕಿಸ್ತಾನದ ಉಗ್ರವಾದಿಗಳು ಅಡಗಿರುವ ಕಾಶ್ಮೀರ ಕಣಿವೆ ಪ್ರದೇಶಕ್ಕೆ ಪೋಸ್ಟಿಂಗ್ ಮಾಡುವುದು ಸೂಕ್ತ. ಆಗ ಎಲ್ಲರ ನಿಜವಾದ ರಾಷ್ಟ್ರಪ್ರೇಮ ಅವರ ಕುಂಡಲಿನಿ ಚಕ್ರದಿಂದ ಹೊರಬರುವುದು ಖಂಡಿತ.

ಮಿಲಿಟರಿಗೆ ರಿಕ್ರುಟ್‌ಮೆಂಟ್ ನಡೆಯುವಾಗ ಖಾಕಿ ಚಡ್ಡಿ ಹಿಂದೂತ್ವ ಕಾಲಾಳುಗಳು ಮಿಲಿಟರಿ ಸೇರಲು ಬರುವುದೇ ಇಲ್ಲ. ಆದರೆ ಸಭೆ ಸಮಾರಂಭಗಳಲ್ಲಿ ಮಾತ್ರ ದೇಶಪ್ರೇಮದ ಬೊಬ್ಬೆ ಹಾಕುವುದರಲ್ಲಿ ಈ ಚೆಡ್ಡಿಗಳು ಅಗ್ರಗಣ್ಯರು. ಸಿಯಾಚಿನ್‌ನಲ್ಲಿ ಹುತಾತ್ಮರಾದ ಹನುಮಂತಪ್ಪ ಮಹೇಶ್ ಮತ್ತು ನಾಗೇಶ್ ಇವರ ಪತ್ನಿ ಅಥವಾ ತಾಯಿಯನ್ನೂ ತಮ್ಮ ಸಂಘಟನೆಯೊಂದಿಗೆ ಸೇರಿಸಿಕೊಳ್ಳುವ ದುಷ್ಟ ಪ್ರಯತ್ನ ಸಂಘ ಪರಿವಾರದವರಿಂದ ಆಗುತ್ತಿದೆ. ಗುಲ್ಬರ್ಗಾದ ದಿವಂಗತ ಪೊಲೀಸ್ ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನ ಬಂಡೆಯ ಪತ್ನಿಯನ್ನು ತಮ್ಮ ಸಂಘಟನೆಯೊಂದಿಗೆ ಕೇಸರಿಗಳು ಸೇರಿಸಿಕೊಂಡಿದ್ದಾರೆ. ಆದರೆ ಈ ಸಂಘಿ ಚೆಡ್ಡಿಗಳಲ್ಲಿ ಯಾವುದೇ ಗಂಡಸು ಮಿಲಿಟರಿ ಸೇರಲು ಮುಂದೆ ಬರುತ್ತಿಲ್ಲ. ಇವರ ಪೌರುಷವೆಲ್ಲಾ ಕೇಸರಿ ಪಡ್ಡೆಗಳನ್ನು ಮುಸ್ಲಿಮ್ ಮತ್ತು ಕ್ರೈಸ್ತರ ವಿರುದ್ಧ ಪ್ರಚೋದಿಸುವುದಕ್ಕೆ ಮಾತ್ರ ಸೀಮಿತ. ಇದು ಅವರ ಪಕ್ಕಾ ಹೇಡಿತನ ತೋರಿಸುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಸಂಸದ ಅನಂತ ಕುಮಾರ್ ಹೆಗಡೆ- ಈ ಜಗತ್ತಿನಿಂದ ಭಯೋತ್ಪಾದನೆ ಸಂಪೂರ್ಣ ನಿವಾರಿಸಬೇಕಾದರೆ ಇಸ್ಲಾಂ ಧರ್ಮವನ್ನೇ ಮೂಲೋತ್ಪಾಟನೆ ಮಾಡಬೇಕು ಎನ್ನುತ್ತಾನೆ! ಆಗ್ರಾದಲ್ಲಿ ಮೂವರು ಬಿಜೆಪಿ ಸಚಿವರು ಭಾರತೀಯ ಮುಸ್ಲಿಮರು ರಾಕ್ಷಸರು, ಅವರ ವಿರುದ್ಧ ಅಂತಿಮ ಯುದ್ಧಕ್ಕಾಗಿ ಸಿದ್ಧರಾಗಿ ಎಂದು ಕರೆ ನೀಡುತ್ತಾರೆ! ಭಾರತದೆಲ್ಲೆಡೆ ಸಾರ್ವಜನಿಕವಾಗಿ ಇಂತಹ ಪ್ರಚೋದನಾತ್ಮಕ ಹೇಳಿಕೆ ಕೊಡುತ್ತಲೇ ಇರಬೇಕೆಂದು ನೇರವಾಗಿ ಆರ್‌ಎಸ್‌ಎಸ್ ಹೆಡ್ ಆಫೀಸಿನಿಂದ ಮತ್ತು ಅಮಿತ್ ಶಾನಿಂದ ಎಲ್ಲೆಡೆಯ ಕೇಸರಿ ಮುಖಂಡರಿಗೆ ನೇರ ಆದೇಶ ಬಂದಿದೆಯಂತೆ. ಇಂತಹ ಹೇಳಿಕೆಗಳು ಉಲ್ಟಾ ಹೊಡೆದಾಗ ಮಾತ್ರ ಅದು ಅವರವರ ವೈಯಕ್ತಿಕ ಹೇಳಿಕೆ, ನಮ್ಮ ಸಂಘಟನೆ ಅಥವಾ ಪಕ್ಷಕ್ಕೆ ಅವರ ಹೇಳಿಕೆ ಸಂಬಂಧಿಸಿಲ್ಲ ಎಂದು ಹೇಳಿ ಜಾರಿಕೊಳ್ಳುತ್ತಾರೆ. ಇದು ಚೆಡ್ಡಿಗಳ ಅತ್ಯಂತ ಹಳೆಯ ಟ್ರಿಕ್. ಉ.ಕ. ದ ಸಂಸದ ಅನಂತ ಹೆಗಡೆಯ ವಿರುದ್ಧ ಈಗಾಗಲೇ ಪೊಲೀಸ್ ದೂರು ದಾಖಲಾಗಿದೆ.

ಸುಮಾರು ಮೂರೂವರೆ ವರ್ಷಗಳ ಹಿಂದೆ ಮಂಗಳೂರಿನ ಖಾತರ್ನಾಕ್ ಚೆಡ್ಡಿ ವಕೀಲ ಪಿ.ಪಿ.ಹೆಗಡೆ ಎಂಬವ ಬೆಳ್ತಂಗಡಿಯಲ್ಲಿ- ನಮ್ಮ ದೇಶದ ತ್ರಿವರ್ಣ ಧ್ವಜದ ಬದಲು ಕೇಸರಿ ಧ್ವಜ ರಾಷ್ಟ್ರಧ್ವಜ ಆಗಬೇಕು. ಸ್ವಾತಂತ್ರ್ಯ ದಿನಾಚರಣೆ ಮಾಡಬಾರದು, ಮಹಾತ್ಮ ಗಾಂಧೀಜಿಗೆ ರಾಷ್ಟ್ರಪಿತ ಅನ್ನಬಾರದು ಎಂದು ಮೂರು-ಮೂರು ದೇಶದ್ರೋಹದ ಹೇಳಿಕೆ ಕೊಟ್ಟ ಬಗ್ಗೆ ಬೆಳ್ತಂಗಡಿಯಲ್ಲಿ ಪೊಲೀಸ್ ದೂರು ದಾಖಲಾಗಿದೆ. ಆದರೆ ಕರ್ನಾಟಕದಲ್ಲಿ ಈಗ ಕಾಂಗ್ರೆಸ್ ಸರಕಾರವಿದ್ದರೂ ಪೊಲೀಸರು ಮೂರೂವರೆ ವರ್ಷದಿಂದ ಚಾರ್ಜ್ ಶೀಟ್ ಹಾಕಿಲ್ಲ, ಆದರೆ ಗುಜರಾತಿನಲ್ಲಿ ಹಾರ್ದಿಕ್ ಪಟೇಲ್ ವಿರುದ್ಧ ರಾಷ್ಟ್ರಧ್ವಜದ ದುರುಪಯೋಗ ಮಾಡಿದನೆಂದು ನಾಲ್ಕೇ



ದಿನದೊಳಗೆ ದೇಶದ್ರೋಹದ ಕೇಸ್ ಹಾಕಿ ಅನೇಕ ತಿಂಗಳಿನಿಂದ ಗುಜರಾತ್ ಸರಕಾರ ಜೈಲಿನೊಳಗೆ ಇಟ್ಟಿದೆ. ಕರ್ನಾಟಕಕ್ಕೂ ಗುಜರಾತಿಗೂ ದೇಶದ್ರೋಹದ ವ್ಯಾಖ್ಯೆಯಲ್ಲಿ ಎಷ್ಟೊಂದು ಭಾರಿ ಅಂತರವಿದೆ ನೋಡಿ.

- ವೀರಪ್ಪ ಡಿ.ಎನ್. ಮಡಿಕೇರಿ

ಕನ್ನಯ್ಯ ಮತ್ತು ಉಮರ್ ನಿಜವಾದ ದೇಶಭಕ್ತರು

ನನ್ನ ಪದವಿ ಪ್ರಾರಂಭ ಹಂತ 1999 ರಿಂದಲೂ ಪತ್ರಿಕೆ ಓದುತ್ತ ಬಂದಿರುವೆ. ನಿಮಗೆ ನೆನಪಿರಬೇಕು, ಪತ್ರಿಕೆ ಲಂಕೇಶ್‌ರ ನಂತರ ಇಬ್ಭಾಗವಾದಾಗ, ತುಸು ಅಸಮಾಧಾನ ವ್ಯಕ್ತಪಡಿಸಿ ನೋವಿನಿಂದ ಪತ್ರ ಬರೆದಿದ್ದೆ (ಅದನ್ನು ಓದುಗರ ವಿಭಾಗದಲ್ಲಿ ಪ್ರಕಟಿಸಿದ್ರಿ) ಈ ವಾರದ ಪತ್ರಿಕೆಯಲ್ಲಿ 'ಕನ್ನಯ್ಯ ಉಮರ್ ನನ್ನ ಪುತ್ರರು' ಎಂಬುದನ್ನು ನೋಡಿ ನಿಮ್ಮ ಮೇಲಿನ ಗೌರವ ಇಮ್ಮಡಿಯಾಯಿತು.

1860 ರ ಬ್ರಿಟಿಷರ ದೇಶದ್ರೋಹದ ಕಾನೂನಿಗೆ ಸರ್ವೋಚ್ಚ ನ್ಯಾಯಾಲಯ 1962 ರಲ್ಲಿ ವಾಕ್ಯವೊಂದನ್ನು ಸೇರ್ಪಡೆ ಮಾಡಿದೆ. ಅದರ ಅನ್ವಯ ಕನ್ನಯ್ಯ ಉಮರ್ ಮುಂತಾದ ಹುಡುಗರು ಯಾವುದೇ ಹಿಂಸಾತ್ಮಕ ಕೃತ್ಯ ಮಾಡಿಲ್ಲ, ಶಾಂತಿಗೆ ಭಂಗ ತಂದಿಲ್ಲ ಹಾಗೂ ಭಾರತದ ಅಖಂಡತೆಗೆ ಅಪಾಯವೊಡ್ಡಿರಲಿಲ್ಲ, ಬದಲಾಗಿ ದೇಶದೊಳಗೆ ನುಗ್ಗಿ ಶಾಂತಿಕದಡುವ ಉಗ್ರವಾದಿಗಳ ತಡೆಗೆ ಗಡಿಗಳಲ್ಲಿ ಸೈನಿಕರು ಕಾವಲು ಇರುವಂತೆ, ದೇಶದೊಳಗಿನ ನಿತ್ಯ ಸಮಸ್ಯೆಗಳಾದ ಬಡತನ, ದಲಿತರ ಮಾರಣಹೋಮ, ಕೋಮುವಾದ, ಜಾತಿಯತೆ, ರೈತರ ಸಮಸ್ಯೆ, ದೇಶದೊಳಗಿನ ಆತಂಕವಾದ ಮುಂತಾವುಗಳ ವಿರುದ್ಧ ಸಮಾನತೆಯ ಸಮವಸ್ತ್ರ ಧರಿಸಿ, ವೈಚಾರಿಕತೆ ಮತ್ತು ಪ್ರಗತಿಪರತೆಯ ಗನ್ನು ಹಿಡಿದು ಹೋರಾಡುತ್ತಿರುವ ನಿಜವಾದ ಹೆಮ್ಮೆಯ ದೇಶಭಕ್ತರು. ಸೈನಿಕರಿಗೆ ಗೌರವ ಸನ್ಮಾನ, ಈ ಹುಡುಗರಿಗೆ ದೇಶದ್ರೋಹದ ಆಪಾದನೆ, ಬಂಧನ. ಇದು ನಮ್ಮ ನಡುವಿನ ವ್ಯಂಗ್ಯ.

- ಡಿ.ಎಲ್. ಮಂಜು, ಮಂಡ್ಯ

ಸಂಜಯ್‌ದತ್ ಬಿಡುಗಡೆ ಎಂಬ ಚೆಡ್ಡಿಗಳ ನಾಟಕ

ಈಗ ತರಾತುರಿಯಿಂದ ಸಂಜಯ್ ದತ್‌ನನ್ನು 8 ತಿಂಗಳು ಮುಂಚಿತವಾಗಿ ಬಿಡುಗಡೆ ಮಾಡಲು ಕಾರಣ ಏನು ಗೊತ್ತೇ? ದೇಶದ್ರೋಹದ ನೆಪದಲ್ಲಿ ದಿಲ್ಲಿಯ ಜೆಎನ್‌ಯುನಲ್ಲಿ ಬಿಜೆಪಿಯವರು ತಾವೇ ಮಾಡಿಕೊಂಡ ಎಡವಟ್ಟು ಈಗ ಅವರ ಕೈಯನ್ನೇ ಸುಡುತ್ತಿದೆ. ಕನ್ನಯ್ಯ ಕುಮಾರ್ ವಿಷಯದಲ್ಲಿ ಅವರು ಮಾಡಿರುವ ದೇಶದ್ರೋಹದ ಆರೋಪ ಈಗ ಬಿಜೆಪಿ ಮತ್ತು ಸಂಘಿಗಳಿಗೆ ಉಲ್ಟಾ ಹೊಡೆಯುತ್ತಿದೆ. ವಿದೇಶದ 400 ಕ್ಕೂ
ವಿಶ್ವವಿದ್ಯಾಲಯಗಳೂ ಕನ್ನಯ್ಯ ಕುಮಾರ್‌ಗೆ ನೈತಿಕ ಬೆಂ
ಸೂಚಿಸಿದ್ದು, ವಿದೇಶದಲ್ಲೂ ಬಿಜೆಪಿಯ
ಬಾರಿಸಿದಂತಾಗಿದೆ. ದೇಶದ್ರೋಹದ ಆರೋಪ
ಬಿಜೆಪಿಯ ವಿರುದ್ಧವೇ ಬೂಮರಾಂಗ್ ಆಗುತ್ತಿವೆ. ಕ
ಬ್ರಿಟಿಷ್ ಆಡಳಿತ ಕಾಲದಲ್ಲಿ ಆರ್‌ಎಸ್‌ಎಸ್ ಸಂಘ
ಬ್ರಿಟಿಷರ ಜೊತೆ ಗುಟ್ಟಾಗಿ ಕೈಜೋಡಿಸಿ ಸ್ವಾತಂ
ಹೋರಾಟಗಾರರ ವಿರುದ್ಧ ಬ್ರಿಟಿಷರಿಗೆ ಗುಟ್ಟಾಗಿ ಮಾ
ರವಾನಿಸಿ ಮಾಡಿದ ದೇಶದ್ರೋಹವನ್ನು ಹಾ
ಗಾಂಧೀಜಿಯ ಹತ್ಯೆಯನ್ನು ಈ ಸಂದರ್ಭದಲ್ಲಿ ಎಲ್ಲ
ಕೆದಕಿ ಹಿಂದೂತ್ವ ಸಂಘಟನೆಗಳಿಗೆ ಮುಜು
ಉಂಟುಮಾಡುತ್ತಿರುವುದು ಬಿಜೆಪಿಗೆ ನುಂಗಲಾ
ತುತ್ತಾಗಿದೆ. ಅದಕ್ಕಾಗಿ ಈಗ ದೇಶದ ಜನತೆಯ
ಬೇರೆ ಕಡೆ ತಿರುಗಿಸಲು ಹಾಗೂ ತಾವು ದೇಶದ್ರೋ
ಆರೋಪಿಗಳ ಬಗ್ಗೆಯೂ ತುಂಬಾ ಉದಾರಿಗಳಾಗಿ
ಎಂದು ತೋರಿಸಲು ಸಂಜಯ್‌ದತ್‌ನನ್ನು ಅವಧಿಗೆ ಮ
ಬಿಡುಗಡೆ ಮಾಡಿ ಬಿಜೆಪಿ ನಾಟಕ ಆಡುತ್ತಿದೆ ಅಷ್ಟೆ.

ಈ ಸಂಜಯ್ ದತ್ ಪ್ರಸಿದ್ಧ ಹಿಂದಿ ಸಿನಿ
ನಟನಾಗಿರದೇ ಒಬ್ಬ ಸಾಧಾರಣ ವ್ಯಕ್ತಿ ಆಗಿದ್ದರೆ ಮಹಾರಾ
ಫಡ್ನವಿಸ್ ಸರಕಾರ ಹಾಗೂ ಮೋದಿ ಸರಕಾರ ಇ
ವಿಶಾಲ ಮನಸ್ಸು ತೋರಿಸಲು ಸಾಧ್ಯವಿತ್ತೆ? ಒಬ್ಬ ಸಾಧಾ
ವ್ಯಕ್ತಿಯ ತಂದೆ ಹಿಂದೂ ಆಗಿದ್ದರೂ ತಾಯಿ ಮು
ಎಂಬ ಕಾರಣಕ್ಕೆ ಅವನ ಮೇಲೆ ಇನ್ನೂ ಹೆ
ದೇಶದ್ರೋಹದ ಆರೋಪ ಹೊರಿಸಲಾಗುತ್ತಿತ್ತು. ಸಂಜ
ದತ್‌ನ ಬಿಡುಗಡೆ ಕೇವಲ ಮೋದಿ, ಅಮಿತ್ ಶಾ ಮ
ದೇವೇಂದ್ರ ಫಡ್ನವೀಸರ ಸ್ವ-ಪ್ರಚಾರದ ತಂತ್ರ ಅಷ್ಟೇ


ಮೊನ್ನೆ ಆರ್‌ಎಸ್‌ಎಸ್ ಮುಖ್ಯಸ್ಥ 'ಮನು' ಮೋಹ
ಭಾಗವತ್ ಇಂದೋರ್‌ನಲ್ಲಿ ಹೇಳಿದ್ದೇನೆಂದರೆ
ಮಹಿಳೆಯರು ಮನೆಗೇ ಸೀಮಿತವಾಗಿ ಕೇವಲ ಗ
ಮತ್ತು ಕುಟುಂಬದ ಸೇವೆಗೆ ಮಾತ್ರ ತೊಡಗಿಸಿಕೊಳ್ಳಬೇ
ವೈಕುಂಠದ ಲಕ್ಷ್ಮಿಯನ್ನು ಉದಾಹರಿಸುತ್ತಾ ಅವ
ಯುಗಯುಗದಿಂದ ಕೇವಲ ವಿಷ್ಣುವಿನ ಕಾ
ಒತ್ತುವುದರಲ್ಲಿಯೇ ತಲ್ಲೀನಳಾಗಿದ್ದಾಳೆ, ಹಾಗಾಗಿ ಎ
ಭಾರತೀಯ ದೇಶಪ್ರೇಮಿ ಮಹಿಳೆಯರು ಜೀವನವಿ

ಶನಿದೇವರ ತಾಯಿಗೆ ಮುಟ್ಟಾಗುತ್ತಿರಲಿಲ್ಲವೇ ?

ತಮ್ಮ ಮಾರ್ಚ್ 9 ರ ಸಂಚಿಕೆಯಲ್ಲಿ ರಂಜಾನ್ ದರ್ಗಾ ಇವರು ಬರೆದಿರುವಂತೆ ಶನಿಶಿಂಗ್ಣಾಪುರದ ಸಮಸ್ಯೆಗೆ ಲಿಂಗಾಯತ ಶರಣರಲ್ಲಿ ಉತ್ತರವಿರುವುದು ನಿಜ. ಶನಿಯು ಯಾರಿಗೂ ಕಾಟ ಕೊಡದೇ ಬಿಡುವುದಿಲ್ಲವಂತೆ. ದೇವರ ದೇವ ಮಹಾದೇವನಿಗೂ ಶನಿಕಾಟ ತಪ್ಪಲಿಲ್ಲವಂತೆ. ಆದರೆ ನಮ್ಮ ವೈದಿಕರು ಎಷ್ಟು ಪವರ್‌ಫುಲ್ ಎಂದರೆ ಅಂತಹ ಶನಿದೇವರಿಗೇ ವೈದಿಕರು ಕಾಟ ಕೊಡಬಲ್ಲರು. ಅದೂ ಹೆಂಗಸರ ವಿಷಯ ಮುಂದಿಟ್ಟುಕೊಂಡು. ಹೆಂಗಸರಿಗೆ ಮುಟ್ಟು-ಮೈಲಿಗೆ ಆಗುವುದರಿಂದ ಅವರಿಗೆ ಶಿಂಗ್ಣಾಪುರದಲ್ಲಿ ಶನಿ ದೇವಲದ ಚಬುತರಾದ ಒಳಗೆ ಹೋಗಲು ನಿಷೇಧ ವಿಧಿಸಲಾಗಿದೆ.

ಶನಿದೇವನ ತಾಯಿಯ ಹೆಸರು ಛಾಯಾದೇವಿ ಅರ್ಥಾತ್ ಸಂಧ್ಯಾದೇವಿ. ಶನಿಯ ಹೆಂಡತಿಯ ಹೆಸರು ನೀಲಾದೇವಿ. ಶನಿಗೆ ಜನ್ಮ ಕೊಟ್ಟ ಛಾಯಾದೇವಿ ಹೆಣ್ಣಲ್ಲವೇ? ಶನಿಯ ಹೆಂಡತಿ ನೀಲಾದೇವಿ ಹೆಣ್ಣಲ್ಲವೇ? ಛಾಯಾದೇವಿ ಎಂಬ ಹೆಣ್ಣು ಇಲ್ಲದಿರುತ್ತಿದ್ದರೆ ಶನಿಯ ಜನ್ಮವಾಗುತ್ತಿತ್ತೇ? ಛಾಯಾದೇವಿ ಪ್ರತಿ ತಿಂಗಳು ಮುಟ್ಟಾಗದಿರುತ್ತಿದ್ದರೆ ಶನಿಯು ಜನ್ಮಿಸಲು ಸಾಧ್ಯವಿತ್ತೆ? ಶನಿಯ ಹೆಂಡತಿ ಮುಟ್ಟಾಗುವುದಿಲ್ಲವೇ? ಆದರೆ ಶನಿಗೆ ಮಕ್ಕಳಿಲ್ಲವಂತೆ ಪಾಪ. ಪಾರ್ವತಿಯೊಬ್ಬಳನ್ನು ಬಿಟ್ಟು ಮಿಕ್ಕೆಲ್ಲಾ ಹೆಣ್ಣು ದೇವರುಗಳು ಮಕ್ಕಳಿಲ್ಲದೇ ಬಂಜೆಯಾಗಿರಲು ಕಾರಣ ಅವರು ಮುಟ್ಟಾಗದಿರುವುದೇ ಇರಬಹುದೇ?

ದಿವ್ಯ ದೈವಿ ಶಕ್ತಿಯಲ್ಲಿ ಗಂಡು-ಹೆಣ್ಣು ಎಂಬ ಲಿಂಗಭೇದವೇ ಇಲ್ಲದಿದ್ದರೂ, ಈ ಜಗತ್ತಿನ ಧರ್ಮಗಳಲ್ಲಿ ಕೇವಲ ಹಿಂದೂ ಧರ್ಮ ಮಾತ್ರ ಎಲ್ಲಾ ದೇವರನ್ನು ಗಂಡು ಹೆಣ್ಣು ಎಂದು ವಿಭಜಿಸಿ ಎಲ್ಲಾ ಗಂಡು ದೇವರಿಗೆ ಎರಡು-ಮೂರು ಹೆಂಡತಿಯರನ್ನು ಗಂಟು ಹಾಕಿ ಕಾಮ ಮೋಹವನ್ನು ತುಂಬಿರುವುದು. ಎಲ್ಲಾ ವೈದಿಕ ದೇವರು ತಮ್ಮ ಎರಡೆರಡು ಹೆಂಡತಿಯರನ್ನು ಯಾವಾಗಲೂ ಎಳೆಯ ಮಕ್ಕಳಂತೆ ತಮ್ಮ ತೊಡೆಯ ಮೇಲೆಯೇ




ಕೂಡಿಸಿಕೊಳ್ಳುವುದು ವಾಡಿಕೆ. ಭಯಂಕರ ಅಗ್ನಿ ಉಗುಳುವ ಉಗ್ರ ನರಸಿಂಹನೂ ಹಿರಣ್ಯ ಕಶ್ಯಪುವನ್ನು ಕೊಂದ ಮರುಕ್ಷಣ ತನ್ನ ಇಬ್ಬರು ಹೆಂಡತಿಯರನ್ನೂ ತೊಡೆಯ ಮೇಲೆ ಏರಿಸಿಕೊಂಡೇ ಪ್ರಹ್ಲಾದನಿಗೆ ದರ್ಶನ ಕೊಟ್ಟದ್ದು. ಶನಿಯೂ ತನ್ನ ಹೆಂಡತಿಯನ್ನು ಜತೆಯಲ್ಲೇ ಕಾಗೆಯ ಮೇಲೆ ಕೂಡಿಸಿಕೊಂಡು ಜಗತ್ತು ಸುತ್ತಿ ಮುವ್ವತ್ತು ವರ್ಷಕ್ಕೊಮ್ಮೆ ಪ್ರತಿಯೊಬ್ಬ ಮಾನವನನ್ನೂ ಶಿಕ್ಷಿಸಿ ಸರಿದಾರಿಗೆ ತರುವ ತನ್ನ ಕಾಯಕ ಮಾಡುತ್ತಿದ್ದಾನಂತೆ. ಹಾಗಾಗಿ ಎಲ್ಲಾ ಮನುಷ್ಯರಿಗೆ ತಮ್ಮ ಜೀವಿತಕಾಲದಲ್ಲಿ ಕನಿಷ್ಠ ಎರಡು ಬಾರಿಯಾದರೂ ಸಾಡೇಸಾತಿ ಹಿಡಿಯುತ್ತದೆಯೆಂದು ಮೌಢ್ಯದ ರಾಯಭಾರಿ ಜ್ಯೋತಿಷಿಗಳ ಅಂಬೋಣ.

ಎಲ್ಲಾ ವೈದಿಕ ದೇವರ ಹೆಂಡತಿಯರು ಪ್ರಕೃತಿ ನಿಯಮದಂತೆ ಕಾಲಕಾಲಕ್ಕೆ ಮುಟ್ಟಾಗಲೇಬೇಕು ತಾನೇ. ದೇವರೂ ಪ್ರಕೃತಿ ನಿಯಮಕ್ಕೆ ಹೊರತಲ್ಲ, ಹಾಗಾದರೆ ಎಲ್ಲಾ ಹೆಣ್ಣು ದೇವರುಗಳು ಹಾಗೂ ಪತ್ನಿಯರೊಂದಿಗೆ ಯಾವಾಗಲೂ ಅಂಟಿಕೊಂಡಿರುವ ಗಂಡು ದೇವರುಗಳೂ ಪ್ರತಿ ತಿಂಗಳು ಕನಿಷ್ಠ ಮೂರು ದಿನ ಮೈಲಿಗೆಯ
ಪೂಜೆಗೆ ಆ ಮೂರು ದಿನ ಅರ್ಹರಲ್ಲ ಎಂ
ಪರಿಗಣಿಸಬೇಕು. ಮಾನವ ಮಹಿಳೆಯರಿಗೆ ಮಾ
ಅನ್ವಯವಾಗುವ ತಿಂಗಳಿಗೆ ಮೂರು-ನಾಲ್ಕು
ಮೈಲಿಗೆಯ ನಿಯಮ ದುರ್ಗಾ-ಮಾರಿ-ಕಾಳಿ-ಲಕ್ಷ್ಮಿ-ಭಗ
ದೇವರುಗಳಿಗೂ ಅನ್ವಯವಾಗಬೇಕು. ಹೀಗೆ ಮೂ
ದಿನ ದೇವಸ್ಥಾನಗಳನ್ನು ಬಂದ್ ಇಟ್ಟು ತಮ್ಮ ಭಜ
ದಕ್ಷಿಣೆಯ ಕಮಾಯಿ ಕಳೆದುಕೊಳ್ಳಲು ಅರ್ಚಕ
ಸಿದ್ಧರಿರುವರೇ?

ಕೇವಲ ಅಸ್ಸಾಮ್ ರಾಜ್ಯದ ಕಾಮಾಖ್ಯಾ ದೇವ
ಕೇರಳದ ಚೆಂಗನ್ನೂರು ದೇವಳ ಮತ್ತು ಕುಂದಾಪ
ತಾಲೂಕಿನ ಬಸರೂರಿನ ಹತ್ತಿರ ಒಂದು ರೇಣುಕಾ-ಭಗ
ದೇವಳವನ್ನು ಈ ಕಾರಣಕ್ಕೆ ತಿಂಗಳಿಗೆ ಮೂರು ದಿ
ಮುಚ್ಚುವುದು ನಿಜ. ಆದರೆ ಈ ನಿಯಮ ಪ್ರತಿಯೊಂ
ದುರ್ಗಾ-ಲಕ್ಷ್ಮಿ - ಮಾರಿ-ಕಾಳಿ ದೇವಳಗಳಿಗೂ ಅನ್ವ
ಆಗಲೇಬೇಕಲ್ಲವೇ? ಕಾರಣ ಪ್ರಕೃತಿ ನಿಯಮವೇ ದೇವ
ನಿಯಮಕ್ಕಿಂತ ಹೆಚ್ಚು ನಿಖರ ಮತ್ತು ಅಂತಿಮ ನಿಯ

ಶನಿ ದೇವರಿಗೆ ಎಳ್ಳೆಣ್ಣೆ ಮಾತ್ರ ಅರ್ಪಿಸುವುದ
ಎಳ್ಳೆಣ್ಣೆ ಹೆಚ್ಚಾಗಿ ಹಳ್ಳಿಯ ಗಾಣದಲ್ಲಿ ಮಾಡುವುದ
ಗಾಣ ನಡೆಸುವವ ಗಂಡಸಾದರೆ ಹೆಚ್ಚಾಗಿ ಎ
ಸೋಸುವವರು ಹೆಂಗಸರೇ. ಅವರಲ್ಲಿ ಎಷ್ಟು ಹೆಂಗಸ
ಮುಟ್ಟಾಗಿರುವ ವೇಳೆ ಈ ಎಳ್ಳೆಣ್ಣೆ ಸೋಸುವ ಕೆ
ಮಾಡಿರುತ್ತಾರೋ. ಹಾಗಾದರೆ ಅಂತಹ ಮೈಲಿಗೆ
ಎಳ್ಳೆಣ್ಣೆಯನ್ನು ಪ್ರತ್ಯೇಕಿಸಿ ಶನಿದೇವರಿಗೆ ಕೇವಲ ಶು
ಎಳ್ಳೆಣ್ಣೆ ಮಾತ್ರ ಅರ್ಪಿಸುವುದು ಹೇಗೆ? ದೇವಾಲಯ
ಎದುರು ಹೂ-ಹಣ್ಣು ಮಾರುವ ಹೂವಾಡಗಿತ್ತಿಯರ
ಎಷ್ಟು ಜನ ಮುಟ್ಟಾಗಿರುತ್ತಾರೋ ಏನೋ. ಅವ
ಮುಟ್ಟಿದ ಹೂ-ಹಣ್ಣು ದೇವರಿಗೆ ನಿಷಿದ್ಧವೇ?

ಎಲ್ಲಾ ಸಸ್ತನಿ ಪ್ರಾಣಿಗಳಂತೆ ನಮಗೆ ಹಾಲು ಕೊಡು
ದನ ಮತ್ತು ಎಮ್ಮೆಗಳೂ ಪ್ರತಿ ತಿಂಗಳು ಮುಟ್ಟಾಗುತ್ತ



ಬದುಕು ಹಾಗೂ ಮಕ್ಕಳ ಸೇವೆಯಲ್ಲಿಯೇ ಕಳೆಯಬೇಕೆಂದು ಭಾಗವತ ಅಪ್ಪಣೆ ಕೊಡಿಸಿದ್ದಾನೆ. ಜನಸೇವೆ ಮತ್ತು ದೇಶಸೇವೆ ಮಾಡುವ ಅಧಿಕಾರವನ್ನು ಮನು ಋಷಿ ಕೇವಲ ಗಂಡಸರಿಗೆ ಮಾತ್ರ ಕೊಟ್ಟಿದ್ದಾನೆಂದು ಮನುಸ್ಮೃತಿಯಲ್ಲಿ ಬರೆಯಲಾಗಿದೆಯಂತೆ! ಹಾಗಾದರೆ ಈಗ ಬಿಜೆಪಿ ಪಕ್ಷದಿಂದ ಜಿ.ಪಂ/ತಾ.ಪಂ ಚುನಾವಣೆಯಲ್ಲಿ ಗೆದ್ದ ಮಹಿಳೆಯರೆಲ್ಲಾ ರಾಜೀನಾಮೆ ಕೊಟ್ಟು ಮನೆಯೊಳಗೇ ಇದ್ದುಕೊಂಡು ತಮ್ಮ ತಮ್ಮ ಗಂಡನ ಸೇವೆಯಲ್ಲಿ ತೊಡಗಿಸಿಕೊಂಡು ಭಾಗವತನ ಮನುವಾದಿ ಆದೇಶ ಪಾಲಿಸಲೇಬೇಕಾಗುತ್ತದೆ. ಇಲ್ಲದಿದ್ದರೆ ಅವರೆಲ್ಲರನ್ನು ದೇಶದ್ರೋಹಿ ಎಂದು ಘೋಷಿಸಿ ದಿಲ್ಲಿಯ ಪೊಲೀಸ್ ವರಿಷ್ಠ ಬಿ.ಎಸ್.ಬಸ್ಸಿಯನ್ನು ಕರ್ನಾಟಕಕ್ಕೆ ಕರೆಸಿ ಬಿಜೆಪಿಯಿಂದ ಗೆದ್ದ ಮಹಿಳೆಯರ ಮೇಲೆ ದೇಶದ್ರೋಹದ ಕ್ರಮ ಕೈಗೊಳ್ಳಬಹುದು! ಇದು ಅಖಂಡ ಬ್ರಹ್ಮಚಾರಿ (?) ಮನು ಭಾಗವತನ ಮನಸ್ಥಿತಿ. ಇಂತಹ ಮಧ್ಯಯುಗೀನ ಮನೋಧರ್ಮ ಇರುವ ಹಿಂದುತ್ವ ಸಂಘಟನೆಗಳ ಕೈಯಲ್ಲಿ ಭಾರತ ಈಗ ಸಿಕ್ಕಿಬಿದ್ದಿರುವುದು ದುರದೃಷ್ಟ.

ಮೇಲಾಗಿ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷದ ಮಹಿಳೆಯರು ತಮ್ಮ ತಮ್ಮ ಸಾರ್ವಜನಿಕ ಪ್ರಚಾರದ ವಿಡಿಯೋಗಳನ್ನು ಆದಷ್ಟು ಜಾಗ್ರತೆಯಾಗಿ ಅಡಗಿಸಿಡಬೇಕು. ಇತರ ಪಕ್ಷದವರ ವಿಡಿಯೋಗಳೇನಾದರೂ ಬಸ್ಸಿ ಅಥವಾ ಆರ್‌ಎಸ್‌ಎಸ್‌ನವರ ಕೈಗೆ ಸಿಕ್ಕಿದರೆ ಅದು ಡಾಕ್ಟರಿಂಗ್-ಮಾರ್ಫಿಂಗ್ ಆಗಿ ನಿಮ್ಮ ಭಾಷಣದಲ್ಲಿ ದೇಶವಿರೋಧಿ ಮಾತುಗಳನ್ನು ಸೇರಿಸಿ ನಿಮ್ಮನ್ನು ಅರೆಸ್ಟ್ ಮಾಡಿಸಿ ಮಂಗಳೂರಿನ ಕೇಸರಿ ವಕೀಲರಿಂದ ನಿಮ್ಮನ್ನು ಚಚ್ಚಿಸಿ ನಿಮಗೆ ದೇಶಪ್ರೇಮದ ಪಾಠ ಕಲಿಸುವುದು ಖಚಿತ.

- ಜೆ. ರವಿಕಿರಣ, ಮೈಸೂರು

ಕಳೆದ ಮೂರು ಸಂಚಿಕೆಗಳು ಮೌಲ್ಯಯುತವಾಗಿ ಬಂದಿದೆ. ಅದರಲ್ಲಿಯು ಸಹಬಾಳ್ವೆ ಸಾಗರ ಕಾರ್ಯಕ್ರಮದ ಕುರಿತ ಬರಹಗಳಾದ ಚಂಪಾ, ಬರಗೂರು ಹಾಗೂ ನಿಮ್ಮ ಸಂಪಾದಕೀಯ ಯುವಸಮೂಹಕ್ಕೆ ಒಂದು ಮಾರ್ಗದರ್ಶನದ ಕೈದೀವಿಗೆಯಾಗಿದೆ. ಪತ್ರಿಕೆಯಲ್ಲಿ ಪ್ರಕಟವಾದ ಇಸ್ಮತ್ ಪಜೀರ್ ಅವರ ಕಥೆ ಹಾಗೂ ಸ್ವತಃ ನಮ್ಮ ಪ್ರಾಧ್ಯಾಪಕರಾದ ಕೆ.ಎಸ್.ಭಗವಾನ್ ಅವರು ಅನುವಾದ ಮಾಡಿರುವ 'ಭಗವಾನರ ಮರಣ' ಕಥೆಗಳು ಅದ್ಭುತವಾಗಿದೆ.

- ಸೋಮಣ್ಣ ಹಂಗಳ್ಳಿ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.


ಆಗ ಅವು ಸಹ ಮೈಲಿಗೆಯಲ್ಲಿ ಇರುತ್ತವೆ ಅಲ್ಲವೇ? ಹಾಗಾದರೆ ಪ್ರತಿ ತಿಂಗಳು ಮೂರು-ನಾಲ್ಕು ದಿನ ಈ ಹಸು-ಎಮ್ಮೆಗಳು ಕೊಡುವ ಹಾಲು ತೀರ್ಥ-ಪ್ರಸಾದಕ್ಕೆ ಬಳಸುವುದು ಹಾಗೂ ಬ್ರಾಹ್ಮಣರು ಈ ಮೈಲಿಗೆ ಹಾಲನ್ನು ಮನೆಯಲ್ಲಿ ಕುಡಿಯುವುದು ಅಥವಾ ಮೊಸರು ಬೆಣ್ಣೆ ಮಾಡುವುದು ವರ್ಜ್ಯ ಅಲ್ಲವೇ? ಹಾಗೆ ನೋಡಿದರೆ ಶುದ್ಧ ಸಸ್ಯಾಹಾರಿಗಳ ಪ್ರಕಾರ ದನ-ಎಮ್ಮೆಗಳ ಕೊಬ್ಬು ಹಾಗೂ ಮಾಂಸದ ಮೂಲಕ ಹುಟ್ಟುವ ಹಾಲು ಹಾಗೂ ಲಕ್ಷಾಂತರ ಜೇನು ಹುಳುಗಳು ಕಕ್ಕಸು ಮಾಡಿರುವ ಜೇನುತುಪ್ಪ ಸಹ ದೇವರ ತೀರ್ಥಕ್ಕೆ ಅನರ್ಹ. ಕೋಟ್ಯಾಂತರ ರೇಷ್ಮೆ ಹುಳುಗಳನ್ನು ಬೇಯಿಸಿ ಮಾಡಿರುವ ಸಿಲ್ಕ್ ಬಟ್ಟೆ ಸಹ ಘೋರ ತಾಮಸಿಕವಾಗಿದ್ದು ಅದನ್ನು ದೇವರಿಗೆ ಅರ್ಪಿಸುವುದು ಮತ್ತು ಅರ್ಚಕರು ಉಡುವುದು ವರ್ಜ್ಯ. ಆದರೆ ತಮಗೆ ಅನುಕೂಲವಿರುವ ನಿಯಮಗಳನ್ನು ಮಾತ್ರ ಒಪ್ಪುವ ಅನುಕೂಲಸಿಂಧು ಮನೋಭಾವದ ವೈದಿಕಗಣ ಇದನ್ನೆಲ್ಲ ಒಪ್ಪುವುದು ಸಾಧ್ಯವಿಲ್ಲ ಬಿಡಿ. ತಮ್ಮನ್ನು ಸಮರ್ಥಿಸಿಕೊಳ್ಳಲು ಅವರು ಮತ್ತೆ ಯಾವುದಾದರೂ ರಾಕ್ಷಸ-ಋಷಿಯ ಯಜ್ಞ-ಯಾಗದ ಚಂದಾಮಾಮ ಕಥೆ ಹುಟ್ಟು ಹಾಕಿದರೆ ಆಶ್ಚರ್ಯವಿಲ್ಲ.

ಜ್ಯೋತಿಬಾ ಫುಲೆಯವರು ಹೇಳಿರುವಂತೆ, ಬ್ರಾಹ್ಮಣರೆಲ್ಲಾ ಬ್ರಹ್ಮನ ಬಾಯಿಯಿಂದ ಹುಟ್ಟಿದ್ದರಿಂದ ಬ್ರಹ್ಮನ ಬಾಯಿಯೂ ತಾಯಿಯ ಗುಪ್ತಾಂಗಕ್ಕೆ ಸಮನಾಗಿದ್ದು ಪ್ರಕೃತಿ ನಿಯಮದಂತೆ ಅದೂ ಪ್ರತಿ ತಿಂಗಳು ಮೂರು ದಿನ ಮುಟ್ಟಾಗಿ ಅಪವಿತ್ರವಾಗುತ್ತಿರಬೇಕು ಹಾಗೂ ಕ್ಷತ್ರಿಯರನ್ನು ಹೆತ್ತ ಬ್ರಹ್ಮನ ತೋಳುಗಳೂ ಮುಟ್ಟಾಗುತ್ತಿರಲೇಬೇಕು. ದೇಹದಲ್ಲಿ ಮಲ-ಮೂತ್ರ ತುಂಬಿಕೊಂಡ ಭಟ್ಟರು ಗರ್ಭಗುಡಿಯೊಳಗೆಯೇ ಆಗಾಗ ಹೂಸು ಬಿಡಬಹುದಾದರೆ ಮುಟ್ಟಾದ ಹೆಂಗಸು ದೇವಸ್ಥಾನದ ಒಳಗೆ ಹೋಗಬಾರದೆಂಬ ನಿಯಮವೇಕೋ? ಹೂವಿನ ಪರಿಮಳದಲ್ಲಿ ಹೂಸಿನ ವಾಸನೆ ಮುಚ್ಚಿ ಹೋಗಲೆಂದೇ ಇರಬೇಕು ದೇವರಿಗೆ ಭಟ್ಟರು ಅಷ್ಟೊಂದು ಹೂವಿನಿಂದ ಅಲಂಕರಿಸುವುದು!

- ರಾಮಕೃಷ್ಣ ಕುಲಾಲ್, ಬೆಂಗಳೂರು

ಲಿಮ್ಕಾ ಕನಸು ಕಂಡಿರುವ ಹರೀಶ್ ರಾಜ್

'ಕಲಾಕಾರ್', 'ಗೇಮ್' ಸೇರಿದಂತೆ ಹಲವು ಚಿತ್ರಗಳಿಗೆ ತಾವೇ ಆ್ಯಕ್ಷನ್ ಕಟ್ ಹೇಳುವುದರ ಜತೆಗೆ ಆ ಸಿನಿಮಾದಲ್ಲಿ ಪಾತ್ರವನ್ನೂ ಮಾಡಿದವರು ನಟ ಹರೀಶ್ ರಾಜ್. ಈಗ ಮತ್ತೊಂದು ಚಿತ್ರಕ್ಕೆ ನಿರ್ದೇಶನ ಮಾಡುವುದರ ಜತೆಗೆ ನಿರ್ಮಾಣವನ್ನೂ ಮಾಡಿದ್ದಾರೆ. ಅಲ್ಲದೇ ಈ ಚಿತ್ರದಲ್ಲಿ ಅವರು ಬರೋಬ್ಬರಿ 16 ಪಾತ್ರಗಳನ್ನು ನಿರ್ವಹಿಸುವ ಮೂಲಕ ಲಿಮ್ಕಾ ದಾಖಲೆಯ ಕನಸು ಕಂಡಿದ್ದಾರೆ.



ತಮ್ಮ 'ಗನ್' ಸಿನಿಮಾವನ್ನು ಚಿತ್ರಮಂದಿರದಿಂದ ಎತ್ತಂಗಡಿ ಮಾಡಿದರು ಅನ್ನುವ ಕಾರಣಕ್ಕೆ ಅದೇ ಥಿಯೇಟರ್ ಮೇಲಿಂದ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದ್ದರು ನಟ ಹರೀಶ್ ರಾಜ್. ಅಂದಿನಿಂದ ಇವರನ್ನು ಸ್ಯಾಂಡಲ್‌ವುಡ್ 'ಜಂಪಿಂಗ್ ಸ್ಟಾರ್' ಎಂದು ಕರೆಯುತ್ತಿದೆ. ಇಂತಹ ಜಂಪಿಂಗ್ ಸ್ಟಾರ್ ಈಗ ಹೊಸ ಸಾಹಸವನ್ನು ಮಾಡಿದ್ದಾರೆ. ತಮ್ಮದೇ ನಿರ್ದೇಶನ ಮತ್ತು ನಿರ್ಮಾಣದಲ್ಲಿ ಮೂಡಿಬಂದಿರುವ 'ಸತ್ಯನಾರಾಯಣ' ಸಿನಿಮಾದಲ್ಲಿ ಹದಿನಾರು ಪಾತ್ರ ನಿರ್ವಹಿಸಿದ್ದಾರೆ. ಈ ಚಿತ್ರ ಮುಂದಿನ ವಾರ ತೆರೆಕಾಣುತ್ತಿದೆ. ತೆರೆಕಂಡ ನಂತರ ಇದು ಲಿಮ್ಕಾ ದಾಖಲೆಯನ್ನೂ ಸೇರಲಿದೆ. ಈ ಕುರಿತು ಅವರು ಪತ್ರಿಕೆಯ ಜತೆ ಮಾತಾಡಿದ್ದಾರೆ.

* ಸಿನಿಮಾ ನಿರ್ಮಾಣ ಮಾಡಲ್ಲ ಅಂತ ಹೇಳಿದ್ದವರು, ಮತ್ತೆ ದುಡ್ಡು ಹಾಕುವ ಕೆಲಸಕ್ಕೆ ಕೈಹಾಕಿದ್ದೇಕೆ?

ನಾನು ನಿರ್ಮಾಣ ಮಾಡಲ್ಲ ಅಂತ ಹೇಳಿಲ್ಲ, ನನ್ನ ವೃತ್ತಿಯೇ ಸಿನಿಮಾದಲ್ಲಿ ನಟಿಸುವುದು ಮತ್ತು ನಿರ್ಮಾಣ ಮಾಡುವುದು. ಸಿನಿಮಾ ಸೋತಾಗ ಹತಾಶೆಯಿಂದ ಅಂತಹ ಮಾತುಗಳನ್ನು ಆಡಿರಬಹುದು. ಆದರೆ, ಉತ್ತಮ ಕತೆಗಳು ಸಿಕ್ಕಾಗ, ನನ್ನಲ್ಲಿ ದುಡ್ಡು ಇದ್ದಾಗ ನಿರ್ಮಾಣ ಮಾಡುತ್ತೇನೆ.

* 'ಗನ್' ನಂತರ ಮತ್ತೆ ನೀವು ಹೀರೋ ಆಗಿ ಅಭಿನಯಿಸುವುದಿಲ್ಲ ಅನ್ನುವ ಮಾತಿತ್ತು?

ಯಾರೋ ಹಾಗಂತ ಪ್ರಚಾರ ಮಾಡಿದ್ದಾರೆ. ಆಗಲೇ ಹೇಳಿದಂತೆ ನನಗೆ ಸಿನಿಮಾ ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ, ಹೀರೋ ಆಗಿ ನಟಿಸದೇ ಇದ್ದರೂ, ಪ್ರಮುಖ ಪಾತ್ರಗಳಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಕಲಾವಿದನಿಗೆ ಎಂಥ ಪಾತ್ರವಿದ್ದರೂ ಓಕೆ, ಅವನಿಗೆ ಖುಷಿ ಆಗಬೇಕು ಅಷ್ಟೆ.

* 'ಸತ್ಯನಾರಾಯಣ' ಸಿನಿಮಾಗೆ ಸ್ಫೂರ್ತಿ ಏನು?


ಸತ್ಯನಾರಾಯಣ ಸ್ವಾಮಿಯ ಕತೆಯೇ ಸಿನಿಮಾಗೆ ಸ್ಫೂರ್ತಿ. ನಾನು ಚಿಕ್ಕಂದಿನಿಂದಲೂ ನಮ್ಮ ಮನೆಯಲ್ಲಿ ಆ ಸ್ವಾಮಿಯ ಕತೆ ಕೇಳುತ್ತಿದ್ದೆ. ಅಲ್ಲದೇ ನನ್ನ ಸಂಬಂಧಿಕರ ಮನೆಯಲ್ಲಿ ಏನೇ ಶುಭ ಕಾರ್ಯ ನಡೆದರೂ, ಅಲ್ಲಿ ಈ ಕಥೆಯನ್ನೇ ಹೇಳುತ್ತಿದ್ದರು. ಅಲ್ಲದೇ ಅದರಲ್ಲಿ ಐದು ಕಥೆಗಳು ಬರುತ್ತವೆ. ಅವುಗಳು ಬದುಕಿನ ಮೌಲ್ಯವನ್ನು ಸಾರುತ್ತವೆ. ಹೀಗಾಗಿ ಈ ಸಿನಿಮಾವನ್ನು ಮಾಡಬೇಕು ಅನಿಸಿತು.

* ಈವರೆಗೂ ಹಲವು ಭಕ್ತಿ ಪ್ರಧಾನ ಚಿತ್ರಗಳು ಬಂದಿವೆ. ಅವುಗಳಿಗಿಂತ ನಿಮ್ಮ ಸಿನಿಮಾ ಹೇಗೆ ವಿಭಿನ್ನವಾಗಿದೆ?

ವಿಭಿನ್ನವಾಗಿದೆ ಅಂತ ಹೇಳಲ್ಲ, ಅಲ್ಲದೇ ಈವರೆಗೂ ಇಂತಹ ಸಿನಿಮಾಗಳೇ ಬಂದಿಲ್ಲ ಅಂತಾನೂ ನಾನು ಹೇಳುವುದಿಲ್ಲ, ನನ್ನ ತಿಳಿವಳಿಕೆಗೆ ಸಿಕ್ಕಷ್ಟು ಹೇಳುವುದಾದರೆ, ಈವರೆಗೂ ಕನ್ನಡದಲ್ಲಿ ಯಾರೂ ಈ ರೀತಿಯ ಕಥಾವಸ್ತುವನ್ನು ಆಯ್ಕೆ ಮಾಡಿಕೊಂಡಿಲ್ಲ, ಅಲ್ಲದೇ ಈ ಕತೆಯನ್ನೇ ಇಟ್ಟುಕೊಂಡು ಒಂದು ಚಿತ್ರ ನಿರ್ಮಾಣ ಮಾಡಬೇಕು ಅನ್ನುವುದು ನನ್ನ ಆಸೆ ಆಗಿತ್ತು, ಹೀಗಾಗಿ ಸಿನಿಮಾ ಮಾಡಿದೆ.

* ಹದಿನಾರು ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದೀರಂತೆ. ಅಷ್ಟೊಂದು ಪಾತ್ರವನ್ನು ನೀವೇ ಏಕೆ ಮಾಡಿದ್ದೀರಿ?

ಲಿಮ್ಕಾ ದಾಖಲೆಗಾಗಿ ಅಂತ ನಾನು ಅದನ್ನು ಮಾಡಿಲ್ಲ, ಈ ಚಿತ್ರದ ಮೂಲಕ ಪ್ರೇಕ್ಷಕರಿಗೆ ಹೊಸದಾಗಿ ಏನನ್ನಾದರೂ ಕೊಡಬೇಕು ಅನಿಸಿತು. ಹೀಗಾಗಿ ಹದಿನಾರು ಪಾತ್ರ ನಿರ್ವಹಿಸಿದ್ದೇನೆ. ಯಾವಾಗಲೂ ನನಗೆ ನಾನೇ ಚಾಲೇಂಜ್ ತಂದುಕೊಳ್ಳುತ್ತೇನೆ. ಈ ಸಿನಿಮಾದಲ್ಲೂ ನಾನು ಹದಿನಾರು ಪಾತ್ರಗಳ ಮೂಲಕ ಸ್ಪರ್ಧೆಗೆ ಬಿದ್ದಿದ್ದೇನೆ.



* ಭಕ್ತಿ ಪ್ರಧಾನ ಚಿತ್ರದಲ್ಲಿ ಲವ್‌ಸ್ಟೋರಿನೂ ಇದೆಯಂತೆ, ನಿಜನಾ?

ಹೌದು.. ಭಕ್ತಿಯ ಜತೆಗೆ ಪ್ರೀತಿಯ ತೇರನ್ನೂ ಇಲ್ಲಿ ಎಳೆಯುತ್ತಿದ್ದೇನೆ. ನಾಯಕಿಯಾಗಿ ರಮ್ಯಾ ಬಾರ್ನ ನಟಿಸಿದ್ದಾರೆ. ಈ ಚಿತ್ರದಲ್ಲಿ ನಾನು ದೇವಸ್ಥಾನದ ಪುರೋಹಿತನಾಗಿ ಕಾಣಿಸಿಕೊಂಡಿದ್ದೇನೆ. ರಮ್ಯಾ ಅವರು ಊರಿನ ಸಾಹುಕಾರನ ಮಗಳಾಗಿದ್ದಾರೆ. ನಮ್ಮ ಮಧ್ಯೆ ಲವ್. ಅದರಲ್ಲಿ ಜಗಳ. ದೂರ ಆಗುವ ಪ್ರೇಮಿಗಳಿಗೆ ದೇವರು ಬಂದು ಸಹಾಯ ಮಾಡುತ್ತಾನಾ, ಇಲ್ಲವಾ ಅನ್ನುವ ಕತೆ ಇಲ್ಲಿದೆ.

* ತಾರಾಗಣದಲ್ಲಿ ನಿಮ್ಮ ಜತೆ ಯಾರ್‍ಯಾರು ಇದ್ದಾರೆ?

ಹಿರಿಯ ನಟ ರಾಮಕೃಷ್ಣ ಚಿತ್ರದಲ್ಲಿ ದೇವರ ಪಾತ್ರದಲ್ಲಿ ಮಿಂಚಿದ್ದಾರೆ. ಅದಲ್ಲದೆ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ ಖ್ಯಾತಿಯ ಚಂದ್ರಶೇಖರ್ ಹಾಗೂ ಜೈ ಜಗದೀಶ್‌ರಂತಹ ನಟರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ■

ಜೇಟ್ಲಿ ಬಜೆಟ್‌ನಿಂದ ಹಳ್ಳಿ ದಿಲ್ಲಿ ಒಂದಾಗಲಿವೆಯಂತೆ!

ಅರುಣ್ ಜೇಟ್ಲಿ ಎಂಬ ವಿತ್ತ ಪ್ರತಿಭೆಯ ವ್ಯಕ್ತಿ ಬಜೆಟ್ ಮಂಡಿಸುವುದು ಇನ್ನು ಮುಗಿಯದಿರುವಾಗಲೇ ಮಾರಿಕೊಂಡ ಮಾಧ್ಯಮದವರು, 'ಈ ಬಜೆಟ್ಟಿನಿಂದ ಹಳ್ಳಿಗಳು ದಿಲ್ಲಿಗಳಾಗಲಿವೆ' ಎಂದು ವರದಿ ಮಾಡಿದವಂತಲ್ಲಾ, ಈ ಬಜೆಟ್‌ನಿಂದಾಗಿ ದೊಡ್ಡ ಊರುಗಳಿಗೆ ಮೇಲು ಸೇತುವೆ ಬರಲಿವೆ. ಪ್ರತಿ ಮನೆಗೂ ಅತ್ಯಾಧುನಿಕ ಶೌಚಾಲಯಗಳು, ಶವರ್‌ಬಾತಿನ ವ್ಯವಸ್ಥೆ ಇರುತ್ತದೆ. ಪ್ರತಿ ಮನೆಯ ಮುಂದೆ ಕಸದ ತೊಟ್ಟಿ, ಮನೆಯೊಳಗೆ ಎಲ್ಲೆಂದರಲ್ಲಿ ನಲ್ಲಿ ನೀರು, ಪ್ರತಿ ಮನೆಯಮೇಲೂ ನೀರಿನ ಟ್ಯಾಂಕ್ ಬರಲಿವೆ. ಊರ ನೀರು ಹೊರಗೋಗಲು ಅಂಡರ್‌ಗ್ರೌಂಡ್ ಡ್ರೈನೇಜ್ ವ್ಯವಸ್ಥೆಯಾಗಲಿದೆ. ಊರ ಮುಂದೆ ಲಾಂಡ್ರಿ ಕ್ಷೌರಿಕರ ಅಂಗಡಿ ಮತ್ತು ಟೀ ಮಾಡುವ ಹೋಟೆಲು ತೆರೆಯಲಿವೆ. ಟೀ ಮಾರುವ ಹೋಟೇಲಿಗೆ 'ಗ್ರಾಮೀಣ ಮೋದಿ ಟೀ ಸ್ಟಾಲ್' ಎಂಬ ನಾಮಫಲಕವನ್ನು ಸರ್ಕಾರದ ಖರ್ಚಿನಲ್ಲೇ ಹಾಕಲಾಗುವುದು. ಜನರಿಗೆ ಅನ್ನ ಅರಿವೆ ವಸತಿ ಸಮಸ್ಯೆಯಷ್ಟೇ ಮುಖ್ಯವಾದದ್ದು ಅಧ್ಯಾತ್ಮ ಚಿಂತನೆ. ಅದಕ್ಕಾಗಿ ಪ್ರತಿಹಳ್ಳಿಗೂ ರಾಮಮಂದಿರ ಕಟ್ಟಲಾಗುತ್ತೆ ಈ ಮಂದಿರಗಳಿಗೆ ಪೂಜಾರಿಗಳಾಗಿ, ನಿರುದ್ಯೋಗಿ ಬ್ರಾಹ್ಮಣ ಹುಡುಗರನ್ನು ನೇಮಿಸಲಾಗುತ್ತೆ ಬ್ರಾಹ್ಮಣ ಹುಡುಗರು ಸಿಗದಿದ್ದರೆ ಬ್ರಾಹ್ಮಣ ಹುಡುಗಿಯನ್ನು ಮದುವೆಯಾದವರಿಗೆ ಮೊದಲ ಆದ್ಯತೆ ಕೊಡಲಾಗುತ್ತೆ. ಇಂತವರೂ ಸಿಗದಿದ್ದರೆ ಸಂಘದ ದೇಶಭಕ್ತರು ವಾರಕ್ಕೊಮ್ಮೆ ಬಂದು ಶ್ರೀರಾಮ ಭಜನೆ ಮತ್ತು ಪೂಜೆ ಮಾಡಿಹೋಗುತ್ತಾರೆ ಎಂಬ ಅಂಶ ಮಾತ್ರ ಬಜೆಟ್ಟಿನಲ್ಲಿ ಇಲ್ಲವಂತಲ್ಲಾ ಥೂತ್ತೇರಿ!

***

ಸಾಮಾನ್ಯವಾಗಿ ತಲೆಯೊಳಗೆ ಮತೀಯ ಮಲ ತುಂಬಿದವರಲ್ಲಿ ಆರ್ಥಿಕವಾಗಿ ದೇಶ ಕಟ್ಟುವ ಪ್ರತಿಭೆಗೆ ಜಾಗವಿರುವುದಿಲ್ಲ, ವಾಜಪೇಯಿ ಪ್ರಧಾನಿಯಾಗಿದ್ದಾಗ ತಮ್ಮ ಸಚಿವ ಸಂಪುಟದಲ್ಲಿ ಅರ್ಥಮೂಲದಿಂದ ದೇಶ ಮುನ್ನಡೆಸುವ ಪ್ರತಿಭೆಯ ಕೊರತೆ ಕಂಡುಬಂದಿದ್ದರಿಂದ, ಅಧಿಕಾರಿಗಳನ್ನ ಅವಲಂಬಿಸಿ ನೆಪಕ್ಕೊಬ್ಬ ಮಂತ್ರಿ ನೇಮಿಸಿ ದೇಶ ಮುನ್ನಡೆಸಿದ ದಾಖಲೆಯಿದೆ. ಆದರೆ ಮಾರ್ವಾಡಿ ನಾಡಿನಿಂದ ಬಂದ ಮೋದಿಗೆ ಜನರನ್ನು ಗಿಲೀಟ್ ಮಾಡಿ ಪದಾರ್ಥ ಮಾರುವ ಪ್ರತಿಭೆಯಂತೂ ಹೇರಳವಾಗಿದೆ. ಆದ್ದರಿಂದ ಜೇಟ್ಲಿ ಕೂರಿಸಿಕೊಂಡು, ತನ್ನ ಭಯಂಕರ ಭಾಷಣದ ತುಣುಕುಗಳನ್ನು ಬಜೆಟ್ಟಿಗೂ ಸೇರಿಸಿದನಂತಲ್ಲಾ "ನಾವು ಕೃಷಿಕರ ಕೈಹಿಡಿಯುತ್ತೇವೆ ಇದರಿಂದ ಆಟೋಮ್ಯಾಟಿಕ್ಕಾಗಿ ಗ್ರಾಮಾಭಿವೃದ್ಧಿಯಾಗಿಬಿಡುತ್ತೆ ಇದರ ಪರಿಣಾಮ ಗ್ರಾಮೀಣ ಪ್ರದೇಶದಲ್ಲಿ ಹರಿಸುವುದರಿಂದ ಹಳ್ಳಿಗಳಲ್ಲಿ ತನಗೆ ತಾನೇ ಉದ್ಯೋಗ ಸೃಷ್ಟಿಯಾಗುತ್ತೆ ಈ ಉದ್ಯೋಗದ ದೆಸೆಯಿಂದ ಆರ್ಥಿಕಾಭಿವೃದ್ಧಿಯಾಗುತ್ತೆ ಆರ್ಥಿಕ ಅಭಿವೃದ್ಧಿಯಿಂದ ರೈತರೂ ತೆರಿಗೆ ಕಟ್ಟುವ ಮಟ್ಟಕ್ಕೆ ಬರುತ್ತಾರೆ. ಆದರೆ ಸರಕಾರ ರೈತರಿಂದ ತೆರಿಗೆ ವಸೂಲು ಮಾಡುವುದಿಲ್ಲ, ಬದಲಿಗೆ ಅವರ ಆದಾಯ ಅವರಲ್ಲೇ ಉಳಿಯುತ್ತೆ ಈ ಹಣ ದ್ವಿಗುಣಗೊಳ್ಳುವುದರಿಂದ 2022 ಇಸವಿ ಜನವರಿ ಒಂದನೆ ತಾರೀಖಿಗೆ ಭಾರತದ ರೈತರ ಆದಾಯವೆಲ್ಲಾ ದ್ವಿಗುಣಗೊಂಡಿರುತ್ತದೆ" ಎಂದು ಮೋದಿ ಹೇಳಿದನಂತಲ್ಲಾ, ಆದರೆ ಈ ಕತೆಯನ್ನು ಮಾರಿಕೊಂಡ ಮಾಧ್ಯಮದ ಪ್ರತಿಭೆಗಳು ಇನ್ನೂ ಯಾಕೊ ಬಿತ್ತರಿಸಿಲ್ಲವಂತಲ್ಲಾ ಥೂತ್ತೇರಿ!!

***

ಸಿದ್ದರಾಮಯ್ಯ ಅಹಿಂದ ಬಜೆಟ್ ಮಾಡಿ ಹಿಂದುಳಿದವರಿಗೆ ಹದಿನಾರು ಸಾವಿರ ಕೋಟಿ ಕೊಟ್ಟಂತೆ ಮೋದಿ ಪಡೆಯೂ ತಮ್ಮವರಿಗಾಗಿ ಭರ್ಜರಿ ಔತಣವನ್ನೇ ದಯಪಾಲಿಸಿದೆಯಂತೆ. ಇದರಲ್ಲಿ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ಪೈಕಿ ಹತ್ತನ್ನು ವಿಶ್ವ ದರ್ಜೆಗೇರಿಸುತ್ತದಂತೆ. ಅದರಲ್ಲಿ ಈಗಾಗಲೇ ಶಿಕ್ಷಣ ವ್ಯಾಪಾರ ನಿಪುಣರಾದ ಶಂಕರಮೂರ್ತಿ, ಯಡಿಯೂರಪ್ಪ ಈಶ್ವರಪ್ಪ ಇಂತವರು ಸುಮ್ಮನಿರಲು ಸಾಧ್ಯವೇ? ಇನ್ನ ಮಹಿಳಾ ಉದ್ಯಮಿಗಳಿಗಾಗಿ 'ಸ್ಟಾಂಡ್ ಅಪ್ ಇಂಡಿಯಾ' ಯೋಜನೆಗೆ ಅರಿಶಿಣ, ಕುಂಕುಮ, ರೇಷ್ಮೆಸೀರೆ ಶೋಭಿತೆಯರಾದ ಶೋಭಕ್ಕನಂತವರು ಈ ಯೋಜನೆ ಬಿಟ್ಟಾರೆಯೇ? ಅಲ್ಲದೆ ಬಡಕುಟುಂಬದ ಎಲ್‌ಪಿಜಿ ಸಂಪರ್ಕದ ಮಹಿಳೆಯರ ಲಿಸ್ಟ್ ತೆಗೆದರೆ ಅದರಲ್ಲಿ ಬಿಜೆಪಿ ಮಹಿಳಾ ಮೋರ್ಚಗಳೇ 2000 ಕೋಟಿ ಲಪಟಾಯಿಸುವುದು ಗ್ಯಾರಂಟಿ. ಇನ್ನ ಗೃಹ ಸಾಲದಲ್ಲೂ ಚಿಲ್ಲರೆಗಳಿಗೆ ಬಡವರ ಬದಲು ಬಿಜೆಪಿ ಜನಗಳೇ ಕಾಣಿಸುವುದು ಈ ಹಿಂದೆ ಅವರು ನಡೆಸಿಕೊಂಡು ಬಂದ ಇತಿಹಾಸ ಕೆದಕಿದರೆ ಎದ್ದು ಕಾಣುತ್ತದೆ. ಇರಲಿ ಸರಕಾರದ ಸವಲತ್ತಿನ ಬಗ್ಗೆ ಸಣ್ಣ ಮಾತನ್ನಾಡುವುದು ಬೇಡ ಎಂದರೂ ಮುಸ್ಲಿಮರನ್ನು ಕಂಡಾಗಲ

ಥೂತ್ತೇರಿ

ಯಾಹೂ

ದಲಿತರನ್ನ ಕಂಡರೆ ಅಸಹನೆ ತೋರುವ ಈ ಬಿಜೆಪಿಗಳ ಯಾವ ಕಾರ್ಯದ ಅಂತ್ಯವೂ ಮತೀಯವಾಗಿಯೇ ವಿಜೃಂಭಿಸಿ ಕೊನೆಗೊಳ್ಳುತ್ತವಲ್ಲಾ ಥೂತ್ತೇರಿ!!

***

ತಡವಾಗಿಯಾದರೂ ಕಾಂಗ್ರೆಸ್‌ನಲ್ಲಿ ಒಳಜಗಳ ಹೊಗೆಯಾಡತೊಡಗಿದೆ. ನಿಷ್ಠುರ ಮಾತಿಗೆ ಹೆಸರಾದ ನಿಜವಾದ ಕಾಂಗ್ರೆಸ್ಸಿಗ ವಿಶ್ವನಾಥ್ ಅದಕ್ಷ ಮಂತ್ರಿಗಳ ಬಗ್ಗೆ ಕೆಂಡಕಾರಿದ್ದಾರೆ. ಅದಕ್ಷ ಮಂತ್ರಿಗಳೆಂದು ಸಾರ್ವಜನಿಕವಾಗಿ ಹೀಯಾಳಿಸಿ ಅವರನ್ನು ಕೈಬಿಟ್ಟಿದ್ದಾದರೆ ಸದರಿ ಸಚಿವರುಗಳ ಸಮುದಾಯ ಸುಮ್ಮನಿದ್ದೀತೆ? ಈಗಾಗಲೇ ಲಂಬಾಣಿ ಎಮ್ಮೆಲ್ಲೆಗಳ ಒಗ್ಗಟ್ಟು ಹೇಗಿದೆಯೆಂದರೆ, ಬಳ್ಳಾರಿ ಮಂತ್ರಿಯನ್ನು ಮನೆಗೆ ಕಳಿಸಲು ಸಾಧ್ಯವಿಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಇಂತಲ್ಲಿ ವಿಶ್ವನಾಥ್ ಶ್ರೀನಿವಾಸ್ ಪ್ರಸಾದರನ್ನು ಕೆಣಕಿದ್ದು ರಣಾಂಗಣವಾಗಿದೆ. ತನ್ನ ಫಾಯಿಲ್‌ಗಳನ್ನು ಮುಚ್ಚಿಟ್ಟು ಮಂತ್ರಿಯಾದ, ಅದರಲ್ಲೂ ರೆವಿನ್ಯೂ ಮಂತ್ರಿಯಾದ ಶ್ರೀನಿವಾಸ ಪ್ರಸಾದ್ ಅವರೇ ಹೇಳಿಕೊಳ್ಳುವಂತೆ ದಕ್ಷ ಅನುಭವಿ ಹಿರಿಯ ಸಚಿವರು. ಇಂತಹ ಸಚಿವರು ತಮ್ಮ ಓಟಿನ ರೆವಿನ್ಯೂ ಸೆಕ್ಷನ್ ಬಿಟ್ಟು ಎಲ್ಲೂ ಹೋದ ಉದಾಹರಣೆಯಿಲ್ಲ, ಇತ್ತೀಚೆಗೆ ಅಭದ್ರತೆಗೆ ತುತ್ತಾಗಿರುವ ಮಲೆನಾಡಿಗರ ಮುಖ ನೋಡದ ಶ್ರೀನಿವಾಸ ಪ್ರಸಾದ್, ಈ ಹಿಂದೆ ಬಂದುಹೋದ ಮಂತ್ರಿಗಳಲ್ಲೇ ಅದಕ್ಷ ಎಂಬ ಆರೋಪ ಚಾಮುಂದಿ ಬೆಟ್ಟದಷ್ಟು ಎತ್ತರಕ್ಕೆ ಬೆಳೆಯತೊಡಗಿದೆ. ಈ ಶ್ರೀನಿವಾಸ್ ಪ್ರಸಾದ್ ಹೇಗೋ ತಮ್ಮ ಅವಧಿ ಮುಗಿದರೆ ಸಾಕು ಎಂದು ನರಳುತ್ತಿದ್ದರೆ, ಇಂತವರೇ ಒಂದು ವ್ಯಸನದಲ್ಲಿರುವಂತೆ ಕಾಣುತ್ತಿರುವ ಸಿದ್ದರಾಮಯ್ಯನ ನಂತರ ಕಾಂಗ್ರೆಸ್. ಕತೆ ಏನು ವಿಶ್ವನಾಥ್ ಯೋಚಿಸಿದ್ದರಲ್ಲಿ ತಪ್ಪೇನಿದೆ ಎಂಬುದು ಕಾಂಗ್ರೆಸ್ ಸಮರ್ಥನೆ ಆಗಿದೆಯಂತಲ್ಲಾ ಥೂತ್ತೇರಿ!!! ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 16-03-2016 RNI No. KARKAN

ಮಹಿಳಾ ಪ್ರಧಾನ ಚಿತ್ರದಲ್ಲಿ ಶ್ರುತಿ

ಪ್ರದೀಪ್ ವರ್ಮಾ ಮತ್ತೊಂದು ಮಹಿಳಾ ಪ್ರಧಾನ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರದಲ್ಲಿ ಶ್ರುತಿ ಹರಿಹರನ್ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಇನ್ನೂ ಮೂವರು ಹುಡುಗಿಯರೂ ಪಾತ್ರ ಮಾಡುತ್ತಿದ್ದಾರೆ. ಈ ನಿರ್ದೇಶಕರು ಈ ಹಿಂದೆ 'ಗುಲಾಬಿ ಸ್ಟ್ರೀಟ್' ಅನ್ನುವ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದರು. ಆ ಚಿತ್ರ ಅರ್ಧಕ್ಕೆ ನಿಂತಿತ್ತು. ಈಗ ಮತ್ತೊಂದು ಚಿತ್ರದೊಂದಿಗೆ ಮತ್ತೆ ಸ್ಯಾಂಡಲ್‌ವುಡ್‌ಗೆ ವಾಪಸ್ಸಾಗಿದ್ದಾರೆ.

'ಗುಲಾಬಿ ಸ್ಟ್ರೀಟ್' ಕತೆಯಲ್ಲೇ ಕೊಂಚ ಬದಲಾವಣೆ ಮಾಡಿಕೊಂಡು ಹೊಸ ಚಿತ್ರವನ್ನು ಮಾಡುತ್ತಿದ್ದಾರೆ ನಿರ್ದೇಶಕರು. ಈ ಚಿತ್ರಕ್ಕೆ 'ಊರ್ವಿ' ಎಂದು ಹೆಸರಿಟ್ಟಿದ್ದಾರೆ. ಶ್ರುತಿ ಹರಿಹರನ್ ಜತೆ ಶ್ರದ್ಧಾ ಶ್ರೀನಾಥ್, ಶ್ವೇತಾ ಪಂಡಿತ್ ಮತ್ತು ಭವಾನಿ ಪ್ರಕಾಶ್ ತಾರಾಗಣದಲ್ಲಿದ್ದಾರೆ. ಚಿತ್ರಕತೆಯು ಮಹಿಳೆಯರ ಅನೇಕ ಸಮಸ್ಯೆಗಳ ಸುತ್ತ ಕೇಂದ್ರಿತವಾಗಿದೆ ಅನ್ನುವುದು ವಿಶೇಷ. ಅಲ್ಲದೇ ಚಿತ್ರಕ್ಕಾಗಿ ಇಂಡೋ ಇಸ್ಲಾಮಿಕ್ ಶೈಲಿಯ ಸೆಟ್ ಕೂಡ ಹಾಕುತ್ತಿದ್ದಾರೆ ನಿರ್ದೇಶಕರು.

ಇಡೀ ಸಿನಿಮಾದಲ್ಲಿ ಮಹಿಳೆಯರೇ ಪ್ರಧಾನ ಪಾತ್ರ ವಹಿಸಿದ್ದರೂ, ತಾಂತ್ರಿಕ ವರ್ಗದಲ್ಲಿ ಪುರುಷರೇ ಇದ್ದಾರೆ. ಹೀಗಾಗಿ ಸಿನಿಮಾದ ಬಗ್ಗೆ ಕುತೂಹಲ ಮೂಡಿದೆ. ಮತ್ತೊಂದು ವಿಶೇಷತೆ ಅಂದರೆ ಸಿನಿಮಾ ರಂಗದಲ್ಲಿ ಹಲವು ತಿಂಗಳಿಂದ ಕಳೆದೇ ಹೋಗಿರುವ ಶ್ವೇತಾ ಪಂಡಿತ್ ಮತ್ತೆ ಈ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಆಗಮಿಸುತ್ತಿದ್ದಾರೆ.





ಕೆನ್ನೆಗುಳಿಯ ಬೆಟ್ಟೆ ಪ್ರಚಾರ



ದರ್ಶನ್ ಗ್ಯಾಂಗ್‌ನ ಹುಡುಗಿ ರಚಿತಾ ರಾಮ್ 'ಕೆಜಿಎಫ್' ಚಿತ್ರದ ನಾಯಕಿ ಅನ್ನುವ ಸುದ್ದಿ ಸ್ಯಾಂಡಲ್‌ವುಡ್‌ನಲ್ಲಿ ಜೋರಾಗಿದೆ. ಇದು ಯಶ್ ಸಿನಿಮಾ ಆಗಿರುವುದರಿಂದ ಸುದ್ದಿಗೆ ಮತ್ತಷ್ಟು ರಂಗು ಬಂದಿದೆ. ಆದರೆ ಇದು ಸುಳ್ಳು ಸುದ್ದಿ ಅಂತಾರೆ 'ಕೆಜಿಎಫ್' ನಿರ್ದೇಶಕರು. ಅಸಲಿಯಾಗಿ ಇನ್ನೂ ಸಿನಿಮಾ ಶುರುವಾಗುವುದೇ ಒಂದು ವರ್ಷ ಬಿಟ್ಟು. ಈಗಲೇ ನಾಯಕಿಯನ್ನು ಹೇಗೆ ಆಯ್ಕೆ ಮಾಡಿಕೊಳ್ಳಲು ಸಾಧ್ಯ ಅನ್ನುವುದು ಅವರ ಮಾತು. ಆದರೆ ಈ ಸುದ್ದಿ ಹರಡಿದ್ದಾದರೂ ಹೇಗೆ ಅನ್ನುವ ಕುತೂಹಲ ಮಾತ್ರ ಹಾಗೇ ಉಳಿದುಕೊಂಡಿದೆ.

'ಕೆಜಿಎಫ್' ತಂಡದ ಕೆಲವು ಸದಸ್ಯರು ಹೇಳುವಂತೆ ದರ್ಶನ್ ಗ್ಯಾಂಗ್ ಬಿಟ್ಟು ಹೊರಬಂದಿದ್ದಾರಂತೆ ರಚಿತಾ. ಹಾಗಾಗಿಯೇ ಅವರಿಗೆ ಪುನೀತ್ ಜತೆ ನಟಿಸಲು ಅವಕಾಶ ಸಿಕ್ಕಿದೆ. ಆದರೆ ಅವರು ಸುದೀಪ್ ಚಿತ್ರದಲ್ಲಿ ನಟಿಸುವುದಿಲ್ಲವಂತೆ. ಹೀಗಾಗಿ ರಚಿತಾಗೆ ಪಾತ್ರ ಕೊಡುವಂತೆ ಪುನೀತ್ ಹೇಳಿದ್ದಾರೆ ಅನ್ನುವ ಮಾತೂ ಇದೆ. ಈ ಮಾತಿನ ಮಧ್ಯೆಯೇ ಮತ್ತೊಂದು ಮ್ಯಾಜಿಕ್ ನಡೆದಿದೆ. ಯಶ್ ತಂಡಕ್ಕೆ ರಚಿತಾ ಸೇರ್ಪಡೆ ಆಗುತ್ತಿರುವ ವಿಷಯ ಕೇಳಿದ ದರ್ಶನ್ ಕೋಪ ಮಾಡಿಕೊಂಡಿದ್ದಾರೆ. ತಮ್ಮ 'ಜಗ್ಗುದಾದ' ಚಿತ್ರದಲ್ಲಿ ರಚಿತಾಗೆ ಅತಿಥಿ ಪಾತ್ರ ಸೃಷ್ಟಿ ಮಾಡಿ ಮತ್ತೆ ಅವರನ್ನು ತಮ್ಮ ತಂಡದಲ್ಲಿ ಉಳಿಸಿಕೊಳ್ಳುವ ಕಸರತ್ತು ಮಾಡಿದ್ದಾರೆ. ಈಗ ರಚಿತಾ ಯಾರ ಗುಂಪಿಗೆ ಸೇರುತ್ತಾರೋ ಕಾದು ನೋಡಬೇಕು.

ಗಣೇಶನ ಗಲಾಟೆ

ನಿರ್ದೇಶಕ ಪಿ.ಸಿ.ಶೇಖರ್ ಜತೆ ಗೋಲ್ಡನ್ ಸ್ಟಾರ್ ಗಣೇ
ಮಾಡಿಕೊಂಡಿದ್ದಾರೆ. ಈ ಜೋಡಿಯ 'ಸ್ಟೈಲ್ ಕಿಂಗ್' ಸಿನಿಮಾ
ಕೊಳೆಯುತ್ತಿದೆ. ರಿಲೀಸ್ ಮಾಡಲು ನಿರ್ಮಾಪಕರು ಮುಂದೆ ಬರುತ್ತಿಲ್ಲ
ಸಹಜವಾಗಿಯೇ ಗಣೇಶ್‌ಗೆ ಕೋಪ ಬಂದಿದೆ. ಅಲ್ಲದೇ ಗಣೇಶ್ ಕಾರ
ಸಿನಿಮಾ ಬಿಡುಗಡೆ ಆಗುತ್ತಿಲ್ಲ ಅನ್ನುವ ಸುದ್ದಿ ಗಾಂಧಿನಗರದಲ್ಲಿ ಹ
ಶೇಖರ್‌ಗೆ ಫೋನ್ ಮಾಡಿದ ಗಣೇಶ್ ಹಿಗ್ಗಾಮುಗ್ಗಾ ಬೈದಿದ್ದಾರೆ.
ಜತೆಯಾಗಿ ಮೂರು ಸಿನಿಮಾ ಮಾಡಿದ ಈ ಜೋಡಿ ಬ್ರೇಕ್ ಆಗ
ಸುದ್ದಿಯೂ ಇದೆ. ಈ ಹಿಂದೆ ಗಣೇಶ್‌ಗಾಗಿಯೇ ಶೇಖರ್ ಎರಡು
ಮಾಡಿದ್ದರು. ಆ ಪೈಕಿ 'ರೋಮಿಯೋ' ತಕ್ಕಮಟ್ಟಿಗೆ ಯಶಸ್ವಿ ಆಗ
ದೋಸ್ತ್' ಚಿತ್ರ ಮಕಾಡೆ ಮಲಗಿತ್ತು, ನಿರ್ದೇಶಕ ಕೂಡ ಹಾಸಿಗ
ಮಲಗಿದ್ದರು. ಸಿನಿಮಾ ರಂಗದಿಂದಲೇ ದೂರ ಸರಿಯುವ ಮಾ
ಆಡಿದ್ದರು. ಹೀಗಾಗಿ ಗಣೇಶ್ ಮತ್ತೆ ಶೇಖರ್‌ಗೆ ಕಾಲ್‌ಶೀಟ್ ಕ
ಜೊತೆಗೆ ಕಡಿಮೆ ಸಂಭಾವನೆಯನ್ನೂ ಪಡೆದಿದ್ದರು. ಈಗ ಈ ಜೋಡಿ
ಬಿರುಕು ಮೂಡಿದೆ. ಮತ್ತೊಂದು ಕಡೆ ಸಿನಿಮಾ ಪ್ರಚಾರಕ್ಕಾಗಿ ಹೀಗೆಲ್ಲ ಮ
ಅನ್ನುವ ಗುಸುಗುಸು ಶುರುವಾಗಿದೆ. ಏನೇ ಆಗಲಿ ಆಗಸ್ಟ್‌ನಲ್ಲೇ ತೆರೆ ಕ
ಸ್ಟೈಲ್ ಕಿಂಗ್' ಇನ್ನೂ ಬಂದಿಲ್ಲ. ಸಿನಿಮಾ ಬಿಡುಗಡೆ ಮಾಡುವಂತೆ ಅಭ
ಗಣೇಶ್ ಮೇಲೆ ಒತ್ತಡ ಹೇರುತ್ತಿದ್ದಾರಂತೆ. ಹೀಗಾಗಿ ಗಣೇಶ್
ಮಾಡಿಕೊಂಡಿದ್ದಾರೆ.

ಲಂಡನ್‌ನಲ್ಲಿ 'ಶಿವಲಿಂ

ಶಿವರಾಜ್‌ಕುಮಾರ್ ಅಭಿನಯದ 'ಶಿವಲಿಂಗ' ಚಿತ್ರ ಕರ್ನಾಟಕದ
ಪ್ರದರ್ಶನ ಕಾಣುತ್ತಿದೆ. 25ನೇ ದಿನದತ್ತ ಮುಖ ಮಾಡಿದೆ. ಕಳೆದ
ಸಾಗರದಾಚೆಯೂ ಬಿಡುಗಡೆಯಾಗಿದೆ. ಹೌಸ್‌ಫುಲ್ ಪ್ರದರ್ಶನ ಕಾಣುವ
ಅನಿವಾಸಿ ಭಾರತೀಯರಿಗೂ ಈ ಚಿತ್ರ ಇಷ್ಟವಾಗಿದೆ. ಈ ಕಾರಣಕ್ಕೇ
ಈ ಚಿತ್ರದ ಶೋಗಳೂ ಹೆಚ್ಚಾಗಿದೆ. ಅಲ್ಲದೆ ಲಂಡನ್‌ನಲ್ಲೂ ಬಿಡುಗಡೆ
ಪ್ಲಾನ್ ನಡೆದಿದೆ. ಮಾರ್ಚ್ 19ರಂದು ಲಂಡನ್‌ನಲ್ಲಿ 'ಶಿವಲಿಂಗ'ನ ದರ್ಶನ
ಈವರೆಗೂ ಸಾಕಷ್ಟು ಕನ್ನಡ ಸಿನಿಮಾಗಳು ಲಂಡನ್‌ನಲ್ಲಿ ಬಿಡುಗಡ
ಆದರೆ ಮೊದಲ ಬಾರಿಗೆ ಲಂಡನ್‌ನಲ್ಲಿ 'ಶಿವಲಿಂಗು'ವಿನ ಪ್ರೀಮಿಯ
ಆಗುತ್ತಿದೆ. ಹೀಗಾಗಿ ಸಹಜವಾಗಿಯೇ ಕನ್ನಡಿಗರಿಗೆ ಹಾಗೂ ಸಿನಿ
ಸಂತಸವಾಗಿದೆ. ಅಂದಹಾಗೆ ರಿಯೋಬಿನ್ ರಾಜ್ ಪ್ರೊಡಕ್ಷನ್ ಸಹಯ
ಈ ಶೋ ನಡೆಯಲಿದ್ದು ಲಂಡನ್‌ನ ಸಫಾರಿ ಸಿನಿಮಾ ಹಾರೋ ಎ
ವಿಶೇಷ ಪ್ರದರ್ಶನ ಏರ್ಪಡಿಸಲಾಗಿದೆ. ಈ ಪ್ರೀಮಿಯರ್ ಶೋನಲ್ಲಿ ಭಾಗ
ಶಿವರಾಜ್‌ಕುಮಾರ್, ನಾಯಕಿ ವೇದಿಕಾ, ನಿರ್ದೇಶಕ ಪಿ.ವಾಸು ಹಾಗೂ ನಿ
ಕೆ.ಎ.ಸುರೇಶ್ ಲಂಡನ್‌ಗೆ ತೆರಳಲಿದ್ದಾರೆ. ಅಂದೇ ಶಿವರಾಜ್‌ಕುಮಾರ್
ಕಾರ್ಯಕ್ರಮ ಕೂಡ ಹಮ್ಮಿಕೊಳ್ಳಲಾಗಿದೆ.

ಬಿಜಿಯಾದ ಮಾನಸ ಜೋಶಿ



'ಲಾಸ್ಟ್ ಬಸ್' ಸಿನಿಮಾದ ಮೂಲಕ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿರುವ ಮಾನಸ ಜೋಶಿ, ಸದ್ಯ ಸಖತ್ ಬಿಜಿ ನಟಿ. 'ಕಿರಗೂರಿನ ಗಯ್ಯಾಳಿಗಳು' ಚಿತ್ರ ಇನ್ನಷ್ಟೇ ಬಿಡುಗಡೆ ಆಗಬೇಕಿದೆ. ಈ ಮಧ್ಯೆ 'ಯಶೋಗಾಥೆ' ಅನ್ನುವ ಮತ್ತೊಂದು ಸಿನಿಮಾದ ಶೂಟಿಂಗ್ ಮುಗಿಸಿದ್ದಾರೆ.

ಈಗಾಗಲೇ ಇವರು ಸಾಕಷ್ಟು ಪ್ರಯೋಗಾತ್ಮಕ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅಲ್ಲದೇ ರಂಗಭೂಮಿ ಮತ್ತು ಕಿರುತೆರೆಯ ಹಿನ್ನೆಲೆಯೂ ಇವರಿಗಿದೆ. ಹೀಗಾಗಿ ವಿಭಿನ್ನ ಪಾತ್ರಗಳು ಇವರನ್ನು ಹುಡುಕಿಕೊಂಡು ಬರುತ್ತಿವೆ. ಸದ್ಯ ಇವರು ನಟಿಸುತ್ತಿರುವ ಹೊಸ ಸಿನಿಮಾ ಸಸ್ಪೆನ್ಸ್ ಮತ್ತು ಹಾರರ್ ಕತೆ ಹೊಂದಿದ್ದರೂ, ಅದು ಭಾರತದ ಸ್ವಾತಂತ್ರ್ಯ ಪೂರ್ವದ ಹಿನ್ನೆಲೆಯಲ್ಲಿ ತೆರೆದುಕೊಳ್ಳುವ ಕತೆಯಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿಯ ಮಹಿಳೆಯೊಬ್ಬಳ ಕಥಾನಕವನ್ನು ಬಿಚ್ಚಿಡುವ ಈ ಸಿನಿಮಾ, ನೈಜ ಘಟನೆಯನ್ನು ಆಧರಿಸಿದ ಚಿತ್ರ ಅನ್ನುವುದು ಮತ್ತೊಂದು ವಿಶೇಷ. ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದು ವಿನೋದ್ ರಾಜ್. ಇದು ಇವರ ಚೊಚ್ಚಲ ಸಿನಿಮಾ.

ಇಡೀ ಸಿನಿಮಾ ಕಥಾನಾಯಕಿ ತ್ರಿವೇಣಿಯ ಸುತ್ತ ಇದೆ. ಇವಳು ಸ್ವಾತಂತ್ರ್ಯ ಹೋರಾಟಗಾರ್ತಿಯೂ ಕೂಡ. ಅವಳ ಜೀವನದಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅವಳು ಅದರಿಂದ ಹೇಗೆಲ್ಲ ಪಾರಾಗುತ್ತಾಳೆ ಅನ್ನುವ ಇಂಟರೆಸ್ಟಿಂಗ್ ಸ್ಟೋರಿ ಇಲ್ಲಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com